ಶ್ರೀ ಸಿದ್ಧರಾಮತಿವಾಚಾರ್ಯರ ಪುಣ್ಯತಿಥಿ ಹಿರೇಜೇವರಗಿ

ಪ್ರತಿವರುಷದ ಪದ್ಧತಿಯ ಮೇರೆಗೆ ಅಫಜಲಪುರ ತಾಲೂಕಿನಲ್ಲಿರುವ ಹಿರೇಜೇವರಗಿ ಬೃಹನ್ಮಠದಲ್ಲಿ ಪೂಜ್ಯ ಬಾಲತಿವೋಗಿ ಷ॥ ಬ್ರ॥ ಶ್ರೀ ಗುರುಶಾಂತ ತಿವಾಚಾರ್ಯ ಸ್ವಾಮಿಗಳವರ ದಿವ್ಯನೇತೃತ್ವದಲ್ಲಿ ವೈತ್ರ ಶು॥ ೧ ದಿನಾಂಕ ೧೨ ೪-೫೬ ರಿಂದ ವೈತ್ರ ಕೃ॥ ೧೩ ತಾರೀಖು ೨೨-೪-೫೬ ರ ವರೆಗೆ ತಿವೈಕ್ಯ ಪೂಜ್ಯ ಶ್ರೀ ಸಿದ್ಧರಾಮತಿವಾಚಾರ್ಯ ಸ್ವಾಮಿಗಳವರ ಪುಣ್ಯತಿಥಿಯ ಕಾರ್ಯಕ್ರಮವನ್ನು ಒಳ್ಳೆ ವಿದ್ವಂಭಣೆಯಿಂದ ಜರುಗಿಸಲಾಯಿತು ಪ್ರತಿದಿನವೂ ಕಾರ್ಯಗಣ್ಯರಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಜೊತೆಗೆ ಅಫಜಲಪುರ ಸಂಸ್ಥಾನ ಮಹಾಧ್ಯಕ್ಷರಾದ ಪೂಜ್ಯ ಷ॥ ಬ್ರ॥ ಶ್ರೀ ಶಾಂತವೀರ ಮೇೀಂದ್ರ ತಿವಾಚಾರ್ಯಸ್ವಾಮಿಗಳವರು ಪ್ರತಿದಿನ ಸಾಯಂಕಾಲ ೮ ರಿಂದ ೧೦ ರವರೆಗೆ ಶ್ರೀ ವೀರ ಶೈವ ಮಹಾ ಪುರಾಣವನ್ನು ಅಪ್ಪಣೆಕೊಡಿಸುತ್ತಿದ್ದರು.

ಸೇಲ್ಲಂಡೆ ಪುಣ್ಯತಿಥಿಯ ಕಾರ್ಯಕ್ರಮಕ್ಕಾಗಿ ಷ॥ ಬ್ರ॥ ಶ್ರೀ ಸಂಗಮೇಶ್ವರ ತಿವಾಚಾರ್ಯ ಸ್ವಾಮಿಗಳವರು, ಮರಬದ ಷ॥ ಬ್ರ॥ ಶ್ರೀ ಗಂಗಾಧರ ತಿವಾಚಾರ್ಯ ಸ್ವಾಮಿಗಳವರು ಮತ್ತು ಆಹೀರವಾಡಿ ಷ॥ ಬ್ರ॥ ಶ್ರೀ ತಿವಾನಂದ ತಿವಾಚಾರ್ಯ ಸ್ವಾಮಿಗಳವರು ಆಗಮಿಸಿದ್ದರಿದ್ದರೆ ಅಫಜಲಪುರ ತಾಲೂಕಿನ ತಿಕ್ಷಣಾಧಿಕಾರಿಗಳಾದ ಎಸ್ ಎ ಹಿರೇಗೌಡರೂ ಕೂಡ್ಡಿಂದಿದ್ದರು

ಈ ಮಹಾಪುರಾಣ ಸಮಾಪ್ತಿಯ ದಿನಾಂಕ ೨೨-೪-೫೬ ರವಿವಾರಪ್ಪೆಕ್ಕೆ ಶು॥ ೧೫ ಕ್ಕೆ ನಡೆಯಿತು ಅಂದಿನ ದಿನ ಪ್ರಭಾತಕಾಲದಲ್ಲಿ ಶತ್ಯಗಡ್ಡುಗೆಗೆ ರುದ್ರಾಭಿಷೇಕ ಮತ್ತು ಸಕಸ್ರ ಬಿಲ್ವಾರ್ಚನೆ ಸಾಲುಟಿಗಿಯ ಮೆ॥ ರುದ್ರಯ್ಯನವರ ವೈದಿಕತ್ವದಲ್ಲಿ ಜರುಗಿತು ಅನಂತರ ಇಡೀ ಗ್ರಾಮದಲ್ಲಿಯ ಮಾತೃಶ್ರೀ ಶ್ರೀ ಚನ್ನ ಮಲ್ಲಿಖಾರ್ಜುನಾ ನೋಡಿ ಈ ಮಹಾತಾಯಮ್ಮ ಗುರುಗಳಿಗೆ ಭಕ್ತಿ ಪುರಸ್ಸರವಾಗಿ ಸಮರ್ಪಿಸಿದ ಪಲ್ಲಕ್ಕಿಯಲ್ಲಿ ಪುರಪ್ರಮುಖರ ಭಕ್ತಿಯ ಮೇರೆಗೆ ನಾದದ ಬೃಹನ್ಮಂಗಳಕ್ಷರ ಕುಳಿತಂತೆ ಪಲ್ಲಕ್ಕಿಯವರು ಹೊರಟು ಗ್ರಾಮದ ಪ್ರತಿಯೊಂದು ಓಣಿಯಿಂದ ಹೊರಟು ಸಮಾರು ೧೧ ಗಂಟೆಗೆ ಮರಳಿ ಮಠಕ್ಕೆ ಬಂದಿತು. ಅಂದಿನದಿನ ಪ್ರತಿಯೊಂದು ಓಣಿಯೂ ಶೃಂಗಾರ ಹೊಂದಿದ್ದಿತು ಪ್ರತಿಯೊಂದು ಮನೆಯ ಮುಂದೆ ತಳರತೋರಣಗಳು ನೇತಾಡುತ್ತಿದ್ದವು ಸುಮಂಗಲಿಯರು ಮಂಗಳಾರತಿಯೊಂದಿಗೆ ಪಲ್ಲಕ್ಕಿಯ ಹೊಡನೆ ಬರುವಾಗಿದ್ದಲ್ಲಿ ಅಪೂರ್ವವಾಗಿದ್ದಿತು ಅದು ಮಠದಲ್ಲಿ ಅಫಜಲಪುರ ಶ್ರೀಗಳ, ನಾದದಪಟ್ಟಾಧ್ಯಾಕ್ಷರ ಮತ್ತು ಆಹೀರವಾಡಿ ಶ್ರೀಗಳ ಪ್ರವಚನಗಳಾದವು.

ಇದೆ ಗ್ರಾಮದಲ್ಲಿಯ ಶ್ರೀ ಕಾಂತಲಿಂಗೇಶ್ವರಶಾಖ್ಯ ಸಂಘದವರು ಪುಣ್ಯತಿಥಿಯ ನಿಮಿತ್ತವಾಗಿ ಪೂಜ್ಯರೊಡನೆ ಕುಂದಿ ಶ್ರೀಗಳಿಂದ ಬಿರಿಯಲ್ಪಟ್ಟ ' ವೈರಾಗ್ಯವಿಜಯ ' ವೆಂಬ ನಾಟಕವನ್ನು ರಂಗಭೂಮಿಯಮೇಲೆ ಪ್ರಯೋಗ ಮಾಡಿ ಜನರ ವನಸ್ಸನ್ನು ಆಕರ್ಷಿಸಿಬಿಟ್ಟರು

ಈ ಮಹಾಕಾರ್ಯದಲ್ಲಿ ಧಾನಿಗಳಾಗಿ ಸಹಾಯ ಸಹಕಾರವನ್ನಿತ್ತ ಎಲ್ಲ ಮಹಾನುಭಾವರಿಗೆ ಆ ಜಗದ್ಗುರು ಪಂಚಾಚಾರ್ಯರು ಮತ್ತು ಮಹಾಮಹಿಮಾಶಾಲಿಯಾದ ಶ್ರೀ ಶಾಂಲಿಂಗಪ್ಪ ನಿತ್ಯಸುಖವನ್ನಿತ್ತು ಸಲಹ ಲೆಂದು ಆ ಜಗನ್ಮಾ ಯಾಮಕಳಲ್ಲಿ ಅನನ್ಯ ಪ್ರಾರ್ಥನೆ

ವೇ॥ಸಾಯಿ ಎಚ್ ಎಸ್.
ಹಿರೇಜೇವರಗಿ

ಸ್ವೀಕಾರ

ರಾಯಚೂರು ಜಿಲ್ಲಾ ಗಣಾಚಾರಿ ಮೂಡಿಗುಂಪಿ ತಾಲ್ಲೂರಾಣ್ಯ ಮಕಪದ ಸೇಲ್ಲಂಡೆ ಶ್ರೀ ಗಂಗಾಧರಯ್ಯನವರು ತಿವೈಕ್ಯರಾದ ಸಮಯದಲ್ಲಿ ಪ್ರಭಾವೋಪಚಿಗಾಗಿ ಸಮರ್ಪಿಸಲಾದ ॥ ರೂ ಶ್ರೀ ರುದ್ರಮುನಿಸ್ವಾಮಿಗಳ ವರದ್ವಾರಾ ಸಲ್ಪಿರುತ್ತದೆ

ಈ ಮೇಲ್ಕಾಡಿ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವಿಯೇಯಂ ಹಾರೈಸುತ್ತೇವೆ

ಶ್ರೀಮಜ್ಜಗದ್ಗುರು ವಿಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಭಾನುವಾರ ವೈಶಾಖ ಶು॥ ೫ ಮಂಗಳವಾರ



ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀ ಭೂತಗಳಾದ ಶ್ರೀದ್ರಾಕ್ಷಾರಾಮ, ಉಷ್ಟ್ರಯಿನೀಕ್ಷೇತ್ರಗಳಲ್ಲಿ ವಿರಾಜಿಸುತ್ತಿರುವ ಶ್ರೀಭೀಮಾನಾದ ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲಸಿರುವಂತೆ ಮಾಡಿ, ವ್ಯಾಸ, ಪದ್ಮಿನೀ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಶ್ವರ, ಪವನೇಶ್ವರ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕಕ್ಕೆ ಪ್ರಾತಃಸ್ಮರಣೀಯರಾಗಿಮಾಡಿದವರೂ, ಅಂತಹ ಶ್ರೀಜಗದ್ಗುರು ವಿಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುದ್ಧಿಪಕ್ಷದಲ್ಲಿ ಪ್ರಾಪ್ತವಾಗಿ ವ್ಯವಹರಿಸುವ ಸರ್ವ ಗುರುಭಕ್ತರೂ ಈ ಜಯಂತೀಸಮಾರಂಭಗಳನ್ನು ಸಂತೋಷದಿಂದ ಆಚರಿಸಿ ಕೃತಾರ್ಥರಾಗಿ ಸೇರಿಸಬೇಕು. ವೈಶಾಖ ಶು॥ ೩ ಭಾನುವಾರ ತಾ॥ ೧೩—೫—೧೯೫೬ ನೆಯ ಇವತ್ತು ಶ್ರೀಜಗದ್ಗುರು ವಿಕೋರಾಮಾರಾಧ್ಯರ ಜಯಂತೀನ ಹೋತ್ಸವನ್ನೂ, ವೈಶಾಖ ಶು॥ ೫ ಮಂಗಳವಾರ ತಾ॥ ೧೫—೫—೧೯೫೬ ನೆಯ ಇವತ್ತು ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವನ್ನೂ ನೆರವೇರಿಸಬೇಕು. ಈ ಪೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಬರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರ ದಿನಗಳಲ್ಲಿ ಅತ್ಯಂತ ಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಸರ್ವರಿಗೂ ವೇದ್ಯನೇ ಆಗಿದೆ. ಆದುದರಿಂದ ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ

ಸೂಚನೆ

ನಮ್ಮ ಪ್ರೆಸ್ಸಿನ ಸೂತನ ವರ್ಷಾರಂಭ ದಿನಾಚರಣೆಯ ನಿಮಿತ್ತ ಮುಂದಿನವಾರದ ತಾ॥ ೧೪—೫ ೫೬ ನೆಯ ದಿನದ "ಪಂಚಾಚಾರ್ಯ ಪ್ರಭಾ ಪತ್ರಿಕೆಯು ಪ್ರಕಟವಾಗುವುದಿಲ್ಲ ಮ್ಯಾ॥

ಗುರುವರ್ಗಕ್ಕೆ ಸಂಸ್ಕೃತ ವಿದ್ಯೆಯ ಅವಶ್ಯಕತೆ

ಶಿವನಿಗೆ ಅತ್ಯಂತ ಪ್ರಿಯವಾದ ವೀರಶೈವ ಮತ ಸ್ಥಾಪಕರು ಶ್ರೀಜಗದ್ಗುರು ಪಂಚಾಚಾರ್ಯರು ಈ ಭೂಗತಕ್ಕಾದರು ಮುಮುಸ್ಸುಗಳ ಕಲ್ಯಾಣಾರ್ಥವಾಗಿ ಶಿವ ಸೂತ್ರ ಬ್ರಹ್ಮಸೂತ್ರೋಪನಿಷದಾದಿಗಳ ಮೇಲೆ ಭಾಷ್ಯಗಳನ್ನು ರಚಿಸಿರುವರು ಬಹು ಪ್ರಾಚೀನ ಕಾಲದಲ್ಲಿ ರಚಿಸಿದ ಈ ಮಹಾನೀಯರ ಮೂಲ ಭಾಷ್ಯಗಳು ವಿಶೇಷವಾಗಿ ದೃಷ್ಟಿಗೋಚರವಾಗದಿದ್ದರೂ ಅನ್ಯಮತೀಯ ಪಂಡಿತರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಲ್ಲವ ಅಲ್ಪಸ್ವಲ್ಪ ಗ್ರಂಥಗಳನ್ನು ನೋಡ ಬಹುದು ಎಂಬಲ್ಲ ಸಂಸ್ಕೃತವಿದ್ದಿರುವುದರಿಂದ ಅಬಾಲ್ಯಗಳ ಯ ವಾರ್ಧಜ್ಜಾನವು ಕನ್ನಡಿಗರಿಗೆ ದೂರೆಯದೆ ನಿಜವಾದ ಮತತಿದ್ಧಾಂತವನ್ನು ಮರೆತು ಅದರಿಂದ ದೂರಾಗಿ ತ್ರಿವುದ ತೆಗಿಂಜನೀಯವೇಸರಿ! ಸಹಜವಾಗಿ ಪೀಠಶಿಷ್ಯವರ್ಗದಲ್ಲಿ ಹುಟ್ಟಿ ಲಿಂಗಧಾರಣೆಯಾಗಿ ಪರಿಗಣಮಾತ್ರ ಗುರುಗಳ ಹೆಸರನ್ನು ಹೇಳುತ್ತ ತಾವೇ ಗುರುಗಳ ತೆ ಅದ್ವೈತ ಸಿದ್ಧಾಂತವನ್ನು ಬೋಧಿಸುವ ಎಷ್ಟೋ ವಿದ್ಯಾಪಾಸನೀಯರು ಈ ಮತದಲ್ಲುಂಟು ಇವರಿಗೆ ಕಲಿತಾಯನ ಅಶೀರ್ವಾದವಿದ್ದುದರಿಂದ ನಿಜವಾದ ಶಕ್ತಿವಿಶಿಷ್ಟಾದ್ವೈತ (ಶಿವಾದ್ವೈತ) ಸಿದ್ಧಾಂತವು ಮಾಯವಾಗುತ್ತಿರುವುದರಲ್ಲಿ ಆಶ್ಚರ್ಯವೇನು?

ಕ್ರಿ ಶ ೧೧೦ನೇ ಶತಮಾನದಲ್ಲಿದ್ದ ಶ್ರೀಪತಿ ಪಂಡಿತರು ಬ್ರಹ್ಮಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಪ್ರತಿಪಾದಕವಾದ ಭಾಷ್ಯವನ್ನು ಬರೆದಿದ್ದಾರೆ. ಇದನೇ ಶ್ರೀಕರಭಾಷ್ಯವೆಂದು ಸರ್ವತ್ರ ಪ್ರಸಿದ್ಧವಾಗಿರುತ್ತದೆ ಇವರು ಈ ಭಾಷ್ಯದಲ್ಲಿ ವಿಕೋರಾಮ ಶಿವಾಚಾರ್ಯರಿಂದ ವಿರಚಿತವಾದ "ಅಧಿಕರಣಭಾಷ್ಯ"ದ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ ವೃಷಭ ಪಂಡಿತಾರಾಧ್ಯರೆಂಬ ಪ್ರಾಚೀನ ಪಂಡಿತರು ದಶೋಪನಿಷದಾದಿಗಳ ಮೇಲೆ ಭಾಷ್ಯಗಳನ್ನು ರಚಿಸಿದ್ದಾರೆ. ಇವರು ತಾವು ರಚಿಸಿದ ತೈತ್ತಿರೀಯೋಪನಿಷತ್ತಿನ ಭಾಷ್ಯಾರಂಭದಲ್ಲಿ "ವೇದವ್ಯಾಸಂ ಸೂತ್ರಕಾರಂ ಪುರಾವಾಸಂ ವೈಕ್ತಕಾರಕಂ। ಭಾಷ್ಯಕೃತ್ಪಂಡಿತಾರಾಧ್ಯಂ ಪ್ರಸಿದ್ಯೇ ವಾಕಮುಕ್ತಯೇ॥" ಎಂದು ಬರೆದಿರುವುದಲ್ಲದೆ ತಮ್ಮಿಂದ ರಚಿಸಲ್ಪಟ್ಟ ಮಹಾನಾರಾಯಣೋಪನಿಷದ್ಭಾಷ್ಯದಲ್ಲಿ 'ವಿಶಿಷ್ಟಾದ್ವಾದಯಸ್ತು ಒನ್ತಾನುಪನಿಷದಪರೋಷಾಸನಾನಿಷಯೇ ಯೋಜಯಂತಿ ತಂ ಕಥ್ಯಮಿಷ ಪ್ರೋಚ್ಯತೇ॥" ಎಂದು ಉಲ್ಲೇಖಿಸಿದ್ದಾರೆ ಇವರಿಂದ ಶ್ರೀಜಗದ್ಗುರು ವಿಶ್ವಾರಾಧ್ಯ ಪೂಜ್ಯಪಾದರ ಭಾಷ್ಯದ ಅಸ್ತಿತ್ವವು ವ್ಯಕ್ತವಾಗುತ್ತದೆ ಸಿಕಂದರಾಬಾದ ನಿವಾಸಿಗಳಾದ ವೇ॥ ಸೂರ್ಯನಾರಾಯಣಶಾಸ್ತ್ರಿಗಳವರ ಪುತ್ರ ಕಾಲಾಗಿದ್ದಿರುವ ಸೂರ್ಯನಾರಾಯಣಶಾಸ್ತ್ರಿಗಳವರು ಶ್ರೀಜಗದ್ಗುರು ರೇಣುಕಾಚಾರ್ಯರಿಂದ ವಿರಚಿತವಾದ 'ರೇಣುಕ ಭಾಷ್ಯದ" ವಿಚಾರವು ಕಂಗೊಳಿಸುವಂತೆ ಹೀಗೆ ಮತ ಸ್ಥಾಪನಾಚಾರ್ಯರು ಭಾಷ್ಯಗಳನ್ನು ರಚಿಸಿದ್ದರೂ ಆ ಭಾಷ್ಯಾಸ್ತಿತ್ವಕನ್ನು ಪಾಸನಮಾಡುವ ಸುಯೋಗವು ಈಗಿನ ವೀರಶೈವರಿಗೆ ಪ್ರಾಪ್ತವಾಗದಿರುವುದು ಅತ್ಯಂತ ವಿಷಾದದ ಸಂಗತಿಯಾಗಿರುವುದು ವೀರಶೈವರು ಹೆಚ್ಚಾಗಿ ವಾಸವಾಗಿದ್ದ ಕನ್ನಡದಾಡಿನಲ್ಲಿ ಮೂಲ ಮತಾಚಾರ್ಯರ ಸಂಸ್ಕೃತ ಭಾಷ್ಯಗಳು ಕನ್ನಡ ಟೀಕೆಯಿಂದ ಎಂದು ಪ್ರಕಾಶಕ್ಕೆ ಬರುವನೋ ಅಂದೇ ವೀರಶೈವರ ಶ್ರೇಯಃಕಾಲವೆಂದು ಹೇಳಬಹುದು.

ಇಷ್ಟು ಶ್ರೀಕರಭಾಷ್ಯವನ್ನು ರಚಿಸಿದ ಶ್ರೀಪತಿ ಪಂಡಿತರಂತೆ ನೀಲಕಂಠ ಶಿವಾಚಾರ್ಯ, ಸ್ವಪ್ರಭಾಷ್ಯಂತ

ತಿವಾಚಾರ್ಯ, ಸರಮಶಕಾಲಾನಲ ಶಿವಾಚಾರ್ಯ, ಪರವಾದಿಭಯಂಕರ ಶಿವಾಚಾರ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀ ಶಂಕರಾರಾಧ್ಯ, ಉದ್ದಂಡಾರಾಧ್ಯ, ನೇಮಾನಾರಾಧ್ಯ, ವೈಷಭಯಂಡಿತಾರಾಧ್ಯ ಇವರೇ ಮೊದಲಾದವರು ಪ್ರೌಢಗ್ರಂಥಗಳನ್ನು ರಚಿಸಿ ದ್ವಾರೀ ಇಂಥ ಅನೇಕ ಗ್ರಂಥಗಳು ಸಂಸ್ಕೃತದಲ್ಲಿಯೇ ಇರುವುದರಿಂದ ಕನ್ನಡ-ಆಂಧ್ರ-ಮಹಾರಾಷ್ಟ್ರ ಭಾಷಾ ಪ್ರದೇಶದಲ್ಲಿದ್ದ ವೀರಶೈವರಿಗೆ ನಿಜವಾದ ಮತತತ್ವ ಜ್ಞಾನವಾಗದೆ ತಿರೋಜಾಸನೆಯಾಗುತ್ತ ಅಲ್ಪೈತರೇ ತಮ್ಮ ಸಿದ್ಧಾಂತವೆಂದು ನಂಬಿ ಮೃಗಜಲವನ್ನು ನೆಂಬಿದಜಂಕೆಯಂತೆ ಕಾಣನವನ್ನೆಲ್ಲ ತಿರುಗುವಂತೆ ಭ್ರಮೆಯಿಂದ ತಿರುಗುತ್ತಿರುವರು. ಇವರಿಗೆ ನಿಜವಾದ ಮತಸಿದ್ಧಾಂತದ ದಾರಿಯನ್ನು ತೋರಿಕೆಡುವ ಗುರುಗಳು ಸಂಸ್ಕೃತದ ಬಳಕೆಯಿಲ್ಲದೆ ಅಂಧರಾಗಿದ್ದಾರೆ. ಜಗದ್ಗುರು ಪಂಚಾಚಾರ್ಯ ಭಗವತ್ಪಾದರು ಇವರಿಗೆ ಜ್ಞಾನಚಕ್ಷುವನ್ನು ಕೊಟ್ಟು ಎಂದು ಉದ್ಧರಿಸುವರೋ ಎಂದೀ ವೀಕ್ಷಿಸಿ ಪ್ರಕಂಚಿವ ಮಾಯಾವಿಗಳ ಬಲೆಯಿಂದ ಪಾರಾಗಿ ನಿಜವಾದ ಸಿದ್ಧಾಂತ ಜ್ಞಾನವನ್ನು ಪಡೆದು ಕೈವಲ್ಯವನ್ನ ಪಡಿವಿಸಲು ಯೋಗ್ಯವಾಗುತ್ತದೆ ಅಂಧ ಸುಯೋಗವು ಬೇಗನೆ ಪ್ರಾಪ್ತವಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

ಸಂಚಿಕಾರಿಯ ಸರಸವಾರಿ

ದೇಶವಿಭಕ್ತಿಯಾಗಿ ಮಾಡಿರುವುದೇನೆಂದು ಹೇಳುತ್ತಿದ್ದ ಮಂಚೆ ಸಂಬ್ರ ಮೊರಾರ್ಜಿ ದೇಸಾಯರೂ ಇಂಡಿಯಾ ಕಾಂಗ್ರೆಸ್ ಅಧ್ಯಕ್ಷ ಧೇಬರೂ ಮುಂಬೈಯ ಮುಖ್ಯ ರಾಷ್ಟ್ರದ್ವಂಯ ಹೇಳುವ ನಪೂರವರ ಅಭಿಪ್ರಾಯವೂ ಒಂದೇ ನಿರುದ್ವಂಗಾಗಿ ಜನ್ಮ ಪಡಿವನ್ನೇ ಸಾಧಿಸುತ್ತ ಅಧಿಕಾರದಿಂದ ನಿವೃತ್ತರಾಗಲು ಸಿದ್ಧರಾಗಿರುವರು ಆದೇ ಮುಂಬೈ ಸಲುವಾಗಿ ವೇಶಮುಖರು ಎರಡುಸಾರೆ ರಾಜೀನಾಮೆಯಿತ್ತಿರು. ಹೀಗೆ ಒಂದು ವಸ್ತುವಿನಾಗಿ ಇಬ್ಬರು ಪೋರಾಡುತ್ತಿದ್ದರೆ ದೇಶಕ್ಕೆ ವಿಜಾಪ ಖಂಡಿತ ಎಂದು ಹೇಳುತ್ತಿರುವ ತತ್ವಜ್ಞಾನಿಗಳ ಅಭಿಪ್ರಾಯವನ್ನು ಈ ರಾಷ್ಟ್ರನಾಯಕರು ಏಕೆ ಮರೆಯುತ್ತಿರುವರೋ!

* * *

ಹರಿಯು ರಾಕ್ಷಸರ ಸಂಹಾರಕಾಲದಲ್ಲಿ ತೋರಿದ ಅನೇಕವತನ್ನು ಈಗ ಹರಿಜನವನ್ನು ಧರಿಸಿದ ಲೋಕ ಸಭಾಧ್ಯಕ್ಷರಾದ ಅನಂತಶಯನಂಎಂದರು ಇತ್ತೀಚೆಗೆ ಮಾತುಮಾತಿಗೆ ತೋರಿಸುತ್ತಿರುವರು ಇದೇನು ಹರಿಯು ನಾಮದ ಪ್ರಭಾವವೂ ಕಾಂಗ್ರೆಸ್ಸಿನ ದರ್ಪವೂ ತಿಳಿಯದು. ಅಂತು ಬೆಣ್ಣೆಯಂತಿದ್ದ ಕಾಂಗ್ರೆಸ್ಸು ವಜ್ರದಂತಾಗಿರುವುದು ಕಾಲಮಹಿಮೆಯಲ್ಲವೆ?

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು "ಯಾರಿಗೆ ಯಾರಿಲ್ಲ ದಾರಿಗೆ ಜೋಡಿಲ್ಲ" ಎಂಬ ಗಾದೆಯಂತೆ ಯಾವ ವಿಚಾರದಲ್ಲಿ ಜೋಗದ ನಿರ್ವಿಕಲ್ಪರಾಗಿ ರಾಜ ಪೀಠ ಲ್ಲ ಮೌನಧ್ಯಾನಿರುವುದಕ್ಕಿಂತ ದೇವಸ್ಥಾನದ ಲ್ಲಿನ್ನು ಗಣಪತಿಯಂತಾಗಿ ನೈವೇದ್ಯದ ಪೂಜೆಗೊಳ್ಳುವುದು ಮೇಲಲ್ಲವೆ?

* * *

ದೇವಾಲಯಗಳ ಮತ್ತು ಧರ್ಮದತ್ತಿಗಳ ಆದಾಯವನ್ನು ನೂತನ ಯೋಜನೆಗಳಿಗೆ ಬಳಸಿಕೊಳ್ಳುವುದಾಗಿ ತಂದಿದ್ದ ಕೇಂದ, ಸಚಿವರುಗಳ ಸಲಹೆಗೆ ಸಾಧುಮಂದಿಯು ಒಪ್ಪಿದಿಯಂಜೆ ಹೌದು ಭಿಕ್ಷಾಪಾತ್ರೆ ಹಿಡುದು ತಿರುಗುವ ಈ ಮಂಡಳಿಗೆ ದೇವಾಲಯಗಳಲ್ಲಿಯೂ ಅನ್ನ ಸಿಗದೆ ಹೋದವೇಲೆ ಅವರು ಒಪ್ಪಿಕೊಂಡಿರುವುದರಲ್ಲಿ ಆಶ್ಚರ್ಯವೇನು?

ಇಂಥ ದೇವಾಲಯಗಳ ಉತ್ಪನ್ನವು ಯಾವ ಧರ್ಮ ಕಾರ್ಯಕ್ಕೂ ಉಪಯೋಗವಾಗದಿದ್ದುದೆಂದರೇ ಭೂಪ ಪ್ರಮುಖಮಟ್ಟದ-ಘೋರಿಮಹಮ್ಮದ ಘೂಡಲಾದ ಪರದೇಶೀಯ ಲೂಟಿಗಾರರು ಬಂದು ದೋಚಿಕೊಂಡು ಹೋಗುತ್ತಿದ್ದರು ಈಗ ಸ್ವಮ್ಮನರೇ ದೇಶಪಿತಕ್ಕಾಗಿ ಎಂದು ಕಿತ್ತುಕೊಳ್ಳುತ್ತಿರುವುದು ಒಳ್ಳೆದಾಗಿ ತೋರುವುದಿಲ್ಲವೆ?

* * *

ಕಲಿಯುಗದಲ್ಲಿ ಹರಿಯೇ ಹರಜನರೂಪದಲ್ಲಿ ಅವತರಿಸಿ ಪಾಪಿಗಳಾದ ಉಚ್ಚವರ್ಣದವರಿಗೆ ಸಂಸರ್ಗವನ್ನು ದೂರೀಕರಿಸುವನೆಂದು ಕಾಲಜ್ಞಾನದಲ್ಲಿ ಹೇಳಿರುವುದೇ? ಹಾಗಾದೆ ಲೋಕರಕ್ಷಕನಾದ ಹರಿಯು ಇಚ್ಛೆಯ ವಿರುದ್ಧ ಈಗಿ ಸರಿಕಾರವು ಹರಿಜನರನ್ನು ಉಚ್ಚ ವರ್ಣದವರೊಂದಿಗೆ ಸೇರಿಸುತ್ತಿರುವುದು ಸಾಕಷ್ಟಲ್ಲವೆ? ಹೌದು ಆದೆಲ್ಲಾ ಪೇಟಾಧಾರಿಗಳ ಕಾಲವಲ್ಲಾ ಟೋಪಿ ಧಾರಿಗಳ ಕಾಲವಾಗಿರುವಾಗ ಯಾವ ಪಾಪವೂ ಬಾಧಿಸಲಾರದು.

* * *

ಕಾವಿಲಾಂಛನಧಾರಿಯಾದ ಶಿವನು ಭಿಕ್ಷಾಪಾತ್ರೆ-ದಂಡ-ಶಮಂಡಲು ಸಹಿತನಾಗಿ ಸ್ಮಶಾನವಾಸಿಯಾಗಿರುವನೆಂದು ಪುರಾಣಪ್ರಸಿದ್ಧವೆಂಬುದು ಆದರೆ ಶಿವನ ಸ್ಮರಣೆಯ ಹೇಗೆ ತಾನೆಂದು ಹೇಳಿಕೊಳ್ಳುವ ಸಚ್ಚಾಸಿಗಳು ಅವನ ಅನುಕರಣವನ್ನು ದೂರೀಕರಿಸಿ ಲಿಂಚಲ್ಲಿ ತಿಳಿಗಾಂಬಿಯ ಮಲಮಲ್ಲ ವಸ್ತ್ರಗಳನ್ನು ಧರಿಸಿ ಶೃಂಗಾರ ಪ್ರಿಯರಾಗುತ್ತಿರುವುದನ್ನು ಕಂಡ ಸರ್ಕಾರವು ಮಠ-ಮಂದಿರಗಳ ಮೇಲೆ ವಕ್ರದೃಷ್ಟಿಯನ್ನಿಟ್ಟು ತಕ್ಕ ಕ್ರಮಗಳನ್ನು ಪಡೆಯಿಸಹತ್ತಿದೆ ಆಗಲಾದರೂ ಈ ಮಹ ನೀಯರು ತಮ್ಮ ಕರ್ತವ್ಯವೇನೆಂಬುದನ್ನರಿಯುವರೇ?

* * *

ಈಗ ಎಲ್ಲೆಲ್ಲಿಯೂ ಆಹಾರಧಾನ್ಯರಳ ಬೆಲೆ ಏರುತ್ತಿರುವುದನ್ನು ಮಂತ್ರಿಗಳು ಸ್ವತಃ ಅರಿತಿದ್ದರೂ ಅದನ್ನು ತಡೆಗಟ್ಟುವದಕ್ಕಾಗಿ ಸರಕಾರದ ದಾಸ್ತಾನಿನಲ್ಲಿದ್ದ ಧಾನ್ಯವನ್ನು ಮಾರಾಟಕ್ಕಿಡಿಸೆ ದಾಸ್ತಾನಿನ ಸುದ್ದಿಯನ್ನೇ ಹೇಳುತಿರುವರು ಹಾಗಾದರೆ ಆ ದಾಸ್ತಾನು ಯಾರಕ್ಕೆ ಉಪಯೋಗ ಎಂದು ಯಾರಾದರೂ ಕೇಳಬಹುದು ಅದೆಲ್ಲ ದಾಸ್ತಾನಿನ ಉಸ್ತುವಾರಿಯನ್ನು ನೋಡುವ ಹೆಸ್ಸಾರಿಗಳಿಗೆ ಅಲ್ಲದೆ ಜನಸೆಗೆಲ್ಲ ಎಂಬುದನ್ನು ಯಾಕೆ ತಿಳಿದೆ ಕೊಳ್ಳಬಾರದು?

* * *

ರಾಷ್ಟ್ರಾಧ್ಯಕ್ಷರಪ್ರವಿಯ ಆಲಿಯಿಂದ ಪ್ರದೇಶಚಿನೆಗೆ ಮೆನಗೊಟ್ಟು ಪಶ್ಚಿಮಬಂಗಾಳದ ಮುಖ್ಯಮಂತ್ರಿ ಅಲ್ಲಿಯ ಪ್ರಜೆಗಳಿಂದ ಭೀ ಅನಿಸಿಕೊಂಡು ತಮ್ಮ ಸೇವೆಯನ್ನು ಕೇಂದ್ರದಿಂದ ವಾಪಸು ಪಡೆಯುತ್ತಿರುವಾಗ ಮೈಸೂರಿನ ಮುಖ್ಯಮಂತ್ರಿ ಹನುಮಂತಯ್ಯನವರು ದಕ್ಷಿಣಪ್ರದೇಶ ರಚನೆಯು ಹಂಬಲವನ್ನು ಅಲ್ಲಲ್ಲಿ ಇನ್ನೂ ಗೊಣಗುಟ್ಟುತ್ತಿದ್ದಾರೆ, ಇವರಿಗಾವಸಪವಿಯ ಆಲೆಯಿಡೆಯೋ ಶ್ರೀ ರಾಮನೇ ಬಲ್ಲ

ಸುದ್ದಿ ಸಂಗ್ರಹ

ಸೊವಿಯೆಟ್ ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಮತ್ತು ಕವ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ನಿಕಿಟಾ ಖ್ರುಶ್ಚೇವ್‌ರವರು ಲಂಡನ್ನಿನಲ್ಲಿ ದ್ವಾಗಿ ಅವರುಗಳನ್ನು ಕೊಲ್ಲಲು ಏರ್ಪಟ್ಟಿದ್ದ ವಿಷಾರಿಯೊಂದನ್ನು ಬ್ರಿಟಿಷ್ ಪೋಲೀಸ್ ಗೂಡಚಾರರು ವ್ಯರ್ಥಗೊಳಿಸಿದುದು ತಿಳಿದುಬಂದಿದೆ

* * *

ಪ್ರಾಂತ್ಯ ಪುನರ್‌ವಿಂಗಡನೆಗೆ ನಿಗದಿಯಾದ ಅಕ್ಟೋಬರ್ ಒಳಗೆ ಮುನ್ನವೇ ಹೈಪ್ರಾಬಾದ್ ಸಂಸ್ಥಾನದ ತೆಲಂಗಾಣ, ಮರಾಠವಾಡ ಮತ್ತು ಕರ್ನಾಟಕ ಪ್ರದೇಶಗಳಿಗೆ ಮೂರು ಪ್ರಾದೇಶಿಕ ಅಭಿವೃದ್ಧಿ ಹಾಗೂ ಯೋಜನಾ ಸಮಿತಿಗಳನ್ನು ರಚಿಸಲು ಆಲೋಚಿಸಿರುವುದಾಗಿ ಹೈದರಾಬಾದ್ ಮುಖ್ಯಮಂತ್ರಿ ಶ್ರೀ ಬಿ ರಾಮಕೃಷ್ಣ ರಾಯರು ತಿಳಿಸಿದರು

* * *

ಪಶ್ಚಿಮ ಬಂಗಾಳ ಮತ್ತು ಬಿಹಾರಗಳ ವಿಲೀನದ ಸಲಹೆಯನ್ನು ವಾಪಸು ಪಡೆಯಲು ತಾವು ನಿರ್ಧರಿಸಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಡಾಃ ಬಿ ಸಿ ರಾಯ್ ಪ್ರಕಟಿಸಿದರು

ಈ ನಿರ್ಧಾರವನ್ನು ಭಾರತದ ಸರ್ಕಾರಕ್ಕೆ ತಿಳಿಸಲಾಗುವುದು.

* * *

ಕೇರಳ, ಮದರಾಸು ಮತ್ತು ವಿಶ್ವೈತ ಮೈಸೂರು ರಾಜ್ಯಗಳಲ್ಲಿಯೂ ಹೊಂಡ ದಕ್ಷಿಣ ಪ್ರದೇಶ ರಚನೆಯಾಗಲೆಂಬ ಆಶಯವನ್ನು ತಾವು ತೊರೆದುಬಿಟ್ಟಿಲ್ಲವೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯ ನವರು ಬೆಂದ್ರಾಬಾದಿನಲ್ಲಿ ತಿಳಿಸಿದರು

* * *

ನೆರವಿನ ರೂಪದಲ್ಲಿ ಅಮೆರಿಕಾದಿಂದ ಹೆಚ್ಚಿನ ಪ್ರಮಾಣದ ಗೋಧಿ ಭಾರತಕ್ಕೆ ದೊರೆಯುವ ಸಂಭವವಿದೆ ಯೆಂದು, ರಾಜ್ಯ ಸಭೆಯಲ್ಲಿ ಇಂದು ವ್ಯವಸಾಯ ಶಾಖಾ ಸಚಿವ ಶ್ರೀ ಪಂಜಾಬ್‌ರಾವ್ ದೇಶ್‌ಮುಖ್‌ರವರು ತಿಳಿಸಿದರು.

* * *

ದೇಶದಲ್ಲಿ ಉಗ್ರವಾದ ಉಬ್ಬರ ಪರಿಸ್ಥಿತಿ ತಲೆದೋರದ ಅಪಾಯ ತಪ್ಪಿಸುವ ಸಲುವಾಗಿ, ವಿಪತ್ತಿನ ಯೋಜನೆ ಅವಧಿಯಲ್ಲಿ ತಿರಿಗೆ ಸೊತ್ತವನ್ನು ೬೫೦ ಕೋಟಿ ರೂಪಾಯಿಗಳಿಂದ ೭೫೦ ಕೋಟಿ ರೂ. ಗಳಿಗೇರಿಸಲು ಯೋಜನಾ ಮಂಡಲಿ ಸಲಹೆಮಾಡಿದೆ

* * *

ಬಹಳ ದೀರ್ಘಕಾಲದ ಸಮಾಲೋಚನೆಗಳ ನಂತರ ಮುಂಬೈ ನಗರದ ಭವಿಷ್ಯದ ಬಗ್ಗೆ ಕೈಗೊಂಡ ನಿರ್ಧಾರವನ್ನು ಈಗ ಬದಲಿಸಲು ಪ್ರಯತ್ನಿಸುವ ಔಚಿತ್ಯವನ್ನು, ಮುಂಬೈ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯ್ ರವರು, ಕಾಂಗ್ರೆಸ್ ವೈಕಮಾಂಡ್‌ನ ಎಸ್ಸಾದ್ದಿ ಉಪ ಸಮಿತಿಯನ್ನು ಭೇಟಿಮಾಡಿದಾಗ ಪ್ರತ್ಯುಸಿದರೆಂದು ವರದಿಯಾಗಿದೆ.

* * *

"ಜಗತ್ತಿನ ಎಲ್ಲ ರಾಷ್ಟ್ರಗಳೊಡನೆ ನಾವು ಸಖ್ಯ ವಿಂದಿರಬಯಸುತ್ತೇವೆ" ಎಂದು ನೋವಿಯೆಟ್ ರಕ್ಷಣಾ ಮಂತ್ರಿ ಮಾರ್ಷಲ್ ಜುಕೋವ್ ಘೋಷಿಸಿರುವರು

* * *

ರಾಜ್ಯಸಭೆಯಲ್ಲಿ ಇಂದು ಪ್ರಾಂತ್ಯ ಪುನರ್‌ವಿಂಗಡಣಾ ಮಸೂದೆಯ ಮೇಲಿನ ಚರ್ಚೆಯು ಮುಂದುವರಿದಾಗ, ಡಾಃ ಜೆಡ್ ಎನ್ ಕುಂಜ್ರು ಮತ್ತು ಡಾಃ ಬಿ ಆರ್ ಅಂಬೇಡ್ಕರರು ಮುಂಬೈ ನಗರವು ಮಹಾರಾಷ್ಟ್ರಕ್ಕೆ ಸೇರಬೇಕೆಂದು ಘೂಡಿಸಿದರು

* * *

ವಿಶ್ವಸ್ತ್ರೀಕರಣದ ಬಗ್ಗೆ ಲಂಡನ್ನಿನಲ್ಲಿ ಏಡೆಯುತ್ತಿರುವ ವಿಶ್ವಸಂಸ್ಥೆಯ ಅಣುಸಮಿತಿಯ ಮಾತುಕತೆಗಳು ಸದ್ಯದಲ್ಲಿಯೇ ಕುಸಿದುಬೀಳುವುದೆಂದು ಅಮೆರಿಕದ ಅಧ್ಯಕ್ಷ ಐಸೆನ್‌ಹೋವರವರ ವಿಶೇಷ ವಿಶ್ವಸ್ತ್ರೀಕರಣ ಸಲಹೆಗಾರರಾದ ಹೆರಾಲ್ಡ್ ಸ್ಟಾಸೆನ್ ಸ್ವಪ್ನವಾಗಿ ಘೂಡಿಸಿದರು

ನಿನ್ನುವರ್ಗದ ಜನರಿಗೆ ಬೌದ್ಧ ದೀಕ್ಷೆ

ಈವರ್ಷ ಬುದ್ಧದೇವನ ೨೫೦೦ ನೆಯ ನಿರ್ವಾಣ ದಿನವೆಂದು ಡಾಃ ಬಿ ಆರ್ ಅಂಬೇದ್ಕರ್‌ರರ ನಾಯಕತ್ವದಲ್ಲಿ ಭಾರತದ ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ಸೇರಿದ ಸುಮಾರು ಎರಡೂವರೆ ಲಕ್ಷ ಜನರು ಬೌದ್ಧಮತಕ್ಕೆ ಸೇರುವರು

ಈ ದೀಕ್ಷಾ ಸಮಾರಂಭಕ್ಕೆ ಬರ್ಮ, ಚೀನಾ, ಸಿಂಹಳ ಮತ್ತು ಏಷ್ಯದ ಇತರ ಬೌದ್ಧ ರಾಷ್ಟ್ರಗಳಿಂದ ಅನೇಕ ಮಂದಿ ಬೌದ್ಧ ಭಿಕ್ಷುಗಳನ್ನು ಆಹ್ವಾನಿಸಲಾಗುವುದೆಂದು ಪೂಜ್ಯ ಭಾರತೀಯ ಬೌದ್ಧಜನ ಸಮಿತಿಯ ಅಧ್ಯಕ್ಷ ಶ್ರೀ ಏ ಆರ್ ಪ್ರಾಣ್ ಪೈಸರವರು ಪ್ರಕಟಿಸಿದ್ದಾರೆ

ಕಾಂಗ್ರೆಸ್ ಹಿಜೆದೈಷ್ಟಿಯಿಂದ ಶ್ರೀ ಎಸ್. ಕೆ ಪಾಟೀಲ್‌ರ ಪೇಳಿಕೆ

ವಾಮ ಪಕ್ಷಗಳಂತೆ ಕಾಂಗ್ರೆಸ್ ಸಹ ಪ್ರಬಲಚೀನ ವಾಗುತ್ತಿದೆಯೆಂದು ಮುಂಬೈ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಕೆ ಪಾಟೀಲರವರು ಕಾಂಗ್ರೆಸ್ ಅಧ್ಯಕ್ಷರ ಮತ್ತು ಕಾರ್ಯವರ್ತಿಗಳ ಸಭೆಯಲ್ಲಿ ತಿಳಿಸಿದರು

ಅನೇಕ ಕಾಂಗ್ರೆಸಿಗರು ಎಲ್ಲಾ ವಿಷಯಗಳಲ್ಲೂ ಕೈಕತ್ತಾಯಿಂದ ಅಥವಾ ಪ್ರಧಾನಿ ನೆಹರೂರವರನ್ನೆ ತಾವು ಕುಳಿತುಕೊಳ್ಳುತ್ತಾರೆಂದೂ, ಪ್ರಧಾನಿ ನೆಹರೂರವರು ಇರುವವರೆಗೂ ಪಕ್ಷಕ್ಕೆ ಯಾವ ಭಯವೂ ಇಲ್ಲವೆಂದು ಅಭಿಪ್ರಾಯ ತಿಳಿಯಿಸಿರುವುದಾಗಿ ಶ್ರೀ ಎಸ್. ಕೆ ಪಾಟೀಲ್ ತಿಳಿಸಿದರು.

ಚಂದಾದಾರರಲ್ಲಿ ವಿನಂತಿ

ಮಹನೀಯರೇ, ನಮ್ಮ ಪತ್ರಿಕೆಯು ಪ್ರಾರಂಭವಾಗಿ ಇದೇ ವೈಶಾಖ ಶು|| ೫ ಮಂಗಳವಾರ (ತಾರೀಖು ೧೫-೫-೫೬) ಕ್ಕೆ ೫ ವರ್ಷಗಳು ಪೂರ್ತಿಯಾಗಿ ೬೦ ನೆಯ ವರ್ಷವು ಪ್ರಾರಂಭವಾಗುತ್ತದೆ ಈ ಶುಭ ಸಮಯದಲ್ಲಿ ಪ್ರಭಾಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸುತ್ತ ಬಂದ ಸರ್ವರಿಗೂ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುವುದಲ್ಲದೆ ತಾವು ಇಲ್ಲಿಯವರೆವಿಗೂ ತೋರಿಸುತ್ತ ಬಂದ ಅಭಿಮಾನವನ್ನೇ ಇನ್ನು ಮುಂದೆಯೂ ನಡೆಸಿಕೊಂಡು ಬರುವಿರೆಂದು ನಂಬಿರುತ್ತೇವೆ ಸರ್ವಾದಿಯಿಂದ ಚಂದಾದಾರರಾಗಿರುವ ಸರ್ವರೂ ೪ ಂ ವಿನ ವರ್ಷದ ಜಂದಾ ೩-೦-೦ ರೂಗಳನ್ನು ಕೂಡಲೆ ಮನಿಯಾರ್ಡರು ಮಾಡಿ ಕಳಿಸುವದು. ಪ್ರೋಸ್ಟ ಖಾತೆಯ ರಿಜಿಸ್ಟ್ರೇಷನ್ ಖರ್ಚು ದಿನೇ ದಿನೇ ಹೆಚ್ಚುತ್ತ ಒಂದು ಇಪ್ಪೆಲ್ ೧ ನೇ ತಾರೀಖಿನಿಂದ ಮೆತ್ತೂ ಹೆಚ್ಚಾಗಿರುತ್ತದೆ ಈ ಹೆಚ್ಚಿನ ಖರ್ಚಿಲ್ಲಾ ನಿ ಪಿ ಯಿಂದ ತರಿಸುವ ಜಂದಾದಾರರ ಮೇಲೆಯೇ ಏಳುವದು. ಆದರಿಂದ ಎರಡೂ ಆನೆ ಖರ್ಚುಮಾಡಿ ೪ ರೂಪಾಯಿಗಳನ್ನು ಮನಿಯಾರ್ಡರ್ ಮಾಡಿದರೆ ನಿಮಗೂ ನಮಗೂ ಖರ್ಚಿನಲ್ಲಿ ಉಳಿತಾಯವಾಗುವದು. ಅಭಿಮಾನಿಗಳಾದ ತಾವೆಲ್ಲರೂ ಇದನ್ನು ಮನಸ್ಸಿಗೆ ತಂದುಕೊಂಡು ಚಂದಾ ಹಣವನ್ನು ಮನಿಯಾರ್ಡರು ಮಾಡುವ ಮೂಲಕ ವ್ಯರ್ಥವಾಗಿ ಆಗುವ ಪ್ರೋಸ್ಟು ಖರ್ಚನ್ನು ಉಳಿಸುವಿರೆಂದು ನಂಬಿರುತ್ತೇವೆ. ಈಗಿನ ಹೆಚ್ಚಿನ ಪ್ರೋಸ್ಟು ಖರ್ಚಿನ ಮೂಲಕ ವಿ ಪಿ ಯಿಂದ ಕಳಿಸಲು ೩-೧೦-೦ ಆಗುತ್ತದೆಂಬುದನ್ನು ಸರ್ವರೂ ಗಮನಿಸಬೇಕು.

ಮ್ಯಾನೇಜರ್.

ವರ್ತಮಾನ ಸಂಗ್ರಹ

ಮೇ ೧೫ ರಂದು ಕರ್ನಾಟಕ ಕಾಂಗ್ರೆಸ್ ಸಮಿತಿ ಸಭೆ

ಕರ್ನಾಟಕ ರಾಜ್ಯ ನಿರ್ಮಾಣದಿಂದಾಗಿ ಉದ್ಭವಿಸುವ ಕೆಲವು ಪ್ರಮುಖ ಸಮಸ್ಯೆಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮೇ ೧೫ ರಿಂದ ಇಲ್ಲಿ ತನ್ನ ವಾರ್ಷಿಕ ಸಮಾವೇಶದಲ್ಲಿ ಚರ್ಚಿಸಲಿದೆ

ನೂತನ ಕನ್ನಡರಾಜ್ಯದಲ್ಲಿ ಒಂದು ಸಾಲು ಸೂತ್ರ ಗಳು, ಪ್ರಾಂತೀಯ ನಿರ್ಣಯಗಳು ಮೊದಲಾದ ವಿಷಯ ಗಳನ್ನು ಈ ಸಭೆ ಪರಿಶೀಲಿಸುವುದಲ್ಲದೆ ಎರಡನೇ ಯೋಜನೆ ಕಾರ್ಯಗತಮಾಡಲು ಅವಶ್ಯಕ ಕ್ರಮಗಳು ಮತ್ತು ಕರ್ನಾಟಕ ರಾಜ್ಯದಲ್ಲಿ ನೇರದಿರುವ ಕನ್ನಡ ಪ್ರದೇಶ ಗಳ ವಿಷಯಗಳನ್ನೂ ಚರ್ಚಿಸಲಿದೆ.

೧೫ ನೇ ತಾರೀಖು ಮಧ್ಯಾಹ್ನ ೩-೩೦ ಕ್ಕೆ ಹುಬ್ಬಳ್ಳಿ ಕಾಂಗ್ರೆಸ್ ಭವನದಲ್ಲಿ ನೇರುವ ಈ ಸಭೆಗೆ ಸಂಬಂಧ ಪಟ್ಟ ವಿಧಾನಸಭೆ, ವಿಧಾನಪರಿಷತ್ತು ಹಾಗೂ ರಾಜ್ಯ ಸಭೆ ಲೋಕಸಭೆಗಳ ಕನ್ನಡ ಸದಸ್ಯರುಗಳೆಲ್ಲಾ ಬರ ಬೇಕೆಂದು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ. ಕೆ. ಮೊಗಲಿ ಮತ್ತು ಶ್ರೀ ಬಿ. ಎಂ. ಹೈ ಕೋರಿದ್ದಾರೆ.

ದಾನನೀಡಿದ ಆಸ್ತಿ ಮೇಲೆ ಎಸ್ಟೇಟ್ ತೆರಿಗೆ ಸಂಭವ

ರಾಜ್ಯಸಭೆಯು ಹಣಕಾಸಿನ ಮಸೂದೆಯನ್ನು ಯಾವ ಬದಲಾವಣೆಯೂ ಇಲ್ಲದೆ, ಅರ್ಥಸಚಿವರ ತೆರಿಗೆ ಸಲಹೆಗಳು ಜಾರಿಗೆ ಬರಲು ಅನುಕೂಲವಾಗು ವಂತೆ ತನ್ನ ಅಂಗೀಕಾರ ಮುದ್ರೆಯನ್ನೊತ್ತಿತು.

ರೆವಿನ್ಯೂ ಮತ್ತು ಸಾರ್ವಜನಿಕ ವೆಚ್ಚ ಶಾಖೆಯ ಸಚಿವ ಶ್ರೀ ಎಂ ಸಿ ಪಾರವರು ಚರ್ಚೆಗೆ ಉತ್ತರವಿತ್ತು ಆದಾಯ ತೆರಿಗೆ ಇಲಾಖೆಗೆ ನೀಡಿರುವ ವಿಶೇಷಾಧಿಕಾರ ಗಳನ್ನು ಸಮರ್ಥಿಸಿದರು " ದ್ವಿತೀಯ ಯೋಜನೆಯ ಕಾಲದಲ್ಲಿ ಅಗತ್ಯವಾಗುವ ಹಣವನ್ನು ಒದಗಿಸಲು ಕೇಂದ್ರ ಸರ್ಕಾರವು ಹೊಸ ತೆರಿಗೆಗಳನ್ನ ವಿಧಿಸಬೇಕಾ ಗುವುದರಿಂದ ದಾನವಾಗಿ ಕೊಡುವ ಆಸ್ತಿಗಳ ಮೇಲೆ 'ಎಸ್ಟೇಟ್' ತೆರಿಗೆಯನ್ನು ವಿಧಿಸುವ ಒಳ್ಳೆ ಪರ್ಯಾ ಲೋಚಿಸಬಹುದು ಎಂದು ಸಚಿವರು ತಿಳಿಸಿದರು. ಸಭೆಯು ಒಂದು ಸಣ್ಣ ಬದಲಾವಣೆಯೊಂದಿಗೆ, ತಿರುವಾಂಕೂರು-ಕೊಚ್ಚಿಯ ೧೦ ಕೋಟಿ ರೂಪಾಯಿ ವೆಚ್ಚದ ಆಸ್ಪ್ರೊಪ್ರಿಯೇಷನ್ ಮಸೂದೆಯನ್ನು ಅಂಗೀಕರಿಸಿತು.

ಸಂಪತ್ತಿನಸಮಾನಹಂಚಿಕೆ

ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಕಾರ್ಯ ರೂಪಕ್ಕೆ ಬರಬೇಕಾದರೆ ಜನರು ತೆರಿಗೆಯ ರೂಪದಲ್ಲಿ ಇನ್ನೂ ಹೆಚ್ಚು ಹಣ ಕೊಡಲು ಸಿದ್ಧರಾಗಿರಬೇಕು ಎಂದು ಭಾರತದ ಕಾರ್ಮಿಕ ಶಾಖಾಮಂತ್ರಿ ಶ್ರೀ ಖಂಡೂ ಭಾಯ್ ದೇಸಾಯಿಯವರು ಇಂದು ಇಲ್ಲಿ ಹೇಳಿದರು

ಬರಿಯಾಪುರ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇ ಳನದ ಉದ್ಘಾಟನೆಯನ್ನು ನೆರವೇರಿಸುತ್ತ, ಕಾಂಗ್ರೆಸ್ ಕಾರ್ಯಕರ್ತರು ದ್ವಿತೀಯ ಪಂಚವಾರ್ಷಿಕ ಯೋಜನೆ ಯನ್ನು ಜನ್ಮಾಗಿ ಅಧ್ಯಯನ ಮಾಡಿ ಅದನ್ನು ಕಾರ್ಯ ಗತಪಾಡಲು ಸಹಕರಿಸಬೇಕೆಂದು ಮನವಿಮಾಡಿದರು.

" ಬಡವ ಬಲ್ಲಿದರಿಬ್ಬರೂ ಒಂದೇ ರಾಷ್ಟ್ರಕ್ಕೆ ಸೇರಿ ದವರು ಸಮಾಜವಾದಿ ವ್ಯವಸ್ಥೆಯನ್ನ ಅನುಷ್ಠಾನಕ್ಕೆ ತರಲು ಇವರಿಬ್ಬರೂ ಸಹಕರಿಸಿ ಕೆಲಸ ಮಾಡಬೇಕು

' ಸಂಪತ್ತಿನ ಸಮಾನ ಹಂಚಿಕೆಯಾಗಬೇಕೆಂದು ಯೋಚಿಸುವ ಮೊದಲು ಆ ಸಂಪತ್ತನ್ನು ಉತ್ಪಾದನೆ ಮಾಡುವ ವಿಷಯಕ್ಕೆ ಎಲ್ಲರೂ ಗಮನ ಕೊಡಬೇಕು " ಎಂದೂ ಅವರು ಸ್ಪಷ್ಟಪಡಿಸಿದರು.

ಕೇಂದ್ರದ ನೀತಿಯನ್ನು ಪ್ರಸ್ತಾಪಿಸುತ್ತ, " ಸರ್ಕಾ ರವು ಈಗ ದೇಶದ ಕಾರ್ಮಿಕ ನೀತಿ ಆರ್ಥಿಕ ನೀತಿ ಬಗ್ಗೂ ಕೈಗಾರಿಕಾ ನೀತಿಯನ್ನು ಅಭ್ಯರಿಗೊಳಿಸಿದೆ. ಇನ್ನೂ ಸಣ್ಣ ಪುಟ್ಟ ಕಾರಣಗಳಿಗಾಗಿ ಸರಪ್ಪರ ಕಾದಾ ಟಗಳಲ್ಲೇ ಕಾಲ ಕಳೆಯುವುದು ಸಲ್ಲದು ಆದರೆಲ್ಲಯೂ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯ ಕರ್ತರ ಜವಾಬ್ದಾರಿ ಈಗ ಅಧಿಕವಾಗಿದೆ " ಎಂದು ಶ್ರೀ ದೇಸಾಯ್ ನುಡಿದರು.

ಸ್ತ್ರೀಯರು ಮೂವನ ಆಸ್ತಿಗಳಲ್ಲಿ ಭಾಗಿಗಳಾಗಲಿ

ವಿವಾಹಿತ ಪತ್ನಿಗೆ ತಂದೆಯ ಆಸ್ತಿಯಲ್ಲಿ ಭಾಗ ಕೊಡುವುದರಿಂದ ಹಿಂದೂಗಳ ಕುಟುಂಬ ವ್ಯವಸ್ಥೆ ಯಲ್ಲಿ ಒಡಕುಂಟಾಗುತ್ತದೆಂದು ಶ್ರೀ ಪುರುಷೋತ್ತಮ ದಾಸ್ ಟಂಡನ್‌ರವರು ಲೋಕಸಭೆಯಲ್ಲಿ ಹಿಂದೂ ಉತ್ತರಾಧಿಕಾರಿ ಮಸೂದೆ ಬಗ್ಗೆ ಮಾತನಾಡುತ್ತಾ ತಿಳಿಸಿದರು

' ಮಗಳಿಗೆ ಆಕೆಯು ಮಾವಂದಿರ ಆಸ್ತಿಯಲ್ಲೊಂದು ಭಾಗದಹಕ್ಕಿರಲಿ ' ಎಂದರು.

ವಿಧವೆ ಇನ್ನೊಂದು ವಿವಾಹ ಮಾಡಿಕೊಂಡರೆ ಮೊದಲನೆಯ ಗಂಡನ ಆಸ್ತಿಯ ಮೇಲೆ ಆಕೆಗೆ ಹಕ್ಕಿಲ್ಲ ದಂತಾಗಬೇಕೆಂದು ಇನ್ನೊಬ್ಬ ಸದಸ್ಯರು ನುಡಿದರು.

ಈ ಸಭೆ ಆಗಾಗಲೇ ಅಂಗೀಕರಿಸಿರುವ ಪ್ರಕಾರ ಮಿತಾಕ್ಷರ ಜಂಟಿ ಕುಟುಂಬದಲ್ಲಿ ಮಹಿಳೆಯರಿಗೆ ಬಹಳ ಮಟ್ಟಿಗೆ ಅನ್ಯಾಯವಾಗಿದೆಯೆಂದೂ, ಇನ್ನೂ ಹೆಚ್ಚಿನ ನಷ್ಟಹೊಂದಲು ಮಹಿಳೆಯರು ಸಿದ್ಧರಾಗಿಲ್ಲವೆಂದೂ ಶ್ರೀಮತಿ ರೇಣು ಚಕ್ರವರ್ತಿಯವರು ನುಡಿದರು

ದೊರೆ ಮಹೇಂದ್ರರ ಪಟ್ಟಾಭಿಷೇಕ

ಹಿಮಾಲಯದ ಮಡಿಲಲ್ಲಿರುವ ನೇಪಾಳ ರಾಜ್ಯದ ದೊರೆಯಾಗಿ ಮಹೇಂದ್ರ ವೀರ ವಿಕ್ರಮ ಸಹದೇವ ಅವರು ಹನುಮಾನ್ ಧೋಕಾ ಅರಮನೆಯಲ್ಲಿ ಪ್ರಾಚೀನ ಹಿಂದೂ ಸಂಪ್ರದಾಯದಂತೆ ಪಟ್ಟಾಭಿಷಿಕ್ತರಾದರು.

ಪಟ್ಟಾಭಿಷೇಕ ಮಹೋತ್ಸವವು ತಾ|| ೪ ನೇ ಬುಧ ವಾರ ಬೆಳಿಗಿನ ೧೦-೫೫ ಗಂಟೆಗೆ ಸರಿಯಾಗಿ ರಾಜ ಪುರೋಹಿತರು, ಪತ್ನಿ ಸಮೇತರಾಗಿ ಸಿಂಹಾಸನದಲ್ಲಿ ಕುಳಿತಿದ್ದ ದೊರೆ ಮಹೇಂದ್ರರಿಗೆ ಕಿರೀಟಧಾರಣೆ ಮಾಡಿ ದರು ಆಚಾರ್ಯರು ವೇದ ಮಂತ್ರಗಳನ್ನು ಘೋಷಿಸಿ ದರು ಶಂಖಧ್ವನಿಯ ತರುವಾಯ ಮಂಗಳವಾದ್ಯಗಳು ಮೊಳಗಿದವು ಆರಮನೆಯ ಪಾಧ್ಯಗೋಷ್ಠಿ ರಾಷ್ಟ್ರಗೀತೆ ಯನ್ನು ಬಾರಿಸಿದ ಕೂಡಲೆ ದಿವಂಗತ ಶ್ರೀಭುವನೇಶ್ವರಿ ಪುತ್ರ ಮಹೇಂದ್ರರ ಸಿಂಹಾಸನಾರೋಹಣದ ಸೂಚನೆ ಯಾಗಿ ಕುಶಾಲು ತೋಪುಗಳನ್ನು ಹಾರಿಸಲಾಯಿತು.

ನೇಪಾಳದ ರಾಜರಾಗಿ ಪಟ್ಟಾಭಿಷಿಕ್ತರಾದ ರಾಜ ಮಹೇಂದ್ರರ ೩೪ ಪದಗಳನ್ನುಳ್ಳ ಪೂರ್ಣ ಬಿರುದಿನ ' ಪ್ರಶಸ್ತಿಯು ಈ ರೀತಿಯಿದೆ.

" ಸ್ವಸ್ತಿ ಶ್ರೀ ಗಿರಿರಾಜ ಚಕ್ರ ಚೂಡಾಮಣಿ ನಾರಾ ಯಣೇತ್ಯಾದಿ ವಿವಿಧ ಬಿರುದಾವಳಿ ವಿರಾಜಮಾನ ಮನೋನ್ಮೇಷ ಪ್ರಜ್ವಲ ನೇಪಾಳ ತಾರಾಮಹಾಧಿಪತಿ ಶ್ರೀಮರ್ಮಾ ಮಹಾರಾಜಾಧಿರಾಜ ಶ್ರೀ ಶ್ರೀ ಶ್ರೀ ಮಹಾ ರಾಜ ಮಹೇಂದ್ರ ವೀರವಿಕ್ರಮ ಜಂಗ್ ಬಹದೂರ್ ಷಾ ಬಹದೂರ್ ಸಂಶೇರ್ ಜಂಗ್ ದೇವನ ಸದಾ ಸಮಾಜ ವಿಜಯೀನಾಂ ಎಂಬ ಪ್ರಶಸ್ತಿಯು ಸಮರ್ಪಿ ಸಲ್ಪಟ್ಟಿತು.

ಅಶೋಕಸ್ತಂಭದ ಚಿನ್ಹೆ ಇರದ ನೋಟುಗಳ ರದ್ದಿಗೆ ಕ್ರಮ

ಮುದ್ರಣದಲ್ಲಿ ಮತ್ತು ಕಾಗದದ ಒಳಗುರುತು (ವಾಟರ್ ಮಾರ್ಕ್) ಗಳಲ್ಲಿ ಅಶೋಕಸ್ತಂಭದ ಚಿನ್ಹೆ ಗಳನ್ನೊಳಗೊಳ್ಳದ ಭಾರತ ಸರಕಾರದ ಕರೆನ್ಸಿ ನೋಟು ಗಳು ಮತ್ತು ಬ್ಯಾಂಕ್ ನೋಟುಗಳು ಮೇ ತಿಂಗಳ ನಿಂದ ಆರು ತಿಂಗಳು ಕಳೆದ ಬಳಿಕ ಕ್ರಮಬದ್ಧವಾ ಗಿರುವುದಿಲ್ಲವೆಂದು ಕೇಂದ್ರ ಸರಕಾರವು ಪ್ರಕಟಿಸಿದೆ

ರಿಜರ್ವ್ ಬ್ಯಾಂಕಿನ ಇತ್ಯ ಇಲಾಖೆಯ ಶಾಖೆ ಗಳಲ್ಲೂ ಸರಕಾರಿ ಖಜಾನೆ, ಉಪಖಜಾನೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಶಾಖೆಗಳು, ಹೈದ್ರಾಬಾದ್ ಸ್ಟೇಟ್ ಬ್ಯಾಂಕ್, ರಿಜರ್ವ್ ಬ್ಯಾಂಕ್ ಏಜೆಂಟ್ ಆಗಿರುವ ಮೈಸೂರು ಬ್ಯಾಂಕ್ ಲಿ, ಇವುಗಳಲ್ಲೂ ಸಹ ಅಂತಹ ಚಿನ್ಹೆ ರಹಿತ ನೋಟುಗಳನ್ನು ಅಂದಿನಿಂದ ಅಂಗೀಕರಿಸ ಲಾಗುವುದಿಲ್ಲ ಎಂದು ಈಗ ಪ್ರಕಟವಾದ ಪತ್ರಿಕಾ ವರದಿ ತಿಳಿಸಿದೆ.

ಅಂತಹ ನೋಟುಗಳ ನೀಡಿಕೆಯನ್ನು ೧೯೫೦ ನೇ ಇಸವಿಯಿಂದ ನಿಲ್ಲಿಸಲಾಗಿದ್ದು, ಚಲಾವಣೆಯಲ್ಲಿ ಅವು ಗಳ ಸಂಖ್ಯೆ ಅತಿ ಕಡಿಮೆಯಿದೆ. ಈ ದೃಷ್ಟಿಯಿಂದ, ಇನ್ನೂ ಚಲಾವಣೆಯಲ್ಲಿರುವ ಆತರಹದ ಅಲ್ಪಸ್ವಲ್ಪ ನೋಟುಗಳನ್ನು ತಿಂಗೆಗೆದುಕೊಂಡು ಅಶೋಕಸ್ತಂಭದ ಗುರುತಿನವುಗಳನ್ನು ಆದಷ್ಟು ಬೇಗ ಚಲಾವಣೆ ಮಾಡುವುದು ಪ್ರಸಕ್ತ ಪರಿವರ್ತಿತ ರಾಜಕೀಯ ಪರಿ ಸ್ಥಿತಿಯ ಕಾರಣ ಒಳಿತೆಂದು ಭಾವಿಸಲಾಗಿದೆ. ಅಂತೆಯೇ ಮುಂಚಿನ ಮಾದರಿಯ ನೋಟುಗಳ ಚಲಾವಣೆಯನ್ನು ಅಂತ್ಯಗೊಳಿಸುವುದು ಸೂಕ್ತವೆಂದೂ ನಿರ್ಧರಿಸಲಾಗಿದೆ. ಆದರೂ, ಈ ಕಾಲಮಿತಿಯ ಬಳಿಕವೂ ಸಹ ರಿಜರ್ವ್ ಬ್ಯಾಂಕಿನ ಕಚೇರಿಗಳು ಮತ್ತು ಏಜೆನ್ಸಿ ಗಳಲ್ಲಿ ಅಂತಹ ನೋಟುಗಳನ್ನು ಬದಲಾಯಿಸಿಕೊಡ ಲಾಗುವುದು.

ವಿಶಾಲ ಮೈಸೂರು ರಚನೆ ಸಂಬಂಧ ಸಮಿತಿ ನೇಮಕ

ವಿಶಾಲ ಮೈಸೂರು ಪ್ರಾಂತ್ಯರಚನೆ ಸಂಬಂಧವಾಗಿ, ಮೈಸೂರು ಸರ್ಕಾರದವರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿದ್ದಾರೆ.

ಮುಂಬೈನ ಸಹಕಾರ ಸಚಿವರಾದ ಶ್ರೀ ಎಂ. ಪಿ. ಪಾಟೀಲ್, ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚ, ಮದ್ರಾಸಿನ ಆರೋಗ್ಯಮಂತ್ರಿ ಎ. ಬಿ. ಶೆಟ್ಟಿ ಇವರುಗಳು ಸದಸ್ಯರಾಗಿರುತ್ತಾರೆ. ಹೈ ದ್ರಾ ಬಾ ದು ಪ್ರಾಂತ್ಯದ ಪ್ರತಿನಿಧಿ ಹೆಸರನ್ನು ಪ್ರತ್ಯೇಕವಾಗಿ ಸೂಚಿಸ ಲಾಗುವುದು ಈ ಸಮಿತಿ ಹೊಸ ಪ್ರಾಂತ್ಯದ ಶಾಸನ ಸಭೆಗಳು, ಆಡಳಿತ ವ್ಯವಸ್ಥೆ, ಹಣಕಾಸಿನ ಸಮಸ್ಯೆಗಳು ಇತ್ಯಾದಿಗಳನ್ನು ಪರಿಶೀಲಿಸುವುದು.

ಮೇ ಮಧ್ಯಭಾಗವಲ್ಲಿ ಈ ಸಮಿತಿ ಸಮಾವೇಶ ಗೊಳ್ಳಬಹುದು.

Edited, Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No M. 2266 « ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು » REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀದೀಕ್ಷಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಸಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ. ಖರ್ಚು ಸೇರಿ ೩ ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೨೧ ನೇ ಮೇ ೧೯೩೬ [ಸಂಚಿಕೆ ೧

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ.]

ಸಂತೋಷ ಸಮಾಚಾರ

ಶಿವಮೊಗ್ಗಾ ತಾಲ್ಲೂಕು ಹಾರನಹಳ್ಳಿಯಲ್ಲಿರುವ ವೇ॥ ಗುಬ್ಬೀಶಿವಕ್ಷಧಾ ಪಂಡಿತ ಶಿವರುದ್ರಶಾಸ್ತ್ರಿಗಳವರಿಗೆ ಆಕಸ್ಮಿಕವಾಗಿ ಹೃದ್ರೋಗವು ಸಂಭವಿಸಿ ಒಂದೆರಡು ದಿವಸಗಳಲ್ಲಿಯೇ ವಿಷಮಪರಿಸ್ಥಿತಿಯುಂಟಾಗಿ ಇವರು ಜೀವಿಸುವುದೇ ದುರ್ಲಭವೆಂದು ಪ್ರಕೀರ್ತಿಯಾಗಿತ್ತು. ಇಂತಹ ಸನ್ನಿವೇಶದಲ್ಲಿ ಈಶ್ವರಪ್ರೇರಣೆಯಿಂದ ಸ್ಥಳೀಯ ಸುಪ್ರಸಿದ್ಧ ವೈದ್ಯರಾದ ಶ್ರೀಮರ್ತಾ ಕುಮಾರಪಂಡಿತರವರು ಹೃದಯವನ್ನು ಪರೀಕ್ಷಿಸಿ ರೋಗದ ಮೂಲವನ್ನು ತಿಳಿದು ವಿರುದ್ಧ ಮನೋಧಾವದಿಂದ ಅವಶ್ಯಕ ಚಿಕಿತ್ಸೆಯನ್ನು ಮಾಡಿ ಗುಣಪಡಿಸಿರುವ ವಿಷಯಲ್ಲಿ ನಾವು ಗಳು ಪಂಡಿತರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ತೀರದಾಗಿದೆ.

ಶಾಸ್ತ್ರಿಗಳವರಿಗೂ ಇವರ ಆತೀಷ ಕುಟುಂಬದವರಿಗೂ ಅದ್ಯಂತದವರೆಗೂ ವೈತ್ಯೋಪಚಾರವನ್ನೆಸಗಿದ ಸಮಾಪ ಬಂಧುವರ್ಗದವರಿಗೂ ಸಹಾಯವನ್ನು ನೀಡಿದ ಸಮಸ್ತ ಮಹನೀಯರಿಗೂ ಶ್ರೀಜಗದ್ಗುರುಗಳು ಸರ್ವ ಸೌಖ್ಯವನ್ನೀಯಲೆಂದು ಹಾರೈಸುತ್ತೇನೆ.

ಬಿ. ರಾಜಶೇಖರಾರಾಧ್ಯ.
ಬ್ರಹ್ಮಸಂದ್ರಮಠ

ನೀರಲಿಗಿ ಗ್ರಾಮದಲ್ಲಿ ನಡೆದ ಸತ್ಕಾರ್ಯಗಳು

ರಾಯಚೂರ ಜಿಲ್ಲಾಕೊಪ್ಪಳ ತಾ॥ ನೀರಲಿಗಿ ಗ್ರಾಮದಲ್ಲಿ ಹಿರೇಮಠದ ಶ್ರೀ ಮದ್ಭನಲಿಂಗ ಚಕ್ರವರ್ತಿಗಳಾದ ಶ್ರೀಅನ್ನದಾನಸ್ವಾಮಿಗಳವರು ಮತ್ತು ಪಂಚಾಕ್ಷರಸ್ವಾಮಿಗಳವರು ಕ್ರಿಯಾಸಿದ್ಧಿ ವಾಕ್‌ಸಿದ್ಧಿವೆಳ್ಳವರಾಗಿದ್ದು ಸದ್ಭಕ್ತಾದಿಗಳಿಗೆ ಇಷ್ಟಾರ್ಥಪ್ರದಾನಮಾಡುತ್ತ ಪಸಿದ್ಧರಾಗಿ ಗತಿಸಿರುತ್ತಾರೆ ಸದರೀ ಶ್ರೀಗಳವರ ಭವ್ಯವಾದ ಮಠದಲ್ಲಿ ಪ್ರತಿವರ್ಷದ ಪದ್ಧತಿಪ್ರಕಾರ ಇದೇ ಶಾಲಿವಾಹನ ಶಕೆ ೧೮೭೮ ನೇ ದುರ್ಮುಖಿನಾಮ ಸಂ॥ ಜ್ಯೈಷ್ಠ ಬ॥ ೫ ಸೋಮವಾರ ತಾರೀಖು ೩೦-ಏಪ್ರಿಲ್ ೧೯೫೬ ನೇ ಉದಯ ೭ ಘಂಟೆಯಿಂದ ೧೧ ಘಂಟೆಯ ವರೆಗೆ ಗದ್ದುಗೆಯ ಮಹಾರುದ್ರಾಭಿಷೇಕ ಮಹೇಶ್ವರ ಪಟುಗಳ ಆಯ್ಯಾಚ್ಯಾರ (ದೀಕ್ಷಾ) ಮತ್ತು ಅಳವಂಡಿ ಶಟ್ಟಿಮಸಿ ಪಟ್ಟದ ಸ್ವಾಮಿಗಳವರ ಮಹಾ ಪಾದಪೂಜಾ ಸಹಸ್ರ ಬಿಲ್ವಾರ್ಚನೆಯು ಮಹಾಧ್ಯಕ್ಷರಾದ ಬಿದಾನಸ್ವಾಮಿ ಮತ್ತು ಡಾ॥ ಅಂದಾನ ಸ್ವಾಮಿಯವರ ವೈದಿಕದೊಡನೆ ಬಹಳ ವೈಭವದಿಂದ ನೆರವೇರಿತು ಹಂತರ ಭೂರಿಗಾಣಾರಾಧನೆ ಜರುಗಿತು ಈ ಸಮಾರಂಭವನ್ನು ಸದರೀಗ್ರಾಮದ ಸಭ್ಯಕ್ತರಾದಂಥ ಮ॥ ರಾ॥ ರಾ॥ ಶ್ರೀ ಆಡಿವೆಪ್ಪನವರು ಅಂಗಡಿ, ಫಕೀರಪ್ಪನವರು ಗದುಗಿನ ಮಾಲಿ ಪಾಟೀಲ ಭೀಮನಗೌಡು, ಪ್ಪೋ॥ ಪಾಟೀಲ ವೆಂಕನ ಗೌಡ್ರು ಗುಜ್ಜಲ ದುರಗವ್ವ ಹೂಗಾರ ಬಸಪ್ಪ ಉಳ್ಳಾಗಡ್ಡಿ ಶಿದ್ಧಲಿಂಗಪ್ಪ ಬಿನ್ನಾಳ ಬಸಪ್ಪ ಆನಂದಳ್ಳಿ ಮಲ್ಲಪ್ಪ ಶಿಂದೋಗಿ ಕಲ್ಯಾಣಪ್ಪ ಅಂಗಡಿಕೊಟ್ರಪ್ಪ ಮುಂತಾದ ಸಮಸ್ತ ದೈವಭವರು ಸಮ್ಮಿಳಿತರಾಗಿ ಗ್ರಾಮಾಗ್ರಾಮಗಳಿಂದ ಆಗಮಿಸಿದ ಜನರಿಗೆ ಅನ್ನ ಸಂತರ್ಪಣೆಯನ್ನು ಮಾಡಿಸಿದರು. ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯವರೆಗೆ ಮೂರ್ತಿಮಂಗಳ ಮಹೋತ್ಸವ ಜರಗಿದ ನಂತರ ನೆರೆದ ಸಭೆಯರಿಗೆ ಶ್ರೀಗಳವರಿಂದ ಗುರುಭಕ್ತಿ ಧರ್ಮನೀತಿ ಸಮ್ಮೋದ ಮಾಡಲ್ಪಟ್ಟು ಶ್ರೀ ಜ॥ ಪಂಚಾಚಾರ್ಯರ ಜಯಘೋಷದಿಂದ ಸಭಾ ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಕಾಗವಾಡ

ಕಳೆದ ಫೇಬ್ರುವರಿ ತಿಂಗಳಲ್ಲಿ ಬೆಳಗಾವಿ ಕೇಂದ್ರದಿಂದ ಜರುಗಿದ ೪ ನೆಯ ಇಯತ್ತೆಯ ಮಿಡ್ಲ್‌ಸ್ಕೂಲ್ ಸ್ಕಾಲರಶಿಪ ಪರೀಕ್ಷೆಯಲ್ಲಿ ಕುಳಿತ ಕಾಗವಾಡ ಶಾಲೆಯ ವಿದ್ಯಾರ್ಥಿಯಾದ ದಶರಥ ತಮ್ಮಣ್ಣಟಕ್ಕೋಡ ಈತನು ಬ್ಯಾಕವರ್ಡ ಕ್ಲಾಸಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೧ ನೇ ನಂಬರು ಬಂದಿರುತ್ತಾನೆ ಇದರ ಶ್ರೇಯಸ್ಸು ೪ ನೆಯ ಇಯತ್ತೆಯ ಗುರುಗಳಾದ ವಿ. ಎಸ್. ಮಠಪತಿ ಇವರಿಗೆ ಸಲ್ಲತಕ್ಕದ್ದು. ಶ್ರೀಜಗದಾಚಾರ್ಯರು ಇವರಿಗೆ ಇನ್ನೂ ಹೆಚ್ಚಾದ ಶ್ರೇಯಸ್ಸನ್ನು ದಯಪಾಲಿಸಿ ಕಾಪಾಡಲೆಂದು ಬೇಡುವ,

ಶಾಲಾಮಾಸ್ತರ ಸಾ॥ ದುಂ॥ ಮಂಡಗುದ್ದಿ.

ಉಪನಯನ ಸಮಾರಂಭ

ಚಿಕ್ಕಮಣ್ಣೂರು ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀ ಗುರುದೇವತಿವಾಚಾರ್ಯಸ್ವಾಮಿಗಳವರು ಆಯುರ್ವೇದಾಚಾರ್ಯ ನವಿಲಗುಂದ ಇವರ ಸನ್ನಿಧಿಯಲ್ಲಿ ನವ್ಯ ಚಿ॥ ಗುರುಪಾದಯ್ಯ ಮತ್ತು ಪ್ರಭಯ್ಯ ಈ ಉಭಯರ ಉಪನಯನವನ್ನು ಇದೇ ಶಾಲಿವಾಹನ ಶಕೆ ೧೮೭೮ ನೇ ದುರ್ಮುಖಿನಾಮ ಸಂವತ್ಸರ ವೈಶಾಖ ಬ॥ ೧ ಶುಕ್ರವಾರ (ತಾರೀಖು ೨೫-೫-೧೯೫೬) ಪ್ರಾತಃಕಾಲ ಶುಭ ಮುಹೂರ್ತದಲ್ಲಿ ಮಾಡುವದಾಗಿ ನಿಶ್ಚಯಿಸಿದ್ದೇನೆ. ಇದೇ ಶುಭಸಮಾರಂಭದಲ್ಲಿ ಬಡವರಾದ ಮಾಹೇಶ್ವರ ಪಟುಗಳ ಉಪನಯನವನ್ನು ಕೂಡ ಧರ್ಮಾರ್ಥವಾಗಿ ನೆರವೇರಿಸಿಕೊಡುತ್ತೇನೆ. ಮಾಹೇಶ್ವರರು ತಮ್ಮ ತಮ್ಮ ಪಟುಗಳನ್ನು ಒಂದು ದಿವಸ ಮುಂಚಿತವಾಗಿಯೇ ಕರೆ ಮುಕೊಂಡು ಬಂದು ಛಿಟ್ಟಿಯಾಗಬೇಳು. ಪರಸ್ಥಳದಿಂದ ಬರುವ ಬಡಜನರಿಗೆ ಊಟ ವಸತಿಗಳ ವ್ಯವಸ್ಥೆಯನ್ನು ಸದರಿ ಸ್ವಾಮಿಗಳವರು ತಮ್ಮ ದವಾಖಾನೆಯಲ್ಲಿ ಉಚಿತವಾಗಿ ಮಾಡಿದ್ದಾರೆ. ಭರತಕ್ಕವರು ತಮ್ಮ ಹಾಸಿಗೆ ಹೊದಿಕೆ, ಮತ್ತು ತಂಬಿಗೆ, ತಾಲಿ, ಇವುಗಳನ್ನು ಸಂಗಡ ತೆಗೆದುಕೊಂಡು ಬರತಕ್ಕದ್ದು. ಮತ್ತು ಬರತಕ್ಕ ಪಟುಗಳ ಹೆಸರನ್ನು ೨೦ ನೇ ತಾರೀಖಿನೊಳಗೆ ತಿಳಿಸತಕ್ಕದು.

—: ಕಾರ್ಯಕ್ರಮ :—

ಶ್ರೀ ಷ॥ ಬ್ರ॥ ಪಟ್ಟಾಧ್ಯಕ್ಷ ಬಸವಲಿಂಗಸ್ವಾಮಿಗಳವರು ಪಂಚಗ್ರಹ ಹಿರೇಮಠ ನವಿಲಗುಂದ ಇವರ ನೇತೃತ್ವದಲ್ಲಿ ತಾ॥ ೧೪-೫-೧೯೫೬ ನೇ ಶುಕ್ರವಾರ ಪ್ರಾತಃಕಾಲ ಶುಭಮುಹೂರ್ತದಲ್ಲಿ ಉಪನಯನ ಸಮಾರಂಭವು ಮಧ್ಯಾಹ್ನ ೧೨ ಘಂಟೆಗೆ ಭೂರುದ್ರಗಣಾರಾಧನೆ. ಸಾಯಂಕಾಲ ೬॥ ಘಂಟೆಗೆ ಆಯುರ್ವೇದ ಪಂಡಿತ ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳವರು ಅಣ್ಣಿಗೇರಿ ಬೃಹನ್ಮಠ ಇವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಯು ಜರಗುವುದು ಸರ್ವರೂ ಆಗಮಿಸಬೇಕಾಗಿ ಕೋರುವ.

ಮಲ್ಲಯ್ಯ ತೀರ್ಥಯ್ಯ ಜಾವೂರ
ಕ. ಶಾ. ಮಾಸ್ತರ ನವಿಲುಗುಂದ.

ಶ್ರೀ ವೀರಭದ್ರರಥೋತ್ಸವ ಸುಲೇಪೇಟೆ

ಚಿಂಚೋಳಿ ತಾಲೂಕು ಸುಲೇಪೇಟೆ ಶ್ರೀ ವೀರಭದ್ರ ಸ್ವಾಮಿ ರಥೋತ್ಸವವು ಪ್ರತಿವರುಷ ಪದ್ಧತಿಯಂತೆ ತಾ॥ ೯-೫-೧೬ ನೇ ದಿವಸ ಮಳಖೇಡ ಶ್ರೀ ಷ॥ ಬ್ರ॥ ಕಾರ್ತಿಕೇಶ್ವರ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ವೈಭವದಿಂದ ನಡೆಯಿತು ಇವರ ಅಂಗವಾಗಿ ಚೈತ್ರ ಶು॥ ೧ ರಿಂದ ಪಲ್ಲಕ್ಕಿ ಉತ್ಸವ ಉಚ್ಚಾಯೋತ್ಸವ ಅಗ್ನಿಮಹೋತ್ಸವ ಮೊದಲಾದ ಧರ್ಮಕಾರ್ಯಗಳು ವಿಧಿವತ್ತಾಗಿ ಆಚರಿಸಲ್ಪಟ್ಟವು ಈ ಮಹಾಕಾರ್ಯಭಾಗಿಗಳಾದ ಸಕಲರಿಗೂ ಶ್ರೀ ವೀರಭದ್ರಸ್ವಾಮಿಯ ಆತೀರ್ವಾದವು ಸದಾ ಇರಲೆಂದು ಬೇಡುವ.

ನೀಲಕಂಠಯ್ಯಮಠಪತಿ

ವಿವಾಹ ಮಹೋತ್ಸವ

ಶಿವಮೊಗ್ಗಾ ಡಿ॥ ಸಂತೇಬೆನ್ನೂರ ಹಿರೇಮಠದ ಶ್ರೀ ಎಸ್. ದಾರುಕಾಚಾರ್ಯರ ಪುತ್ರಿ ಕುಂ॥ ಸೌ॥ ಶೈಲಜಾದೇವಿಯನ್ನು ಚಿತ್ರದುರ್ಗ ವಿಶ್ವಾರಾಧ್ಯ ಮಠದ ಶ್ರೀ ವೀರಭದ್ರಯ್ಯನವರ ಪುತ್ರ ಚಿ॥ ವಿಶ್ವನಾಥಾರ್ಯನಿಗೆ ಕೊಟ್ಟು ತಾ॥ ೧೩-೫-೩೬ ನೇ ದಿವಸ ಚಿತ್ರದುರ್ಗದ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನೆಡೆದ ವಿವಾಹ ಕಾರ್ಯವು ಶ್ರೀ ಜಗದ್ಗುರು ಪಂಚಾಚಾರ್ಯರ ಜಯ ಘೋಷದೊಡನೆ ವೈಭವದಿಂದ ಸಾಂಗವಾಗಿ ಮುಕ್ತಾಯ ಗೊಂಡಿತು.

ಪಂಚಾಚಾರ್ಯಪ್ರಭಾ

೧೯೫೬ ನೆಯ ಮೇ ತಾ॥ ೨೧ ನೆಯ ಸೋಮವಾರ

ನೂತನ ವರ್ಷಾರಂಭ

ಗುರುವರ್ಗದ ಅಭ್ಯುದಯಕ್ಕಾಗಿಯೂ ವೀರಶೈವ ಸಿದ್ಧಾಂತವನ್ನು ಪ್ರಚಾರಪಡಿಸುವುದಕ್ಕಾಗಿಯೂ ಜನ್ಮ ತಾಳಿದ "ಪಂಚಾಚಾರ್ಯಪ್ರಭಾ" ಪತ್ರಿಕೆಯು ಇದೇ ವೈಶಾಖ ಶುದ್ಧ ೫ ಮಿತಿಗೆ ತನ್ನ ೯ನೆ ವರ್ಷ ಆವಧಿಯನ್ನು ಗುರುಸೇವೆಗಾಗಿ ಕಳೆದು ಮೂವತ್ತನೇ ವರ್ಷದಲ್ಲಿ ಕಾಲಿಟ್ಟರುವುದರಿಂದ ಇದೊಂದು ಪವಿತ್ರ ದಿನವಾಗಿರುವುದು ಯಾಕಂದರೆ ಬಿರುಗಾಳಿ ಮಳೆ-ಕಲ್ಲಕಾಕರು ಅವರಿಸಿದ ಜಾಗೆಯಲ್ಲಿಯೆ ಫಲವೃಕ್ಷಗಳು ರಸವತ್ತಾದ ಫಲಗಳನ್ನು ಕೊಡಲು ಹೇಗೆ ಸಾಧ್ಯ? ವಿಘ್ನವೂ ಆದರಂತೆ ನಾಸ್ತಿಕತೆಯೇ ಜೆಜ್ಜಾಗಿ ಬೆಳೆಯು ತ್ತಿರುವ ಈಗಿನ ಂಧಿಕಾಲದಲ್ಲಿ ಆಸ್ತಿಕ ಜೋಧಕವಾದ ಇಂಥ ಪತ್ರಿಕೆಗಳು ಉಳಿಯಲಿಕ್ಕೆ ಸಾಧ್ಯವಿಲ್ಲದಿದ್ದರೂ ಇದು ಇಷ್ಟು ದೀರ್ಘಕಾಲ ಒಳಿತು ತನ್ನ ಕಾರ್ಯ ನಡೆಸುತ್ತಿರುವುದನ್ನು ನೋಡಿದರೆ ಯಾವ ಧರ್ಮಾಸ್ಥಿ ನಿಗೆ ಆಶ್ಚರ್ಯವಾಗಲಿಕ್ಕಿಲ್ಲ! ಮತ್ತು ಇದು ಹುಟ್ಟಿದ ದಿನವು ಪವಿತ್ರವೆಂದು ಯಾಕೆ ಅನಿಸಿತೊಳ್ಳಲಿಕ್ಕೆಲ್ಲ ಇದಲ್ಲದೆ ವೀರಶೈವ ಮಹಿಸ್ಯಾಸಕರಾದ ಶ್ರೀಜಗದ್ಗುರು ಯಾರುಕಾಚಾರ್ಯರು ಲಿಂಗದಿಂದ ಅವತರಿಸಿದ ದಿನವೂ ಇದೇ ಆದುದರಿಂದ ಈ ದಿನವು ಪ್ರಭೆಗೆ ತಕ್ಕೇ ಅಲ್ಲ ಇಡೀ ಪ್ರಸಂಶಕ್ಕೇ ಪವಿತ್ರ ದಿನವೆಂದು ಯಾಕೆ ಹೇಳ ಬಾರದು? ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಜಗದ್ಗುರು ಧಾರುಕಭಗವತ್ಪಾದರ ಜಯಂತಿಯು ಶುಭದಿನದಲ್ಲಿ ಪ್ರಾದುರ್ಭವಿಸಿ ತತ್ಸಂಬಂಧವಾದ ಧರ್ಮ ಬೋಧನೆಯಿಂದ ಅಜ್ಞಾನಾವನ್ನಯಲ್ಲಿ ಶಯನಮಾಡಿದ್ದ ಗುರುವರ್ಗವನ್ನು ಎಚ್ಚರಿಗೊಳಿಸಿ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಸಾಮಾಧ್ಯೇಯದಿಂದ ಬೆಳಗು ಶ್ರೀವರ ಪ್ರಭೆಗೆ ಮೂಲಕಾರಣರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಧ್ಯೇಯವು ಉಚ್ಚತಮವಾ ಸಿದ್ದುದಂದಲೇ ಇದು ಸರ್ವರ ಸ್ತುತಿ ಪಾತ್ರವಾಗಿದೆ ಕೈಲಾಶವಾಸಿಗಳಾದ ಇವರ ಸ್ಮೃಲದೂಪವು ಗೋಚರ ವಾಗದಿದ್ದರೂ ಸೂಕ್ಷ್ಮರೂಪವು ಪದಾ ಧ್ಯಾನದಲ್ಲಿ ಯಿಂದ ಪ್ರಭೆಯನ್ನು ಈಕ್ಷಿಸುತ್ತಿರುವರೆಂಬುದಕ್ಕೆ ಯಾನ ವಿಳ್ಳವಿಲ್ಲದೆ ಸಪಾ ವೆಡೆಯುತ್ತಿರುವ ಪ್ರಭೆಯೇ ಸಾಕ್ಷಿಯಾಗಿರುತ್ತದೆ ಇನ್ನು ಮು ದೆ ಲಕ್ಷಾಲ್ಲಸುಗಣ ವಾದ ರೀತಿಯಲ್ಲಿ ಪತ್ರಿಕೆಯ ಸ್ವರೂಪವನ್ನು ಪಡಿತರ ಧ್ಯೇಯದಾಡನೆ ಆಕರ್ಷಣೀಯ ವಾಗಿ ಮಾಡಿ ಕೊಂಬುದು ನಮ್ಮ ಗುರಿಯಾಗಿರುವುದೆಂದು ಇವರೂ ಎಂದಿನಂತೆ ಹಿಂದಾ ಶ್ರೀಕಂಠಾದಿಗಳನ್ನು ಪಠ್ಯಸ್ಥ ಪ್ರಭಾದರ್ಶನದಿಂದ ಜ್ಞಾನಸ್ಪರ್ಶಾವನ್ನು ಲೇಕಸಿಸುವ ಹಾರಗಳನ್ನೂ ಆರಿಸಿ ಧವ್ಯರಾಗಿಲೆಂದು ಆಶಿಸುವುದಲ್ಲದೆ ಗುರುವರ್ಗಾಶ್ರಯದೇ ಮೀಸಲಾಗಿದ್ದ ಈ ಪತ್ರಿಕೆಯ ಸ್ಥ ಎಲ್ಲ ಸುಜ್ಞರೀಶರು ಅನಕ್ಷರಾಗಿ ತರಿಸಿ ಓದಿ ಪ್ರದರ್ಶಿ ಆಚರಿಸಿ ಭಾವೀ ಗುರುವಂಶವನ್ನು ಸಂಸ್ಕಿತಪಡಿಸಿ ಸಾಗಿ ಸುಗುವುದರಲ್ಲಿ ಮುಂದಾಗಬೇಕೆಂದು ಒಯ್ಯಪಡ್ಡಿಕೆ ಮತ್ತು ಈ ಸತ್ಪತ್ರಿಕೆಯು ಫೆನೋದ್ದೇಶದಂತೆ ಮುಂದಿ ಕಾರಿಗಳು ಸಂಸ್ಕೃತವಿದ್ಯಾಸಕ್ತರೂ ಕರ್ಮಜ್ಞಾನಸಂಪ ನ್ನರೂ ಆಗಿ ಶಿಷ್ಯೋದ್ಧಾರದ ತಮ್ಮ ಪವಿತ್ರ ಕಾರ್ಯ ವನ್ನು ಸಫಲಗೊಳಿಸಬೇಕಾಗಿ ಆ ಗುರುಪುಂಗವರಲ್ಲಿ ನೆಮ್ಮ ಆನಂತ ವಂದನೆಗಳನ್ನು ಸಮರ್ಪಿಸುತ್ತೇನೆ

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗಶಿವಾ ಚಾರ್ಯರ ಹಾಗು ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಸ್ವರೂಪನೇ ಇದೆಂದು ನಂಬಿರುವ ಧರ್ಮಾಭಿಮಾನಿ ಗಳು ಆಸಂಖ್ಯಾತರಾಗಿದ್ದಾರೆ ಅವರೆಲ್ಲರೂ ಇದನ್ನು ಪವಿತ್ರ ದೃಷ್ಟಿಯಿಂದ ನೋಡುತ್ತಲೂ ಇದ್ದಾರೆ ಆಂಥ ರಿಗೆ ಇದು ಯಾವಾಗಲೂ ಪವಿತ್ರವಾಗಿಯೇ ಇರುತ್ತದೆ ಈವಾಗಿನ ಕಾಲದಲ್ಲಿ ಧರ್ಮಬೋಧಕವಾದ ಈ ಪತ್ರಿಕೆಯು ಕೆಲವರಿಗೆ ಬೇಸರವಾಗಿ ಕಾಣಬಹು ದಾದರೂ "ಸತ್ಯಮೇವ ಜಯತೇ" ಎಂಬಂತೆ ಸತ್ಯ-ಧರ್ಮಗಳಿಗೆ ಜಯವು ಖಂಡಿತ ಎಂಬುದನ್ನು ತಿಳಿದು ಸಣ ಪ್ರಭೆಯ ದರ್ಶನವನ್ನು ಮಾಡುತ್ತ ಪ್ರಾಕಂಖಿಕ ತೊಂದರೆಗಳನ್ನು ನೀಗಿ ಹರ-ಗುರು ಚಿಂತನೆಯಲ್ಲಿ ಕಾಲಕಳೆಯಲಿಲೆಂದು ಆತಿಸುವದಲ್ಲದೆ ಈ ನೂತನ ವರ್ಷದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆ ಯಿಂದ ವೀರಶೈವ ಸಮಾಜವೆಲ್ಲವು ಐಕ್ಯೋನ್ಮುಖವಾಗಿ ಪುಷದಿಂದ ಬಾಳಲೆಂದು ಹರಿ ಶುಭಾಶಯಗಳನ್ನು ಕೋರುತ್ತೀನೆ

"ಪ್ರಭಾವಿಜಯತೇ"

ಲೇ—ಸಿ ಆರ್ಯ ಪಟೇಲ ಹಿರೇಜೇವರಗಿ

ಮಾನವ ಸಮಾಜದ ಉದ್ಧಾರಕ್ಕಾಗಿ ಅನೇಕಾನೇಕ ಮಹಿಪೀಯರು ಶಕಮಾನಗಳಿಂದ ಪ್ರಯತ್ನ ಮಾಡಿ ದ್ದಾರೆ! ಮಾನವನು ದಾರಿತಪ್ಪಿ ನೀತಿವಿಹೀನ ನಡೆದಾಗ ಮಹಾನುಬಾವರು ಅವತಾರವಾಗುವದು ನಿಶ್ಚಿತ! ಪಾಶ್ಚಿಮಾತ್ಯ ವಿದ್ವಜ್ಜನರ ಸೊಂಕು ಇದು ನಮಗೆ ಒಡಿದಾಗ್ಯೂ ಕೂಡ ನಾವು ನಮ್ಮ ಪೂರ್ವಜರು ಇಕ್ಕಿ ಕೊಟ್ಟ ಸನಾರ್ಗ ಮರೆಯಿಲ್ಲ ಮರೆಯ ಬಹಾರಿಲ್ಲ ಜೀವನದ ಎಂತು ಕಠಿಣ ಸಮಸ್ಯೆ ಬಂದಾಗ್ಲೂ ಕೂಡ ಭಾರತೀಯರಾದ ನಾವು ನಮ್ಮದೇ ಆದ ಸಕ್ಷ ಮಾರ್ಗವನ್ನು ಅಾಯ್ದುಕೊಂಡು ಒಂದಿದ್ದೇವೆ

ಎರಡನೆಯ ಪ್ರತಿಯೋದು ಸಮಾಜವನ್ನು ನಾವು ಕೆಂಡಾಗ್ಯೂ ಆಯಾ ಸಮಾಜಗಳ ಉದ್ಧಾರಕ್ಕಾಗಿ ಅನೇಕ ನೇಕ ಮಹಿಪೀಯರು ಪವ್ಯ ಜೀವನಮಾನವನ್ನೇ ಧಾರೆಯೆರೆದುದು ಕಂಡುಬರುತ್ತದೆ! ಬಾರತದ ಇತಿಹಾಸ ವನ್ನು ನಾವು ಒಡಿದಾಗ ಧರ್ಮಕ್ಕಾಗಿ ಸತ್ಯಕ್ಕಾಗಿ, ನ್ಯಾಯಕ್ಕಾಗಿ ಸಮತೆಗಾಗಿ ಹೋರಾಡಿದ ಮಹಾನು ಭಾವರನ್ನು ಕಾಣುತ್ತೇವೆ ಅವರ ನಿಸ್ಪೀನ ತ್ಯಾಗಕ್ಕೆ, ಆಚಲವಾದ ರಾಷ್ಟ್ರಭಕ್ತಿಗೆ, ಮಾನವಪ್ರೇಮಕ್ಕೆ ಜಗ ತ್ತಿನ ಎಂತಹ ನಾಸ್ತಿಕ ಮನುಷ್ಯನೂ ಕೂಡ ತಲೆ ತಗ್ಗಿಸಿ ವಂದಿಸದಿರಲಾರನು!

ಭಾರತೀಯ ಜನಜೀವನದ ಇತಿಹಾಸವನ್ನು ಸಮಾ ಲೋಚಿಸುವಾಗ ಇಲ್ಲಿ ಈ ಧರ್ಮಭೂಮಿಯಲ್ಲಿ ಆದ ಸಾಮಾಜಿಕ, ರಾಜಕೀಯ ಕ್ರಾಂತಿಗಳನ್ನು ಕೂಲಂಕಷವಾಗಿ ಪರಾಮರ್ಶಿಸಬೇ ಕಾಗುತ್ತದೆ ಯಾವದೇ ಕಾಲಕ್ಕೆ ಯಾರಿಂದಲೂ ಕೂಡ ಇತಿಹಾಸ ಮರೆಮಾಚಲಿಕ್ಕೆ ಸಾಧ್ಯವಿಲ್ಲ ಸಮಾಜವನ್ನ ಆತಃ ತಳಹದಿಯ ಮೇಲೆ ಶಟ್ಟಿಲಿಕ್ಕೆ ಸಾಧ್ಯವಿಲ್ಲ ಮಾನವನು ಸತ್ಯವನ್ನು ಆರಿಸುವ ಪ್ರಾಣಿ ಆತನು ಪೂರ್ಣ ಸತ್ಯಶಾಲಿಯಾಗದಿದ್ದರೂ ಸತ್ಯವನ್ನು ಕೆಂದುಕೊಳ್ಳುವ ಪ್ರಾಣಿಯಾಗಿರುವನು

ಮಾನವನು ಸತ್ಯಾಸ್ಥಿಯ ಪರಾವಸಿಯೆಲ್ಲಿ ಎದ್ದಾಗ ನೈಜವಾದ ಮಾರ್ಗವನ್ನು ಅನುಸರಿಸು ಪ್ರಯತ್ನಿಸುವಂಗ ಮಹಾನುಭಾವರು ನಿಸ್ಪೃಷ್ಟ ಪಾತಿದಂದ ಸವಾಜವನ್ನು 'ಸತ್ಯ'ದ ತಳಹದಿಯ ಮೇಲೆ ಎತ್ತಿ ಒಡಿದು ಆದರ ಪೂರ್ವಪರಂಪರೆಯನ್ನು ಸಿದ್ಧವಾಡು ತ್ತಾರೆ ಒಂದು ಕಾಲಕ್ಕೆ ಭಾರತದಲ್ಲಿ 'ವೈದಿಕ ಧರ್ಮ'ವು ಪ್ರಾಸಸಿಯಂತಿತ್ತು ಬುದ್ಧ, ಜೈನ ಸಮಾಜಗಳ ಉಗಮದಿಂದ ವೈದಿಕ ಧರ್ಮದಲ್ಲಿದ್ದ ಫೆನತೆಯನ್ನು ಜನಂಗಿ ಮರೆತಿತ್ತು ಅಂತಹ ಕಾಲದಲ್ಲಿ ಶ್ರೀ ಶಂಕರಾ ಚಾರ್ಯರು ತಮ್ಮ ಫೆನೆಸಾದ ಪಾಂಡಿತ್ಯದಿಂದ ಪಾಖಂಡಿ ಗಳನ್ನು ಸೋಲಿಸಿ ವೈದಿಕ ಧರ್ಮದ ಮಹತಿಯನ್ನು ಚಿರಕಾಲ ಬೆಳಗುವಂತೆ ಮಾಡಿದರು ಭಾರತೀಯರ ಸಲುವಾಗಿ ಅನಾದರಣೀಯವಾದ ಭಾವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮೂಡಿದಾಗ ಆದರ ಸಾಂಸ್ಕೃತಿಕ ಹಿರಿಮೆಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಬ್ಬಿಸಿ ಅನೇಕ ಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಭಾರತದ ಫೆನತೆಯನ್ನು ಹೆಚ್ಚಿಸಿದವರು ಮಹಾತ್ಮಾ ಶ್ರೀಸ್ವಾಮಿವಿವೇಕಾನಂದರು! ಭಾರತೀಯ ಸಾಂಸ್ಕೃತಿಕ ಹಿರಿಮೆಯನ್ನು ಅಂಗ್ಲಭಾಷೆಗೆ ಪರಿವರ್ತಿಸಿ ಪಾಶ್ಚಾತ್ಯ ರನ್ನು ಕೂಡ ತಮ್ಮ ಬಲೆಗೆ ಪಾತಿಕೊಂಡವರಲ್ಲಿ ಮಹರ್ಷಿ ಅರವಿಂದಘೋಷರೊಬ್ಬರು. ಭಾರತೀಯರ ಸುಪ್ತವಾದ ಫೆತತೆಗೆ ಧರವಗಳನ್ನು ಎತ್ತಿ ತೋರಿಸಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟವರಲ್ಲಿ ಗಾಂಧೀಜಿಯವರು ಇತಿಹಾಸಪ್ರಸಿದ್ಧರು ಹೀಗೆ ಭಾರತೀಯರ ಐತಿಹಾಸಿಕ ಪರಂಪರೆಯನ್ನು ಸ್ಪಲ್ಪವೆರಳಿ ಹೇಳಬಹುದು.

ಈ ಭೂಮಿಯಲ್ಲಿ ವೈನ ವೈಕ್ಯವ ಎಂಬೆರಡು ಮತ ಗಳಿದ್ದಾಗ್ಯೂ ಕೂಡ ಮಾನವನ ಆಧ್ಯಾತ್ಮಿಕ ಬಲಕ್ಕಾಗಿ ಸಾಕಷ್ಟು ಪ್ರಯತ್ನ ನೂಡಿವೆ ಎಂದು ಧಾರಾಳವಾಗಿ ಹೇಳಬಹುದು ಆದರೆ ಇತ್ತೀಚೆಗೆ ಅಜ್ಞಾನದಿಂದ ವೈನರು ವೈಷ್ಣವರು ಒಬ್ಬರನ್ನೊಬ್ಬರು ನಿಂದಿಸುವದಕ್ಕೆ ಆರಂಭವಾದ ಕಾಲಕ್ಕೆ ಕನ್ನಡ ನಾಡಿನಲ್ಲಿ ಮತ್ತು ಭಾರತದ ಇನ್ನಿತರ ನಾಡಿನಲ್ಲಿ ಶಿವನು ವಿಷ್ಣುವು ಬೇರೆ ಯಲ್ಲ ಒಬ್ಬನೇ ಇದ್ದಾನೆ ಎಂಬ 'ಭಕ್ತಿಪಂಥದ' ಜನರು ಪ್ರಚಾರ ಮಾಡಿದರು

ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಶಿವ ಶರಣರು ಯಾವ ಮತವನ್ನೂ ಕೂಡ ಅವರು ಸಂಸ್ಥಾ ಪಿಸಲಿಲ್ಲ ಅವರು ಕೇವಲ ಮಾನವಸಮಾಜದ ಪ್ರಗತಿ ಗಾಗಿ ಹೋರಾಡಿ ಜೀವನದ ಆದರ್ಶ ತತ್ವಗಳನ್ನು ಸಮಾಜದ ಎದುರಿನಲ್ಲಿಟ್ಟರು ಬಸವಣ್ಣನವರಾಗಲಿ, ಅಕ್ಕಮಾಾದೇವಿಯಾರಲಿ ಅಥವಾ ಇನ್ನಿತರ ಶಿವ ಶರಣಾಂಗಲಿ ಕೇವಲ ಒಹಿರಂಗರುದ್ಧಿಯನ್ನು ಹೇಳಿದೆ ಅಂತರಂಗಶುದ್ಧಿಯನ್ನು ಕೂಡ ಹೇಳಿದರು ಇಂದು ಒಸಣ್ಣನವರ ತತ್ಪಸ್ವಿತಾವನೆಮಾಡುವ ಮಹಾನು ಬಾರರು "ಕಾಯಕವೇ ಕೈಲಾಸ" ಎಂಬೀ ತತ್ವವನ್ನು ಎತ್ತರ ಮಟ್ಟಿಗೆ ತಮ್ಮ ವೈಕ್ತಿಜೀವನದಲ್ಲಿ ತಂದಿದ್ದಾರೆ? ಯಾವದೇ ಕಾರ್ಯವನ್ನು ಆಡಿದಂತೆ ಮಾಡುವದು ಒಷು ಕಠಿಣ!

ಇತ್ತೀಚೆಗೆ ಅಂದರೆ ೨೦ನೇ ಶತಮಾನದಲ್ಲಿ ಶ್ರೀ ಪಂಡಿತ ಇಾಕೀನಾಥಶಾಸ್ತ್ರಿಗಳು ವೀರಶೈವ ಸಮಾಜದ ಉನ್ನತಿಗಾಗಿ, ಕೀರ್ತಿಗಾಗಿ, ತತ್ವಪ್ರಚೋಧನೆಗಾಗಿ, ತಮ್ಮ ಜೀವಮಾನವನ್ನೇ ಧಾರೆಯಾಗಿಟ್ಟರು ಶಾಂತನುವಿನಾಗಿ ಭೀಷ್ಮನು ಆಜನ್ಮ ಬ್ರಹ್ಮಚಾರಿಯಾದಂತೆ ಪಂಡಿತರು ಜಗದ್ಗುರುಪೀಠ ಕೇರ್ತಿಧ್ವಜವನ್ನು ಮೆರೆಯಿಸು ವದಕ್ಕಾಗಿ 'ಬ್ರಹ್ಮಚಾರಿ'ಗಳಾದರು

ದುಡ್ಡು ಕೊಟ್ಟವರ ಪರವಾಗಿ ಶಾಸ್ತ್ರ ಹೇಳುವ ಶಾಸ್ತ್ರಿ ವರ್ಗದವರು ಇವರಲ್ಲ ಇವರು ಶಾಸ್ತ್ರದ ಸತ್ಯಾಧ್ಯ ವನ್ನೇ ಸಮಾಜದ ಎದುರಿನಲ್ಲಿ ಕಡುಧೈರ್ಯ ದಿಂದ ಇಟ್ಟವರು ಪ್ರತಿಫಲ್ಗಿಗಳ ಸಿಂದ, ಅವಹೇಳನೆ ಕಡೆಗೆ ಲಕ್ಷಗೊಡದೆ ತಮ್ಮದೇ ಆದ ಸಚ್ಚಿದ ಮಾರ್ಗ ವನ್ನು ಜೀವನದ ಕೊನೆ ಉಸುರಿನ ವರೆಗೂ ಕಾಾಡಿ ದರು ಪೂಜ್ಯ ಪಂಡಿತರು ಉಜ್ಜಯಿನೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪ್ರೇಮಕ್ಕೆ ಪಾತ್ರರಾದವರು ಶ್ರೀ ಸದ್ಧರ್ಮರು ಸತ್ಯ ವಾದಿಗಳು ಸತ್ಯಕ್ಕಾಗಿ ತಮ್ಮ ದೇಹವನ್ನೇ ಕೊಡಿಗಾಣಿಸಿ ದರು ಸತ್ಯದ ಸಲುವಾಗಿಯೇ ಜಗತ್ತಿನಲ್ಲಿ ಅವತರಿಸಿದ ವರು ವೀರಶೈವ ಮತದ ಪೂರ್ವಪರಂಪರೆ ಕಾಣುವದ ಕ್ಕಾಗಿ ಶಾಸ್ತ್ರಿಗಳು ಹಗಲಿರುಳು ಬಿಡುವಿಲ್ಲದ ಸಂಶೋಧನೆ ಮಾಡಬೇಕಾಯಿತು ಸರಕಾರದ ಕೂಡ ಪತ್ಯ ವ್ಯವಹಾರ ಮಾಡಿ ವಿರಿಯಂಓಲ್ ಭಾಷ್ಯಪ್ರಕಾಶದ ವೀರಶೈವ ಮತದ ಹಾಗು ಜೈನಮತದ ಮತ್ತು ಇನ್ನಿತರ ಮತಗಳ ತಾಡ ಓಲೆಗಳು ತಾಪ್ರಲಿಪಿಗಳು ಹಾಗು ವಿರಿಯಂಟಲ್ ರೀಸರ್ಚ್ ಲಾಯಬ್ರರಿಯ ಪ್ರಕಟಣೆ ಗಳನ್ನು ತರಿಸಿಕೊಳ್ಳಬೇಕಾಯಿತು

ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಅಲ್ಲಲ್ಲಿ ಕಂಡುಬಂದ ಅನೇಕಾನೇಕ 'ಕುರುಹು'ಗಳ ಮೇಲಿಂದ ವೀರಶೈವ ಸಮಾಜದ ಫೆತನೆಗೆ ಕಾರಣೀಭೂತರಾದ ರಾಜರನ್ನು ಕಂಡುಒಡಿದರು ಶಾಸ್ತ್ರಿಗಳಿಗೆ ದೇಹಾ ರೋಗ್ಯ ಇದ್ದಿದ್ದರೆ ಅವರಂದ ಅನೇಕ ಕಾರ್ಯಗಳಾಗು ತ್ತಿದ್ದವು ಆದರೂ ಅವರು ತಮ್ಮ ಸ್ವಕೀರ್ತಿಯ ಕಡೆಗೆ ಲಕ್ಷಗೊಡದೆ ಮಾಡಿದ ಮಹಾನ್ ಕಾರ್ಯ ಯಾವ ಇತಿಹಾಸಕಾರನೂ ಕೂಡ ಮರೆಯುವಹಾಗಿಲ್ಲ ಮೈಸೂರಿನ ರಾಜಧಾನಿಯಲ್ಲಿ ಪಂಚಾಚಾರ್ಯ ಎಲೆ ಫ್ಯಿಸ್ ಸ್ಕೂಲಿನ ಪಂಚಾಚಾರ್ಯಪ್ರಭಾ ಮುಖಾಂ ತರವಾಗಿ ಜನರಲ್ಲಿ ಹೊಸ ಉತ್ಸಾಹ ತುಂಬಿದರು ವೀರಶೈವ ಸಮಾಜದಲ್ಲಿ ಅತೀವ ಬಡವರಾದ ಮಕ್ಕಳು ಸಹ ಕೂಡ ಗ್ರಂಥಗಳನ್ನು ಕೊಂಡುಕೊಳ್ಳಲೆಂದು ಗ್ರಂಥಗಳ ಬೆಲೆ ೧೧ ಆಣೆ ಮೊದಲು ಮಾಡಿ ಕಡೆಯಲು ೮೦ ವರೆಗೆ ಬೆಲೆಯುಳ್ಳ ಗ್ರಂಥಗಳನ್ನು ಸಿದ್ಧಿಸಿದರು ಎಷ್ಟೋ ಪುಟ್ಟಬೆಯಾಗಿ ಹಂಚಿದರು. ಶ್ರೀ ಪಂಡಿತರು ಜೀವಮಾನದಲ್ಲಿಯೇ ಅಜಾರಯರ ಜಯ ಘೋಷವನ್ನು ಕಂಡರು. ಜಗದ್ಗುರುಪೀಠದ ಪೋಷಕ ರಾಗು ವೀರಶೈವರ ಮನೆಯಲ್ಲಿ ವಿಠಾಯಮಾಡಿದವರು

ದ್ದನ್ನು ನೋಡಿದರು. ತಾವು ಹಚ್ಚಿದ ಗುರುಪೂಜೆ ಸಹಿಯು ಫಲದ್ರೂಪವಾದ ಮರವಾದುದನ್ನು ಕಂಡು ಆನಂದ ಹೊಂದಿದರು.

ಪಂಡಿತರು ಮೇಧಾವಿಗಳು, ಧೈರ್ಯಶಾಲಿಗಳು, ಉತ್ತಮ ನಾಗ್ಮಿಗಳು, ವಿನೋದ ವೃತ್ತಿಯವರು, ಸರಳ ಸ್ವಭಾವಿಗಳು. ಅವರು ತಮ್ಮ ಜೀವಪರ ಕೊಡೆಯ ನರೆಗೂ ಅಸತ್ಯವಾದದ್ದನ್ನ ತಲೆ ಹೊಗ್ಗಿಸಲಿಲ್ಲ. ಸತ್ಯ ನಾದಿಗಳಾಗಿಯೇ ತಿವನಲ್ಲಿ ಬೆರೆತರು

ಇಂದು ಶಾಸ್ತ್ರಿಗಳಲ್ಲರೆ ವೀರಶೈವರ ಉನ್ನತಿ ಭಿಕ್ಷತೆ ಗೇರುತ್ತಿತ್ತು, ಮತ್ತು ಕೇದಾರ ವೀರೆದ ಪ್ರಶ್ನೆಯೂ ಕೂಡ ನಿವಾರಣೆ ಜೊಂದುತ್ತಿತ್ತು, ಇಂದಿನ ಕಾಲದಲ್ಲಿ ಶಾಸ್ತ್ರಿಗಳ ಅಪ್ಯವಶ್ಯ ಇವುಗಳಿ ಅತಿಯಾಗಿ ಅನಿಸುತ್ತದೆ ಏಕೆಂದರೆ ಸಮಾಜದಲ್ಲಿ ಭಿನ್ನ ಅಜ್ಞಾನ ಸರಿಸುವ ಕಾರ್ಯವನ್ನು ಮತ್ತೆ ಕೆಲವೊಂದು ಜನರು ಮಾಡ ಹತ್ತಿದ್ದಾರಿ ಇದರ ನಿವಾರಣೆಯು ಇಂದು ಶಾಸ್ತ್ರಿಗಳಲ್ಲ ದಾಗ್ಗೂ ಅವರ ಹೆಜ್ಜಾಬಿಂದೊಡಗೂಡಿದ ಪ್ರಭಾಪ್ರವಿಯು ತನ್ನ ದೇ ಆದ ದಿವ್ಯ ಪ್ರಭೆಯಿಂದ ಸಮಾಜದ ಅಜ್ಞಾನ ಹೋಗಲುಡಿಸಲು ಪ್ರಯತ್ನಿಸಬಹುದಾಗಿ ಆಶಿ ವ್ಯಕ್ತ ಮಾಡಬಹುದು. ವಿವೆಕ್ಕೆ ಪಂಡಿತರ ಆದರ್ಶ ಜೀವನ ವನ್ನು ಪ್ರತಿಯೊಬ್ಬರು ತಮ್ಮ ಎದುರಿಸ್ಥಲಿಟ್ಟುಕೊಂಡು ನಡೆದಷ್ಟಾದರೆ ವೀರಶೈವ ಮತದಲ್ಲಿದ್ದ ಅವಧಿಕಾರಿಗಳ ಕೈವಾಡತನ ದೂರಾಗದಿರದು ಶ್ರೀ ಪ್ರಭುದೇವಿಗೆ ಜಯವಾಗಲಿ ಪಂಡಿತರ ಅಕ್ಷಯ್ಕೆ ಶಾಂತಿ ದೊರೆಯಲಿ

ಸಂಚಾರಿಯ ಸರಸವಾಣಿ

ಭಾರತದಲ್ಲಿ ಮುಂದಿನವರ್ಷ ನಡೆಯಲಿರುವ ಸಾರ್ವ ಜನಾವಣೆಯನ್ನು ಒಂದುವರ್ಷ ಮುಂದಕ್ಕೆ ಹಾಕಲು ವುದಾಗಿ ಅಲೆಚೀಚಿಸುತ್ತಿರುವ ಅನೇಕ ಶಾಸಕರು ತಮ್ಮ ನೋಲು ಇನ್ನೂ ಮುಂದೆ ಹೋಯಿತೆಂದು ಸಂತೋಷ ದಲ್ಲಿರುವರಂತೆ

* * *

ಮೈಸೂರಿನಲ್ಲಿದ್ದ ರಾಜರೂ ರಾಜವೈಭವವೂ ಕಾರ ಮಿನೆಗಳೂ ಉದ್ಯಮಗಳೂ ದಿನೇ ದಿನೇ ಕ್ಷೀಣವಾಗಿ ಆಮಾವಾಸ್ಯೆಯ ರಾತ್ರಿ (ಶಕ್ಕತ್ತಲೆ) ಯನ್ನು ಹೊಂದು ತ್ತಿರುವ ಈ ಸಮಯದಲ್ಲಾದರೂ ಮಂಡ್ಯ ಸಮಿತಿಯ ನರು ಕರ್ನಾಟಕ ನಾಮಕರಣಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಬಹುದಲ್ಲವೆ ?

* * *

ಲೂಟಿನಾರರಾಗಿ ಭಾರತವನ್ನು ಪ್ರವೇಶಿಸಿದ ಮುಸ್ಲೀ ಮರು ಇಲ್ಲಿಯೇ ಸ್ಥಿರವಾಗಿ ನೆಲೆಸಿ ಇಸ್ಲಾಮೀಗರಾ ರಾಜ್ಯವನ್ನು ಸ್ಥಾಪಿಸಿದ್ದಲ್ಲದ ಭಾರತ ಗಣರಾಜ್ಯದಲ್ಲಿಯೂ ಮುಂಗೈಹೋಧಿಂದ ತಮ್ಮ ಹಕ್ಕು ಬಾಧ್ಯತೆಗಳನ್ನು ಹೆಚ್ಚಿಸುತ್ತಿರುವರು ಇದನ್ನೂನೇ ಕಾಂಗ್ರೆಸ್ಸಿನ ಶಾಂತಿ ಸಿನ್ನು ಈ ಸಿನ್ನು ಹೀಗೇ ಮುಂದುವರೆದರೆ ಭಾರತೀಯ ರೆಲ್ಲರೂ ಸಿನ್ನಿ ಹಂಧವನ್ನ ತೊಸಿರಿ 'ಅಲ್ಲಾ' ಎಂದು ಅನ್ನ ಬೇಕಾಗಿ ಬರಬಹುದೇನು ? "ಬಂದಗೂ ಬರಲಿ ಕಾಂಗ್ರೆ ಸ್ಸಿನ ದಯೆಯೊಂದಿರಲಿ

* * *

ಅಕಬರನಿಗೆ ಪುತ್ರೋತ್ಪತ್ತಿಯಾಗಲೆಂದು ಹರಸಿದ ಸಲೀಂಚಿಸ್ತಿ ಎಂಬ ಗುರುವಿನ ವರದಂತೆ ಪುತ್ರಸಂತಾನ ವಾದನೂಲಕ ಅಕಬರನಲ್ಲಿ ಗುರುಭಕ್ತಿಯು ಹೆಚ್ಚಿ ಹಿಂದುಗಳಲ್ಲಿ ಪ್ರೀತಿ ವಿಶ್ವಾಸವು ಬೆಳೆಯಿತು ಅಂಥ ಮೊಗಲ ಸಾಮ್ರಾಟನ ಭಕ್ತಿ ವಿಶ್ವಾಸಗಳೇ ಮುಂದೆ ಮುಂದೆ ಹಿಂದು ಮುಸಲ್ಮಾನರ ಐಕ್ಯತೆಗೆ ಕಾರಣವಾ ಗಿರುವಾಗ ಈಗಿನ ಮುಸ್ಲಿಮರು ತಮ್ಮ ಹೊಸವರ್ಷ ವಾದ ಈ ರಂಜಾನ್ ಹಬ್ಬದಲ್ಲಾದರೂ ಹಿಂದುಗಳಲ್ಲಿ ವಿಶ್ವಾಸತೋರಿಸಬಾರದೆ ?

* * *

ಮುಂದಿನ ಚುನಾವಣೆಗಳಲ್ಲಿ ಕಾಮಾಲೆಗಳೂ ? ಸತ್ಯಸಂಧರೂ ? ಶುದ್ಧಹೀಸರೂ ? ಅದವರಿಗೆ ಮಾತ್ರ ಹೈಕಮ್ಯಾಂಡು ಟಿಕೇಟು ಕೊಟ್ಟು ಉಮೇದುವಾರ ರನ್ನು ನಿಲ್ಲಿಸುವುದೆಂತಿ ಭಾರತದ ಮಹಾಪ್ರಧಾನ ತೆಹ ರೂರವರು ಮಾತುಮಾತಿಗೆ ಹೈಕಮ್ಯಾಂಡು ಇಲ್ಲ; ಲೋಕಮ್ಯಾಂಡು ಇಲ್ಲ, ಎಂದು ಹೇಳುತ್ತಿರುವಾಗ ಉಮೆದುವಾರರಿಗೆ ಟಿಕೇಟುಕೊಡುವುದು ಮಿಲ್ಟ್ರಿ ಕಮ್ಯಾಂಡು ತಾನಲಾಗುವುದಿಲ್ಲವೆ ? ಹೌದು ಅವಾಗಿತೆ ಸಂದ ರ್ಭಗಳಲ್ಲಿ ಮಿಲ್ಟ್ರಿ ಉಪಯೋಗಿಸುವ ಸಂದರ್ಭ ಬರಬಹು ದೆಂದು ಭವಿಷ್ಯವಾಣಿಯನ್ನೆಯೊಬ್ಬರ ಸೂಚನೆಯಾಗಿದೆ.

* * *

ಬಹು ಪ್ರಾಚೀನಕಾಲದಿಂದಲೂ ರಾಜಾಧಿರಾಜರು, ಧರ್ಮದರ್ಶಿಗಳು ದಾನರೂಪವಾಗಿ ಕೊಟ್ಟ ಸೊತ್ತು, ಸೂರ್ಯ-ಚಂದ್ರಾದಿಗಳಿರುವ ಪರ್ಯಂತ ಅವೇ ಸತ್ಕಾರ್ಯಕ್ಕಾಗಿ ವಿನಿಯೋಗವಾಗಬೇಕೆಂದೂ ಅದನ್ನು ತಪ್ಪಿಸಿ ಯಾರಾದರೂ ಕಿತ್ತುಕೊಂಡರೆ ಅವರಿಗೆ ರೌರವ ನರಕವೆಂದೂ ಶಿಲಾಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ನರೆರೂ ಓದುತ್ತಿರುವರು. ಈಗ ಅವೆಲ್ಲಾ ಸೊತ್ತುಗಳು ಭಿನ್ನರೂಪವನ್ನು ಹೊಂದಿ ದ್ವಿತೀಯಪಂಚವಾರ್ಷಿಕ ಯೋಜನೆಯ ಆಣೆಕಟ್ಟುಗಳ ಸೇರಿ, ಗಂಗೆಗೆ ಸಲ್ಲುತ್ತಿರು ವಾಗ ಯಾರದೂ ಅಭ್ಯಂತರವಿಲ್ಲವಾನೆ ? ಅದನ್ನು ಉಪಯೋಗಿಸಿ ಪಾಪಕಾರ್ಯಕ್ಕೊಳ್ಳುವುದಕ್ಕಿಂತ ಶೀರಿಗೆ ಹಾಕಿ ದೇವರಿಗೆ ಸಲ್ಲಿಸುವುದೇ ಉತ್ತಮವೆಂದು ಈಗಿನ ಕಾಂಗ್ರೆಸ್ ಸರಕಾರವು ಒಂದು ಜಾತ್ಯೆಯ ಕಾನೂನನ್ನು ಮಾಡುತ್ತಿರುವುದು ಶ್ಲಾಘನೀಯವೇ ಸರಿ ?

* * *

ನೇಪದರ್ಮವನ್ನೊಳಗೊಂಡ ಭಾರತದಲ್ಲಿ ವೇದ ಬಾಹಿರವಾದ ಬೌದ್ಧಧರ್ಮಪ್ರಚಾರವು ಯಾವಾಗಲೂ ಖಂಡನೀಯವಾಗಿ ಬಂದಿರುವಾಗ ಅದು ಈಗಿನ ಕಾಂಗ್ರೆಸ್ ಸರ್ಕಾರದಿಂದ ಮನ್ನಣೆ ಪಡೆಯುತ್ತ ಮುಂದುವರಿಯುತ್ತಿರುವುದು ಭಾರತೀಯ ಸಂಸ್ಕೃತಿಯ ವಿನಾಶವೆಂದು ತತ್ವವೇತ್ತರ ಅಭಿಪ್ರಾಯ

ಕೇಂದ್ರ ಶಾಸನ ಸಭಾಧ್ಯಕ್ಷರಾದ ಅನಂತಶಯನಂ ರವರು ತಮ್ಮ ಭಾಷಣವೊಂದರಲ್ಲಿ ಶಾಸನಸಭಾ ಸದಸ್ಯ ರೆಲ್ಲರೂ ಪೂರ್ಣ ವಿರಕ್ತರಿಸೊಂದಿ ನಿಜವಾದ ಕರ್ಮ ಯೋಗಿಯಂತೆ ಜನಸೇವೆ ಕೈಕೊಳ್ಳಬೇಕೆಂದು ಹೇಳಿದ ರಂತೆ ಜನತೆಯಿಂದ ದೂರಾದ ವಿರತಿಗೆ ಜನತೆಯಿಂ ದೊಡಗೂಡಿದ ಕರ್ಮಯೋಗಿಯನ್ನು ಹೋಲಿಸಿದ್ದು ಯಾವ ನ್ಯಾಯವೋ ಅದರೂ ಆ ಮಹಾಮಭಾವರು ಮೊದಲಿನ ವಿರಕ್ತರಿದು ಹೇಳಿದ್ದರೆ ಎಷ್ಟೋ ಚೆನ್ನಾಗಿ ಕ್ಕಲ್ಲವೆ ?

* * *

ರಾಮಾಯಣ ಕಾಲದಲ್ಲಿ ಜಗನ್ಮಾತೆಯಾದ ಸೀತೆ ಯನ್ನು ಕದ್ದೊಯ್ದು ಲಂಕೆಯಲ್ಲಿರಿಸಿದ ರಾವಣನನ್ನು ಶ್ರೀರಾಮನು ವಧಿಸಿ ವಿಭೀಷಣಾಗೆ ಪಟ್ಟಗಟ್ಟಿದಂತಿ ನಿಂದ ಆ ಲಂಕಾಪಟ್ಟಣ (ಸಿಂಹಲದ್ವೀಪ)ವು ರಾವ ಣಾಜ್ಯವಾಗಿ ಬಂದುದರಿಂದ ಅಲ್ಲಿ ಭಾರತೀಯರು ನಾಮಿಸುತ್ತ ಬಂದಿದ್ದರು ಇತ್ತೀಚೆಗೆ ಸಿಂಹಳವು ಸ್ವತಂತ್ರವಾದ ಮೇಲೆ ಅಲ್ಲಿಯ ಮುಖ್ಯಮಂತ್ರಿ ಕೋಟೆಲಾವಾಲಾರವರು ಮತ್ತೆ ರಾವಣನ ಅವತಾರ ವನ್ನು ಧರಿಸಿ ಭಾರತೀಯರಿಗೆ ನಾನಾವಿಧ ಕಷ್ಟಗಳನ್ನು ಕೊಟ್ಟು ಮೂಲಕ ಸದ್ಯ ಸರ್ವಾಧಿಕಾರದಿಂದ ನಿನ್ನೆಕ್ತ ರಾಗಿರುವರು. ವಿಭೀಷಣನಂತೆ ಈಗ ಅಧಿಕಾರ ವಹಿಸಿದ ಭಂಡಾರನಾಯಕೆಯವರ ಮಂತ್ರಿತ್ವದಿಂದ ಸಿಂಹಳಕ್ಕೆ ಅಷ್ಟೇ ಅಲ್ಲ ಇಡೀ ಜಗತ್ತಿಗೂ ಕ್ಷೇಮವಾಗುವದೆಂದು ಅವರ ಪ್ರತಿನಿಧಿದ ಹೇಳಿಕೆಯಿಂದ ಪಡೆದು ತೋರುವಂ ತಿದೆ

* * * *

ಅಮೆರಿಕದವರು ಪಡೆಸುತ್ತಿರುವ ಜಲಜನಕ ಬಾಂಬು ಪ್ರಯೋಗನನ್ನು ಪ್ರತಿಭಟಿಸಿ ಮ್ಯಾಡಿಸನ್ ನಗರದ ಆರುಮಂದಿ ಶಾಂತಿ ಸಂಧರು ಶ್ರಾಲ್ಟ್ರೆಂಟು ಗಂಟೆಗಳ ಅವಧಿಯ ಉಪವಾಸ ಸತ್ಯಾಗ್ರಹ ಮಾಡಿದರಂತೆ ಭಾರ ತದ ಕಾಂಗ್ರೆಸ ಸರ್ಕಾರವು ಇಂಥ ಉಪವಾಸ ಸತ್ಯಾಗ್ರಹ ಗಳಿಗೆ ಹೈಪರ್ ಉಪಯೋಗಿಸುತ್ತಿರುವಂತೆ ಅಮೇರಿಕ ಕಾಂಗ್ರೇಸುಯಾಕೆ ಉಪಯೋಗಿಸಲಿಲ್ಲ ಎಂದು ಅನೇ ಕರು ತಂಕೆಸುತ್ತಿದ್ದಾರೆ ಅವಕ್ಕೆ ಉತ್ತರವಿಷ್ಟೇ ಅಮೇ ರಿಕಾ ಕಾಂಗ್ರೆಸ್ಸಿಗೂ ಭಾರತದ ಕಾಂಗ್ರೆಸ್ಸಿಗೂ ಅರು ಸಾವಿರ ಮೈಲಿ ಅಂತರವಿರುವುದರಿಂದ ಭೇದವು ಇದ್ದೇ ಇದೆ

* * *

ಒಂಭೈವಂಶದ ಪಾಂಡವ ರೌರವರೆಂಬ ದಾಯಾದಿ ಗಳಿಗೆ ಪಡಗಿದ ವಿರೋಧವು ವಿಪರೀತವಾಗಿ ಬೆಳೆದು ಪಾಸಾಂಶವು ಹೆಚ್ಚಿದ ಮೂಲಕ ಸಾರ್ವಭೌಮನಂತೆ ಶ್ರೀಕೃಷ್ಣನ ರೂಪದಲ್ಲಿ ಬಂದು ಸಚ್ಚಂತರಾದ ಪಾಂಡ ವರಿಗೆ ನೆರವಾಗಿ ಕೌರವರನ್ನು ನಾಶಗೊಳಿಸಿದನೆಂಬ ಭಾರ ತದ ಕಥಾಭಾಗವು ಎಲ್ಲರಿಗೂ ಗೊತ್ತಿರುವುದರಿಂದಲೇ ಒಂದೇ ಕಷ್ಟ ಡತಾಯಿಯ ಮಕ್ಕಳಾದ ನೈಸೂರು ಹಾಗು ಉತ್ತರ ಕನ್ನಡಿಗರು ತಮ್ಮ ತನ್ನೊಳಗಿರುವ ದಾಯಾದಿ ಳಿಲಹವಳ್ಳು ಮುಂದುವರಿಸದೆ ಸಂಧಿ ಮೂಲಕ ವಿಭಿನಿ ದ್ದರೂ ಅಂತರಂಗದ ಕಿಚ್ಚು ಜೋಗೆಯ ರೂಪದಲ್ಲಿ ಇನ್ನೂ ದೃಷ್ಟಿಗೋಚರವಾಗುತ್ತಿದೆ ಇದಕ್ಕಾಗಿ ಮನೋ ಯಜ್ಞವು ಅವಶ್ಯವಲ್ಲವೆ ?

ಸುದ್ದಿ ಸಂಗ್ರಹ

ವ್ಯಕ್ತಿಗಳ ಆದಾಯದ ಮೇರೆಗೆ ಪರಮಾವಧಿ ಮಿತಿ ಯನ್ನು ನಿಗದಿ ಮಾಡಬೇಕೆಂಬ ಸಲಹೆಯೊಂದಕ್ಕೆ ಪ್ರಧಾನಿ ನೆಹರೂರವರು ಶಿಸ್ಯರಿಸಿ ಆದಾಯದ ಪರ ಮಾನಾಧ ಮಿತಿಯ ಬಗ್ಗೆ ಸಾಕಷ್ಟನಾಡುವ ಮಾರ್ಗವು ಸರಿಯಾದ ಮಾರ್ಗವಲ್ಲ ಇದು ಕಂಠರೂಪಕ್ಕೆ ತರಲಾಗ ದಂತಹ ಮಾರ್ಗ ಇದರಿಂದ ಮಾನಸಿಕವಾಗಿ ಕ್ಷುಬ್ಧಸಟ್ಟು ಕೊಳ್ಳಬಹುದೆಷ್ಟೇ " ಎಂದು ಅವರು ನುಡಿದರು

* * *

ರಾಜಲಜಂಂಡಾ ಯೋಜನೆಯನ್ನೊಳಗೊಂಡ ರಾಯ ಚೂರು ಮತ್ತು ಮಾಸ್ಕಿ ತಾಲೂಕುಗಳಲ್ಲಾ ಕಷ್ಟಡ ಗ್ರಾಮಗಳನ್ನು ಆಂಧ್ರಕ್ಕೆ ವರ್ಗಾಯಿಸಬೇಕೆಂಬ ಹೈದ ರಾಬಾದ್ ಮುಖ್ಯ ಮಂತ್ರಿಗಳ ಸೂಚನೆಯನ್ನು ಹೈದ ರಾಬಾದ್ ಕರ್ನಾಟಕದ ಪ್ರಮುಖರು ಒಂದು ಪ್ರಕಟ ಣೆಯ ಮೂಲಕ ಬಲವಾಗಿ ಪ್ರತಿಭಟಿಸಿದ್ದಾರೆ.

* * *

ಕೇಂದ್ರ ಸರ್ಕಾರದ ಸರ್ಕಾರಿ ವಾಣಿಜ್ಯ ಕಾರ್ಖೋರೇಷ ನ್ನು ಖಾಸಗಿ ಲಿಮಿಟೆಡ್ ಕಂಪನಿಯಾಗಿ ಇಂದು ರಿಜಿ ಸ್ಟರ್ ಮಾಡಲಾಯಿತು. ವಾಣಿಜ್ಯ ಖಾಯೆಯ ಜಂಟಿ ಕಾರ್ಯದರ್ಶಿ ಶ್ರೀ ಕೆ ಬಿ ಲಾಲ್‌ರವರು ಸಂಸ್ಥೆಯ ಆಡಳಿತ ಸಮಿತಿಯ ಅಧ್ಯಕ್ಷರಾಗಿದ್ದಾರೆ

* * *

ರಾಜ್ಯಗಳ ಪುನರ್ಘಟನೆಯ ಕಾಲಕ್ಕೆ ಸಾಲಸೊತ್ತು ಗಳ ಹಂಚುವಿಕೆಯ ಬಗ್ಗೆ ಸದ್ಯದ ರಾಜ್ಯ ಪುನರ್ವಿಜನಾ ವಿಧೇಯಕದಲ್ಲಿ ಹೇಳಿರುವ ಸೂತ್ರವು ಬಹಳ ಅಸಮಾ ಧಾನಕರವಿದ್ದು ಈ ಬಗ್ಗೆ ಹೆಚ್ಚು ಸನುಂಜಸವೂ ನ್ಯಾಯವೂ ಆದ ತತ್ವವನ್ನು ಅನುಸರಿಸುವುದು ಅತ್ಯವ ಶ್ಯಕ ಎಂದು ಮುಂಬಯಿ ವಿಧಾನ ಸಭೆಯ ಉಪಾಧ್ಯಕ್ಷೆ ಶ್ರೀ ಎಸ್ ಆರ್ ಕಂಠಿಯವರು ಪತ್ರಿಕಾ ಸಂಪಾದಕರನ್ನುದ್ದೇ ಮಾತನಾಡುತ್ತಾ ತಿಳಿಸಿದರು

ಹೊಸ ಸಾಂತ್ಯಕ್ಕೆ 'ಕರ್ನಾಟಕ' ಎಂಬ ಹೆಸರೇ ಇರಲಿ

ಹೊಸ ಕನ್ನಡ ಸ್ಯಾಂತ್ಯಕ್ಕೆ 'ಮೈಸೂರು' ಎಂಬ ಹೆಸರಿಡುವ ಒದಲು ಕರ್ನಾಟಕವೆಂದೇ ಹೆಸರಿಂದಿಕೆಯು ಎಂದು ಹುಬ್ಬಳ್ಳಿಯಲ್ಲಿ ಸಮಾವೇಶಗೊಂಡಿದ್ದ ಕರ್ನಾ ಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ನಿರ್ಣಯಿಸಿತು.

ಕರ್ನಾಟಕ ಎಂಬ ಹೆಸರೇ ಸೂಕ್ತವಾಗಿರುವುದರಿಂದ ಪಾರ್ಲಿಮೆಂಟ್ ಮತ್ತು ಕೇಂದ್ರ ಸರ್ಕಾರ 'ಕರ್ನಾಟಕ' ಎಂಬ ಹೆಸರನ್ನು ಅಂಗೀಕರಿಸಲೆಂಬ ಆಶಯವನ್ನೂ ಸಮಿತಿ ಅಂಗೀಕರಿಸಿತು.

ಕರ್ನಾಟಕ ಪ್ರದೇಶ ಸಮಿತಿ ಕಾಂಗ್ರೆಸ್ ಅಧ್ಯಕ್ಷ ರಾದ ಶ್ರೀ ಸಿ. ಜೆ ಅಂಬಲಿಯವರು ಅಧ್ಯಕ್ಷತೆ ವಹಿಸಿ ದ್ದರು

ಬೆಳಗಾಂ, ಮುಂಬೈ, ಹೈದರಾಬಾದು, ಕೊಡಗು ಮತ್ತು ಮೈಸೂರು ಕರ್ನಾಟಕ ಶಾಲಿಮೆಂಟ್ ಸದಸ್ಯ ರನ್ನೊಳಗೊಂಡು ಅನೇಕ ಮಂದಿ ಸಭೆಯಲ್ಲಿ ಹಾಜ ರಿದ್ದರು.

ಕರ್ನಾಟಕವನ್ನು ದ್ವಿಭಾಷಾ ಮತ್ತು ನಾನಾ ಭಾಷೆ ಗಳ ಪ್ರಾಂತ್ಯಗಳೊಡನೆ ವಿಲೀಕರಿಸುವುದೆನ್ನು ಕರ್ನಾ ಟಕ ಪ್ರದೇಶ ಕಾಂಗ್ರೆಸ್ಸಿನ ಸರ್ವ ಸದಸ್ಯರ ಸಭೆ ವಿರೋ ಧಿಸಿದೆ. ಕರ್ನಾಟಕ ಜನತೆಯ ಅಭಿಮತ ಇಂತಹ ವಿಲೀನಕ್ಕೆ ವಿರೋಧವಾಗಿಯೆಯೆಂದೂ ನಿರ್ಣಯ ಸೂಚಿಸುತ್ತದೆ.

ಚಂದಾದಾರರಲ್ಲಿ ವಿನಂತಿ

ಮಹಾಶಯರೇ, ನಮ್ಮ ಪತ್ರಿಕೆಯು ಪ್ರಾರಂಭವಾಗಿ ಇದೇ ವೈಶಾಖ ಶು|| ೫ ಮಂಗಳವಾರ (ತಾರೀಖು ೧೫-೫-೩೬) ಕ್ಕೆ ೨ ವರ್ಷಗಳು ಪೂರ್ತಿಯಾಗಿ ೩೦ ನೆಯ ವರ್ಷವು ಪ್ರಾರಂಭವಾಗುತ್ತದೆ ಈ ಶುಭ ಸಮಯದಲ್ಲಿ ಪ್ರಭೂತ ಚಂದಾದಾರರಾಗಿ ಪ್ರೋತ್ಸಾಹಿಸುತ್ತ ಒಂದ ಸರ್ವರಿಗೂ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುವುದಲ್ಲದೆ ತಾವು ಇಲ್ಲಿಯವರೆಗಿಗೂ ತೋರಿಸುತ್ತ ಬಂದ ಅಭಿಮಾನವನ್ನೇ ಇನ್ನು ಮುಂದೆಯೂ ನಡೆಸಿಕೊಂಡು ಒರುವಿರೆಂದು ನಂಬಿರುತ್ತೇವೆ ವರ್ಷಾದಿಯ ದ ಚಂದಾದಾರರಾಗಿರುವ ಸರ್ವರೂ ಮುಂದಿನ ವರ್ಷದ ಚಂದಾ ೩-೦ ರೂಗಳನ್ನು ಕೂಡಲೆ ಮನಿಯಾರ್ಡರು ಮಾಡಿ ಕಳಿಸುವದು ಪ್ರೋನ್ಸ್ಟು ಪೂರೈಸಿ ರಿಜಿಸ್ಟ್ರೇಷನ್ ಖರ್ಚು ದಿನೇ ದಿನೇ ಹೆಚ್ಚುತ್ತ ಒಂದು ಇಷ್ ಎಪ್ರಿಲ್ ೧ ನೇ ತಾರೀಖಿನಿಂದ ಮತ್ತೂ ಹೆಚ್ಚಾಗಿರುತ್ತದೆ ಈ ಹೆಚ್ಚಿನ ಖರ್ಚಿಲ್ಲ ವಿ ಪಿ ಯಿಂದ ತರುವುದ ಚಂದಾದಾರರ ಮೇಲೂ ಬೀಳುವದ ಆದ್ದರಿಂದ ಎರಡು ಆಣೆ ಖರ್ಚುಮಾಡಿ ೩ ರೂಪಾಯಿಗಳನ್ನು ಮನಿಯಾರ್ಡರ್ ಮಾಡಿದರೆ ನಿಮಗೂ ನಮಗೂ ಖರ್ಚಿನಲ್ಲಿ ಉಳಿತಾಯವಾಗುವದು ಅಭಿಮಾನಿಗಳಾದ ಜಾಲೆಲ್ಲರೂ ಇದನ್ನು ಮನಸ್ಸಿಗೆ ತಂದುಕೊಂಡು ಚಂದಾ ಹಣವನ್ನು ಮನಿಯಾರ್ಡರು ಮಾಡುವ ಮೂಲಕ ವೃದ್ಧರಾಗಿ ಆಗುವ ಪ್ರೋನ್ಸು ಖರ್ಚನ್ನು ಉಳಸುವರೆಂದು ನಂಬಿರುತ್ತೇವೆ ಈಗಿನ ಹೆಚ್ಚಿನ ಪೋಸ್ಟು ಖರ್ಚಿನ ಮೂಲಕ ವಿ ಪಿ ಯಿಂದ ಕಳಸಲು ೩-೧೦-೦ ಆಗುತ್ತದೆಂಬುದನ್ನು ಸರ್ವರೂ ಗಮನಿಸಬೇಕು

ಮ್ಯಾನೇಜರ್

ಸ್ವೀಕಾರ

ಧಾರವಾಡ ಜಿಲ್ಲಾ ಗದಗ-ಬೆಟಗೇರಿಯಲ್ಲಿರುವ ನಿಂಗಪ್ಪ ಸೋಮವಗೌಡರ ಇವರ ಪುತ್ರ ಚಿ|| ಕಳಪ್ಪ ನಿಗೆ ಅದೇ ಗ್ರಾಮದಲ್ಲಿರುವ ಶ್ರೀ ಕಾಶಪ್ಪ ಗದಿಗಿನ ಇವರ ಪುತ್ರಿ ಹಿ|| ಕುಂ|| ಸೌ|| ಶಿವಗಂಗವ್ವನನ್ನು ಕೊಟ್ಟು ಕಡೆಸಿದ ನಿಶ್ಚಯಕಾರ್ಯ ಸಮಾರಂಭದಲ್ಲಿ ಪ್ರಭಾವೋಷಣಕ್ಕಾಗಿ ವರಪ ಕಡೆಯಿಂದ ಸಮರ್ಪಿಸಲ್ಪಟ್ಟ 4 ರೂಪಾಯಿ-ಗಳು ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಒಟ್ಟು 6 ರೂ ಗಳು ಶ್ರೀ ವೀರನಗೌಡ ನೀಲಪ್ಪಗೌಡ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಬೆಟಗೇರಿ ಗ್ರಾಮದಲ್ಲಿರುವ ಶ್ರೀ ಮಲ್ಲಪ್ಪ ವ ಚನ್ನಾರು ಇವರ ಪುತ್ರಿ ಚಿ|| ಸೌ|| ಲಕ್ಷ್ಮವ್ವನ ನಮ್ಮ ಗದಗ ತಾಲ್ಲೂ ಲಕ್ಕುಂಡಿ ಗ್ರಾಮದಲ್ಲಿರುವ ಶ್ರೀ ಶಿವಬಸಪ್ಪ ಶಿವಪ್ಪ ಕತ್ತಿ ಇವರ ಪುತ್ರನಿಗೆ ಕೊಟ್ಟು ಜರಡೆ ಲಗ್ನಕಾರ್ಯದಲ್ಲಿ ಪ್ರಭಾವೋಷಣಕ್ಕಾಗಿ ವರಪ ಕಡೆಯಿಂದ ಸಮರ್ಪಿಸಲ್ಪಟ್ಟ 4 ರೂ ವಧುವಿನ ಕಡೆ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಒಟ್ಟು 6 ರೂ ಗಳು ಶ್ರೀ ವೀರನಗೌಡ ನೀಲಪ್ಪಗೌಡ ಪಾಟೀಲ ಗದಗ ಬೆಟಗೇರಿ ಇವರ ದ್ವಾರಾ ತಲ್ಪಿರುತ್ತವೆ

ಕೊಪ್ಪಳ ತಾಲೂಕ ನೀರಲಗಿ ಹಿರೇಮಠದ ಕತ್ರ್ಯ ಗದ್ದಿಗೆಯ ಪೂಜಾಮಹೋತ್ಸವದ ಸಂದರ್ಭದಲ್ಲಿ ಮರಾಧ್ಯಕ್ಷರಾದ ಬದಾನಯ್ಯನವರು ಪ್ರಭಾವೋಷಣೆ ಗಾಗಿ 2 ರೂ ಗಳನ್ನು ಸಮರ್ಪಿಸಿ ಕಳಸಿದ್ದಾರೆ

ರಾಯಚೂರು ಜಿಲ್ಲಾ ಬಿಚ್ಚಾಲೆ ಮಹಾಂತೇಶ್ವರ ಜಾತ್ರೆಯ ಸಮಾರಂಭದಲ್ಲಿ ಪ್ರಭಾವೋಷಣೆಗಾಗಿ ಸಮರ್ಪಿಸಿದ 2 ರೂ ಗಳು ಸಾವಿರದೇವರ ಮಠದ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ|| ಹಾರ್ನಹಳ್ಳಿಯಲ್ಲಿರುವ ಶ್ರೀ ಶಿವರುದ್ರಶಾಸ್ತ್ರಿಗಳವರಿಗೆ ಒದಗಿದ್ದ ಹೃದಯರೋಗ ನಿವಾರಣೆಯಾದ ಸಂತೋಷಕ್ಕಾಗಿ ಸದರಿಯವರು ಪ್ರಭಾವೋಷಣೆಗೆ 1 ರೂ ಸಮರ್ಪಿಸಿ ಕಳಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ವರ್ತಮಾನಸಂಗ್ರಹ

ಹೆಣ್ಣುಮಕ್ಕಳ ಸುಧಾರಣೆಯಲ್ಲಿ ಸಾಶ್ಚಾತ್ಯರ ಕಷ್ಟ

ಬೆಳೆಯತ್ತಿರುವ ತಮ್ಮ ಹೆಣ್ಣು ಮಕ್ಕಳ್ಕೊಡನೆ ಹೇಗೆ ಬಾಳುವುದೆಂಬುದೇ ಬ್ರಿಸ್ಬೆನ್ನಿನ ಬಹುತೇಕ ತಂದೆ ತಾಯಿಗಳಿಗೆ ತಿಳಿಯದ ಸಮಸ್ಯೆಯಾಗಿ ಬಿಟ್ಟಿದೆ" ಎಂದು ಗೃಹಪತಿಯರೊ 'ಮಕ್ಕಳ ಯೋಗಕ್ಷೇಮ ಸಲಹಾ ಮಂಡಲಿ' ಅಧ್ಯಕ್ಷರೂ, ಲಂಡನ್ ವಿಶ್ವವಿದ್ಯಾಸಿಲಯದ ಮಕ್ಕಳ ಆರೋಗ್ಯ ಇನ್‌ಸ್ಟಿಟ್ಯೂಟ್ ಡೈರೆಕ್ಟರೂ ಆದ ಪ್ರೊಫೆಸರ್ ಅಲನ್ ಮಾಕ್ರೇಫ್ ಹೇಳಿದ್ದಾರೆ

ತಂದೆಗಳು ತಮ್ಮ ಹೆಣ್ಣುಮಕ್ಕಳು 'ಲಿಪ್‌ಸ್ಟಿಕ್' ಹಚ್ಚುವುದನ್ನು ಉಗ್ರವಾಗಿ ವಿರೋಧಿಸುತ್ತಾರೆ, ಅಸ್ಪೇ ಜವರ ಕೈಲಿ ಸಾಧ್ಯ ಅಪರೂಪಕ್ಕೊಮ್ಮೆ ಅವರುಗಳು ಮಕ್ಕಳನ್ನು ಹೊರೆಯಬಹುದೇನೋ!" ಎಂದು ಅವರು ಬ್ರಿಟಿಷ್ ಮೆಡಿಕಲ್ ಅಸೋಸಿಯೇಷನ್ನಿನ ವಿ ಲಂಡನ್ ಪ್ರಾನ ಕಚೇರಿಯಲ್ಲಿ ಸಮ್ಮೇಷವೊಂದರಲ್ಲಿ ತಿಳಿಸಿದರು

' ತಾಯಂದಿರು ಎಲ್ಲಕ್ಕಿಂತ ಹೆಚ್ಚಾಗಿ, ತಮ್ಮ ಪುತ್ರಿಯರು ಗರ್ಭಿಣಿಯರಾಗದಿರುವಂತೆ ನೋಡಿಕೊಳ್ಳಲು ಪೂರಾ ಪ್ರಯತ್ನಿಸುತ್ತಾರೆ ಅದೇ ಅವರಿಗೆ ದೊಡ್ಡ ತಲೆನೋವು, ಮಾತೆಯರು ತಮ್ಮ ಮಕ್ಕಳನ್ನು ಅರಿತು ಕೊಳ್ಳುವಂತೆ ಕಾಣುವುದಿಲ್ಲ, ಅವರೊಡನೆ ಸೇರಿ ನಲಿಯುವುದೂ ಕಂಡುಬರುವುದಿಲ್ಲ ತಾಯಿ ಮತ್ತು ಬೆಳೆದ ಮಗಳು ಒಟ್ಟಿಗೆ ಹೊರಗಡೆಹೋಗಿ ಒಂದು ಹೊಸ ಹ್ಯಾಟ್ ಖರೀದಿ ಮಾಡುವ ಪ್ರಸಂಗಗಳೂ ಬಹು ಅಪರೂಪ '' ಎಂದೂ ಪ್ರೊಫೆಸರ್ ಮಾಂಕ್ರೀಫ್ ಹೇಳಿದರು

ಗಾಳಿಯಲ್ಲಿ ಹಾರುವ ಮೋಟಾರ್ ವಾಹನ

ನೋವಿಯತ್ ರಾಷ್ಟ್ರವಲ್ಲಿ ಒಂದು ಹೊಸ " ಜೇಬು ಹೆಲಿಕೋಪ್ಟರ್ ಕೆ-೧೦ " (ಪುಟ್ಟ ವಿಮಾನ) ಫಿಮಿಸಲ್ಪಟ್ಟಿದೆ ಈ ಪುಟ್ಟ ವಿಮಾನದ ಅಶಾಧಾರಣ ಚಲನ ಶಕ್ತಿಯು (ಮೂವಿಬಿಲಿಟಿ) ಗಮನಾರ್ಹ ವಾದುದಾಗಿದೆ ಅದು ಆಕಾಶದಲ್ಲಿ ಚಲಿಸದೆಯೇ ಫಿನಿಶಿಲ್ಲುಮು ಗಂಟೆಗೆ ೧೦೦ ಕಿಲೋಮೀಟರ್-ಗಳವರೆಗಿನ [೬೫ ಮೈಲಿ] ವೇಗದಲ್ಲಿ ಚಲಿಸಬಲ್ಲದು. ಒಂದು ಜಹಜಿನ ಮೇಲೆದಾಗಲೀ ಅಥವಾ ಒಂದು ಲಾರಿಯ ಹಿಂಭಾಗದ ಅವರಣದಲ್ಲಿಯಾಗಲೀ ಅದು ಸುಲಭವಾಗಿ ಇಳಿದುಬಂದು. ನಿಲ್ಲಬಹುದು ನೀರಿನ ಮೇಲಿರುವಾಗ ಈ ಪುಟ್ಟ ವಿಮಾನವು ಒಂದು ಮೋಟಾರು ದೋಣಿ ಯಂತೆ ಚಲಿಸುತ್ತದೆ ಗಾಳಿಯಲ್ಲಿ ಅದು ೩,೫೦೦ ನಿಮಿಷಗುಗಳವರೆಗೆ [೧ ನಿಮಿಷಕ್ಕೆ ೩೯ ೩೭ ಅಂಗುಲ] ಎತ್ತರದವರೆಗೆ ಏರಿಹೋಗಬಲ್ಲದು

ಗಾಳಿಯಲ್ಲಿದ್ದಾಗ ನೋಟಾರು (ತಿರುಗಣಿ) ನಿಂತು ಹೋದರೆ, ಈ ವಿಮಾನವು ಕೆಳಗೆ ಬದ್ದು ಪುಡಿಪುಡಿ ಆಗುವುದಿಲ್ಲ ಅದಕ್ಕೆಯಿವ ಸ್ವಯಂ ತಿರುಗಣಿಯ ಸಹಾಯದಿಂದ ಅದು ಸುರಕ್ಷಿತವಾಗಿ ಕೆಳಗಿಳಿಯುವುದು ಈ ಸಂದರ್ಭದಲ್ಲಿ ಗಾಳಿ ತಿರುಬು ಅಲಗುಗಳು ಒಂದು ಬಗೆಯ ಗಾಳಿ ಕೊಡೆ (ಪ್ಯಾರಾಷೂಟ್)ಯಂತೆ ಕೆಲಸ ಮಾಡುತ್ತವೆ

ಈ ಶಿಶುವಿಮಾನವು ನೋವಿಯತ್ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವಿಭಿನ್ನ ಕ್ಷೇತ್ರಗಳಲ್ಲಿ ವಿಸ್ತೃತವಾದ ಬಳಕೆಗಾಗಿ ನಿರ್ಮೋಜಿತವಾಗಿದೆ,

ಎಂಟು ಕದಿರಿನ ಚರಕ

ಎಂಟು ಕದಿರುಗಳುಳ್ಳ ಚರಕವೊಂದನ್ನು ಸಾಗರಪುರದ ನಿರಂಜನೋಪಾಧ್ಯಾಯರಲ್ಲಿರುವ ಶ್ರೀ ಭುಟ್ಟಾ ಎಂಬ ನೌಕರ ನೊಬ್ಬನು ಕಂಡುಹಿಡಿದಿರುವುದಾಗಿ ಉಕ್ಕನ್ನೆ ಜಾಲ ಉಷಸಚಿವ ಶ್ರೀ ಸತೀಶಚಂದ್ರರು ಲೋಕಸಭೆಯಲ್ಲಿ ತಿಳಿಸಿದರು. ಈ ಚರಕವನ್ನು ಕೈಯಿಂದಲೂ ವಿದ್ಯುಚ್ಛಕ್ತಿಯಿಂದಲೂ ನಡೆಸಬಹುದೆಂದು ಸಚಿವರು ಪ್ರಶ್ನೋತ್ತರಕಾಲದಲ್ಲಿ ಹೇಳಿದರು

ಎಲುಬಿನ ಬಾವಿ

ಅಗ್ರಾದ ಕೋಟೆಯ ಬಳಿ ಕೆಲಸಗಾರರು ನೀರು ಸರಬರಾಜು ನಳಿಗೆಗಳಿಗಾಗಿ ಭೂಮಿಯನ್ನು ಅಗೆಯು ತ್ತಿದ್ದಾಗ ಮನುಷ್ಯನ ಎಲುಬುಗಳಿಂದ ಕುಂಬಿದ ಎರಡು ಬಾವಿಗಳು ಕಂಡುಬಂದಿವೆ ಈ ಬಾವಿಗಳನ್ನು ಭೂಮಿ ಯಿಂದ ೧೨ ಅಡಿಗಳ ಕೆಳಗೆ ಕಾಣಲಾಯಿತು ಇವು ಗಳಲ್ಲಿ ಎಲುಬುಗಳಲ್ಲಾ ಕಾರಣನೇನೆಂಬುದನ್ನು ಭೂಗರ್ಭ ಶಾಸ್ತ್ರಜ್ಞರು ಪರೀಕ್ಷಿಸುತ್ತಿದ್ದಾರೆ ಮೊಗಲರ ಕಾಲದಲ್ಲಿನ ರಕ್ತಪಾತ ಪ್ರಕರಣವೊಂದಕ್ಕೆ ಇದು ಸಂಬಂಧಿಸಿರಬಹುದೆಂದೂ ಕೆಲವರ ಊಹೆ

ಮುಂದಿನವರುಷ ಬಳಕೆಗೆ ಬರುವ ಹೊಸ ನಾಣ್ಯಗಳು

೧ ನಯಾಪೈಸಾ
೨ ನಯಾಪೈಸೆ
೫ ನಯೇ ಪೈಸೆ
೧೦ ನಯೇ ಪೈಸೆ
೨೫ ನಯೇ ಪೈಸೆ
೫೦ ನಯೇ ಪೈಸೆ
೧೦೦ ನಯೇ ಪೈಸೆ

ಮೇಲ್ಕಂಡ ನಾಣ್ಯ ಪದ್ಧತಿಯಿಂದ ಈಗಿರುವ ೨ ಆಣೆ, ೧ ಆಣೆ, ಅರ್ಧಾಣೆ ಮತ್ತು ಕಾಸು ಇವು ಹೊಸ ನಾಣ್ಯಗಳಿಗೆ ಸಮಪಾಗುವುದಿಲ್ಲ ಆದರೆ ಅವುಗಳ ಸ್ಥಾನ ವನ್ನು ೧೦ ನಯೇ ಪೈಸೆ ೫ ನಯೇ ಪೈಸೆ ೨ ನಯೇ ಪೈಸೆ ಮತ್ತು ೧ ಪಯಾಪೈಸಾಗಳು ಆಕ್ರಮಿಸುವುವು

ಈಗಿರುವ ನಾಲ್ಕಾಣೆ ಅರ್ಧರೂಪಾಯಿ ಒಂದು ರೂಪಾಯಿ, ಹೊಸ ರೂಗೂ ಹಳೆಯ ನಾಣ್ಯಪದ್ಧತಿ ಗಳಿರಡಕ್ಕೂ ಸಾಮಾನ್ಯವಾಗಿದ್ದು ಜಲಾವಣೆಯಲ್ಲಿ ಮುಂದುವರಿಯುವುವು.

೫೫ ನಯೇ ಪೈಸೆ = ೪ ಆಣೆ
೫೦ ನಯೇ ಪೈಸೆ = ೮ ಆಣೆ
೧೦೦ ನಯೇ ಪೈಸೆ = ೧ ರೂಪಾಯಿ

ರೂಪಾಯಿಗೂ ಹೊಸನಾಣ್ಯಗಳೂ ಇರುವ ಸಂಭವವನ್ನು ಸಾರ್ವಜನಿಕರಿಗೆ ಸಲಭಾಗಿಯಾಗಿ ಸ್ವೀಕೃವಾಗಿಯೂ ತಿಳಿಸುವ ಉದ್ದೇಶದಿಂದ ಹೊಸನಾಣ್ಯಗಳ ಮೇಲೆ ಅವು ರೂಪಾಯಿನಲ್ಲಿ ಎಷ್ಟನೇ ಒಂದುಭಾಗವೆಂಬ ವಿಷಯವನ್ನು ವಿವರಿಸಲಾಗುವುದು ಅಂದರೆ ಶತಯ ಪೈಸಾ ಮೇಲೆ ರೂಪಾಯಿಯಲ್ಲಿ ಹೊರೆಯು ಒಂದು ಭಾಗ ಎಂದು ಬರೆದಿರಲಾಗುವುದು ಅದರಂತೆಯೇ ೨, ೫, ೧೦, ೨೫ ಮತ್ತು ೫೦ ನಯೇ ಪೈಸೆ ನಾಣ್ಯಗಳಮೇಲೆ ಅನುಕ್ರಮವಾಗಿ ರೂಪಾಯಿಯ ೫೦/೧, ೨೦/೧, ೧೦/೧, ¼ ಮತ್ತು ½ ಎಂದು ಬರೆದಿರಲಾಗುವುದು

ಜಯಂತಿ ಮಹೋತ್ಸವ

ಶ್ರೀ|| ಜ|| ವಿಶ್ವಾರಾಮಾರಾಧ್ಯರ ಹಾಗೂ ಪಾರು ಕಾಚಾರ್ಯರ ಜಯಂತ್ಯುತ್ಸವವನ್ನು ಶಿವಮೊಗ್ಗಾ ತಾಲ್ಲೂಕು ಹಾರನಹಳ್ಳಿಯಲ್ಲಿರುವ ಶ್ರೀ|| ಜ|| ರಂಭಾಪುರೀ ಸಂಸ್ಥಾನದ ಅಸ್ಥಾನವಿದ್ವಾ ಶ್ರೀ ಗುಬ್ಬಿ ಶಿವಳಿಪಾ ಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸ ಗೃಹದಲ್ಲಿ ಪತ್ರಿಕಪ್ರಕಾರ ಇದೇ ದುರ್ಮುಖಿ ಸಂವತ್ಸರದ ವೈಶಾ|| ಶು|| ೩ ಮತ್ತು ೫ ದಿನಗಳಲ್ಲಿ ವಿಶೇಷವೈಭವ ದಿಂದ ನೆರವೇರಿಸಿದರು ಅಂದು ಶ್ರೀ ಭಗವತ್ಪಾದರದ ಭಾವಚಿತ್ರವನ್ನು ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ ಸುಹಿನ ಪ್ರಸಾದವನ್ನು ವಿನಿಯೋಗಿಸಿದ ಬಳಕ ಮಧ್ಯಾಹ್ನ ಗಣಪತಿಯರ ಸಂಕಷ್ಟಹರ ಪೂಜೆಯ ಎರಡುದಿವಸಗಳು ಸಾಯಂಕಾಲ ಗುರುಸಪ್ತೋತ್ಸವರ್ಯತಿ ಮೋಕ್ಷಸಾಧನೋಪಾಯ ಎಂಬೀವಿಷಯಗಳನ್ನು ಕುರಿತು ಸರಸಭಾಷಣಗಳನ್ನು ಮಾಡಿ ಸಭಿಕರನ್ನು ಆಪಂದ ಗೊಳಿಸಿದರು.

ಓರ್ವ ಗುರುಚರಣಾನೇವಕ

Edited Printed and Published by Brahmanathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯವೀಣಾಧಿಪರ್ । ಪಂಚಶ್ಲೋಕವಿನಾತಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಂತೀಶಾಷಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯವರು [ವಿ ಪಿ ಖರ್ಚು ಸೇರಿ ೩ ರೂ ೧೦ ಆ.

ಸಂಪುಟ ೩೦ | ಸೋಮವಾರ ತಾ॥ ೨೮ ನೇ ಮೇ ೧೯೫೬ [ಸಂಚಿಕೆ ೨

ಪತ್ರವ್ಯವಹಾರ

[ಬಾಹ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಿತಕ್ಕದ್ದು —ಸಂ]

ಕುಂದಗೋಳದ ಗುರುವರ್ಗೋತ್ತೇಜಕ ಸಂಘವು ಅಡಗಿತೆ?

ಅಖಿಲ ಭಾರತೀಯ ವೀರಶೈವ ಗುರುವರ್ಗದ ಉತ್ಕರ್ಷೋತ್ತರ ವಿಲೀನೆಗಾಗಿ ಮತ್ತು ಸಮಾಜ ಕಲ್ಯಾಣ ಕಾರ್ಯಗಳಿಗಾಗಿ ನಾಗನೂರು ಬೃಹನ್ಮಹಾಧ್ಯಕ್ಷರಾದ ಪಂಡಿತಾಗ್ರಗಣ್ಯಾ ವಿಶ್ವೈಕ್ಯ ಶ್ರೀ ವೇ॥ ಪಂ॥ ಶಾಂತೀಶಾಧಶಾಸ್ತ್ರಿಗಳವರು ಕುಂದಗೋಳದಲ್ಲಿ ಎಲ್ಲ ಗುರುಮೂರ್ತಿಗಳನ್ನು, ಅಹ್ವಾನಿಸಿ ವೀರಶೈವ ಮಹಾಸಮಾವೇಶದ ಮುಕ್ತಾಟಮಣಿಗಳಾದ ಶ್ರೀ ಜಗದ್ಗುರು ಪಂಚಪೀಠಾಧೀಶರಿಂದ ಆಶೀರ್ವಚನ ತೆಗೆಸುಕೊಂಡು 'ಅಖಿಲಭಾರತೀಯ ಗುರುವರ್ಗೋತ್ತೇಜಕ ಸಂಘ' ವನ್ನು ಸಂಸ್ಥಾಪಿಸಿದ ವಿಷಯವು ಸರ್ವಜ್ಞಶ್ರುತವಾಗಿದೆ, ಈ ಸಂಘದ ಪತಿಯಿಂದ ಅನೇಕ ಕಾನೇಕ ಮಹಾಸಮ್ಮೇಲನಗಳು ಅಲ್ಲಲ್ಲಿ ಜರುಗಿದ ವಲ್ಲದೆ ಸೊಲ್ಲಾಪೂರಜಿಲ್ಲಾಂತರ್ಗತ ಮಾಳಶವರೆಯಲ್ಲಿ 'ವೀರತಪೋವಧಿ' ಹುಟಿಗಿ ಬ್ರಹ್ಮಶ್ರಾಧ್ಯಕ್ಷರಾದ ಶಿವೈಕ್ಯ ಶ್ರೀ॥ ಷ॥ ಬ್ರ॥ ಶ್ರೀಜನ್ನ ವೀರ ಶಿವಾಚಾರ್ಯ ಮಹಾಸ್ವಾಮಿಗಳವರ ಪ್ರತ್ಯಕ್ಷದಿಂದ ವೇ॥ ಪಂ॥ ಕುಲ ಪತಿಗಳೂ ತಿಕಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಗುರುವರ್ಗದ ಸಭೆ ಕೂಡಿದವಿಷಯ ಎಲ್ಲರಿಗೂ ತಿಳಿದುಬಾಗಿದೆ ಯಲ್ಲದೆ ಮೇಲ್ಕಂಡ ಗುರುವರ್ಗಸಂಘದ ಪತಿಯಿಂದ ಸೊಲ್ಲಾಪೂರಜಿಲ್ಲೆಯ ಬಾಶಿನಗರದಲ್ಲಿ ಪೂಜ್ಯ ಪರಾಂಡ ಕರಶ್ರೀಗಳವರ ದಿವ್ಯಸಾಂಪತಿಕತ್ವದಲ್ಲಿ ಹೊರಡುತ್ತಿರುವ 'ವೀರತ್ಯೆವಗಜ್ಞಾ' ವಾರಪತ್ರಿಕೆಯು ಇನ್ನೂ ವರೆಗೆ ವೀರತ್ಯೆವರಲ್ಲಿ ಜಾಗೃತಿಯನ್ನು ಉಂಟುಮಾಡುತ್ತಿದೆ

ಮೈಸೂರಿನ ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ತಾರೀಖು ೭-೫-೫೬ ಕ್ಕೆ ನಿಡೇಸೇಸಿಯಲ್ಲಿ 'ವೀರತ್ಯೆವ ಜ್ಞಾನಮಂಡಳ' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಕಲ್ಬುರ್ಗಿ ಜಿಪಮಾಧಿ ಬೃಹನ್ಮಹಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶಾಂತವೀರಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ೧೪ ಜನರ ತಾತ್ಪರ್ಯಕ ಸಮಿತಿಯನ್ನು ನೇಮಿಸಿದ ವಿಷಯ ಪ್ರಕಟಗೊಳಸಲಾಗಿದ್ದು ಈ ಸಂಸ್ಥೆಯು ವೀರತ್ಯೆವಮಾಪಧಿಕಾರಿಗಳ ಪಾಪದೆ ಹುಟ್ಟಿದ ಕನ್ಯೆಕ್ಕತೆ, ಅಸಹಕಾರತೆ, ದ್ವೇಷ, ಅಸೂಯೆಗಳ ನಿವಾರಣೆಗಾಗಿ ಪ್ರಯತ್ನಿಸುವುದಾಗಿಯೂ ಪ್ರಕಟಿಸಿದ್ದಾರೆ

ಆದರೆ ಈ ಮೊದಲು ಪೂಜ್ಯ ಶಿವೈಕ್ಯ ಪಂ॥ ಶ್ರೀ ಶಾಶೀಶಾಧಶಾಸ್ತ್ರಿಗಳಂದ ಕುಂದಗೋಳದಲ್ಲಿ ಸಂಸ್ಥಾಪಿಸಲ್ಪಟ್ಟಿತ್ತು 'ಅಖಿಲಭಾರತೀಯ ಗುರುವರ್ಗೋತ್ತೇಜಕ ಸಂಘ' ವು ಗತಿ ಏನಾಯಿತು? ಇಂದು ನಿಡೇಸೇಸಿಯಲ್ಲಿ ಸಂಸ್ಥಾಪಿಸಿದ 'ವೀರತ್ಯೆವಜ್ಞಾನಮಂಡಳವು, ಅಖಿಲ ಭಾರತೀಯ ಗುರುವರ್ಗಸಂಘದ ಅಂಗವಾಗಿದೆಯೋ ಅಥವಾ ಸ್ವತಂತ್ರವಾಗಿ ಸಾಗಿಸಲಾಗುತ್ತಿದೆಯೋ ಸಮಗೆ ಯಾವುದೂಕೂಡ ತಿಳಿದಿಲ್ಲ ಅಖಿಲ ಭಾರತೀಯ ಗುರುವರ್ಗಸಂಘವಿರುತ್ತಿರಲಿಕ್ಕಾಗಿ ಬೇರೆ ಸಂಘವನ್ನು ಸಂಸ್ಥಾಪಿಸುವದರಿಂದ ಗುರುವರ್ಗದಲ್ಲಿ ಒಡಕು ತೊಡಕು ಉತ್ಪನ್ನ ವಾಗಲಿಲ್ಲವೆ? ಮೊದಲಿಗಿದ್ದ ಗುರುವರ್ಗಸಂಘ ಕೈಗಿ ಮಾಸ್ಯತೆ ಕೊಟ್ಟು ಅದರ ಮೂಲಕ ಕಾರ್ಯ ನಡೆಸುವದು ವಧ್ಯೇದಲ್ಲವೆ?

ಕುಂದಗೋಳ ಪಂಚಗ್ರಹ ಹಿರೇಮಕದ ಹಿಂದಿನ ಶರ ಪಟ್ಟಾಧ್ಯಕ್ಷರೇ 'ಅಖಿಲಭಾರತ ಗುರುವರ್ಗೋತ್ತೇಜಕ ಸಂಘ'ಕ್ಕೆ ಅಧ್ಯಕ್ಷರಾಗಿ ಕೆಲಸ ಪಡೆಸುತ್ತಿದ್ದರೆಂದು ಕೇಳ ದ್ದೆವು ಈಗ ಅವರು ಕೈಲಾಸವಾಸಿಗಳಾದನಂತರ ಈಗಿನ ಪಟ್ಟಾಧ್ಯಕ್ಷರು ಆ ಸಂಘದ ಬಗ್ಗೆ ಏನಾದರೂ ಪ್ರಕಟಣೆ ಹೊರಡಿಸಿ ನಿಲ್ಲಿಸಿರುವರೇ ಅಥವಾ ಜವಾಬ್ದಾರಿಯಿಂದ ನಡೆಸುತ್ತಿರುವರೇ ಎಂಬುದನ್ನು ಈಗಿನ ನಿಡೇಸೇಸಿ ವೀರ ತ್ಯೆವಜ್ಞಾನಮಂಡಳದ ತಾತ್ಕಾಲಿಕ ಸಮಿತಿಯವರು ಯಾಕೆ ಕೇಳಬಾರದು? ಒಂದುವೇಳೆ ಅವರು ವಿಸರ್ಜಿಸಿದ್ದರೆ ಎಂದು ಯಾರಲಕ್ಷಮತಿಯಿಂದ ಯಾವ ತಾರೀಖಿನಲ್ಲಿ ವಿಸರ್ಜಿಸಲ್ಪಟ್ಟು ಬಹಿರಂಗಪಡಿಸಿದ್ದಾರೆ ಇನೇ ಮುಂತಾದ ಎಲ್ಲ ವಿಷಯಗಳಬಗ್ಗೆ ಖಚಿತ ವಿಧಾರ ಮಾಡಿಕೊಂಡು ನಿಡೇಸೇಸಿ ಜ್ಞಾನಮಂಡಳದ ಸಮಿತಿಯು ಮುಂದುವರಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಪಂಡಿತ ಕಾಶೀನಾಥಶಾಸ್ತ್ರಿಗಳ ಅಮೃತಹಸ್ತದಿಂದ ಸ್ಥಾಪಿತವಾಗಿ ಜಯಭೇರಿಯನ್ನು ಹೊಡೆದ ಕುಂದ ಗೋಳ ಗುರುವರ್ಗ ಸಂಘವು ಅಲ್ಲಿಯ ಈಗಿನ ಪಟ್ಟಾಧಿಕಾರಿಗಳಿಂದ ಜೀವಂತವಾಗಿದ್ದರೆ ಎಲ್ಲರೂ ಪ್ರೋತ್ಸಾಹಕೊಟ್ಟು ಅದನ್ನೇ ಮುಂದುವರಿಸುವುದರಲ್ಲಿ ಅಭ್ಯಂತರವೇನು? ಕುಂದಗೋಳ ಪಂಚಗ್ರಹ ಹಿರೇಮಕವು ಇಂಥ ಗುರುವರ್ಗದ ಜವಾಬ್ದಾರಿಯ ಕಾರ್ಯಗಳನ್ನು ನಡೆಯಿಸಿಕೊಂಡು ಹೋಗಲು ಶಕ್ತಿ ಯುಳ್ಳಾಗಿರುವುದಲ್ಲದೆ ಎಲ್ಲರಿಗೂ ಅಮಳಕಲವಾದ ಕೇಂದ್ರವಲ್ಲಿರುತ್ತದೆ ಈ ಗುರುವರ್ಗೋತ್ತೇಜಕ ಸಂಘ ವನ್ನು ಕಾಯಂ ಇಟ್ಟುಕೊಂಡು ಇದಕ್ಕೆ ಸಂಬಂಧಿಸಿದಂತೆ ನಿಡೇಸೇಸಿ ಜ್ಞಾನಮಂಡಳವನ್ನು ಪತಿಸಲು ಸಾಧ್ಯವೇ ಹೇಗೆ ಪಟ್ಟಲ್ಲದೆ ಪಂಡಿತರು ಹಾಕಿಕೊಟ್ಟ ಹೆಜ್ಜಾಯಲ್ಲಿ ಪತಿಮ ಗುರುವರ್ಗದ ಕೇತಿಗಳೆರವಗಳನ್ನು ಕಾಷಾಡ ಲೆಂಬುದೇ ನನ್ನ ಹಿರಿಯಾಕೆ.

ಆದುದರಿಂದ ಈ ವಿಷಯವಾಗಿ ನಿಡೇಸೇಸಿ "ವೀರ ತ್ಯೆವ ಜ್ಞಾನಮಂಡಳದ" ಗೌರವ ಕಾರ್ಯದರ್ಶಿಗಳೂ, ಅಧ್ಯಕ್ಷರೂ, ಗಮನ ಕರ್ಕೊಂಡು ಅಖಿಲಭಾರತ ಗುರು ವರ್ಗದ ಪರಪಟ್ಟಾಧಿಕಾರಿಗಳಗ ಹಾಗು ಪಂಚಪೀಠಾಧಿ ಕಾರಗಳ ಸಹಕಾರದೊಡನೆ ಕಾರ್ಯತತ್ಪರ ರಾಗಿ, ಸಮಗ್ರ ವಿಷಯಗಳನ್ನು ವಿಮರ್ಶಿಸಿ ಬಹಿರಂಗಪಡಿಸಿ ಮುಂದು ವರಿಯಲೆಂದು ಹೇಳುತ್ತೇನೆ.

ಪಿ. ಆರ್. ಪಟೇಲ
ಪೋ-ಹಿರೇಹೇವರಗಿ, ಜಿಲ್ಲಾ ಕಲ್ಬುರ್ಗಿ

ಪಟ್ಟಾಭಿಷೇಕ ಮಹೋತ್ಸವ ಹುಟಿಗಿ

ಹುಟಿಗಿ ಬೃಹನ್ಮಠಾಧಿಪತಿಗಳಾದ ವೀರ ತಪೋನಿಧಿ ಪರಮ ಪೂಜ್ಯ ಬ್ರ॥ ಶ್ರೀ ಶಾಸ್ತ್ರವೀರ ಶಿವಾಚಾರ್ಯ ಪೂಜ್ಯಪಾದಂಗಳವರು ತಾವು ಶಿವೈಕ್ಯರಾಗುವಕಾಲಕ್ಕೆ (ದಿನಾಂಕ ೬-೩-೧೯೫೬) ನಾಗನಾಥರ ಭಂಡಾರಗೃಹ ಮಹಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರನ್ನು ತಮ್ಮ ಕಾಲಾನಂತರ ಹುಟಿಗಿ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ವಿಲ್‌ಬರೆದು ಶಿವಾಧೀನರಾದರು ಪೂಜ್ಯಲಿಂಗೈಕ್ಯಶ್ರೀಗಳವರ ಆಜ್ಞೆಯ ಪ್ರಕಾರವಾಗಿ ಮೇಲ್ಕಂಡ ಯೋಗಿರಾಜೇಂದ್ರರಿಗೆ ಹುಟಿಗಿ ಮಠಕ್ಕೆ ಪೀಠಾರೋಹಣ ಸಮಾರಂಭವು ತಾ॥ ೧೩-೫-೫೬ ರವಿವಾರ ಅಕ್ಷಯ ತೃತೀಯದಿನ ಮುಂಜಾನೆ ೧೦ ಗಂ॥ ಕ್ಕೆ ಕರ್ಕಲಗ್ನದ ಶುಭ ಸಮಯ ದಲ್ಲಿ ವಿಧಿಪೂರ್ವಕವಾಗಿ ಕಲ್ಬುರ್ಗಿ ಜಿಲ್ಲಾಂತರ್ಗತ ಅಫಜಲಪುರ ತಾ॥ ಗೆ ಸೇರಿದ ಶ್ರೀಶೈಲಜಗದ್ಗುರು ಪಂಡಿತಾರಾಧ್ಯ ಸಾಮಾನುಮತೀಗಳಗಳಾದ ಹಿರೇಜೇವರಗಿಯ ಬೃಹನ್ಮಠಾಧ್ಯಕ್ಷರಾದ ಬಾಲಶಿವಯೋಗಿ ಶ್ರೀ॥ ಷ॥ ಬ್ರ॥ ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳವರ ದಿವ್ಯ ಗುರುತ್ವದಲ್ಲಿ ವೆರವೇರಿಸಲ್ಪಟ್ಟಿತು ಆದಿತ ಆಯ್ಯಾ ಚಾರ ದೀಕ್ಷಾ ಹೋಮಹವನ ಮೊದಲಾದ ಕಾರ್ಯ ಕ್ರಮಗಳು ಶ್ರೀಮದ್ವೀರಕ್ಷೇತ್ರ ಗುರುಳುಲದ ಪ್ರಧಾನಾ ಧ್ಯಕರ ಮತ್ತು ಮೂವತ್ತು ನಟುವ್ಯಂದದ ವೈದಿಕತ್ವ ದಲ್ಲಿ ಜರುಗಿಸಲಾಯಿತು ನಂತರ ನೂತನಾಧಿಕಾರಿಗ ಳಾದ ಯೋಗಿರಾಜರಿಗೆ ಪಂಡಿತಾರಾಧ್ಯ ಶಿವಾಚಾರ್ಯ ರೆಂಬ ಅಭಿದಾಥದಿಂದ ಕರೆಯುವುದಾಗಿ ಆಜ್ಞಪಿಸಿಕೊಡಿಸ ಲಾಯಿತು. ನೂತನಾಧಿಕಾರಿಗಳ ಪಲ್ಲಕ್ಕಿಸವವನ್ನು ಗ್ರಾಮದ ಸಕಲ ಪಕ್ಷಕ್ಕರು ಅಭೂತಪೂರ್ವವಾಗಿ ಮಾಡಿ ತಮ್ಮ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿ ಆಜ್ಞ ಸಂತರ್ಪಣೆಯೊಂದಿಗೆ ಮುಕ್ತಾಯಗೊಳಿಸಿದರು.

ಓಂ ಧರ್ಮಾಭಿವೃದ್ಧಿ

ಸ್ವೀಕಾರ

ಎಳ್ಳಾರಿ ಡಿಗೆ ಕೊಟ್ಟೂರಿನಲ್ಲಿರುವ ಶ್ರೀ ವಿಲುವಂಚ ಮಹಿತ ಗುರುಒಸಯ್ಯನವರು ತಮ್ಮ ಪುತ್ರ ಚಿ॥ ಗುರು ಪಂಡಿತಾರಾಧ್ಯನಿಗೆ ಷ॥ ಕುಂ॥ ಕೊ॥ ಚಿ॥ ಸೌ॥ ಸುಲೋಚನಾದೇವಿಯಮ್ಮ ತಂದು ತಾ॥ 19-5-56 ದಿವಸ ಪಡೆಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾವೋಪಹಾರ್ಥಕ್ಕಾಗಿ ಸಮರ್ಪಿಸಿದ 2 ರೂ ಗಳು ಶ್ರೀಮಾನ್ ಟಿ. ಎಸ್. ಚಿತ್ತಲ್ ಬಿಎಜ್ ಜವೀನ್‌ದಾರ್ ಕೊಟ್ಟೂರು ಇವರ ದ್ವಾರಾ ಕಲ್ಪಿರುತ್ತವೆ

ಈ ಮೇಲ್ಕಂಡ ಮಹಾಕಾರ್ಯಗಳಿಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳನನ್ನೀಯಲೆಂದು ಪಾರ್ಥಿಸುತ್ತೇವೆ

ಪಂಚಾಚಾರ್ಯಪ್ರಭಾ

೧೯೫೬ ನೆಯ ಮೇ ತಾ॥ ೨೮ ನೆಯ ಸೋಮವಾರ

ಬುದ್ಧ ಜಯಂತಿ

ಸೇವಕನು ತನ್ನ ಪಡೆಯಪಟ್ಟು ಶ್ರದ್ಧಾಭಕ್ತಿಯಿಂದ ಸೇವಿಸುವಂತೆ ಜಗನ್ನಿರೂಪಕಾದ ಪರಮಾತ್ಮನನ್ನು ಎಲ್ಲರೂ ಸೇವಿಸುವದು ದಾಸ್ಯಭಕ್ತಿಯಾಗಿರುವದು. ಸಾಧಕನು ಪರಮಾತ್ಮನ ಸೇವೆಯಂದರೇ ತೃಪ್ತನಾಗು ತ್ತಾನೆ ಎಲ್ಲವನ್ನೂ ಅವನಿಗೆ ಅರ್ಪಿಸುತ್ತಾನೆ ತನಗಾಗಿ ಏನನ್ನೂ ಇಟ್ಟುಕೊಳ್ಳುವದಿಲ್ಲ. ಹೀಗೆ ಭಗವಂತನ ಸೇವೆಯನ್ನು ಮಾಡಿ ಅಶುಗ್ರೀಶರಾದವರಲ್ಲಿ ಶ್ರೇಷ್ಠ ನಾದ ಅಂಜನೇಯನು ತಾನು ದೇವರ ಸ್ವರೂಪಿ ಯಾದನು

ಸಖ್ಯ

ದೇವರನ್ನು ಸ್ನೇಹಭಾವದಿಂದ ಸೇವಿಸುವದೇ ಸಖ್ಯ ಭಕ್ತಿಯೆನಿಸುವದು ದಾಸ್ಯಭಕ್ತಿಯಲ್ಲಿ ಸ್ವಾಮಿಗೂ ಭಕ್ತನಿಗೂ ಅಂತರವಿರುವದು ಆದರೆ ಸಖ್ಯದಲ್ಲಿ ಈ ಅಂತರವಿಲ್ಲ ಆತ್ಮಿಯತೆ ಇರುವದು ಭಕ್ತನು ದೇವ ರನ್ನು ತನ್ನ ಸ್ನೇಹಿತನೆಂದು ತಿಳಿದು ಸೇವೆಯನ್ನು ನಿರ್ವಂಚನೆಯಿಂದ ಮಾಡಬೇಕು ಗೋಪಾಲಕರು ಮಾತ್ರ ಇಂಥ ಸಖ್ಯಭಕ್ತಿಯಮ್ಮ ಮಾತಿ ಏನೀಶ ರಾದರು ಈ ಭಕ್ತಿಯಿಂದ ಭಡಿಯುವನನ್ನು ದೇವರಿಗೆ ಅಪ್ರಿಯವಾದ ವಸ್ತುಗಳನ್ನು ಮುಟ್ಟುವರಮ್ಮು ದೇವರ ಸೌಖ್ಯಕ್ಕಾಗಿ ತನ್ನ ಸೌಖ್ಯವನ್ನು ತ್ಯಾಗಮಾಡಬೇಕು. ಈ ಭಕ್ತಿಯಮ್ಮ ಅರ್ಜುನನು ಪಾಲಿಸಿ ಧನ್ಯನಾದನು ಈಗಲೂ ವೀರಶೈವರಲ್ಲಿ ಕೆಲವರು ಲಿಂಗಕ್ಕೆ ಅರ್ಪಿಸದ ಪದಾರ್ಥಗಳನ್ನು ಸೇವಿಸದಿರುವುದು ಸಖ್ಯಭಕ್ತಿಯಲ್ಲವೇ.

ಆತ್ಮನಿವೇದನ

ತನ್ನನ್ನು ಭಗವಂತನಿಗೆ ಅರ್ಪಿಸುವುದೇ ಆತ್ಮ ನಿವೇದನ ಭಕ್ತಿಯೆನಿಸುವದು ಇಂಥವರು ದೇವರ ಸ್ವರೂಪವನ್ನೂ ತಮ್ಮ ಸ್ವರೂಪವನ್ನೂ ಅಂತು ದೇವ ರಿಗೂ ತಮಗೂ ಇರುವ ಸಂಬಂಧವನ್ನೂ ತಿಳಿದು ದೇವರಲ್ಲಿ ತಮ್ಮನ್ನು ಲಯಗೊಳಿಸುವರು ಅಂದರೆ ಜೀವಾತ್ಮನನ್ನು ಪರಮಾತ್ಮನಲ್ಲಿ ಅರ್ಪಿಸುವರು ಇದುವೇ ವೀರಶೈವರ ಜೀವೇಶ್ವರೈಕ್ಯ (ಶಕ್ತಿ ವಿಶಿಷ್ಟಾ ದ್ವೈತ) ಸಿದ್ಧಾಂತ ಅಥವಾ ಅಂಗಲಿಂಗ ಸಾಮರಸ್ಯ ಇದನ್ನು ಕೋಳೂರು ಕೊಡಗೂನಿನ ಶಡಕ್ಷರಿಯಿಂದ ಅರಿತುಕೊಳ್ಳಬಹುದು

ಹೀಗೆ ಒಂಭತ್ತುವಿಧ ಭಕ್ತಿಯುಳ್ಳ ಭಕ್ತರನ್ನು ಕಾಪಾಡುತ್ತೇನೆಂದು ಭಗವಂತನು ಅಭಯವಚನ ಕೊಟ್ಟಿದ್ದಾನೆ ಆಲ್ಲದೆ ತನ್ನಲ್ಲಿ ಮನಸ್ಸನ್ನು ಇಟ್ಟವರಿಗೆ ತನ್ನ ಸ್ವರೂಪವನ್ನೇ ಕೊಡುತ್ತಾನೆ ಪ್ರೀತಿಯಿಂದ ಅರ್ಪಿಸಿದ ಪತ್ರ-ಪುಷ್ಪ ಫಲ ಜಲಗಳನ್ನು ಸ್ವೀಕರಿಸುತ್ತಾನೆ ಅನನ್ಯ ಭಕ್ತರ ಯೋಗಕ್ಷೇಮವನ್ನು ವಹಿಸುತ್ತಾನೆ. ಅಂಥ ಭಗವಂತನನ್ನು ಸರ್ವವಿಧ ದಿಂದಲೂ ಪ್ರೀತಿಸಿ ಅವರ ಕೃಪೆಗೆ ಪಾತ್ರರಾಗುವದು ಮಾನವರ ಕರ್ತವ್ಯವಾಗಿದೆಯು. ಈ ನವವಿಧ ಭಕ್ತಿ ಯು ವೀರಶೈವರಲ್ಲಿ ಅನಾದಿಕಾಲದಿಂದಲೂ ಪಡೆದುಬಂದಿ ರುವುದರಿಂದ ಈ ಮತವು ಸರ್ವಾಶ್ರಯರೋಪಯೋಗಿಯಾಗಿರು ವುದಕ್ಕಲ್ಲಿ ಸಂದೇಹವಿಲ್ಲ

ಪ್ರಸ್ತುತ ಪರಿಸ್ಥಿತಿಯಲ್ಲಿ ಅಸ್ಸಾಮ್ ಅಕೆಳ್ಟುಯ ಯೋಜನೆಗೆ ಹಣ ಒದಗಿಸುವುದರಲ್ಲಿ ಆಯೋಕ್ಷ ಸಾಧ್ಯ ವಿಲ್ಲವೆಂಬ ತಿರ್ಮಾನಕ್ಕೆ ಬಂದಿರುವುದಾಗಿ ಆಯೋಕ್ಷ ಅಜಿಜ್ಯ್ರ ತಿಳಿಸಿದರು

* * *

ಅಯೋಕ್ಷದಂತೆ ಬ್ರಿಟಿನ್ ಸಹಾ ಅಸ್ಸಾಮ್ ಅಕೆಳ್ಟುಯ ಯೋಜನೆಗೆಂದು ಅಜಿಜ್ಯ್ರಗೆ ತನ್ನ ಹಣದ ಕೆಲವಿಶ ಪೀಡಿಕೆಯನ್ನು ಸಾಹಸು ತೆಗೆದುಕೊಂಡಿರುವುದಾಗಿ ಪ್ರಕಟವಾಗಿದೆ.

ಪಂಚಾಚಾರ್ಯಪ್ರಭಾ

೧೯೫೩ ನೆಯ ಜುಲೈ ತಾ|| ೩೩ ನೆಯ ಸೋಮವಾರ

ಮಾನ್ಯ ವೀರಶೈವ ಮತಗ್ರಂಥಗಳು

ವೀರಶೈವರಿಗೆ ಪ್ರಾಮುಖ್ಯವಾದ ಗ್ರಂಥಗಳೆಂದರೆ ಶ್ರೀಕರಭಾಷ್ಯ, ಶ್ರೀಕಂಠಭಾಷ್ಯ ಕೇನೋಪನಿಷದ್ಭಾಷ್ಯ, ಈಶಾವಾಸ್ಯೋಪನಿಷದ್ಭಾಷ್ಯ, ನಾರಾಯಣೋಪನಿಷದ್ಭಾಷ್ಯ, ಮುಂಡಕೋಪನಿಷದ್ಭಾಷ್ಯ ಸಿದ್ಧಾಂತಶಿಖೋಪನಿಷದ್ಭಾಷ್ಯ, ಶಿವಾದ್ವೈತಮಂಜರಿ ಕ್ರಿಯಾಸಾರ, ತತ್ತ್ವ ಪ್ರಕಾಶಿಕೆ ಶೈವಸಿದ್ಧಾಂತದೀಪಿಕೆ, ಶಿವಾರ್ಕಮಣಿದೀಪಿಕೆ ಸಿದ್ಧಾಂತಶಿಖಾಮಣಿ, ಮಕುಟಾಗಮ ಕಾರಣಾಗಮ, ಸೂಕ್ಷ್ಮಾಗಮ, ಚಂದ್ರಜ್ಞಾನಾಗಮ, ಲಿಂಗಧಾರಣ ಚಂದ್ರಿಕೆ, ಶಿವಾದ್ವೈತವಿಲಾಸ, ಅನುಭವಸೂತ್ರಗಳೇ ಮೊದಲಾದ ಅಮೂಲ್ಯ ಗ್ರಂಥಗಳುತ್ತವೆ ಇವು ಗಳಲ್ಲಿರುವ ಭಾಷ್ಯಗ್ರಂಥಗಳು ಜ್ಞಾನಿಗಳಾದ ಪಂಡಿತೋತ್ತಮರಿಂದಲೂ ಆಚಾರ್ಯರಿಂದಲೂ ವೇದಕ್ಕೆ ಬರೆಯು ಲ್ಪಟ್ಟ ವೀರಶೈವ ಮತಸಾರವಾದ ಅರ್ಥಪೂರ್ಣವಾಗಿರುವವು ಆದುದರಿಂದಲೇ ಅವರು ರಚಿಸಿರುವ ಈ ಗ್ರಂಥಗಳು ವೀರಶೈವರಿಗೆ ಪವಿತ್ರವೂ ಮಾರ್ಗದರ್ಶಕವೂ ಆಗಿರುತ್ತವೆ ಹೀಗೆ ವೇದಾಧಾರವಾಗಿ ಒಂದ ಮತಗಳೇ ವೇದಮತ ಗಳಾಗಿದ್ದು, ಅವು ದ್ವೈತ, ಅದ್ವೈತ ವಿಶಿಷ್ಟಾದ್ವೈತ, ಶಕ್ತ್ಯದ್ವಿಶಿಷ್ಟಾದ್ವೈತ ಎಂದು ನಾಲ್ಕು ವಿಧವಾಗಿರುವವು ಈ ನಾಲ್ಕುವಿಧ ಮತಗಳಲ್ಲಿಯೂ ನಾಲ್ಕುತರ ಸಿದ್ಧಾಂತ ಗಳು ಹೇಳಲ್ಪಟ್ಟಿರುವವು ಒಂದು ಸಿದ್ಧಾಂತವು ಮತ್ತೊಂದು ಸಿದ್ಧಾಂತದಿಂದ ಭಿನ ವಾಗಿದ್ದರೂ ಕೆಲವರ ಅದ್ವೈತವಿಶಿಷ್ಟಾದ್ವೈತವನ್ನ ಶಕ್ತ್ಯವಿಶಿಷ್ಟಾದ್ವೈತ(ವೀರಶೈವ) ಸಿದ್ಧಾಂತಕ್ಕೆ ಹೋಲಿಸಿ ವೀರಶೈವರನ್ನು ಅದ್ವೈತಕ್ಕೆ ಎಳೆದೊಯ್ಯವ ಸಾಹಸವದರಿಯವರು ಇವರಿಗೆ ಶಕ್ತಿ ವಿಶಿಷ್ಟಾದ್ವೈತಸಿದ್ಧಾಂತಪ್ರತಿಪಾದಕವಾದ ಶ್ರೀಕರಭಾಷ್ಯ ಶಿವಾದ್ವೈತಮಂಜರಿ ಗ್ರಂಥಗಳು ಸಂಬಂಧವೆ ಇರ ಬಹುದು ಇದರಲ್ಲಿ ಆಶ್ಚರ್ಯವೇನೂ ಇಲ್ಲ

ಸ-ಸ್ವತಂತ್ರವಲ್ಲದೆ ರಚಿತವಾದ ತದರಲ್ಲಿಯೂ ವೇದಾರ್ಥದಿಂದ ಕೂಡಿದ ಶ್ರೀಕರಭಾಷ್ಯಾದಿ ಗ್ರಂಥಗಳ ಅಧ್ಯಯನಾಗಬೇಕಾದರೆ ಸಂಸ್ಕೃತಪಾಂಡಿತ್ಯವೂ ಗುರುವಿನ ಮಾರ್ಗದರ್ಶನವಿಂದ ಪಡೆದ ತತ್ತ್ವಜ್ಞಾನವೂ ಇರಬೇಕಲ್ಲದೆ ಸರ್ವರಿಗೂ ಸಾಧಿಸಲಾಗದು. ಕೋಟಗಟ್ಟಲೆ ಜನ ಸಂಖ್ಯೆಯುಳ್ಳ ವೀರಶೈವಮತದಲ್ಲಿ ಸಾವಿರಗಟ್ಟಲೆ ಸಂಸ್ಕೃತ ಬಲ್ಲಂಥ ಪಂಡಿತರಿದ್ದಾರೆ ಅವರೆಲ್ಲರೂ ಈ ಗ್ರಂಥಗಳನ್ನು ನುಸ್ಸಿಸಿ ಪೂಜ್ಯವಾಗಿ ಕಾಣುತ್ತಿದ್ದಾರೆ ಇದೇ ಶ್ರೀಕರ ಭಾಷ್ಯವನ್ನು ಜೊಗಳಿರಿವ ವೀರಶೈವ ಗಣ್ಯಾಗ್ರಣಿಗಳಾದ ಸರ್ ಕೆ ಪಿ ಪುಟ್ಟಣ್ಣಾಶೆಟ್ಟಿರು, ರಿಟೈರ್ಡ್ ಚೀಫ್ ಜಸ್ಟೀಸ್ ಪಿ ಮಹಾದೇವಯ್ಯನವರೂ ಇನ್ನು ಅನೇಕ ಮಹಾಜನಗಳೂ ಸೇರಿ ವೀರಶೈವ ವಿದ್ಯಾಸಂಸ್ಥೆಯಿಂದ ಪ್ರಿಂಟುಮಾಡಿಸಿದ್ದಾರೆ ಸಂಸ್ಕೃತ ಜ್ಞಾನವಿಲ್ಲದ ಪ್ರತಿಯೊಬ್ಬ ವೀರಶೈವನಲ್ಲಿಯೂ ಗುರು ಜಂಗಮರಲ್ಲಿಯೂ ಈ ಗ್ರಂಥವು ಪರಿಶೀಲಿಸುತ್ತಿರುವುದು ಕೈಪ್ರತಿಗಿಲ್ಲದ ಬೆಲ್ಲು, ಮಹತ್ವವಿರುವುದಿಂದಲೆ ಖಾಯಂನವೂ ಹೇಗೆ ಪವಿತ್ರಗ್ರಂಥಗಳೋ ಹಾಗೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ ತಾತ್ಪರ್ಯವಾಗಿಗಳವದ ವೀರಶೈವರಿಗೆ ಶ್ರೀಕರಭಾಷ್ಯ ಶಿವಾದ್ವೈತಮಂಜರಿ ಗ್ರಂಥಗಳು ಪವಿತ್ರಗ್ರಂಥಗಳಾಗಿರುತ್ತವೆ ಈ ಎರಡೂ ಗ್ರಂಥಗಳ ಮಹತ್ವ ಎಷ್ಟೆಂಬುದನ್ನು ಒಂದೇ ಸಾಲಿನಿಂದಿಯಂದ ಹೇಳಲು ಸಾಧ್ಯವಿಲ್ಲದಾಗಿರುವುದು

ಶ್ರೀಕರಭಾಷ್ಯ

ಈಗ ಸಾವಿರಾರು ವರ್ಷಗಳ ಹಿಂದೆ ಶ್ರೀಪಂಡಿತಾರಾಧ್ಯ ಭಗವತ್ಪಾದಾಚಾರ್ಯರು ಬ್ರಹ್ಮಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತಪ್ರತಿಪಾದಕವಾದ ವೀರಶೈವ ಭಾಷ್ಯವನ್ನು ರಚಿಸಿದ್ದಾರೆ ಈ ಭಾಷ್ಯವೇ ಶ್ರೀಕರಭಾಷ್ಯ ವೆಂದು ಪ್ರಸಿದ್ಧವಾಗಿರುವದು ಇವರು ತಮ್ಮ ಭಾಷ್ಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ರೇಣುಕಾಚಾರ್ಯರಿಂದ ವಿರಚಿತವಾಗಿರುವ " ಆಧಿಕರಣಭಾಷ್ಯ"ದ ಅಭಿಪ್ರಾಯವನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಇದಲ್ಲದೆ ಸ್ವತಃ ಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರು ದರೋಹ ನಿಷದಾದಿಗಳ ಮೇಲೆ ಭಾಷ್ಯಗಳನ್ನು ರಚಿಸಿದ್ದಲ್ಲದೆ ತಾವು ರಚಿಸಿದ ಕೈವಲ್ಯೋಪನಿಷತ್ತಿನ ಭಾಷ್ಯಾರಂಭದಲ್ಲಿ —

ವೇದವಾಸ್ಯಸಂ ಸೂತ್ರಕಾರಂ ದೂರ್ವಾಸಂ ವೃತ್ತಕಾರಕಂ।
ಭಾಷ್ಯಕೃತ್ಕೈವಲಂ ಪಂಡಿತಾರಾಧ್ಯಂ ಸ್ಮರಮುಕ್ತಯೇ।

ಅಂದರೆ ಬ್ರಹ್ಮಸೂತ್ರಗಳನ್ನು ರಚಿಸಿದ ವ್ಯಾಸರನ್ನೂ ಈ ಸೂತ್ರಗಳಿಗೆ ಭಾಷ್ಯವನ್ನು ರಚಿಸಿದ ಪಂಡಿತಾರಾಧ್ಯರನ್ನೂ ಸ್ಮರಿಸುತ್ತೇನೆಂದು ಮಂಗಲಪದ್ಯವನ್ನು ಬರೆದ ದೂರ್ವಾಸಮಹರ್ಷಿಗಳನ್ನೂ ಪಾಶುಪತೋಪನಿಷದ್ಭಾಷ್ಯಕಾರರಾದ ಶ್ರೀಪಂಡಿತಾರಾಧ್ಯರನ್ನೂ ಸ್ಮರಿಸಿ ಮುಂಗಲಪದ್ಯವನ್ನು ಬರೆದಿರುವರು ಶ್ರೀಪಂಡಿತಾರಾಧ್ಯರು ಭಾಷ್ಯದ ಅಸ್ತಿತ್ವವು ಸಿದ್ಧವಾಗುತ್ತದೆ ಈ ಪಂಡಿತರು ತವಿಂದ ರಚಿತವಾದ ಸಿದ್ಧಾಂತಶಿಖೋಪನಿಷದ್ಭಾಷ್ಯದಲ್ಲಿ —

ನಿತ್ಯಾ ರಾಮ್ನಾಯಮಲ್ಲು ತಸ್ಯಮೂರ್ತಾಪಿದಿ ಪಮರೋಹಣ ಸನವಿಷಯೇ ಯೋಕ್ತಿಯುಕ್ತಂ ಶಕ್ಯಮುಕಿಧ್ಯೇಃ॥

ಎಂದ ಉಲ್ಲೇಖಿಸಿದ್ದಾರೆ ಇದರಿಂದ ಶ್ರೀಜಗದ್ಗುರು ವಿರಾಧ್ಯರಪ್ಪಜ್ಯಾದರ ಅಸ್ತಿತ್ವವು ಸ್ಪಷ್ಟವಾಗುತ್ತದೆ ಶ್ರೀಜಗದ್ಗುರು ರೇಣುಕಾಚಾರ್ಯರಿಂದ ರಚಿಸಲ್ಪಟ್ಟಿರುವ ರೇಣುಕಭಾಷ್ಯ ದ ವಿಷಯವು ಸರ್ವತ್ರ ಪ್ರಸಿದ್ಧವಿರುವುದರಿಂದ ಈ ಭಾಷ್ಯವು ಸಿಕಂದರಾಬಾದ ನಿವಾಸಿಗಳಾದ ಶ್ರೀ ಮಾರ್ಕಾಂಡೇಯಶಾಸ್ತ್ರಿಗಳವರ ಪರಿಶ್ರಮಕಾಲದಲ್ಲಿ ವಿರಾಜಿಸುತ್ತಿರುವುದೆಂದು ಅವರ ಪುಸ್ತಕಾಲಯದ ಸೂಚೀಪತ್ರಿಕೆಯಿಂದ ತಿಳಿದುಬರುತ್ತದೆ ಈ ಪ್ರಕಾರ ನೀರಜಿ ವಮತಾಚಾರ್ಯ ರಿಂದ ರಚಿತವಾದ ಭಾಷ್ಯಗಳಲ್ಲಿ ಶ್ರೀಕರಭಾಷ್ಯವೂ ಒಂದಾಗಿದ್ದು ಇದರಲ್ಲಿ ಬ್ರಹ್ಮಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತವನ್ನು ಪ್ರತಿಪಾದಿಸುವ ವಿಷಯಗಳೇ ಅಡಿಪಾಯವಾಗಿರುತ್ತವೆ ಈ ಭಾಷ್ಯವು ಬಹು ಪ್ರೌಢವಾಗಿರುವುದಲ್ಲದೆ ನೀಲಕಂಠಶಿವಾಚಾರ್ಯ, ಸರ್ವಜ್ಞಭಾನಂದಶಿವಾಚಾರ್ಯ ಪರಂ ತಕಾಲಾಣಶಿವಾಚಾರ್ಯ ಪರವಾದಿಭೈರಂ ಕರಶಿವಾಚಾರ್ಯ ವಜ್ರ ನಖಾರಾಧ್ಯ ಜ ಹಭೈರವಾರಾಧ್ಯ, ಭವ ನೀಶಂಕರಾರಾಧ್ಯ, ಉದ್ಭಟಾರಾಧ್ಯ ಮೊದಲಾದವರ್ಯ, ವೈಷಭ ಪಂಡಿತಾರಾಧ್ಯ ಇವರೇ ಮೊದಲಾದವರು ರಚಿಸಿದ ವೀರಶೈವ ಸಿದ್ಧಾಂತಶಿಖಗ್ರಂಥಗಳು ಅಲ್ಲದೆ ವಿರಾಜಿಸುತ್ತಿ ರುವ ಪ್ರಾಚೀನ ವೀರಶೈವ ಮತಗ್ರಂಥಗಳಲ್ಲಿಯೂ ಸಂಸ್ಕೃತಭಾಷೆಯಲ್ಲಿ ರಚಿಸಲ್ಪಟ್ಟಿರುವುದರಿಂದ ಇವುಗಳ ಉಪಯೋಗವು ಸಾಮಾನ್ಯವಾಗಿ ಎಲ್ಲರಿಗೂ ಆಗದೆ ಅನೇಕರು ಈ ಮತದ ಸಿದ್ಧಾಂತವನ್ನೇ ಅರಿಯದವರಾಗಿದ್ದಾರೆ ವಿವರ್ತವಾದಿಗಳಾದ ಸಂಸ್ಕಾರದಿಂದ ಕೆಲವು ಜನ ಲಿಂಗಧಾರಿಗಳು ಅದ್ವೈತವೇ ತಮ್ಮ ಸಿದ್ಧಾಂತ ವೆಂದು ಭ್ರಮಿಸಿದ್ದಾರೆ ಈ ದುಃಸ್ಥಿತಿಯು ಹೋಗ ಬೇಕಾದರೆ ವೀರಶೈವಮತದ ಎಲ್ಲ ಪೌಡಗ್ರಂಥಗಳು ಸಂಸ್ಕೃತದಿಂದ ಅಯ ದೇಶಭಾಷೆಗಳಿಗೆ ಪರಿವರ್ತನೆ ಯಾಗಬೇಕು ಈ ಘನೋದ್ದೇಶವನ್ನು ಸಾಧಿಸುವುದ ಕ್ಕಾಗಿಯೇ ಕೈ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಶ್ರೀಕರಭಾಷ್ಯದ ನಾಲ್ಕು ಸೂತ್ರಗಳನ್ನು ಕನ್ನಡದಲ್ಲಿ ಪ್ರಿಂಟುಮಾಡಿಸಿದರು ಅದು ಕಾಶೀನಾಥಗ್ರಂಥ ಮಾಲೆಯ ೫೪ ಗ್ರಂಥಗಳಲ್ಲಿ ಒಂದಾಗಿರುವದು ರೇಣುಕಗೀತೆ (ಸಿದ್ಧಾಂತಶಿಖಾಮಣಿ)ಯನ್ನು ಬೋಧಿಸಿದ ಶ್ರೀರೇಣುಕಾಚಾರ್ಯಭಗವತ್ಪಾದರಲ್ಲಿ ವೀರಶೈವ ಮತಿಯರಿಗೆ ಎಷ್ಟು ಪೂಜ್ಯತೆಯುಂಟೋ ಅಷ್ಟೇ ಪೂಜ್ಯತೆಯು ಶ್ರೀಕರಭಾಷ್ಯವೆನ್ನು ಸಂಸ್ಕೃತದಲ್ಲಿ ರಚಿಸಿದ ಶ್ರೀಪಂಡಿತಾರಾಧ್ಯಭಗವತ್ಪಾದರಲ್ಲಿಯೂ ಅಂತು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದ ಈ ಮಹಾಕೃರು ಸಾಮಾನ್ಯರಲ್ಲ ದೇವಾಂಶಸಂಭೂತರೂ ಶ್ರೀಶಾಲಜ್ಞಾನಿಗಳೂ ಸರ್ವಜ್ಞಾನದರಶೀಯರೂ ಆಗಿದ್ದು ದರಿಂದಲೇ ಇವರ ಶ್ರೀಕರಭಾಷ್ಯವು ಅಂದಿನಿಂದ ಇಂದಿನ ವರೆಗೆ ವೀರಶೈವರಲ್ಲಿ ಪೂಜ್ಯವಾಗಿ ಬಂದಿರುವದು. ಸ್ವಯಂತ ಪರಮತ ಪಂಡಿತರೂ ಸಹಾ ತಾವು ಅರೆದ ಗ್ರಂಥಗಳಲ್ಲಿ ಇದನ್ನು ಆಧಾರವಾಗಿಟ್ಟುಕೊಂಡಿದ್ದಾರೆ ಭರತಖಂಡದಲ್ಲಿ ಪರಿಶೋಧಿಸುತ್ತಿರುವ ಇತಿ-ತಲಶಕ್ತಾ-ನಿಧಿ-ಲಾಹೋರ್-ಕಾಶ್ಮೀರ-ಮೈಸೂರು-ಮದ್ರಾಸ ಮೊದ ಲಾದ ಘನರಾಜ ಓರಿಯಂಟಲ್ ರೈಸರ್ಚಿಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಈ ಗ್ರಂಥವು ವಿರಾಜಿಸು ತ್ತಿರುವುದು.

ಶಿವಾದ್ವೈತಮಂಜರಿ

ಸಾವಿರಾರು ವರ್ಷಗಳ ಹಿಂದೆ ಕಾಶ್ಮೀರದೇಶದ ವೀರಶೈವಾಚಾರ್ಯರಾದ ಶ್ರೀ ಸ್ವಪ್ರಭಾವಂದ ಶಿವಾಚಾರ್ಯ ಭಗವತ್ಪಾದರು ಈ ಗ್ರಂಥವನ್ನು ರಚಿಸಿದ್ದಾರೆ. ಕಾಶ್ಮೀರದ ವೀರಶೈವಾಚಾರ್ಯರು ತಮ್ಮ ಹೆಸರಿನೊಂದಿಗೆ 'ಆನಂದ' ಎಂಬ ಪದವನ್ನು ಉಪಯೋಗಿಸುವ ರೂಢಿಯನ್ನು ಬೆಸ್ಸಕೊಂಡಿದ್ದರು ಆ ಪ್ರಕಾರ ಇವರ ಗುರುಗಳ ನಾಮವು 'ನಾಥಾನಂದ' ಎಂದು ಇರುವುದು 'ಶಿವದೃಷ್ಟಿ' ಎಂಬ ಗ್ರಂಥವನ್ನು ಬರೆದವರ ನಾಮವು 'ಸೋಮಾನಂದ' ಎಂಬುದಾಗಿರುತ್ತದೆ ಶಿವಾದ್ವೈತಮಂಜರಿ ಗ್ರಂಥಕಾರರಾದ ಸ್ವಪ್ರಭಾನಂದ ಶಿವಾಚಾರ್ಯರು ಈ ಗ್ರಂಥರಚನೆಯಲ್ಲಿ ಕಾಶ್ಮೀರ ದೇಶದಲ್ಲಿ ಪ್ರಸಿದ್ಧಗಳಾದ ಶಿವಸೂತ್ರ, ಶಿವಸೂತ್ರವಾರ್ತಿಕ, ಶಿವದೃಷ್ಟಿ, ಸ್ಪಂದಕಾರಿಕಾ, ಶ್ರೀತಿಕಾಶಾಸ್ತ್ರ, ವಿಜ್ಞಗೀತಭಟ್ಟಾರಕ, ಪ್ರತ್ಯಭಿಜ್ಞಾಹೃದಯ ಇತ್ಯಾದಿ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ ಶಿವಾದ್ವೈತಮಂಜರಿಗೆ ಪ್ರಾಚೀನ ಪಂಡಿತರೊಬ್ಬರು ಸಂಸ್ಕೃತ ಭಾಷೆಯಲ್ಲಿ ವ್ಯಾಖ್ಯಾನ ಬರೆದಿರುವರೆಂಬ ವಿಷಯವು ಕೇದಿಯ ಮೌಸಕ್ಷ ಪಂಡಿತರಿಂದ ವಿರಚಿತವಾದ 'ನೀರಜಿವನೆಂದ ಚಿಂದ್ರಿಕೆ'ಯಿಂದ ತಿಳಿದು ಬರುತ್ತದೆ

ಸ್ವಪ್ರಭಾನಂದ ಶಿವಾಚಾರ್ಯರು ಆದ್ವೈತೀಯ ಪಂಡಿತರಿಗಿದ್ದದ್ದೆಂಬುದಕ್ಕೆ ಇವರು ರಚಿಸಿದ ಈ ಗ್ರಂಥವೇ ಸಾಕ್ಷಿಯಾಗಿದೆ ಈ ಗ್ರಂಥಪರಿಶಯ ಬಹು ಪ್ರೌಢ ವಾಗಿದ್ದು ಸಾಧಾರಣ ಪಂಡಿತರಿಗೆ ಗ್ರಂಥಕರ್ತರ ರಹಸ್ಯವೇ ತಿಳಿಯದಂತಿದೆ ಇಂಥ ಸರ್ವೋತ್ತಮ ಗ್ರಂಥದ ಯೋಗ್ಯತೆಯನ್ನು ಕನ್ನಡಿಗರಿಗೆ ತೋರಿಕೆಗೊಡಲು ಮೈಸೂರು ಶ್ರೀಮನ್ನ್ಯಾಯಾರಾಜವರ ಸಂಸ್ಕೃತ ಪಾಠ ಶಾಲಾಧ್ಯಾಪಕರೂ, ಪೂರ್ವೋತ್ತರಮೀಮಾಂಸಾ ಭೂಷಣ, ವಿದ್ಯಾವಿಧಿ ಇತ್ಯಾದಿ ಪದವೀಧರರೂ ಆಗಿದ್ದ ದೇವಶಿಖಾಮಣಿ ಅಮಾನುಷಜಾಚಾರ್ಯರಿಂದುವರು ಬಹು ಸಾಹಸಪಟ್ಟು ಶಂಕರಭಾಷ್ಯ, ರಹಸ್ಯಪ್ರಧಾ, ಭಾಮತೀ ಕಲ್ಪತರು, ಶಿರನುಳ, ಅದ್ವೈತಸಿದ್ಧಿ, ಗೌಡಬ್ರಹ್ಮಾನಂದೀಯ, ಪಂಚಪಾದಿಕಾವಿವರಣ, ಸಂಕ್ಷೇಪಶಾರೀರಿಕ, ಸಿದ್ಧಾಂತಲೇಶಸಂಗ್ರಹ, ಅದ್ವೈತದೀಪಿಕಾ, ಶ್ರೀಕರಭಾಷ್ಯ, ಶ್ರೀಕರಭಾಷ್ಯ, ಕ್ರಿಯಾಸಾರ, ಶಿವಾರ್ಕಮಣಿದೀಪಿಕೆ, ಭಟ್ಟಿಭಾಸ್ಕರೀಯನೇದ ಭಾಷ್ಯ, ಶ್ರೀಭಾಷ್ಯ, ಶ್ರುತಪ್ರಕಾಶಿಕೆ, ಭಾವಪ್ರಕಾಶಿಕೆ, ನ್ಯಾಯಸುಧಾವ್ಯಾಖ್ಯಾನ, ತತ್ತ್ವಮುಕ್ತಾಕಲಾಪ, ಸರ್ವಾರ್ಥ ಸಿದ್ಧಿ, ಭಾಟ್ಟದೀಪಿಕೆ, ಶಪ್ತದೀಪಿಕೆ, ಶ್ಲೋಕವಾರ್ತಿಕ, ತಂತ್ರವಾರ್ತಿಕ, ನ್ಯಾಯಸುಧೆ, ಪ್ರಕರಣಪಂಚಿಕೆ, ಮಾನಮೇಯೋದಯ ಶಾಬರಭಾಷ್ಯ, ಸಿದ್ಧಾಂತ ಶಿಖಾಮಣಿ ಶಿವಾರ್ಕಮಣಿದೀಪಿಕೆ, ತತ್ತ್ವಪ್ರಕಾಶಿಕೆ, ಶಿವಾರ್ಕಮಣಿದೀಪಿಕೆ ಇತ್ಯಾದಿ ಪ್ರಬಲಗ್ರಂಥಗಳಲ್ಲದೆ ಅನೇಕ ಶ್ರುತಿವಚನಗಳು, ಮನ್ವಾದಿಸ್ಮೃತಿಗಳು, ಪುರಾಣಗ್ರಂಥಗಳು, ಇತಿಹಾಸ ಗ್ರಂಥಗಳು, ಆಗಮ ಗ್ರಂಥಗಳು, ಮೀಮಾಂಸಾಸೂತ್ರಗಳು, ಬ್ರಹ್ಮಸೂತ್ರ ಗಳು, ಧರ್ಮಸೂತ್ರಗಳೇ ಮೊದಲಾದ ಅನೇಕ ಗ್ರಂಥ ಗಳ ಆಧಾರವನ್ನಿಟ್ಟುಕೊಂಡು ಶಕ್ತ್ಯವಿಶಿಷ್ಟಾದ್ವೈತ ಸಿದ್ಧಾಂತವನ್ನು ನಿರೂಪಿಸುವ ಈ ಶಿವಾದ್ವೈತಮಂಜರಿ ಗ್ರಂಥಕ್ಕೆ ವ್ಯಾಖ್ಯಾನವನ್ನು ರಚಿಸಿದ್ದೇನೆಂದು ಅವರೇ ತಮ್ಮ ಭೂಮಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ ಇದಲ್ಲದೆ ವೀರಶೈವ ಮತದ ಪ್ರಕ್ರಿಯೆಯನ್ನು ಸುಲಭವಾಗಿ ತಿಳಿಯಲಿಚ್ಛಿಸುವವರಿಗೆ ಈ ಗ್ರಂಥವು ಸಂಪೂರ್ಣ ಸಹಾಯಕಾರಿಯಾಗಿದೆಯೆಂಡೂ ಬರೆದಿರುವರು ಇವರು ವೈಷ್ಣವ ಪಂಡಿತರಾಗಿದ್ದರೂ ಇತ್ತು ಸ್ವಯಾನದಿಂದ ಸಂಸ್ಕೃತದಲ್ಲಿದ್ದ ಶಿವಾದ್ವೈತಮಂಜರಿ ಕನ್ನಡದಲ್ಲಿ ಸರಳವಾದ ಅರ್ಥ ಬರೆದು ಪ್ರಕಟಿಸಿರುವುದು ವೀರಶೈವರ ಪುಣ್ಯವೆಂದೇ ಹೇಳಬಹುದು

ಹೀಗೆ ಸ್ವಮತ ಪರಮತ ಪಂಡಿತರಿಂದ ಮಾನ್ಯವಾದ ಈ ಶಿವಾದ್ವೈತಮಂಜರಿಯನ್ನು ಹಳಿಯುವವರು ಅಜ್ಞಾನವೇ ಸರಿ ಯಾರು ಹಳಿಯಲಿ ಹಳಿಯದಿರಲಿ ಪ್ರತಿಯೊಂದು ಮತದಲ್ಲಿರುವ ಉತ್ಕೃಷ್ಟಂಗಳ ಪ್ರಭಾವ ರಶ್ಮಿದಂಡೆ ಸದಾ ಪ್ರಜ್ವಲಿಸುತ್ತಲೇ ಇರುವುದು. ಇಂಥ ಮಹಾಗ್ರಂಥಗಳಲ್ಲಿ ಮಹಾಮಹಿಮರಾದ ಗ್ರಂಥಕರ್ತರು ಅತ್ಯಂತ ಚಮತ್ಕಾರವಾಗಿ ಸಾಮರಸ್ಯವನ್ನು

ವಿಷವೆರೆಗೆ ಉಳಿದುಬಂದಿರುತ್ತವೆ ಆದರಿಂದ ಪ್ರಾಜ್ಞ ವನರು ಯಾವಾಗಲೂ ಹಿಂಸ್ಪೇರಣಾಧ್ಯಾದಂತೆ ಗುಣ ಗ್ಳು ಗ್ರಹಿಸುವರಾಗಬೇಕಷ್ಟೆ ತಮಗೆ ಬೇಡ ಬುದಣ್ಣಾಗಿ ಇಂತಹ ಮಹಾತ್ಮಶಿಗಳನ್ನು ಹಳೆಯ ದಾಗಿ ಅಶಿಸುತ್ತೇನೆ

ಗುಣಾಃ ಗುಣಜ್ಞೇಷು ಗುಣಾ ಭವಂತಿ ।
ತೇ ನಿರ್ಗುಣಂ ಪ್ರಾಪ್ಯ ಭವಂತಿ ದೋಷಾಃ ॥
ಆಸ್ವಾದ್ಯತೋಯಾಃ ಪ್ರವಹಂತಿ ವದ್ಯಾಃ ।
ತೇ ಸಮುದ್ರಮಾಸಾದ್ಯ ಭವಂತ್ಯಪೇಯಾಃ ॥೧॥

ಪತ್ರವ್ಯವಹಾರ

[ಪತ್ರಿಕೆಯಾವರು ಅಭಿಪ್ರಾಯ ಪಡುವ ಲೇಖನಗಳಿಗೆ ಸ್ತ್ರಿಕಾರ್ಯ ಜವಾಬ್ದಾರರಲ್ಲ ಎಂಬ ವಿಷಯವನ್ನು ದರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಮೈಸೂರು ದೇರದ ಮಾನ್ಯ ವಿದ್ಯಾಧಿಕಾರಿಗಳಲ್ಲಿ ವಿನಂತಿ

ಸ್ವಾಮೀ —ಮೈಸೂರಿನಲ್ಲಿ ಹೊರಡುವ ಆತ್ಮ ಚಾರ' ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಗಣ್ಣ ಎಂಬವರು ತಮ್ಮ ಇಲ್ಲೆ ತಿಂಗಳ ಚಿಕೆಯಲ್ಲಿ ವೀರಶೈವ ಮತಗ್ರಂಥಗಳ ವಿಚಾರವಾಗಿ ದ್ದೊಡನೆ ಪಡೆಸಿರುವ ಪತ್ರವ್ಯವಹಾರವು ವೀರಶೈವ ಾಜಾಜನಗಳಿಗೆ ತಿಳಿದುಬಂದಂತೆ ಕಾಣುವದಿಲ್ಲ ನಾಕಂದರೆ ಇದು ತಿಂಗಳಿಗೊಮ್ಮೆ ಹೊರಡುವ ತ್ರಿಕೆಯಾಗಿದ್ದುದರಿಂದ ಯಾರೂ ಅಷ್ಟೊಂದು ಗಮ ಕ್ಕೆ ತಂದು-ಕೊಂಡಿರುವದಿಲ್ಲವಾಗಿ ಕಾಣುತ್ತದೆ

ಮಾನ್ಯ ವಿದ್ಯಾಧಿಕಾರಿಗಳಾದ ತಾವೂ ತಮ್ಮ ಂದಿನ ಅಧಿಕಾರಿಗಳೂ ಮೈಸೂರು ಸೀಮೆಯ ಎಲ್ಲ ತೀಯರ ಪ್ರಾಚೀನ ಮತಗ್ರಂಥಗಳಿಗೆ ಮಾನ್ಯತೆ ಟ್ಟು ಅವನ್ನು ಸರ್ವತೋಮುಖವಾಗಿ ಆದರಿಸುತ್ತ ಂದಿದ್ದೀರಿ ಅದನ್ನು ಹಾಗೇ ಮುಂದುವರಿಸುವದು ರಿಕ್ತವೇ ಹೊರತು ತಿಳಿದೂ ತಿಳಿಯದ ಜನಗಳ ಾತಿಗೆ ಮಣಗೊಟ್ಟು ಕಾರ್ಯತತ್ಪರರಾದರೆ ಎಷ್ಟು ರವಾದ ಜವಾಬ್ದಾರಿ ಮೇಲೆ ಬೀಳುತ್ತದೆಂಬುದು ಲೋಚಿಸದೇಇರದ ವಿಷಯವಾಗಿರುವದು

ಸಾವಿರಾರು ವರ್ಷಗಳಿಂದ ವೀರಶೈವರಿಗೆ ಪರಮ ವಿತ್ರ ಗ್ರಂಥಗಳಾಗಿ ಅಚರಣೆಯಲ್ಲಿ ಬಂದಿರುವ ಶ್ರೀಶರ ತ್ಯ-ತಿವಾದ್ವೈತಮಂಜರಿ ಗ್ರಂಥಗಳು ಪದ್ಧತಿಪ್ರಕಾರ ಂಗಳೂರು-ಮೈಸೂರು ನಗರಗಳ ಸಂಸ್ಕೃತ ಕಾಲೇಜು ಳಲ್ಲಿ ಓದುವ ವೀರಶೈವ ವಿದ್ಯಾರ್ಥಿಗಳಿಗೆ ಸಳ್ಳಪುಸ್ತಕ ಗಾಗಿ ಅಲ್ಲಿಯ ವೀರಶೈವ ಪಂಡಿತರಿಂದಲೂ, ಕಾಲೇ ಪ್ರಿನ್ಸಿಪಾಲರಿಂದಲೂ, ಟೆಕ್ಸ್ಟ್‌ಬುಕ್ ಕಮಿಟಿಯವ ದಲೂ, ವಿದ್ಯಾಖಾತೆಯ ಡೈರೆಕ್ಟರರವರಿಂದಲೂ ಾನ್ಯತೆ ಪಡೆದು ಇಲ್ಲಿಯವರೆಗೆ ಪಡೆದುಬಂದಿರುವದು ರಿಯಷ್ಟೆ ? ಆದರೆ ಈಗ ಶ್ರೀ ನಾಗಪ್ಪನವರು ಾವುದೋ ತಪ್ಪು ಭಾವನೆಯಿಂದ ಮೇಲ್ಕಂಡ ಗ್ರಂಥ ಳು ವೀರಶೈವ ಸಿದ್ಧಾಂತಕ್ಕೆ ವಿರೋಧ ಗ್ರಂಥಗಳೆಂದೂ ವುಗಳನ್ನು ಪಕ್ಕಪುಸ್ತಕ ಪಟ್ಟಿಯಿಂದ ತೆಗೆದುಹಾಕ ಳೇಕೆಂದೂ ಅರಿಕೆಮಾಡಿಕೊಂಡಿದ್ದಕ್ಕೆ ಮಾನ್ಯ ವಿದ್ಯಾ ಲಾಖೆಯ ಡೈರೆಕ್ಟರವರು ಆಯಾ ಸಂಸ್ಕೃತ ಕಾ ಲೇಜುಗಳ ಪ್ರಿನ್ಸಿಪಾಲರಿಗೆ ತಕ್ಷಣ ವಿವೇರ್ಟು ನತೆದೇಇರಲಿಲ್ಲವೇಕೆಂದು ಅವಸರದ ಆಜ್ಞೆ ಹೊರಡಿಸಿರುವರೆಂಬ ನಗ್ಞಾವರ ಪ್ರತಿಯನ್ನೂ ನೋಡಿ ಸಬೇಷಾಶ್ಚರ್ಯ ಗಳಾದೆವು

ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟಿ ರೀಶೈವ ಮತವು ಅವರ ಘನತರ ಪೀಠಾಧಿಕಾರಿಗಳಾದ ನಂತ ಜಗದ್ಗುರು ಭಗವತ್ಪಾದರಿಂದ ಅನಂತ ವಿಘವಲ್ಲಿ ೀಡಿಸಲ್ಪಟ್ಟು ಅಭಿವೃದ್ಧಿಯಷ್ಟು ಹೊಂದುತ್ತ ಂದಿರುವುದು ಇವರಂತೆ ಮಹಾಮಹಿಮರಾದ ಎಷ್ಟೋ ಜಾರ್ಯರೂ ಆರಾಧ್ಯರೂ ವೀರಶೈವ ಧರ್ಮಾಭಿವೃ ಗಾಗಿ ತಮ್ಮ ತಪಸ್ಸಿದ್ಧಿಯ ಫಲವನ್ನು ಧಾರೆಯೆರೆದು ದ್ಯೋಪಕ್ತ (ನೇತ) ಕೈ ಆನೇಕ ಭಾಷ್ಯಗಳನ್ನು ಚಿದ್ದಾರೆ. ಅವುಗಳಲ್ಲಿ ಸರ್ವಾಭೀಷ್ಟಸಿದ್ಧಿ ಶ್ರೀಕರಭಾಷ್ಯ-ತಿವಾದ್ವೈತಮಂಜರಿಗಳ ವಿಷಯವೆನ್ನು ಈಗ ಪ್ರಸ್ತಾವಿಸಬೇಕಾಗಿದೆ ನೇದಕ್ಕೆ ಭಾಷ್ಯ (ಅರ್ಥ) ಮನ್ನು ಬರೆಯುವುದು ಸಾಮಾನ್ಯರ ವಿಷಯವಲ್ಲ ಅವರು ದೇವಾಂಶಸಂಭೂತರೇ ಇರಬೇಕಾಗುವದು ಅಂಧ ಮಹಾತ್ಮರಿಂದ ರಚಿತವಾದ ಈ ಗ್ರಂಥಗಳನ್ನು ಯಾರೊಬ್ಬರು ಹಳಿದ ಮಾತ್ರಕ್ಕೆ ಮಾನ್ಯ ವಿದ್ಯಾಧಿ ಕಾರಿಗಳು ಇಷ್ಟೊಂದು ತೀಕ್ಷ್ಣವಾಗಿ ಕಾರ್ಯತತ್ಪರರಾ ಗಿರುವುದು ಏನಾದರೂ ಮತ್ತು ಈ ಗ್ರಂಥಗಳ ವಿಷಯ ದಲ್ಲಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳೂ ದಾಗಲಿ ಪಾಠಹೇಳುವ ಪಂಡಿತರಿಂದಾಗಲಿ ಮತಾಚಾರ್ಯ ರಿಂದಾಗಲಿ ಯಾವ ತಕರಾರುಗಳೂ ಇರುವುದಿಲ್ಲ ಹೀಗಿದ್ದು ವೈಯಕ್ತಿಕ ಅಭಿಪ್ರಾಯಕ್ಕೋಸ್ಕರ ಇಲ್ಲಿಯ ವರೆಗೆ ನಡೆದುಬಂದಿರುವ ಪದ್ಧತಿಯನ್ನು ಬದಲಿಸಲು ಪ್ರಯತ್ನಿಸುವದರಿಂದ ಸರಕಾರಕ್ಕೆ ವೈದಾಯಾಸವೇ ಹೊರತು ಫಲವಿಲ್ಲ ಆದುದರಿಂದ ಮಾನ್ಯ ವಿದ್ಯಾಧಿ ಕಾರಿಗಳು ಈ ಅಲ್ಪವಿಚಾರಕ್ಕೆ ಗಮನಕೊಡದೆ ಈಗಿರು ವಂತೆಯೇ ಮುಂದುವರಿಸುವದು ಸೂಕ್ತವಾಗಿ ಕಾಣ ತ್ತದೆ ಒಂದುವೇಳೆ ಈ ಗ್ರಂಥಗಳು ವೀರಶೈವ ಜಡತೆ ಯಲ್ಲಿ ಮಾನ್ಯವಾಗಿಲ್ಲವೆಂದು ಹಲವಾರು ಅಭಿಪ್ರಾಯ ಗಳು ಬಂದಪಕ್ಷದಲ್ಲಿ ಅವಿಲ ಕರ್ನಾಟಕ ವೀರಶೈವ ಸಂಸ್ಕೃತ ಪಂಡಿತರ ಮತಾಸಭೆಯನ್ನು ಕರೆದು ಆ ಗ್ರಂಥಗಳ ಸಿದ್ಧಾಂತವೇನೆಂಬುದನ್ನು ನಿರ್ಧರಿಸಬಹುದೇ ಜೊತು ವೈಯಕ್ತಿಕ ಅಕ್ಷರಜ್ಞಾನಕ್ಕೆ ಗಮನಕೊಡಬಾರ ದಾಗಿ ಈ ಮೂಲಕ ಅರಿಕೆಮಾಡಿಕೊಳ್ಳುತ್ತೇನೆ

ಶಾನಭೋಗ ಸಿದ್ಧಲಿಂಗಪ್ಪ
ಹೊಳಗುಂದಿ

ಸುದ್ದಿ ಸಂಗ್ರಹ

ರಾಜುಲಬಂಡ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸೌಕರ್ಯಕ್ಕಾಗಿ ಕರ್ನಾಟಕದ ೧೪ ಸ್ಥಾನಗಳನ್ನು ಆಂಧ್ರಕ್ಕೆ ನೇರಿಸಬೇಕೆಂದು ಆಂಧ್ರ ಮತ್ತು ತೆಲಂಗಾಣಾ ನಾಯಕರು ಕೇಂದ್ರ ಗೃಹಖಾತೆ ಶ್ರೀ ಪಂತ್‌ರವರಿಗೆ ಜಂಟಿ ಮನವಿಯನ್ನು ಅರ್ಪಿಸಿದರು

* * *

ತೆಲಂಗಾಣಾ ಆಂಧ್ರ ಪ್ರದೇಶದ ಸಚಿವ ಸಂಪುಟದಲ್ಲಿ ಉಭಯ ಪ್ರದೇಶಗಳ ಪ್ರಾತಿನಿಧ್ಯದ ಬಗ್ಗೆ ಒಂದು ಗೌರವ ಯುತ ಒಪ್ಪಂದವಾಗಿದೆಯೆಂದು ಗೊತ್ತಾಗಿದೆ.

* * *

ಬ್ರಿಟನ್ನಿನ ರಾಜಮನೆತನದವರು ಏರ್‌ಡಿಸುವ ವಸ್ತ್ರ ಭೋಜನ ಕೂಟಗಳಲ್ಲಿ ಭಾಗ ವಹಿಸುವವರು ಇನ್ನು ಮೇಲೆ ನೈಲಾನ್ ಉಡುಪುಗಳನ್ನು ಧರಿಸಿ ಬರಕೂಡದು

* * *

ಆದಾಯ ತೆರಿಗೆ ಶಾಸನಗಳನ್ನು ಸುಲಭ ಮತ್ತು ಪ್ರಭಾವಯುತವಾಗಿರುವಂತೆ ಕ್ರೋಡೀಕರಿಸಲು ಉನ್ನತಾಧಿಕಾರಿ ಸಮಿತಿಯೊಂದನ್ನು ನೆಯಮಿಸಲು ಭಾರತ ಸರ್ಕಾರವು ಪರ್ಯಾಲೋಚಿಸುತ್ತಿರುವುದಾಗಿ ರೆವಿನ್ಯೂ ಮತ್ತು ಸಾರ್ವಜನಿಕ ವೆಚ್ಚ ಖಾಯೆಯ ಸಚಿವ ಶ್ರೀ ಎಂ. ಸಿ. ಷಾ. ರವರು ಲೋಕಸಭೆಯಲ್ಲಿ ತಿಳಿಸಿದರು

* * *

ಲೋಕಸಭೆಗೆ ನಡೆಯುವ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಮಹಿಳೆಯರನ್ನು ಅಧಿಕ ಸಂಖ್ಯೆಯಲ್ಲಿ ಸ್ಪರ್ಧಿಗಳಾಗಿ ನಿಲ್ಲಿಸಬೇಕೆಂಬ ಆಶ್ಯಕ್ತ ಶ್ರೀ ಎ ಸಕ್ಷ ಣಾರಾಯಣರಾಯ ಅವರ ಸಲಹೆಗೆ ಆಂಧ್ರಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಬೆಂಬಲವಿತ್ತಿದೆ

* * *

ಅಮೆರಿಕದ ವಿಮಾನ ಬಲವು ಒಟ್ಟಾರೆ ನೋಡಿದರೆ ಯಾವುದಾದರೂ ಶತ್ರು ವಿಮಾನ ಬಲಕ್ಕಿಂತಲೂ ಅಧಿಕವಾಗಿದೆ ಯೆಂದೂ ಈ ಮುನ್ನ ತೆಯಷ್ಟು ಹೀಗೆಯೇ ಮುಂದು ವರಿಸಿರುವುದು ಇವರಂತೆ ಬಲಶಾಲಿಯೆಂದೂ ಅಮೆರಿಕ ರಕ್ಷಣಾ ಮಂತ್ರಿ ಶಾರ್ಲ್ಸ್‌ವಿಲ್ಸನ್ ಇಲ್ಲಿ ಹೇಳಿದರು.

ವರ್ತಮಾನ ಸಂಗ್ರಹ

ಹುಬ್ಬಳ್ಳಿಗೊಂದು ವಿಮಾನ ನಿಲ್ದಾಣ

ಕರ್ನಾಟಕದ ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ವೊಂದನ್ನು ನಿರ್ಮಿಸಲು ಸರ್ಕಾರವು ನಿರ್ಧರಿಸಿದೆಯೆಂದು ಕೇಂದ್ರದ ಸಂಪರ್ಕ ಖಾಖಾ ಸಚಿವ ಶ್ರೀ ಜಗಜೀವನ ರಾಂರವರು ಲೋಕಸಭೆಯಲ್ಲಿ ತಿಳಿಸಿದರು.

ಇದಕ್ಕಾಗಿ ಹುಬ್ಬಳ್ಳಿ ಧಾರವಾಡದ ಮಧ್ಯೆ ಸ್ಥಳವನ್ನು ಆರಿಸಲಾಗಿದೆಯೆಂದೂ, ಆ ಭೂಮಿಯನ್ನು ಸ್ವಾಧೀಕ ಪಡಿಸಿಕೊಂಡನೆಂತರ ನಿರ್ಮಾಣ ಕಾರ್ಯವು ಆರಂಭವಾಗು ವುದೆಂದೂ, ಅನಂತರ ಹದಿನೆಂಟು ತಿಂಗಳುಗಳಲ್ಲಿ ನಿರ್ಮಾಣ ಕಾರ್ಯವು ಮುಗಿಯುವುದೆಂದೂ ಇದಕ್ಕೆ ೧೫ ಲಕ್ಷ ರೂ ಗಳು ಖರ್ಚಾಗುವುದೆಂದೂ ಅವರು ತಿಳಿಸಿದರು

"ಉದ್ಯೋಗ ಕಲ್ಪಿಸಿ, ಆಹಾರ ಉತ್ಪನ್ನ ಹೆಚ್ಚಿಸಲು' ಸಂಸ್ಥಾನ ಸರ್ಕಾರದ ಕ್ರಮ

ಬೇಸಾಯಗಾರರಲ್ಲಿ ನಿರುದ್ಯೋಗವನ್ನು ಕಡಿಮೆ ಮಾಡಿ ವ್ಯವಸಾಯದಲ್ಲಿ ತೊಡಗುವಂತೆ ಮಾಡಲು ಬಂಜರು ಭೂಮಿಯನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡುವ ಯೋಜನೆಯೊಂದನ್ನು ಮೈಸೂರು ಸರ್ಕಾರ ಪರಿಶೀಲಿಸುತ್ತಿದೆ

ಆಹಾರ ಉತ್ಪನ್ನ ಹೆಚ್ಚಿಸುವುದನ್ನು ಉದ್ದೇಶವಾಗಿ ಹೊಂದಿರುವ ಈ ಯೋಜನೆಯು ಈಜೆಗೆ ಮುಸ್ಸೋರಿಯಲ್ಲಿ ನಡೆದ ವ್ಯವಸಾಯ ಸಚಿವರ ಸಮ್ಮೇಳನದ ತೀರ್ಮಾನಗಳಿಗನುಗುಣವಾಗಿದೆಯೆಂದು ಸಂಸ್ಥಾನದ ವ್ಯವ ಸಾಯ ಸಚಿವ ಶ್ರೀ ಎಚ್ ಎಂ ಚೆನ್ನಬಸಪ್ಪನವರು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು

ಈ ಯೋಜನೆಯಂತೆ ೫೦೦ ಎಕರೆ ಬ್ಲಾಕ್‌ಗಳನ್ನು ಆರಿಸಿ ಸರಕಾರದ ವೆಚ್ಚದಲ್ಲಿ ಬೇಸಾಯ ಯೋಗ್ಯವನ್ನಾಗಿ ಮಾಡಿ ಅವನ್ನು ಬೇಸಾಯ ಮಾಡುವವರಿಗೆ ಹಂಚಿಕಾ ಗುವುದು ಈ ಬ್ಲಾಕ್‌ಗಳಲ್ಲಿ ಬೇಸಾಯ ಮಾಡುವವರಿಗೆ ವಸತಿ ಕಲ್ಪಿಸಿ ಪ್ರಥಮ ಬೆಳೆ ಬರುವವರೆಗೆ ಬಳಸಲು ಆರು ತಿಂಗಳಿಗೆ ಬೇಕಾಗುವ ಧಾನ್ಯವನ್ನೊದಗಿಸಲಾಗು ವುದು. ವ್ಯವಸಾಯ ಉಪಕರಣಗಳನ್ನೊದಗಿಸಲಾಗು ವುದು

ಪ್ರತಿ ಬೇಸಾಯಗಾರನಿಗೆ ಸುಮಾರು ೧೫೦೦ ರೂ ಬೆಲೆಗೆ ಐದು ಎಕರೆ ಪ್ಲಾಟ್ ಅನ್ನು ಕೊಡಲಾಗುವುದು ಈ ಹಣವನ್ನು ೧೫ ಸಮಕಂತುಗಳಲ್ಲಿ ತಾವರ್ ಪಸೆಯು ಲಾಗುವುದು ೧೫ ವರ್ಷಗಳ ನಂತರ ಈ ಜಮೀನಿನ ಮಾಲೀಕತ್ವ ಬೇಸಾಯಗಾರನಿಗೆ ಸೇರುವುದು.

ಮುಂದಿನ ಸಾಲಿನಲ್ಲಿಯೇ ಬೇಸಾಯಗಾರರು ಬೇಸಾಯ ಮಾಡಲಭಿಕೂಲವಾಗುವಂತೆ ತೀರ್ಪುವಾ ಗಿಯೇ ಈ ಯೋಜನೆಯನ್ನು ಜಾರಿಗೆ ತರುವ ನೀಕ್ಷೆ ಇದೆ

ಹೊಸ ಪ್ರಾಂತ್ಯಗಳಿಗೆ ತಕ್ಷಣ ಮುಖ್ಯಾಧಿಕಾರಿಗಳು

ಹೊಸ ಪ್ರಾಂತ್ಯಗಳಿಗೆ ಮುಖ್ಯ ಅಧಿಕಾರಿಗಳಾದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಖಾತಾ ಕಾರ್ಯದರ್ಶಿ, ಅಭಿವೃದ್ಧಿ ಆಯುಕ್ತರ್, ಪೋಲೀಸಿನ ಇನ್ಸ್‌ಪೆಕ್ಟರ್ ಜನರಲ್ ಮುಂತಾದವರನ್ನು ತಕ್ಷಣ ನೇಮಕಮಾಡುವ ನಿರೀಕ್ಷೆ ಇವೆಯೆಂದು ಗೊತ್ತಾಗಿದೆ ಹೊಸ ಪ್ರಾಂತ್ಯಗಳ ನಿರ್ಮಾಣಕ್ಕೆ ಮೊದಲೇ ಈ ರೀತಿ ಮುಖ್ಯ ಅಧಿಕಾರಿ ಗಳನ್ನು ನೇಮಿಸುವುದರಿಂದ ಹೊಸ ಪ್ರಾಂತ್ಯಗಳು ಇನ್ನೂ ತಾವೇ ಸಂಬಂಧದಲ್ಲಿ ಉದ್ಭವಿಸುವ ಎಲ್ಲಾ ಸಮಸ್ಯೆ ಗಳ ಬಗ್ಗೆಯೂ ಅವರು ಶ್ರಮ ಕೈಗೊಳ್ಳಲು ಅನುಕೂಲ ವಾಗುತ್ತದೆಂಬುದೇ ಅಧ್ಯೇಕ್ಷಿತವೆಂದು ಹೇಳಲಾಗಿದೆ

ಗೃಹಸಚಿವ ಜಿ ವಿ ಪಂತರು ಈ ಅಧಿಕಾರಿಗಳನ್ನು ತಕ್ಷಣ ನೇಮಿಸಬೇಕೆಂದು ಅಂತರ ರಾಜ್ಯ ಸಮಿತಿ ಗಳಿಗೆ ಸೂಚನೆ ಇತ್ತಿದ್ದಾರೆಂದು ಗೊತ್ತಾಗಿದೆ.

ಹಾಸನದಲ್ಲಿ ಕರ್ನಾಟಕ ಏಕೀಕರಣ ಪ್ರಮುಖರ ಸಭೆ

ಅಖಿಲ ಕರ್ನಾಟಕ ಯುವಕ ಪರಿಷತ್ತಿನ ಆಶ್ರಯದಲ್ಲಿ ಕರ್ನಾಟಕ ಏಕೀಕರಣದ ಸಮಗ್ರ ಇತಿಹಾಸವನ್ನು ಒಳಗೊಂಡ ಪುಸ್ತಕವನ್ನು, ಕರ್ನಾಟಕ ರಾಜ್ಯದ ಉದ್ಘಾಟನೆಯ ಶುಭದಿವಸದಲ್ಲಿಯೇ ಪ್ರಕಟಿಸುವ ಕ್ರಮ ಕೈಗೆತ್ತಿಕೊಳ್ಳಲು ಕರ್ನಾಟಕ ಯುವಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ ಎಂ ರುದ್ರಪ್ಪನವರು ಇತ್ತೀಚೆಗೆ ೧೦೧ ರೂಯ ಹಾಸನದ ಜಿಲ್ಲಾ ಬೋರ್ಡು ಕಛೇರಿಯಲ್ಲಿ ಅಖಿಲ ಕರ್ನಾಟಕ ಏಕೀಕರಣ ಪ್ರಮುಖರ ಸಭೆಯನ್ನು ಕರೆದಿದ್ದಾಗ ವಿಧಾನ ಪರಿಷತ್ತಿನ ನವನ್ಯ ಶ್ರೀ ವೈ ಧರ್ಮಪ್ಪನವರು ಸಭೆಯ ಅಧ್ಯಕ್ಷತೆ ವಹಿಸುವರು

ಸಾಲಾರಜಂಗ್ ವಸ್ತುಸಂಗ್ರಹಾಲಯ ಮೈಸೂರಿಗೆ ದೊರೆಯಬೇಕು !

ಈಗ ಹೈದರಾಬಾದ್ ನಗರದಲ್ಲಿ ಸ್ಥಾಪಿತವಾಗಿರುವ ಸಾಲಾರಜಂಗ ವ್ಯೂಜಿಯಂ (ವಸ್ತು ಸಂಗ್ರಹಾಲಯ) ರಾಜ್ಯಗಳ ಪುನರ್ಘಟನೆಯು ಕಾಲಕ್ಕೆ ಹೊಸ ಮೈಸೂರು (ಕರ್ನಾಟಕ) ರಾಜ್ಯಕ್ಕೆ ದೊರೆಯಬೇಕೆಂದೂ ಆ ಬಗ್ಗೆ ತೀವ್ರವೇಯೋಗ್ಯಕ್ರಮ ಕೈಕೊಳ್ಳಬೇಕೆಂದೂ ಹೈದರಾಬಾದ್ ಕರ್ನಾಟಕದ ೭೦ ಲಕ್ಷ ಜೆಜ್ಜು ಪ್ರತಿನಿಧಿಗಳು ಇತ್ತೀಚೆಗೆ ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಮನವಿಯೊಂದನ್ನು ಕಳುಹಿಸಿರುತ್ತಾರೆ

ಹಿಂದೆ ಕೊಪ್ಪಳ ಯಲ್ಬುರ್ಗಿ ತಾಲ್ಲೂಕುಗಳಿಗ ಜಾಗೀರದಾರರಾಗಿದ್ದ ದಿವಂಗತ ನವಾಬ್ ಸಾಲಾರಜಂಗ್ ಬಹಗ್ವರ್ದರವರು ಕೆಸಸ್ಟ್ಳದ ಅಚ್ಚುಕಟ್ಟಾದ ಪ್ರದೇಶಗಳ ಜನರಿಂದ ಸಂಗ್ರಹಿಸಿದ ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಈ ವಸ್ತುಸಂಗ್ರಹಾಲಯದಲ್ಲಿರುವ ಅಪೂರ್ವ ಹಾಗೂ ಅಮೂಲ್ಯವಾದ ಕಲಾಕೃತಿಗಳು ಮತ್ತು ಒಡವೆ ವಸ್ತುಗಳನ್ನು ಶೇಖರಿಸಿಟ್ಟಿದ್ದರೆಂದೂ ಅದುದರಿಂದ ಅವುಗಳ ಮೇಲಿನ ಹಕ್ಕು ನ್ಯಾಯ ರೀತಿ ಹಾಗೂ ಘಟನಾ ಪ್ರಕಾರವಾದ ಕಾರಣಗಳಿಂದ ಕನ್ನಡಿಗರದ್ದೇ ಇರುತ್ತದೆಂದೂ ರಾಜ್ಯಗಳ ಪುನರ್ಘಟನೆಯ ಕಾಲಕ್ಕೆ ಹೊಸ ಮೈಸೂರು ರಾಜ್ಯಕ್ಕೆ ಬರಬೇಕಾಗಿದ್ದ ಈ ಸಂಗ್ರಹಾಲಯವನ್ನು ಹೈದರಾಬಾದಿನಿಂದ ಬೆಂಗಳೂರು ನಗರಕ್ಕೆ ಸ್ಥಳಾಂತರಿಸಿ ಅಲ್ಲಿ ಸ್ಥಾಪಿಸಬೇಕೆಂದೂ ಮನವಿಯಲ್ಲಿ ಬಿನ್ನವಿಸಿಕೊಳ್ಳಲಾಗಿದೆ

ಧಾರವಾಡದಲ್ಲಿ ಹೈಕೋರ್ಟ್ ಸ್ಥಾಪಿಸಲು ವಕೀಲರ ಒತ್ತಾಯ

ನೂತನ ಕರ್ನಾಟಕ ರಾಜ್ಯದ ಹೈಕೋರ್ಟು ಅಥವಾ ಅದರ ಬೆಂಚನ್ನು ಧಾರವಾಡದಲ್ಲಿ ಸ್ಥಾಪಿಸಬೇಕೆಂದು ಭಾರತ ಸರಕಾರ ಹಾಗೂ ಮೈಸೂರು ಸರಕಾರಗಳನ್ನು ಕೇಳಿಕೊಳ್ಳುವ ಗೊತ್ತುವಳಿಯೊಂದನ್ನು ಈಚೆದ ಶುಕ್ರವಾರ ಧಾರವಾಡ ವಕೀಲರ ಸಂಘದ ವಿಶೇಷ ಸಭೆಯು ಅಂಗೀಕರಿಸಿತು

೧೮೬೭ರಿಂದ ಧಾರವಾಡವು ನ್ಯಾಯಾಂಗದ ಮುಖ್ಯ ಸ್ಥಾನವಾನವಾಗಿದೆ ಅಲ್ಲದೆ ಅಲ್ಲಿ ಸದರು ಅದಾಲತ್ ಸಂಸ್ಥೆ ಕೆಲಸ ಮಾಡುತ್ತಿದ್ದು ಅದರ ವ್ಯಾಪ್ತಿಯು ಇಡೀ ಮುಂಬಯಿ ಕರ್ನಾಟಕ ಮತ್ತು ಸೊಲ್ಲಾಪುರ ಜಿಲ್ಲೆಗಳ ವರೆಗಿತ್ತು

'ಧಾರವಾಡವು ಉತ್ತರ ಕರ್ನಾಟಕದ ಜಪಕೆಗೆ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಚಟುವಟಿಕೆಗಳಿಗೆ ಸ್ಫೂರ್ತಿಯಿತ್ತಿದೆ ಅದು ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರವಾಗಿರುವುದರ ಜೊತೆಗೆ ತಂಪಾದ ಹಿತಕರ ಹವೆಯಿಂದ ಕೂಡಿದ್ದು ಹೈಕೋರ್ಟಿನ ಸ್ಥಾಪನೆಗೆ ಯೋಗ್ಯಸ್ಥಳವಾಗಿದೆ ಉತ್ತರ ಕರ್ನಾಟಕದ ಎಲ್ಲ ನಗರಗಳೂ ಧಾರವಾಡಕ್ಕೆ, ೧೦೦ ಮೈಲು ದೂರದೊಳಗಿದ್ದು ಅದು ಕೇಂದ್ರ ಸ್ಥಳವಾಗಿದೆ ಅದ್ದರಿಂದ ಈ ಭಾಗದ ಜನತೆಯು ಹಿತದೃಷ್ಟಿಯಿಂದ ಇಲ್ಲಿ ಹೈಕೋರ್ಟು ಸ್ಥಾಪನೆಗಾಗಿ ಅದರ ಬೆಂಚನ್ನಾದರೂ ಸ್ಥಾಪಿಸುವುದು ಏಷಿತ ವಾಗಿದೆ' ಎಂದು ಗೊತ್ತುವಳಿಯಲ್ಲಿ ತಿಳಿಸಲಾಗಿದೆ

ಈ ಸಂದರ್ಭದಲ್ಲಿ ಆಂಕೆ ಅಂಶಗಳನ್ನು ಕಲಿಹಾಕಲು ಶ್ರೀಗಳಾದ ಎಂ ಎಸ್ ಪಾಟೀಲ, ಐ ಜಿ ಹಿರೇಗೌ ರು, ವಿ ಎಚ್ ಲಕ್ಷೇಶ್ವರ, ಎಸ್ ಜಿ ಕಣವೀರರ, ಹಾಗೂ ಎಲ್ ಆರ್ ದುರ್ಗದನ್ನೊಳಗೊಂಡ ಸಮಿತಿಯನ್ನು ವಿಶೇಷ ಸಭೆಯು ರಚಿಸಿತು

ಸ್ವೀಕಾರ

ಜಳ್ಳಕೆರೆ ತಾ|| ಹಿರೇಮಧುರೆ ಶ್ರೀ ಮಳದ ಬಸವಣ್ಣಯ್ಯನವರ ಪೃಥಮ ಪುತ್ರಿಯಾದ ಚಿ|| ಸೌ|| ಸರ್ವಮಂಗಳಮ್ಮನಿಗೆ ತಾ|| ೧೩-೭-೧೯೩೬ ನೇ ಶುಕ್ರವಾರ ರಾತ್ರಿ ಒಂದು ಗಂಟೆಗೆ ಗಂಡುಮಗುವು ಜನಿಸಿದ್ದು ಮತ್ತು ಸದರಿ ಬಸವಣ್ಣಯ್ಯನವರ ದ್ವಿತೀಯ ಪುತ್ರಿ ಚಿ|| ಸೌ|| ವಿಶಾಂತಮ್ಮನಿಗೆ ತಾ|| ೮-೪-೧೯೩೬ ನೇ ಭಾನುವಾರ ಸಾಯಂಕಾಲ ೪ ಗಂಟೆಗೆ ಗಂಡುಮಗು ಜನಿಸಿದ್ದು ಆದ ಸಂತೋಷಾರ್ಥವಾಗಿ ಶ್ರೀ ಬಸವಣ್ಣಯ್ಯನವರು ಪ್ರಭಾವೋಷಣೆಗಾಗಿ 1 ರೂ ಸಮರ್ಪಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶಿಷ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	—	೧ ಆಣೆ
ಸಚ್ಯಾಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	—	೧ ಆಣೆ
ಪಂಚಮಿಪಕಟಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	—	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	—	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	—	೨ ಆಣೆ
ಶ್ರೀರೇಣುಕಾಚಾರ್ಯಶತಕ (೭ನೆಯ ಆವೃತ್ತಿ)	—	೨ ಆಣೆ
ಶ್ರೀರುದ್ರಮುಪಶಿವಾಚಾರ್ಯಶತಕ	—	೨ ಆಣೆ
ಶಿವಶಕ್ತಿವಿಲಾಸ	—	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	—	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	—	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	—	೩ ಆಣೆ
ಜಪಮಾಲಿಕಾಪತ್ತ್ವದರ್ಪಣ (೫ನೆಯ ಆವೃತ್ತಿ)	—	೩ ಆಣೆ
ಪಂಚಾಚಾರ್ಯಪ್ರಕಾಶ	—	೩ ಆಣೆ
ಪಂಚಾಚಾರ ಪ್ರಕಾಶಿಕಾ	—	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	—	೩ ಆಣೆ
ಶ್ರೀಜಗತಿಪಂಡಿತಾರಾಧ್ಯರ ಕಾಲನಿರ್ಣಯ	—	೪ ಆಣೆ
ವೀರಶೈವಾಚಾರಾವಿಧಿ (೪ನೆಯ ಆವೃತ್ತಿ)	—	೪ ಆಣೆ
ಲಿಂಗಧಾರಣವಿಧಿ	—	೪ ಆಣೆ
ಗರ್ಭಾಧಾನವಿಧಿ	—	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	—	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	—	೪ ಆಣೆ
ವೀರಶೈವ ಅಂತ್ಯೇಷ್ಟಿ-ಶ್ರಾದ್ಧವಿಧಿ	—	೪ ಆಣೆ
ವೈದಿಕವಾಹ್ಯಾಯರಹಸ್ಯ	—	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	—	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ	—	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	—	೬ ಆಣೆ
ಸಚ್ಯಾಸಾಸ್ತ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ)	—	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಸಚ್ಚಸ್ಕೃತ)	—	೮ ಆಣೆ
ಶಿವಾಧ್ವೈತಸುಧಾಕರ (ಸಂಸ್ಕೃತ)	—	೮ ಆಣೆ
ವೀರಶೈವಮಹಾತ್ಮರು	—	೮ ಆಣೆ
ಜಪಪಧ್ಯಾಂತವಿವಾಹರ (೨ನೆಯ ಆವೃತ್ತಿ)	—	೮ ಆಣೆ
ಅಗಮಪರಿಜ್ಞಾನ	—	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರು ಭಾಷಣಮು (ತೆಲುಗು)		೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	—	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ಸಚಿತ್ರಕೃಮಾಲಿಕಾ	—	೮ ಆಣೆ
ಕನ್ನಡ ನ್ಯಾಯಶತಕಮ್	—	೮ ಆಣೆ
ಮಕುಟಾಗಮ.	—	೮ ಆಣೆ
ಕಾರಣಾಗಮ:	—	೧೨ ಆಣೆ
ಸೂಕ್ಷ್ಮಾಗಮ:	—	೧೨ ಆಣೆ
ಚಿಂದ್ರಜ್ಞಾನಾಗಮ:	—	೧ ರೂ
ಸಿದ್ಧಾಂತಸಾರಾವಳಿ (ಶ್ರೀವೀಭಪತಿವಾಚಾರ್ಯಕೃತ)	—	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	—	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಸ್ವಾಮೀನತ್ವ	—	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	—	೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	—	೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	—	೧ ರೂ
ವೀರಮಾಹೇಶ್ವರಚಂದ್ರಿಕೆ	—	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಮುಮ. ೩ನೆಯ ಆವೃತ್ತಿ)	—	೧೫ ರೂ
ಶ್ರೀಕರಭಾಷ್ಯಂ (೨ ನೆಯ ಆವೃತ್ತಿ)	—	೧೫ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	—	೧೫ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಾನುವಾದ)	—	೨ ರೂ.
ವೀರಶೈವರತ್ನ (ಜನಿಯ ಆವೃತ್ತಿ, ೩೦ ಪುಟಕ್ಕಿರುವ ಪೋಟೋಗಳಿರುವುವು		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)	—	೫॥ ರೂ.
A brief life-sketch of Pandit Sri Kashinatha Shastriji (English)		4 As.
The Philosophical Aspect of Virasaivism (English)		8A s.
Speeches by Pandit Shri Kashinatha Shastriji (English)		12 As
ವೀರಶೈವರತ್ನ (ಭಾಗ-೨)		೪ ೯-೮-೦
ಸಂಧಿಕಾರ್ಯಕಾರಿಕಾ (ಕನ್ನಡ)	—	೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brahmanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಹಾಗಸೂರು ಬೃಹನ್ಮಹಾಧ್ಯಕ್ಷರಾದ ವೇದ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗಸೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೧೦ ಆ

ಸಂಪುಟ ೩೦] ಸೋಮವಾರ ತಾ॥ ೩೦ ನೇ ಜುಲೈ ೧೯೫೬ [ಸಂಚಿಕೆ ೧೧

ರೇಣುಕವಿಜಯಪುರಾಣಂ

(ಶ್ರಾವಣಮಾಸವು ಬಂದಿತು)

ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾಮೋಧಕವಾದೀಪುರಾಣವು ಕರ್ನಾಟಕ ಭಾಷೆಯಲ್ಲಿ ಭಾಮಿನಿ ಷಟ್ಪದಿಯಾಗಿ ಈಗ ಎರಡನೇ ಆವೃತ್ತಿ ಮುದ್ರಿಸಲ್ಪಟ್ಟಿವೆ ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀರೇಣುಕಗುರುಸಾರ್ವಭೌಮರ ಸನುಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ ಈ ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಹಾಗು ಅಂದವಾದ ಬೈಂಡಿನಿಂದೊಡಗೂಡಿದೆ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಮೋದಕಗಳಾದ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ ಸದ್ಯಃ ಶ್ರಾವಣಮಾಸನು ಸಮಾಪನವಾಗಿದ್ದು ಪ್ರತಿಯೊಬ್ಬ ಗೊರುಬಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಸರಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ ಬೆಲೆ ರೂ. ೨-೦-೦

ಮ್ಯಾನೇಜರ್
ಶ್ರೀಪಂಚಾಚಾರ್ಯ ನಿಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪತ್ರವ್ಯವಹಾರ

ಚಂದಾದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಸಂಪಾದಕರೇ ಜವಾಬ್ದಾರರಲ್ಲ ಎಂಬ ವಿಷಯವನ್ನು ಗಮನಿಸಿರಲು ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಮೈಸೂರು ಆತ್ಮನಿಭಾರ ಪತ್ರಿಕೆಯ ಸಂಪಾದಕರಿಗೆ ಬಹಿರಂಗ ಪತ್ರ

ಮಹಾಶಯರೇ? ತಮ್ಮ ಪತ್ರಿಕೆಯಲ್ಲಿ ಹೊರಡುವ ಎಷ್ಟೋ ವಿಷಯಗಳು ತಮ್ಮದೇ ಆದ ಒಂದು ಸೃಷ್ಟಿಯನ್ನು ಹೊಂದಿ ಯಾರಿಗೂ ಹೆದರದೆ ಕೆಚ್ಚಿ ಬಿಚ್ಚುಹೃದಯದಿಂದ ಹೊರಬಿದ್ದ ನಿರ್ಭೀತ ಸರಣಿ ಕೊಡಿದವುಗಳಾಗಿ ವಾಚಕವೃಂದಕ್ಕೆ ಒಂದುವಿಧ ಹಾಸ್ಯ ವಿನೋದವನ್ನುಂಟುಮಾಡುತ್ತಿರುವವು ಇತ್ತೀಚೆಗೆ 'ಶ್ರೀಜಗದ್ಗುರು ಪಂಚಸಿಂಹಾಸನಾರೂಢರಿಗೆ ಬನ್ನ ವತ್ತಳಿಕೆ' ಎಂಬ ಹೆಡ್ಡಿಂಗಿನಿಂದ ಪ್ರಕಟಿಸಿದ ಪ್ರತಿಭೆಯು ಮೂರನೇ ಪೇಜಿನ ಮೊದ ಪ್ಯಾರಾದಲ್ಲಿ ವೀರಶೈವ ಮತೀಯರೊಂದಿಸಿಕೊಂಡು ಅನೇಕ ಲೌಕಿಕರು ವೀರಶೈವ ಸಿದ್ಧಾಂತವೇನು ಅದರ ಪ್ರಯೋಜನವೇನು ಎಂಬುದನ್ನೇ ತಿಳಿ "ಎಳೇನ ಇನ್ನೂನಾ ಮುಕ್ಕಿವೀರಣಾಂತು ಸ್ವಾಮೀರೇ" ಎಂಬ ವಚನದಂತೆ ಒಂದೇ ಇನ್ನೂನಲ್ಲಿ ಯಷ್ಟು ತೊಹುಮಳಿಕ ಪ್ರಶ್ನೆ ಶುಕ ತೊಡ್ಡರು ಸಮಾಪನರೂ ಇಲ್ಲ ಎಂದು ಪರಲೋಕವನ್ನು ಲೌಕಿಕ ವ್ಯವಹಾರದಲ್ಲಿ ಮುಳುಗಿ ಹೋಗಿ ಸದಿ ಪುತ್ರಾದಿಗಳ ಮೋಹದಲ್ಲಿ ಸಿಕ್ಕಿ ಧನ ಸಂಗ್ರಹದಲ್ಲಿ ತೊಡಗಿದ್ದಾರೆ ಎಂದು ಮುಂತಾಗಿ ಬರೆದಿರುತ್ತೀರಿ ಇದನ್ನೆಲ್ಲಾ ನೋಡಿದ ವಾಚಕರನೇಕರಿಗೆ ಕೆಳಕಂಡ ಸಂಶಯಗಳು ಬಹಮಾಡಿರುತ್ತವೆ ಅವಕ್ಕೆಲ್ಲಾ ತಮ್ಮಿಂದ ಪರಿಹಾರ ದೊರಕೀತೆಂದು ನಂಬಿದ್ದೇನೆ

(೧) ತಾವು ತಿರುವ ಲೋಕವಾವುದು ಪರಲೋಕವೋ ಇಹಲೋಕವೋ? ತಾವು ಧನಾರ್ಜನೆಯನ್ನು ತ್ಯಜಿಸಿ ತಮ್ಮ ಪತ್ರಿಕೆಯನ್ನು ಪುಕ್ಕಟೆ ಕೊಡುತ್ತೀರಾ? ಹೇಳುವವರು ಆಚರಿಸಿ ತೋರಿಸಬೇಕೆಂದು ವಾಚಕರು ಪ್ರಶ್ನಿಸುತ್ತಾರೆ, ಸಮಜಾಯಿಷಿ ಕೊಡಿ

(೨) ಅನೇಕರು ಲಿಂಗವನ್ನು ದೇಹದಮೇಲೆ ಧರಿಸದೆ ಗೂಟಕ್ಕೆ ನೇತುಹಾಕಿದ್ದಾರೆ ದುರಾಚಾರಿಗಳಾದ ಪರಮತೀಯರೊಡನೆ ಸಹಭೋಜನವನ್ನುಮಾಡುತ್ತಾರೆ ಕೆಲವು ಮಠಾಧಿಪತಿಗಳು ಕಾಣಿಕೆ ಮುಡ್ಡಿಗೋಸ್ಕರ ದುರಾಚಾರಿಗಳಾದ ಪರಮತೀಯರಿಗೆ ಲಿಂಗಧಾರಣೆ ಮಾಡಿದ್ದಾರೆ ಎಂದಿರುತ್ತೀರಿ? ಈ ಬಗ್ಗೆ ತಾವು ನೋಡಿರುವ ಸತ್ಯ ಸಂಗತಿಯನ್ನು ಮರೆಮಾಚದೆ ದುರಾಚಾರಿಗಳಾದ ಪರಮತೀಯರು ಯಾರು ಲಿಂಗವನ್ನು ಗೂಟಕ್ಕೆ ನೇತು ಹಾಕಿರುವವರಾರು? ಅವರು ಎಲ್ಲಿದ್ದಾರೆ? ಪರಮತೀಯರೊಡನೆ ಸಹಭೋಜ್ಯಪ್ರಭೋಜನವಾಡುವವರಾರು ಮುದ್ದಿಸಿ ಅಸೆಗಾಗಿ ದುರಾಚಾರಿಗಳಾದ ಪರಮತೀಯರಿಗೆ ಲಿಂಗ ಧಾರಣೆಯನ್ನು ಯಾವ ಮಠದವರು ಮಾಡಿದ್ದಾರೆ ಎಲ್ಲಿ ಪರೆದಿದ್ದು? ಲಿಂಗಧಾರಣೆಯಾದವರು ಮೊದಲು ಯಾವ ಜಾತಿಯವರು ಈಗ ಅವರು ಯಾವ ಮುಟ್ಟಿದಲ್ಲಿದ್ದಾರೆ ವಿಚಕ್ಷಣರಾಗಿ ತಿಳಿದು ವಾಚಕರ ಸಂಶಯವನ್ನು ಪೂರ್ತಿ ಪರಿಹರಿಸುವುದರಲ್ಲಿ 'ತಾವು ಸಮರ್ಥರಾಗಿರುವೆಂದು ಭಕ್ತ ವಿಶ್ವಾಸವಿದೆ

(೩) ಇದಲ್ಲದೆ ವೀರಶೈವರಲ್ಲಿ ಲೌಕಿಕರಾದ ತೆಲವರು ರಾಜಕೀಯ ಸ್ವಾರ್ಥಸಾಧನೆಗಳಿಗೋಸ್ಕರ ವೀರಶೈವ ಮತ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಮಾಂಸಾಹಾರಿಗಳಾದ ಅಶ್ಯಮತೀಯರಿಗೂ ಲಿಂಗಧಾರಣೆಯನ್ನು ಬಲಾತ್ಕಾರವಾಗಿ ಮಾಡಿಸುತ್ತಿದ್ದಾರೆ ಎಂದು ಸಕ ಬರೆದರು ವೀರ ಅಂಥಾ ಪ್ರಚಾರಕರಿಂದು ಅವರ ಹೆಸರು ವಿಳಾಸ ತಿಳಿಸಿರಿ. ಮತ್ತು ಲಿಂಗಧಾರಣೆಮಾಡಿದ ಮಠದ ಸ್ವಾಮಿಗಳ ಹೆಸರು ಏಷ್ಟು ಬಲಾತ್ಕಾರಿಸಿದಾಗ ತಮಗೆ ದೂರು ಕೊಟ್ಟವರಾರು ಅವರ ಹೆಸರೇನು? ವಿಶದವಾಗಿ ತಿಳಿಸಿ ಮತಕ್ಕೆ ಮಹೋಪಕಾರಮಾಡುವುದೆಂದು ನಂಬಿದ್ದೇನೆ

(೪) ಷಟ್‌ಸ್ಥಲದ ಅರಿವಿನ್ಹದ ನಿರಂಜನ ಪ್ರಣವದ ಅರ್ಥಾವನ್ನು ತಿಳಿಯದ ಷಟ್‌ಸ್ಥಲ ಬ್ರಹ್ಮ ನಿರಂಜನ ಪ್ರಣವಸ್ವರೂಪಿಗಳಾದ ಸ್ವಾಮಿಗಳಾರು ಯಾವ ಮಠದವರು ಎಂಬುದನ್ನು ತಿಳಿಸಿರಿ

(೫) ಮತ್ತೊಂದುಕಡೆ ವೀರಶೈವ ಪಂಡಿತರೆಂದೆನಿಕೊಂಡಿರುವವರಲ್ಲಿ ಹೆಚ್ಚು ಜನರು ವೀರಶೈವ ಸಿದ್ಧಾಂತ ಗ್ರಂಥಗಳನ್ನು ಚೆನ್ನಾಗಿ ನೋಡದೆ ಅಪ್ಪೈಪದಮೇಲಿಕ್ಷೆ ದ್ವೇಷದಿಂದ ಕಂಚಿಕಾಣಿಗಿದ್ದಾರೆ ಎಂದು ಬರೆದಿದ್ದೀರಿ. ಈ ಮಾತು ನಿಮ್ಮಂಥ ವೀರಶೈವರಿಗೆ ಪರಮಾಶ್ಚರ್ಯವನ್ನುಂಟುಮಾಡದೆ ಇರಲಾರದು ಛಲೆ ನಿಮ್ಮ ಅಪ್ಪೈತ ಸಿದ್ಧಾಂತವು ಧನ್ಯವಾದುದು

(೬) ಬೇರೊಂದು ಕಡೆ ಚಾಮುಂಡಿ ಬೆಟ್ಟದ ಬುಡದಲ್ಲಿರುವ ಸಂಚಗವಿ ಮಠದಲ್ಲಿ ಗುರುಕುಲವನ್ನು ತೆರೆಯ ಬೇಕೆಂದು ಅಕಿಪಟ್ಟಿರುವಿರಿ ಹಾಗಾದರೆ ಮೈಸೂರಲ್ಲಿ ಗುರುಕುಲವಿಲ್ಲವೆ ಹೇಗೆ? ಇದ್ದರೆ ಅದು ಯಾವ ಸ್ಥಿತಿಯಲ್ಲಿರುವದು

(೭) ಮಗದೊಂದು ಕಡೆ ಒಂಭಂಗಪತ್ರದಲ್ಲಿ ತಮಗೆ 72 ವಯಸ್ಸೆಂದೂ ಚಿಕ್ಕಂದಿನಲ್ಲಿ ಶ್ರೀಯಾದೀಸ್ಥೆಯಾಯಿ ತೆಂದೂ ೨೦ ರಲ್ಲಿ ಮಂತ್ರೋಪದೇಶವಾಯಿತೆಂದೂ ಆದಂತರ ಸಿದ್ಧಪ್ಪಸ್ವಾಮಿಗಳಿಂದ ವೀರಶೈವ ಸಿದ್ಧಾಂತಶ್ರವಣ ವಾಯಿತೆಂದೂ ತದನಂತರ ಕಲಾಸಿರಾಶ್ರಮ ಸಹಜಾನಂದರ ಶಿಷ್ಯರಾದ ವಾಜಯೋಗಿ ಶ್ರೀ ಚಿಕ್ಕಲಿಂಗಣ್ಣ ಸ್ವಾಮಿಗಳಿಂದ ಸಂಚಮತಿ ಭಗವದ್ಗೀತೆ ಇತ್ಯಾದಿ ಗ್ರಂಥ ಗಳ ಶ್ರವಣವಾಯಿತೆಂದೂ ಒರೆದುಕೊಂಡಿರುತ್ತೀರಿ ತಮಗೆ ಇಷ್ಟುಜನ ಗುರುಗಳಾದಮೇಲೆ ಕೇಳುವದೇನು ಈ ಮೂಲಕವೇ ತಾವು ನ್ಯಾಯನಿಷ್ಠೂರರರೂ ಅಕ್ಕ ವಿಚಾರಿಗಳೂ ಸತ್ಯಸಂಧರೂ ವಯೋವೃದ್ಧರೂ ಮುಂದ ಕ್ಕೆಷ್ಟು ಹೆಚ್ಚಿಯುಷ್ಯವು ಹಿಂತೆಗೆಯದ ಧೀರರೂ ಇರುತ್ತೀರಾಗಿ ಕಾಣುತ್ತಿದೆ. ಆದ್ದರಿಂದ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗಿ ಸರಿಯಾದ ಸನುಜಾಯಿಷಿಯಷ್ಟೂ ಅಂತೆಯೇ ನಿಮ್ಮ ಜೀವಪತ್ರಿಕೆಯನ್ನೂ ಯಾರೂ ಬೆರೆಯೊಳಿರಿಸದ ರೀತಿಯಲ್ಲಿ ಯಚಾರ್ಥ, ಸತ್ಯವನ್ನು ಒರೆಗೆ ಹಚ್ಚಿ ಬರೆಯುವುದು ಅಗತ್ಯವಾಗಿದೆ ದಯವಿಟ್ಟು ಸಮಸ್ತರೂವಾಗಿ ಪ್ರಕಟಿಸಿದಕ್ಕೆ ವೀರಕ್ಕೆವರ್ಲರೂ ಕೃತಜ್ಞರಾಗುವುದರಲ್ಲಿ ಅಭಿಪ್ರಾಯವಿಲ್ಲ. ಈ ಸತ್ಕೃತ್ಯ ಕ್ಕೆಯಿಂದಿಂದ ನಿಮ್ಮ ವಿರೋಧಿಗಳು ಶಿಕ್ಷೇಪಾರ್ಹರಾಗುವೆಂಬ ಹಂಬಿರುವ

ಮಲ್ಲಿಕ್ಷ-ವೀರಶೈವ ಜಂಗಳಳ್ಳಿ.

ಸಂಚಿವಾಚಾರ್ಯಪ್ರಭಾ

೧೯೩೩ ನೆಯ ಜುಲೈ ತಾ ೩೦ ನೆಯ ಸೋಮವಾರ

ಶ್ರಾವಣಮಾಸದ ವೃಜಾನಲ

ಈ ಮಾಸದಲ್ಲಿ ಮಳೆ-ಬೆಳೆಗಳಿಂದ ಕೂಡಿದ ಭೂ ಸಿರಿಯು ಅಹ್ಲಾದಕರವಾದ ಹಸರು ಬಣ್ಣದಿಂದ ಶೋಭಿಸುತ್ತಿರುವುದು ನದಿಗಳು ಮಹಾ ಪೂರದಿಂದ ಹೊರಚಿಲ್ಲಿ ಹರಿಯುತ್ತಿರುವವು ಕೆರೆ, ಕಟ್ಟೆಗಳು ತುಂಬಿ ತುಳಕುತ್ತಿರುವವು ಭೂಮಿ ಯೆಲ್ಲಾ ಹಸರು ಹುಲ್ಲಿನಿಂದ ಮುಚ್ಚಿರುವದು ಈ ಮೂಲಕ ಪಶುಗಳು (ೋವುಗಳು) ಹೆಚ್ಚಾಗಿ ಹಾಲು ಕರೆಯುತ್ತಿರುವವು ಹೊಲ ಗದ್ದಗಳಲ್ಲಿ ರುವ ಪೈರು ಹಿಂದುಮಟ್ಟಿಕ್ಕೆ ಬಂದು ರೈತರಿಗೆ ತುಂಬಾ ಆನಂದವನ್ನುಂಟುಮಾಡುತ್ತಿರುವದು ಈ ಪ್ರಕಾರ ಎಲ್ಲಿ ನೋಡಿದರೂ ಸಂತೋಷದ ಸಾಗರದಲ್ಲಿ ಮುಳುಗಿದ್ದ ಜನರ ಮನಸ್ಸು ತೃಪ್ತ ಸ್ಥಿತಿದಲ್ಲಿರುವುದರಿಂದ ಈ ಕಾಲವು ದೇವತಾ ಪೂಜೆಗೆ ಅನುಕೂಲವೆಂದೂ ಕೆಲಸದ ಭಾರವು ಕಡಿಮೆಯಾಗಿರುವುದರಿಂದ ಪುರಾಣ, ಕೀರ್ತನೆ, ಭಜನಾದಿಗಳನ್ನು ನಡೆಯಿಸಲು ಯೋಗ್ಯವೆಂದೂ ತಿಳಿದೇ ಬಹುಕಾಲದಿಂದ ಈ ಶ್ರಾವಣಮಾಸವನ್ನು ಪುಣ್ಯಮಾಸವಾಗಿ ಕಾಣುತ್ತಿರುವರು ಹೀಗೆ ನಾನಾಮೂಲಕ ಸತ್ಯ-ಧರ್ಮ ವಚನಗಳನ್ನು ಶ್ರವಣ ಮಾಡುವ ಪದ್ಧತಿಯು ವಿಶೇಷವಾಗಿದ್ದುದರಿಂದಲೇ ಇದಕ್ಕೆ ಶ್ರವಣ ಅವವಾ ಶ್ರಾವಣಮಾಸವೆಂದು ಕರೆದಿರುವರು ಆದುದರಿಂದ ಪೂರ್ವಕಾಲ ದಿಂದ ನಡೆದುಬಂದ ಸಂಸ್ಕೃತಿಯನ್ನು ಆನ ಸರಿಸು ತ್ತಿರುವ ಭಾರತೀಯರೆಲ್ಲರೂ ಎಂದಿನಂತೆ ಭಗವಂತ ನನ್ನು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಪಂಚೋಪಚಾರ ಅಷ್ಟೋಪಚಾರ-ಷೋಡಶೋಪ ಚಾರ-ರಾಜೋಪಚಾರಗಳಿಂದಲೂ ರುದ್ರಾಧ್ಯಾಯ ದಿಂದಲೂ ಪೂಜಿಸಿ ನಾನಾ ಫಲವೃಷ್ಪಗಳನ್ನರ್ಪಿಸಿ ನೂರೆಂಟು ಇಲ್ಲವೆ ಸಾವಿರ ಸಂಖ್ಯೆಯಲ್ಲಿ ಆತನ ನಾಮಸ್ಮರಣೆ ಮಾಡುವದೂ ಪಂಚಕಜ್ಞಾನ್ನಗಳ ನೈವೇದ್ಯವನ್ನು ಸಮರ್ಪಿಸುವದೂ ಅವನ ಆನಂತ ಗುಣಾತಿಶಯಗಳನ್ನು ಕೀರ್ತನರೂಪದಲ್ಲಿ ಮಂಗಲ ಕರವಾದ ಗಾನದಿಂದ ಹಾಡಿ ಹರಸುವದೂ ಆತನ ಲೀಲಾಚರಿತ್ರೆಗಳಾದ ಕಥೆಗಳನ್ನು ಪುರಾಣರೂಪ ದಲ್ಲಿ ಕೇಳಿ ಸಂತೋಷ ಪಡುವದೂ ಗುರು-ಜಂಗ ಮರಿಗೆ ಅತಿಥಿ ಅಭ್ಯಾಗತರಿಗೆ ಬಡಬಗ್ಗರಿಗೆ ಅನ್ನ ವಸ್ತ್ರಾದಿ ದಾನಗಳನ್ನು ಮಾಡುವದೂ ಇವೆಲ್ಲ ಮಾನವನ ಸಂಸಾರಧರ್ಮವಾಗಿರುವವು ಈ ವ್ರತ ಗಳಿಂದಿನ ಸತ್ಯ-ಧರ್ಮಪಾಲನೆಯನ್ನೂ ಭಗ ವಂತನ ಪೂಜಾವ್ರತವನ್ನೂ ನಿತ್ಯದ ಕರ್ತವ್ಯ ವನ್ನಾಗಿಟ್ಟುಕೊಂಡು ಅನುಪಮವಾದ ಭಕ್ತಿಯಿಂದ ಸೇವಿಸಿದ ಮಾನ ಅವರಿಗೆ ಇಹಲೋಕದಲ್ಲಿ ಸುಖವೂ ಪರಲೋಕದಲ್ಲಿ ಮುಕ್ತಿಯೂ ದೊರಕುವುದರಲ್ಲಿ ಸಂದೇಹವಿಲ್ಲ ಆದ್ದರಿಂದ ಈಗ ಬರುತ್ತಿರುವ ಶ್ರಾವಣಮಾಸದಲ್ಲಿ ಸರ್ವರೂ ಅನನ್ಯಭಕ್ತಿಯಿಂದ ಭಗವಂತನ ಪೂಜಾಕಾರ್ಯವನ್ನು ಕೈಕೊಂಡು ಪ್ರತಿದಿನವೂ ಪುರಾಣಶ್ರವಣ ಮಾಡುತ್ತ, ಶಿವಭಜನೆ ನಡೆಸುತ್ತ ಕೀರ್ತನೆಗಳನ್ನು ಕೇಳುತ್ತ ಒಂದು ತಿಂಗಳ ಕಾಲವನ್ನು ಶಿವನ ಸೇವೆಯಲ್ಲಿ ಕಳೆದು ಆತನ ಕೃಪೆಗೆ ಪಾತ್ರರಾಗಲೆಂದು ಆಶಿಸುತ್ತೇನೆ.

ಗೋಕರ್ಣಕ್ಷೇತ್ರದ ಪೌರಾಣಿಕ ಕಥೆ

ಲೇಖಕರು —ಡಿ ವಿ ವೀರೇಗೌಡ ಅಲ್ಲೂರು

ಪುಣ್ಯಕ್ಷೇತ್ರಗಳಲ್ಲಿ ಎರಡುವಿಧ ಒಂದು ಸಿದ್ಧಿಕ್ಷೇತ್ರ ಎರಡನೆಯದು ಮುಕ್ತಿಕ್ಷೇತ್ರ ಶ್ರೀ ಕಾಶಿಯು ಮುಕ್ತಿ ಕ್ಷೇತ್ರವೆಂದೂ ಗೋಕರ್ಣವು ಸಿದ್ಧಿಕ್ಷೇತ್ರವೆಂದೂ ಪ್ರಸಿದ್ಧವಾಗಿದೆ ಗೋಕರ್ಣಕ್ಷೇತ್ರದಲ್ಲಿ ಮಹಾ ಮಹಾ ಮುಷಿಗಳೂ ಯೋಗಿಗಳೂ ತಪವನ್ನಾಚರಿಸಿ ಸಿದ್ಧಿಯನ್ನು ಪಡೆದರೆಂಬುದು ಲೋಕಪ್ರಸಿದ್ಧವಾಗಿದೆ ಆ ಪ್ರಕಾರ ವುಲಪ್ರಬ್ರಹ್ಮನ ಮೊಮ್ಮಗನೂ ಮಹಾತಿಗಳ್ಳನೂ, ಲಂಕಾಧಿಪತಿಯೂ ಆದ ರಾವಣಾಸುರನು ತನ್ನ ತಾಯಿ ಯಾದ ಕೈಕಸಿಯ ಮನೋಭೀಷ್ಟವನ್ನು ನೆರವೇರಿಸಲು ಕೈಲಾಸದಿಂದ ಪರಿವನೆ ಆತ್ಮಲಿಂಗವನ್ನು ತಂದು ಇಲ್ಲಿ ಸ್ಥಾಪಿಸಿದ್ದರಿಂದ ಭೂಕೈಲಾಸವೆಂದು ಪ್ರಸಿದ್ಧಿಗೊಂಡ ಗೋಕರ್ಣಕ್ಷೇತ್ರದ ಇತಿಹಾಸವು ಹೀಗಿರುವದು

ಒಂದು ದಿನ ರಾವಣೇಶ್ವರನ ತಾಯಿಯಾದ ಕೈಕಸಿಯು ಪದ್ಮತಿರ್ಥಸ್ನಾನ ಮಾಡಿ ತೀರ ದಲ್ಲಿ ಮರಳಿನಿಂದ ಲಿಂಗವನ್ನು ರಚಿಸಿ ಪೂಜಿಸುತ್ತಿರು ವಾಗ ಸಮುದ್ರವು ಉಕ್ಕಿ ಬಂದು ಆ ಲಿಂಗವನ್ನು ಕರಗಿ ಸಿಬಿಟ್ಟಿತು

ಹೀಗೆ ಪೂಜಾಮಧ್ಯದಲ್ಲಿ ತನ್ನ ಪೂಜೆಗೆ ಒದಗಿದ ವಿಘ್ನದಿಂದ ದುಃಖಿತಳಾಗಿ ಅಲ್ಲಿಯೇ ಪ್ರಾಯೋಪವೇಶ ಮಾಡುವದಾಗಿ ಕುಳಿತುಬಿಟ್ಟಳು ಈ ಸುದ್ದಿಯನ್ನು ಕೇಳಿದ ತೈಲೋಕ್ಯವಿಜಯಿಯಾದ ರಾವಣನು ತಾಯಿ ಬಳಿ ಬಂದು ಕಿಸಿನ್ನಕೈಲ್ಲಾ ದು ಖಪಡಬಾರದೆಂದು ಹೇಳಿ ಪೂಜೆಗಾಗಿ ಕೈಲಾಸದಿಂದ ಆತ್ಮಲಿಂಗ ವನ್ನೇ ತಂದುಕೊಡುವದಾಗಿ ಸಮಾಧಾನಪಡಿಸಿ ಕೈಲಾಸ ಪರ್ವತಕ್ಕೆ ಹೋಗಿ ಈಶ್ವರನನ್ನು ಕುರಿತು ಉಗ್ರ ತಪಸ್ಸು ಮಾಡಿದನು ರಾವಣನ ತಪಸ್ಸಿನಿಂದ ಸಂತುಷ್ಟ ನಾದ ಶಿವನು ಪಾರ್ವತೀಸಹಿತ ಪ್ರತ್ಯಕ್ಷನಾಗಿ ವರ ಬೇಕೆಂದು ಕೇಳಿದನು ಹೀಗೆ ಎದುರಿಗೆ ನಿಂತ ಪಾರ್ವತಿ ಪರಮೇಶ್ವರನನ್ನು ಕಣ್ಣುಬಿಟ್ಟು ನೋಡಿದ ರಾವಣಾ ಸುರನು ಲೋಕಮಾತೆಯಾದ ಪಾರ್ವತಿಯ ಅಲೌಕಿಕ ಸೌಂದರ್ಯದಿಂದ ಮೋಹಿತನಾಗಿ ತನಗೆ ಬೇಕಾದು ದೇನೆಂಬುದನ್ನು ಮರೆತು ಪಾರ್ವತಿಯನ್ನೇ ತನಗೆ ಕೊಡಬೇಕೆಂದು ಪ್ರಾರ್ಥಿಸಿದನು ಭಕ್ತವತ್ಸಲನಾದ ಶಂಕರನು ಅದರಂತೆಯೇ ಪಾರ್ವತಿಗೆ ರಾವಣನೊಡನೆ ಹೋಗಬೇಕೆಂದು ಹೇಳಬಿಟ್ಟನು ಹೀಗೆ ಪಾರ್ವತಿ ಯನ್ನು ಪಡೆದ ರಾವಣನು ಆ ಮಾತಿನಲ್ಲಿ ಹೆಗಲಿ ನಲ್ಲಿ ಹೊತ್ತು ಹಿಂತಿರುಗುತ್ತಿರುವಲ್ಲಿ ಎದುರಿಗೆ ಬಂದ ತ್ರಿಕಾಲಜ್ಞಾನಿಯಾದ ನಾರದ ಮಹಿಮು ನೋಡಿ ಲೋಕಮಾತೆಗೆ ಒದಗಿದ ಈ ದುಸ್ಥಿತಿಯನ್ನು ತಪ್ಪಿಸಿ ಮುಂದೆ ಲೋಕಕಲ್ಯಾಣವನ್ನು ಮಾಡಬೇಕೆಂದಾಲೋ ಚಿಸಿ ರಾವಣನನ್ನು ಕುರಿತು-ರಾವಣಾ ಇದೇನು ಘೋರ ಮಾಡುತ್ತಿರುವದು ಎಂದನು ಅದಕ್ಕೆ ರಾವಣನು ತಾನು ಶಿವನಿಂದ ಪಾರ್ವತಿಯನ್ನು ಪಡೆದು ಬಂದಿದ್ದೇ ನೆಂದು ತಿಳಿಸಲು, ನಾರದನು ನಕ್ಕು ಹುಚ್ಚಾ! ಅಶ್ವ ರೆನು ಪಾರ್ವತಿಯನ್ನು ಎಂದಾದರೂ ಕೊಡುವನೆ? ಛೀನು ಹೊತ್ತಿರುವದು ಪಾರ್ವತಿಯಲ್ಲ ಬೇರಾವರೆ ನೋಡು ಎಂದನು ಆಗ ರಾವಣನು ಪಾರ್ವತಿಯನ್ನು ಕೆಳಗಿಳಿಸಿ ನೋಡಲು, ನಾರದನ ಇಂಗಿತವನ್ನು ತಿಳಿದ ದೇವಿಯು ಮಹಾರುದ್ರ ಕಾಳಿಯಾಗಿ ಕಾಣಿಸಿದಳು ಇದನ್ನು ನೋಡಿದ ರಾವಣನು ಈಶ್ವರನು ತನ್ನನ್ನು ವಂಚಿಸಿದನೆ? ಪಾರ್ವತಿಯನ್ನು ಎಲ್ಲಿ ಬಚ್ಚಿಟ್ಟಿರುವನು ಹೇಳೆಂದು ನಾರದನನ್ನೇ ಕೇಳಿದನು ಆಗ ನಾರದನು ಪಾತಾಳಲೋಕದಲ್ಲಿ ತಾಮ ಕಂಡಿದ್ದ ಮಹಾಸುರನ ಮಗಳೆನಿಷಯವನ್ನು ಜ್ಞಾಪಿಸಿಕೊಂಡು, ಪಾರ್ವತಿಯು ಪಾತಾಳದಲ್ಲಿ ಮಯಾಸುರನೆಂಬ ದಾನವೆರಾಜನ ಬಳ ಇಡಲ್ಪಟ್ಟಿರುತ್ತಳೆಂದು ಹೇಳಿದನು ಆಗ ರಾವಣನು ಪಾತಾಳಕ್ಕೆ ಹೋಗಿ ಅಲ್ಲಿ ರಾಜಭವಭವದ ಬಳಿ ಉದ್ಯಾನ ದಲ್ಲಿ ವಿಹರಿಸುತ್ತಿದ್ದ ಮಹಾಸುರನ ಮಗಳಾದ ಮಂಡೋದರಿಯಮ್ಮ ಕಂಡು ಪಾರ್ವತಿಯೆಂಬೆ ಭ್ರಮಿಸಿ ಅವಳನ್ನು ತನಗೆ ಕೊಡಬೇಕೆಂದು ಮಯಾಸುರಪ್ಪನ್ನು ಕೇಳಿದನು. ಮಯಾಸುರನು ಉಕ್ಕನು ಕುಲಗೋತ್ರದ ಇಂಥ ವೀರನಿಗೆ ಮಗಳನ್ನು ಕೊಡಲು ಪೆಪ್ಪ ವಿವಾಹ ಮಾಡಿಕೊಟ್ಟನು. ರಾವಣನು ಮಂಡೋದರಿ ಸಹಿತ ಲಂಕಾಪುರಿಗೆ ಬಂದು, ತಾಯಿ ಪಾರ್ವತಿಯನ್ನು ತಂದು ಪಾಗಿ ತಾಯಿಗೆ ಹೇಳಲು ಅವಳು ಮುಮಿಕ್ಕ ಪುತ್ರನೇ! ಆತ್ಮಲಿಂಗವನ್ನು ತರುವದಾಗಿ ಹ ಜಗನ್ಮಾತೆಯನ್ನು ತಂದೆನೆನ್ನು ನೆಯಾ ಎಂದು ಕೋಪ ಕೊಳ್ಳಲು ಆಗ ಮಂಡೋದರಿಯು ತಾಯಿ ಪಾರ್ವ ತಿಯಲ್ಲವೆಂದೂ ನುಯಾಸುರನ ಮಗಳಾದ ಮಂಡೋದ ರಿಯೆಂದೂ ತಿಳಿಯಹೇಳಿದಳು ಇದನ್ನು ತಿಳಿದು ಪ ಕಾದ ರಾವಣನು ತಿರುಗಿ ಹೇಗಾದರೂ ಪ್ರಾಣಲಿ ವನ್ನು ತಂದೇತರುವುದಾಗಿ ತಾಯಿಯಲ್ಲಿ ಪ್ರತಿ ಮಾಡಿ ಹೊರಟು ಮತ್ತೆ ಘೋರ ತಪಸ್ಸನ್ನಾ ಚರಿಸಿ ಸಾಮಗಾನದಿಂದ ಶಿವನನ್ನು ಸ್ತೋತ್ರಮಾಡಿ ಶಿವನು ಮೆಚ್ಚಿಸಲು ಆಗ ಪ್ರತ್ಯಕ್ಷನಾದ ಶಿವನನ್ನು ತಾಯಿ.ಯ ಪೂಜೆಗಾಗಿ ಆತ್ಮಲಿಂಗವನ್ನು ಕೊಡಬೇಕೆಂ ಬೇಡಿದನು ಸ್ತೋತ್ರಪ್ರಿಯನಾದ ಶಿವನು ಭಕ್ತ ಇಚ್ಛೆಯಂತೆ ಆತ್ಮಲಿಂಗವನ್ನು ಕೊಟ್ಟು ಆದ ಎಲ್ಲಿಯೂ ಭೂ ಮಿ ಯ ಮೇ ಲೆ ಇಡಬಾರದೆಂದ ಹಾಗೆ ಇಟ್ಟರೆ ಅದು ಅಲ್ಲೆ ಸ್ಥಾಪನೆಯಾಗಿ ನ ಎತ್ತಲಾಗುವದಿಲ್ಲವೆಂದೂ ತಿಳಿಸಿ ಅಂತರ್ಧಾನನಾದ ರಾವಣನು ಆತ್ಮಲಿಂಗಸಹಿತ ಹಿಂದಿರುಗುತ್ತಿರು, ಎದುರಿಗೆ ಸಿಕ್ಕಿದ ನಾರದನು ಆತ್ಮಲಿಂಗವು ಕೈಲಾಸವ, ಬಿಟ್ಟು ಲಂಕೆಗೆ ಹೋಗುತ್ತಿರುವದನ್ನು ನೋಡಿ ಇ ಮೇಲೆ ಲೋಕಾಧಿಪರೆಲ್ಲಾ ಲಂಕಾಧೀಶನ ಅಧೀನವ ಬೇಕಾಗಿ ಬರುವುದಲ್ಲ ಎಂದು ತಿಳಿದು ಗಣಪತಿಯ ಹೋಗಿ ಗಣಾಧಿಪನಿಗೆ ಆತ್ಮಲಿಂಗವು ಕೈಲಾಸ ವಿಷಯವನ್ನು ತಿಳಿಸಿ ಅದನ್ನು ಹೇಗಾದರೂ ಲಂ ಮುಟ್ಟಿದಂತೆ ತಡೆಯಬೇಕೆಂದು ಹೇಳಿದನು ಅ ಮಾಡಬೇಕಾದ ಉಪಾಯವನ್ನು ಯೋಚಿಸಿದ ವಿ ರಾಜನು ಕೂಡಲೆ ಆಚಮನಿ ಪ್ರಕಾಶ ಬರುವ ದಾರಿಯಲ್ಲಿ ದರ್ಭೆ ಸಮಿತ್ತುಗಳಲ್ಲು ಆರಿಸ ಪಿಂಡನು ರಾವಣನು ಆ ದಾರಿಯಲ್ಲಿ ಬರುತ್ತ ಸೂರ ಮಯ ಸಮಯವಾದದನ್ನು ಕಂಡು, ಸಂಧ್ಯಾಕ ಗಳನ್ನು ಮಾಡಲು ಆತುರನಾಗಿ ಲೈಯಲ್ಲಿದ್ದ ಲಿಂಗವನ್ನು ಯಾರ ಕೈಯಲ್ಲಿ ಕೊಡಬೇಕೆಂದು ಆ ನೋಡಿ ಆಲ್ಲೆ ಓಡಾಡುತ್ತಿದ್ದ ವಟುವೇಷಧಾರಿ ಗಣ ಯನ್ನು ನೋಡಿ ಆತನನ್ನು ಕರೆದು ತಾಮ ಸಂ ವಂದನೆ ಮಾಡಿ ಬಾ.ವವರೆಗೂ ಸ್ವಲ್ಪಕಾಲ ಈ ಲಿ ವನ್ನು ಕೈಯಲ್ಲಿ ಹಿಡಿದುಕೊಂಡಿರಬೇಕೆಂದು ಕೊಂಡನು ಅದಕ್ಕೆ ಆ ವಟುವೇಷಿಗನೂ ಅವಸರ ಹೋಗಬೇಕಾಗಿರುವದರಿಂದ ಬಹಳ ಕಾಲ ಹಿಡಿದಿ ದಿಲ್ಲವೆಂದೂ ತಡವಾದರೆ ಮೂರು ಸಾರಿ ಕೂಗುವೆನೆಂ ಆಷ್ಟರಲ್ಲಿ ಬರದಿದ್ದರೆ ಲಿಂಗವನ್ನು ಕೆಳಗಿಟ್ಟು ಹೋಗ ನೆಂದೂ ಹೇಳಲು ಅದಕ್ಕೆ ಒಪ್ಪಿ ಲಿಂಗವನ್ನು ವಟು ಕೈಯಲ್ಲಿ ಕೊಟ್ಟು ಮುತ್ರವಿಸರ್ಜನೆಮಾಡಿರಲಿಕ್ಕೆ ಹೋದನು ರಾವಣನು ಕೈಕಾಲು ತೊಳೆಯುವವರೆ ವಟುವು ರಾವಣೇಶ್ವರಾ ಬಾ ಎಂದು ಒಂದುಬಾರಿ ಕೂ ಬಿಟ್ಟನು ರಾವಣನು ಆವಸರದಿಂದ ಹಸ್ತಪಾ ಗಳನ್ನು ಶುದ್ಧಿಮಾಡಿಕೊಂಡು ಸಂಧ್ಯಾ ವಂದನೆ ಪ್ರಾರಂಭ ಮಾಡಿದನು ಕೂಡಲೆ ಎರಡನೆಯ ಕೂಗಿದನು ಅಶ್ಚ ಸಮಸಾರಣೆಮಾಡುವ ವೇ ಮೂರನೆಯ ಸಲ ಕೂಗಿ ಆತ್ಮಲಿಂಗವನ್ನು ಭೂಮಿಯ ಮೇಲಿಟ್ಟುಬಿಟ್ಟನು ಸಂಧ್ಯಾವಂದನೆಯನ್ನು ಆಷ್ಟರಲ್ಲಿ ಬಿಟ್ಟು ಓಡಿಬಂದ ರಾವಣನು ಲಿಂಗವನ್ನು ಮೇಲೆತ್ತಲು ಪ್ರಯತ್ನಿಸಿದನು ಆದರೆ ಪಾತಾಳದ ವರೆಗೆ ವ್ಯಾಪಿಸಿ ಲಿಂಗಮೂರ್ತಿಯನ್ನು ಅಲ್ಲಾಡಿಸಲೂ ಆಗಲಿಲ್ಲ ಆಪ ಲಿಂಗವನ್ನು ಕೇಳುವ ರಾವಣನ ಪ್ರಥಮಪ್ರಯತ್ನವೆ ಲಿಂಗವನ್ನು ಅಚ್ಚಾದಿಸಿದ್ದ ಕರಡಿಯು ಮೇಲ್ಬಾಗದ ಅವನ ಕೈಗೆ ಐಂತು ಅದನ್ನು ಒಂದು ಕಡೆ ಬಿಸ ಡಿದನು ಅದು ಬಿದ್ದ ಸ್ಥಳವೇ ಗೋಕರ್ಣ ಕ್ಷೇತ್ರ ದಕ್ಷಿಣದಲ್ಲಿರುವ ಮುರುಡೇಶ್ವರ ಕ್ಷೇತ್ರ ಎರಡನೆ ಸ ಪ್ರಯತ್ನಿಸಿದಾಗ ಅದಕ್ಕೆ ಆಟ್ಟದ ಸೂತ್ರವು ತೆಳು ಐಂತು ಅದನ್ನು ಇನ್ನೊಂದು ಕಡೆ ಎಸೆದನು. ಅ ಬಿದ್ದ ಆಸ್ಥಳ ಭಾಗದಲ್ಲಿ ಧಾರೇಶ್ವರಕ್ಷೇತ್ರವಾಯಿತು ಮೂರನೆ ಬಾರಿ ಎಳೆದಾಗ ಲಿಂಗದ ಸುತ್ತಿರುವ ಸಣ್ಣ ಗೆಯು ಕಿತ್ತು ಐಂತು ಅದನ್ನು ಮತ್ತೊಂದು ಕಡೆ ಎಸೆದನು ಅದು ಬಿದ್ದ ಪ್ರದೇಶವೇ ಉತ್ತರದಲ್ಲಿರು ಶಾರೂರದ ಸಣ್ಣೇಶ್ವರಕ್ಷೇತ್ರ. ಪಾಲ್ಗಡಲೆಯ ಸಲ ಎ ದಾಗ ಕರಡಿಯ ತಲವು ಕಿತ್ತು ಐಂತು. ಅದನ್ನು ಮಗದೊಂದು ಕಡೆಗೆ ಎಸೆದನು. ಅದು ಬಿದ್ದ ಸ್ಥಳ

ಗೋಕರ್ಣಕ್ಷೇತ್ರ ಪೂರ್ವದಲ್ಲಿರುವ ಸಿದ್ಧೇಶ್ವರಕ್ಷೇತ್ರಕ್ಕೆ ಬರತಕ್ಕೆಯ ಬಾರಿ ಅವನ ಕೈಗೆ ಆತ್ಮಲಿಂಗಗಾನವೆ ಸಿಕ್ಕಲು ಅದಷ್ಟು ಮೇಲಕ್ಕೆತ್ತಲು ಎತ್ತು ಪ್ರಯತ್ನ ಪಟ್ಟರೂ ಆಗದೆ ಹಿಂದಕ್ಕೆ ಬಿದ್ದು ಮೂರ್ಛೆಗೊಂಡು ಎಳ್ಳರವಾದಾಗ " ಮಹಾಬಲೇಶ್ವರ " ಎಂದು ಕೂಗಿದ್ದರಿಂದ ಈಶ್ವರನಿಗೆ ಅದೇ ಹೆಸರೇ ಶಾಶ್ವತವಾಯಿತು ಹೀಗೆ ಕೂಡಾ ಪ್ರಾರ್ಥಿಸಿದ ರಾವಣೇಶ್ವರನಿಂದ ಪರಮೇಶ್ವರನು ಪ್ರತ್ಯಕ್ಷನಾಗಿ " ಎಲೈ ಭಕ್ತಾಗ್ರಣಿಯೇ ನಿನ್ನ ಆತ್ಮಲಿಂಗವನ್ನು ಭೂಮಿಗೆ ತಂದು, ದೇವತೆಗಳಿಗೂ ಅಸಾಧ್ಯವಾದ ಕಾರ್ಯವನ್ನು ನೀನು ಮಾಡಿರುವೆ ನಿನ್ನ ಆತ್ಮಲಿಂಗವು ಸ್ಥಾಪಿತವಾದ ಈ ಸ್ಥಾನವು " ಭೂಕೈಲಾಸವೆಂದು " ಪ್ರಖ್ಯಾತವಾಗಲಿ ಸಕಲ ದೇವತೆಗಳಿಂದ ಕೂಡಿ ಶಾರ್ವತೇಸಮೇತನಾಗಿ ನಾಮ ಸರ್ವದಾ ಇಲ್ಲಿ ವಾಸಿಸುವೆನು ನೀನು ಮೈಸಪಡದೆ ನಿನ್ನ ತಾಯಿಯನ್ನೇ ಇಲ್ಲಿಗೆ ಕರೆತಂದು ಪೆಸ್ಸನ್ನು ಆರಾಧಿಸಲಿಲ್ಲ ಹೇಳು " ಎಂದು ಅಂತರ್ಧಾನನಾದನು ಅದಂತೆ ಕೈಕಸಿಯು ರಾವಣೇಶ್ವರನೊಡನೆ ಭೂಕೈಲಾಸವಾದ ಗೋಕರ್ಣಕ್ಷೇತ್ರಕ್ಕೆ ಬಂದು ಆತ್ಮಲಿಂಗವನ್ನು ಪೂಜಿಸಿ ಧನ್ಯಳಾದಳು ಇದು ಈ ಕ್ಷೇತ್ರದ ಪೂರ್ವ ಕಥೆ

ವೀರಶೈವ ಜ್ಞಾನಮಂಡಲ ಉಪ್ಪಗಿ

ರಾಯಚೂರು ಜಿಲ್ಲಾ ಉಪ್ಪಗಿಯಲ್ಲಿ ಸ್ಥಾಪಿತವಾದ " ವೀರಶೈವ ಜ್ಞಾನಮಂಡಲ "ವು ಸ್ಥಾಯಿ ಸಮಿತಿಯನ್ನು ರಚಿಸುವುದರ ಸಲುವಾಗಿ ಧಾರವಾಡ ಜಿಲ್ಲಾ ದೋಣಿ ತಾಲೂಕ ವೀರೇಗಲ್ಲಿನ ಶರ್ಮಾಚಿತ್ರಆಯುರ್ವೇದ ದವಖಾಲಾದಲ್ಲಿ ತಾ॥ ೧೦-೮-೫೬ ರಿಂದ ತಾ॥ ೩೦-೮-೫೬ರ ವರೆಗೆ ಸಭೆಕರೆದಿರುವುದು ಸರಿಯಷ್ಟೇ ? ಈ ಸಮಯದಲ್ಲಿ ಚರ್ಚಿಸಿ ನಿರ್ಧರಿಸಲ್ಪಡುವ ವಿಷಯಗಳು ಹಲವಾರು ಇದ್ದರೂ ಮಠಾಧಿಕಾರಿಗಳ ಬೃಹತ್ ಅಧಿವೇಶನ ಹಾಗು ವೀರಶೈವ ಪ್ರಮಾಣ ಗ್ರಂಥನಿರ್ಮಾಣ ಕಾರ್ಯಗಳು ಪ್ರಾಮುಖ್ಯವಾಗಿರುವವು ಮಠ ಮಂದಿರಗಳ ಆಸ್ತಿಪಾಸ್ತಿಗಳೂ ಅಧಿಕಾರಗಳೂ ಕ್ಷೀಣದಿಶೆಯನ್ನು ಹೊಂದುತ್ತಿರುವ ಈ ಕಾಲದಲ್ಲಿ ಮಹಾಧಿಕಾರಿಗಳ ಬೃಹತ್ ಅಧಿವೇಶನವು ಅಗತ್ಯವಾದದ್ದು ಇದನ್ನು ಕೂಡಲೇ ಕಾರ್ಯಗತ ಮಾಡುವದು ಸಮಯೋಚಿತವಾಗಿರುವದು ಇನ್ನು ವೀರಶೈವ ಪ್ರಮಾಣ ಗ್ರಂಥದ ನಿರ್ಮಾಣ ಕಾರ್ಯವು ಸಾಮಾನ್ಯವಾದುದಲ್ಲ ವೇದಾಗಮ ಪುರಾಣೈತಿಹಾಸಗಳನ್ನೆ ಒಂದೊಂದು ರೀತಿಯಾಗಿ ಅಳೆಯುತ್ತಿರುವ ಈಕಾಲದಲ್ಲಿ ಹೊಸದಾಗಿ ನಿರ್ಮಿಸಲ್ಪಡುವ ಗ್ರಂಥಗಳು ಎಳ್ಳರಮಟ್ಟಿಗೆ ಮಾನ್ಯವಾಗುವ್ದೆಂದು ತಿಳಿಯಲಿಕ್ಕಾಗುವುದಿಲ್ಲ ಆದರೂ ಈ ಮಹತ್ಕಾರ್ಯವು ಸುಗಮವಾಗಿ ನೆರವೇರಬೇಕಾದರೆ ಅಖಿಲ ಕರ್ನಾಟಕದ ಸಂಸ್ಕೃತ ಭಾಷಾಪಂಡಿತರೂ ಸಂಸ್ಕೃತ ವೀರಶೈವ ತತ್ವವಿದ್ಯಾಪರಿಣತರೂ ಮತಧರ್ಮ ತತ್ವಪರಾಮರ್ಶಕರೂ ಆದ ಮಹಾವೈದ್ಯರು, ವಿಚಾರ ವಿಮರ್ಶಕಾತ್ಮಕ ಸಚಿಂತನವು ಅವಶ್ಯವಾಗಿ ಬೇಕಾಗಿರುತ್ತದೆ ಮತ್ತು ವೀರಶೈವ ಪ.ಪತತ್ವಪರಿಣಾ ವೇದಾರ್ಥವೆಳ್ಳ, ಕೈನೋಪನಿಷದ್ಭಾಷ್ಯ, ಈಷಾವಾಸ್ಯೋಪನಿಷದ್ಭಾಷ್ಯ, ನಾರಾಯಣೋಪನಿಷದ್ಭಾಷ್ಯ, ಮುಂಡಕೋಪನಿಷದ್ಭಾಷ್ಯ, ಸಿದ್ಧಾಂತಶಿಖಾಮಣಿಯುಲ್ಲುಕ್ತವಾದ ಶಿವಾದ್ವೈತ ಸಂಜಾತ, ಶ್ರೀಕರಭಾಷ್ಯ, ಶ್ರೀಕಂಠಭಾಷ್ಯ, ತತ್ವಪ್ರಕಾಶಿಕೆ, ಶಿವಾದ್ವೈತ ಪರಿಣಾಮ ಮೊದಲಾದವು ಗಳೂ ಮತ್ತು ಪ್ರಮಾಣ ಗ್ರಂಥಗಳಾದ ಅಮರಮೌಸೂತ್ರ, ಮಕುಟಾಗಮ, ಕಾರಣಾಗಮ, ಸೂಕ್ಷ್ಮಾಗಮ, ಚಂದ್ರ ಜ್ಞಾನಾಗಮ, ಸಿದ್ಧಾಂತಶಿಖಾಮಣಿ, ಲಿಂಗಧಾರಣ ಚಂದ್ರಿಕೆಯೇ ಮೊದಲಾದ ಗ್ರಂಥಗಳಲ್ಲಿರುವ ಸಿದ್ಧಾಂತಶಿಖಾಮಣಿಯ ಸರ್ವಸ್ವಕಾರಣಿ ಸಂಬಂಧಪಟ್ಟ ಅಜ್ಞಾನರಣ ಪೂಜಾಚಾರಗಳಿಗೆ ರೋಷಣಾರದೆಂಬ ಜಗಜ್ಜಿಹ್ವೆಯೆಂದು ಹೇಳುವ ಆಪ್ತೆಷ್ಟಿಗಳ ವೇದಾಂತಪದದೆಗೆ ಗಮನ ಹರಿಸದೆ ಕರ್ಮ-ಜ್ಞಾನ ಬೋಧಗಳಗಾದ ಮೇಲ್ಕಾಂಡ ಸಮಗ್ರ ಗ್ರಂಥಗಳ ವಿಷಯಗಳಿಗೆ ಲಕ್ಷ್ಯಕೊಡದೆಬೇಕೆಂದು ಹೇಳಬಯಸುತ್ತೇವೆ ಸಿದ್ಧಾಂತಶಿಖಾಮಣಿಯುಲ್ಲುಕ್ತವಾದ ಹರ್ಮ್ಯಲಾಚರಣೆಯನ್ನು ಸದ್ಯ ವೀರಶೈವಸಮಾಜದ ಮಠಾಧೀಶರು ಆಚರಿಸುತ್ತಲೂ ಆಚರಿಸುವಂತೆ ಪ್ರಚೋದಿಸುತ್ತಲೂ ಇರುತ್ತಾರೆ ಈ ಪ್ರಕಾರ ಆಚರಣೆಯಲ್ಲಿದ್ದೂ ಪ್ರತಿಯೊಬ್ಬ ವೀರಶೈವನಿಗೆ ಅಮರವಚನೇಯಧ್ಯಾಯ ತತ್ವಗಳನ್ನು ವೀರ ಶೈವ ಜ್ಞಾನಮಂಡಲವು ಪರಿಚಲಿಸಿ ಪ್ರಮಾಣ ಗ್ರಂಥವನ್ನು ರಚಿಸಬೇಕಾದುದು ಸೂಕ್ತವು ಇದಲ್ಲದೆ ವೀರ ಶೈವ ಸಮಾಜದ ಉನ್ನತಿಗಾಗಿ ಅಂದರೆ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆಯೂ ಸಮಾಜದಲ್ಲಿ ಅಂತಾಗಿರುವ ಭಿನ್ನತೆಯ ಅಜ್ಞಾನತೆಯನ್ನು ಹೋಗ ಲಾಡಿಸಿ ಸಮಾಜದ ಎಳ್ಳಕಿರಿಗೆ ತಕ್ಕ ಸಂಘಿ ಸಂಸ್ಥೆಗಳನ್ನು ಸ್ಥಾಪಿಸಿ ಪ್ರಚಾರಕ್ಕ ಎತ್ತಂದವಷ್ಟು ಧರ್ಮಿಸಿ ಅಖಿಲ ವೀರಶೈವ ಉದ್ಧಾರದಳಕ್ಕೆ ಗಮನವ ಹರಿಸಬೇಕಾಗಿಯೂ ಬಯಸುತ್ತೇನೆ

ಎಂ ರುದ್ರಯ್ಯಶಾಸ್ತ್ರೀ.
ಶಿವಾಗಮಪೇಟೆ, ಮೈಸೂರು

ಅನುಷ್ಠಾನಮಹೋತ್ಸವ, ಗದಗ



ಕಂದ ॥ ಮೆರೆಯುತಿಹ ಭಕ್ತಜನರಿಂ ।
ಪೂರಿತರೇ ನಾ ಪುಣ್ಯಾವಾಸ ಪಟ್ಟಣಕೇಂದ್ರಂ ॥
ಜಂಕುಷ್ಠ ಭೂಮಂತಲವಂ ।
ಧರಿಸಿಪ್ಪಣಾಚಾರ್ಯ ತತ್ವ ಮೋದನಮಂ ॥

ಮಹಾಪ್ರಭುರೇ, ಸಂಸಾರ ಕೂಪದಲ್ಲಿ ಬಿದ್ದು ಫರಲು ಶ್ರೀರುವ ಮಾನವರ ಉದ್ಧಾರಕ್ಕೋಸ್ಕರ ಶ್ರಾವಣಮಾಸ ದಲ್ಲಿರುವ ಧನುರ್ಮಾಸದಲ್ಲಿಯೂ ಧಗವದ್ಗುರ್ಕರ ಅಕೋಷ್ಠರಿಗಳ ಮೇರೆಗೆ ಮಹಾತ್ಮರಿಂದ ಅಲ್ಲಲ್ಲಿ ಪುರಾಣ ಪುಣ್ಯ ಕಥೆಗಳು ಶಾಸ್ತ್ರ ಪ್ರವಚನಗಳು ಅನುಷ್ಠಾನಗಳೇ ನೊದ ಲಾದ ಪುಣ್ಯಗಳು ಸುಗಮವಾಗಿ ಧರೆಯುತ್ತಿರುವಂತೆ ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಸ್ಥಾಪಕರೂ ಧರ್ಮಬೋಧ ತಿರೋಮಣಿ ಪಾಗೂ ಅಣಾಚಾರ್ತತ್ವ ಪ್ರಣತಕ ಪದವಿ ವಿಭೂಷಿತರೂ ವಿದ್ವತ್ಸಣಿಗಳೂ ಸಂಗೀತ ಪ್ರೇಮಿಯರೂ ಆದ ಶ್ರೀ ಪ, ಪ್ರಸ್ಮಿ ರೇವಣಸಿದ್ಧಶಿವಾಚಾರ್ಯ, ಪಟ್ಟದ ಮಹಾಸ್ವಾಮಿಗಳು ಗುರು ಸಂಸ್ಥಾನ ಬೃಹನ್ಮಠ ಚಿಕ್ಕಮಣ್ಣೂರು ಈ ಪೂಜ್ಯ ಶಿವಯೋಗಿಗಳವರ ಅಮೃತಪ್ರವ್ರತವು ಇದೇ ಶ್ರೀ ಶಕೆ ೧೮೭೮ ನೇ ಮೀರುಪಿಶಾಸು ಸಂವತ್ಸರ ಶ್ರಾವಣ ಮಗೆ ೧ ಸೋಗವಾರ ತಾ॥ ೩-೮-೧೯೫೬ ನೇ ದಿನವೆ ಗದಗ ಪಟ್ಟಣದಲ್ಲಿ ಶಟ್ಟಿಸಿರುವ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಶ್ರೀ ರುದ್ರಾಭಿಷೇಕ ಹಾಗೂ ಸಿದ್ಧಾಂತ ಶಿಖಾಮಣಿ ಪಾರಾಯಣಾಹೋಮಕ್ಕೆ ಸ್ವಾರಂಭವಾಗುವದು ಮತ್ತು ಆಗಾ ಶ್ರೀಗಳವರ ಸುಮೋಧಭರವಾದ ಶಿವಾಮೃತವೃಷ್ಟಿ ಸಕಲರಿಗೆ ತಿಳಿಯುವಂತೆ ಸಂಗೀತ ರಚಕ್ಕಿಯಿಂದ ಪೋಧಗೊಳ್ಳುವದು ಭಕ್ತಮಾತೇ ಶ್ವರರು ಆಗಮಿಸಿ ಪೂಜಾದಿಕಾರ್ಯಗಳಲ್ಲಿ ಭಾಗಿಗಳಾಗಿ ಅಭಿಷೇಕ ತೀರ್ಥಪ್ರಸಾದ ಸೇವಿಸಿ ಧನ್ಯರಾಗಬೇಕೆಂದು ಆಶಿಸುವ,

ವೈದಿಕಾಭಿಷೇಕ,
ರೇಣುಕಾಚಾರ್ಯಮಂದಿರ ಗದಗ.

ಕಾರ್ಯಕಾರಿಣೀಸಭಾ ಶ್ರೀಕ್ಷೇತ್ರ ಶಾಖೆ

ಶಾಖೀಯಂಗವು ವಾತೀಮರದ ಜ್ಞಾನ ಸಿಂಹಾಸನಾಧೀಶ್ವರರಾದ ಶ್ರೀ ೧೦೦೮ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ಪಡೆಯುತ್ತಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲ ದಲ್ಲಿ ದಿನಾಂಕ ೧೪-೭-೫೬ ನೆಯ ದಿನ ಶಾಖೀವೀರಶೈವ ವಿದ್ವತ್ಸಂಘದ ಕಾರ್ಯಕಾರಿಣೀ ಸಭೆಯನ್ನು ಪ್ರತಿವರ್ಷ ದಂತೆ ಜ್ಞಾನದಾನದಿರದ ಭವ್ಯ ಭವನದಲ್ಲಿ ಒಳ್ಳೆ ವಿಕ್ಕಾಂ ಭಣೆಯೊಂದಿ ಜರುಗಿಸಲಾಯಿತು

ಈ ಸಭೆಗೆ ಸಂಘದ ಅಧ್ಯಕ್ಷರಾದ ಶ್ರೀ ೧೦೦೮ ಜಗದ್ಗುರು ವಿಶ್ವೇಶ್ವರಶಿವಾಚಾರ್ಯ ಮಹಾಸ್ವಾಮಿ ಗಳವರು ಅಧ್ಯಕ್ಷತ್ವಾವನ್ನು ಸ್ವೀಕರಿಸಿದರು. ಶ್ರೀ ನೀಲಕಂಠಶರ್ಮಾ ಸಾವಳಗಿ ಹಿರೇಮಠ 'ಅವರು ಉಷಾ ಧ್ಯಕ್ಷರಾಗಿಯೂ, ಶ್ರೀ ಜ್ಞಾನಾಥಶರ್ಮಾ ಕೂಡಲ ಸಂಗಮ ಗ್ರಾ ಹೃಷ್ಟಪುಷ್ಟರವರು ಕಾರ್ಯದರ್ಶಿಗಳಾಗಿಯೂ, ಶ್ರೀ॥ ಜ॥ ಬ್ರ॥ ಸಿದ್ಧಲಿಂಗತಿವಾಚಾರ್ಯ ಸಂಸ್ಥಾನ ಮಠ ವಾಯಿಯವರು ಸಹಾಯಕ ಕಾರ್ಯದರ್ಶಿಗಳಾ ಗಿಯೂ, ಶ್ರೀ ಮಹಾಲಿಂಗಸ್ವಾಮೀ ತಿವಸೆಯವರು ಕೈ ಬರಹದ ವಿಜಯೀ ಕತ್ರಿಕೆಯ ಸಂಪಾದಕರಾಗಿಯೂ, ಶ್ರೀ ಗುರುಸಿದ್ಧದೇವರು ಇಳಕಲ್ ಹಿರೇಮಠ ಇವರು ಉಪಸಂಪಾದಕರಾಗಿಯೂ ಸರ್ವಾನುಮತದಿಂದ ನೇಮಕಮಾಡಲ್ಪಟ್ಟರು ಸಂಘದ ಕಾರ್ಯಕರ್ತರ ಆಯ್ಕೆ ಆದಪ್ಪಂತರ ಶ್ರೀಜಗದ್ಗುರು ಭಗವತ್ಪಾದರು ಉಪದೇಶಾಮೃತ ಸಮಾರೋಪಪ್ರಭಾಷಣ ಮಾಡಿದಮೇಲೆ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಶರ್ಮಾ ಸಾವಳಗಿಯವರು ಸರ್ವರ ಆಧಾರ ಮಿನ್ನಿಸಿದವಂತರ ಸಭೆಯು ಮುಕ್ತಾಯವಾಯಿತು

ಕಾರ್ಯದರ್ಶಿ
ನಾಗಭೂಷಶರ್ಮಾ

ಹನುಮಂತಯ್ಯನವರ ರಾಜೀನಾಮೆ ನೀಡಿಕೆಯುರಿತು ತೀರ್ಮಾನ

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಮೂವರ ಲೆಗಿರು ಭಾಗ ಮಂದಿ ಸದಸ್ಯರು ತಮ್ಮಲ್ಲಿ ಅವಿಶ್ವಾಸ ಸೂಚಿಸಿರುವುದರಿಂದ ಉದ್ಭವಿಸಿರುವ ಸ್ಥಿತಿಯ ಸಂಬಂಧ ದಲ್ಲಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಸಲ್ಲಿಸಿರುವ ರಾಜೀನಾಮೆಯ ಒಕ್ಕೆ ವಿಧಾನ ಕೈಗೊಳ್ಳುವ ಸ್ವಾತಂತ್ರ್ಯವನ್ನು ಮೈಸೂರು ವಿಧಾನ ಮಂಡಲದ ಕಾಂಗ್ರೆಸ್ ಪಕ್ಷಕ್ಕೇ ಬಿಡಲಾಗಿದೆ ಮತ್ತು ಹೊಸ ನಾಯಕರನ್ನಾರಿಸುವ ಬಗ್ಗೆಯೂ ಸ್ವಾತಂತ್ರ್ಯ ಕೊಡ ಲಾಗಿದೆ ಎಂದು ಕಾಂಗ್ರೆಸ್ ಹೈಕಮಾಂಡಿನ ಸಮಿತಿಯ ವಲಯಗಳಿಂದ ಖಚಿತವಾಗಿ ತಿಳಿದುಬಂದಿದೆ

ಕೇಂದ್ರಗೃಹಸಚಿವ ಪಂಡಿತ ಗೋವಿಂದವಲ್ಲಭಪಂತರು ನಿನ್ನೆಸಂಜೆ ಸಭೆ ಸೇರಿದ ಕೇಂದ್ರ ಕಾಂಗ್ರೆಸ್ ಪಾರ್ಲಿ ಮೆಂಟರಿ ಬೋರ್ಡು, ಮೈಸೂರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬೋರ್ಡಿಗೆ ಸಲ್ಲಿಸಿದ ರಾಜೀನಾಮೆ ಬಗ್ಗೆ ಮೈಸೂರು ವಿಧಾನ ಮಂಡಲದ ಕಾಂಗ್ರೆಸ್ ಪಕ್ಷವು ವಿಧಾನ ಕೈಕೊಂಡು ಇಳಕ ತಿಳ್ವಿಸಿದಾಗಿ ಹೊಸ ನಾಯಕರ ಆಯ್ಕೆ ಮಾಡಬೇಕೆಂದು ಸೂಚಿಸಲು ನಿರ್ಧರಿಸಿತು

ಕಾಂಗ್ರೆಸ್ಸಿಗರಲ್ಲಿ ಹಬ್ಬಿರುವ ವ್ಯಾಧಿಯ ಬಗ್ಗೆ ಮುಖ್ಯ ಮಂತ್ರಿಗಳ ಎಚ್ಚರಿಕೆ

ದೇಶಾದ್ಯಂತ ಕಾಂಗ್ರೆಸ್ ಸಂಸ್ಥೆಯೊಳಗೆ ಹಬ್ಬಿರುವ ಒಳಗುಂಪುಗಳ ಕಲಹ ಮತ್ತು ವೈಮನ್ಯಗಳು ಸಂಸ್ಥೆಯ ಬುಡಕ್ಕೆ ಹಾಕಿಯೊಡ್ಡುತ್ತಿರುವಂತೆ " ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೈಸೂರಿನಲ್ಲಿ ಶನಿವಾರ ಶ್ರೀಮನ್ಮಹಾರಾಜರವರ ವರ್ಧಂತಿ ಸಮಾರಂಭದಲ್ಲಿ ಪಾಡಿದರು

ಮೈಸೂರು ಸಂಸ್ಥಾನದಲ್ಲೇ ಅಲ್ಲದೆ ಇಂದೆ ಪ್ರಾಮುಖ್ಯ

ಗಳಲ್ಲೂ ಪರಿಸಿರುವ ಈ ವ್ಯವಧಿಯನ್ನು ನಿರ್ಮೂಲ ಗೊಳಿಸದಿದ್ದರೆ ಕಾಂಗ್ರೆಸ್ಸಿಗರೇ ಒಬ್ಬರಮೇಲೊಬ್ಬರು ಚುನಾವಣೆಯಲ್ಲೂ ಸ್ಪರ್ಧಿಸುವ ಸ್ಥಿತಿ ಬರಲಿದೆ ಎಂದು ಶ್ರೀಯುತರು ತಿಳಿಸಿದರು.

ಪತ್ರಿಕಾ ಪ್ರತಿನಿಧಿಗಳೊಂದಿಗೆ ಅನೌಪಚಾರಿಕವಾಗಿ ಅಂದು ಮಾತನಾಡುತ್ತಾ ಮುಖ್ಯ ಮಂತ್ರಿಗಳು ಕರ್ನಾಟಕದಲ್ಲಿ ಸುಮಾರು ೯ ಗುಂಪುಗಳು ಒಬ್ಬರನ್ನೊಬ್ಬರು ವಿರೋಧಿಸುತ್ತಿರುವ ಸ್ಥಿತಿ ಇದೆ ಎಂದು ತಿಳಿಸಿ, ನೂತನವಾಗಿ ಉದಯವಾಗುವ ಬೃಹತ್ ಕರ್ನಾಟಕ ರಾಜ್ಯದ ಭವಿಷ್ಯಕ್ಕೆ ಇದರಿಂದ ಒಳಿತಾಗದೆಂದು ನುಡಿದರು.

ನಾನಾಪ್ರಾಂತಗಳಲ್ಲಿ

ಮೈಸೂರೇ ಅಲ್ಲದೆ ಇತರ ಪ್ರಾಂತಗಳಲ್ಲೂ ಈ ಒಳ ಗುಂಪುಗಳ ಕಚ್ಚಾಟ ವಿಪರೀತವಾಗಿದೆ ಎಂದು ವಿವರಿಸಿ ಹೈದರಾಬಾದು, ತಿರುಕೊಚ್ಚಿ ಮತ್ತು ಉತ್ತರ ಪ್ರದೇಶದ ಉದಾಹರಣೆಗಳನ್ನಿತ್ತರು.

ಹೈದರಾಬಾದಿನಲ್ಲಿ ಕೋಮುವಾರು ವೈಷಮ್ಯಗಳು ಪ್ರಬಲಿಸಿ ಡಾಗಿ ಮೇಲ್ಕೋಟೆಯವರನ್ನು ಅಂತರ ಪ್ರಾಂತೀಯ ಸಮಿತಿಗೆ ಆರಿಸಿದ ತಕ್ಷಣ ವಿರೋಧ ತಾಂಡವಾಡಿತು ಎಂದು ನುಡಿದರು. ತಿರು-ಕೊಚ್ಚಿಯಲ್ಲಂತೂ ಅರುಮಂದಿ ಖಂಡಾಯಿವೆದ್ದ ಕಾಂಗ್ರೆಸ್ಸಿಗರು ಕಾಂಗ್ರೆಸ್ ಸರ್ಕಾರದ ಉಚ್ಚಾಟನೆಗೆ ಕಾರಣರಾದರು ಎಂದರು

ಉತ್ತರಪ್ರದೇಶದಲ್ಲಂತೂ ಒಳಕಲಹಗಳು ಹೆಚ್ಚಿ ಹೋಗಿ ಪ್ರಧಾನಿ ನೆಹರೂರವರು ಅಲಹಾಬಾದಿಗೆ ಭೇಟಿ ಇತ್ತಾಗ ಸಂಸ್ಥಾನದ ಸಭೆವರಾಗೂ ಹಾಜರಾಗದೆ ಇದ್ದಪ್ರಸಂಗ ಜರುಗಿತೆಂದೂ ಶ್ರೀ ಹನುಮಂತಯ್ಯನವರು ನುಡಿದರು.

ಶ್ರೀ ಥೇಬರರು ಆಖಿಲಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಚುನಾಯಿತರಾದ ನಿಧಾನವನ್ನು ಕುರಿತು ಶ್ರೀ ಹನುಮಂತಯ್ಯನವರು ಕೆಲವು ಟೀಕೆಗಳನ್ನು ಮಾಡಿದರು

ಆದೇಶ ತಲುಪಿಲ್ಲ

ಮೈಸೂರಿನ ಬಕ್ಕೆಟ್ಟಿನ ಬಗ್ಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಅದೇಶವು ತಮಗಿನ್ನೂ ತಲುಪಿಲ್ಲ ವೆಂದೂ, ಅದು ತಮಗೆ ಬಂದನಂತರ ತಮ್ಮ ರಾಜೀನಾಮೆ ಪತ್ರದ ಪೂರ್ಣ ಪಾಠವನ್ನು ಬಹಿರಂಗಪಡಿಸುವುದಾಗಿಯೂ ಅವರು ನುಡಿದರು

ಮೈಸೂರು ಕಾಂಗ್ರೆಸ್ಸಿನ ಒಳಜಗಳಗಳನ್ನು ಪರಿಹರಿಸಿ ಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಉತ್ತಮ ನಲ್ಲವೆ ? ಎಂಬ ಪ್ರಶ್ನೆಗೆ ಉತ್ತರವಿಯುತ್ತಾ ಹಾಗಾಗುವುದು ಒಳಿತೆಂದೂ, ಆದರೆ ತಮ್ಮಿಂದ ಮಾತ್ರವೇ ಆಗಲಿ, ಎ ಐ ಸಿ ಸಿ ಅಧ್ಯಕ್ಷರಿಂದ ಮಾತ್ರವೇ ಆಗಲಿ ಅದು ಸಾಧ್ಯವಾಗದೆಂದೂ ಈ ಸಮಸ್ಯೆಯನ್ನು ಪಕ್ಷ ದಲ್ಲಿನ ಸರ್ವರೂ ಯಃಕ್ಷಿಶ್ಚಿದೀಯರಾದುದೆಂದೂ ನುಡಿದರು

ಕಾಂಗ್ರೆಸ್ ಸಂಸ್ಥೆಯ ಏಕ್ಯತೆಗಾಗಿ ತಾವು ಸುಮಾರು ಅರೆಯಿಂ ತಿಂಗಳಿನಿಂದ ಪ್ರಯತ್ನ ಕಾಂಗ್ರೆಸ್ಸಿನೊಡನೆ ಸಹಕರಿಸಿದುದಾಗಿಯೂ ಇದರೂ ಈ ಧೋರಣೆಗೆ ಮನ್ನಣೆ ದೊರೆಯದಿದ್ದುದಕ್ಕಾಗಿ ವಿಷಾದಿಸುವುದಾಗಿಯೂ ನುಡಿದರು

ಸಿದ್ಧಾಂತ ಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ " ಸಿದ್ಧಾಂತಶಿಖಾಮಣಿ " ಎಂಬ ಗ್ರಂಥವು ಬಹು ಪೂಜಾನಮಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ರೇವಣೋಗಿತಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಿಭಾಷೆಯಲ್ಲಿದ್ದಿತು. ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುಮೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಚೋದಕವಾದ ಮನೋಹರ ಭಾವಚಿತ್ರಗಳು ಹೊಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಪರೋಪರಕಾರದ ವೇ|| ಬ್ಲಿ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ಕರಿಸಿ ಓದಿ ಧನ್ಯರಾಗಬೇಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ನೋತ್ರಸೂತ್ರಪಟ	(೬ನೆಯ ಆವೃತ್ತಿ)	—	೧ ಆಣೆ
ಸಚ್ಯಾಸಾಶ್ರಮವಿಮರ್ಶ	(೩ನೆಯ ಆವೃತ್ತಿ ಸಂಸ್ಕೃತ)	—	೧ ಆಣೆ
ಪಂಚವಿಂಶತಿ ಪ್ರಶ್ನೆಪ್ರಕಾಶ	(೫ನೆಯ ಆವೃತ್ತಿ)	—	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆ		—	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ	(೧೧ನೆಯ ಆವೃತ್ತಿ)	—	೨ ಆಣೆ
ಶ್ರೀರೇಣುಕಾಚಾರ್ಯಶತಕ	(೨ನೆಯ ಆವೃತ್ತಿ)	—	೨ ಆಣೆ
ಶ್ರೀರುದ್ರಮುನಿವಾಚಾರ್ಯಶತಕ		—	೨ ಆಣೆ
ಶಿವಶತ್ರಿವಿಲಾಸ		—	೨ ಆಣೆ
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ		—	೨ ಆಣೆ
ಬಿಲ್ವಮಾಹಾತ್ಮ್ಯ	(೩ನೆಯ ಆವೃತ್ತಿ)	—	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	(೧೦ನೆಯ ಆವೃತ್ತಿ)	—	೩ ಆಣೆ
ಅಸವಾದಿಪಿಜಶತ್ವದರ್ಪಣ	(೫ನೆಯ ಆವೃತ್ತಿ)	—	೩ ಆಣೆ
ಪಂಚಾಚಾರ್ಯಸ್ತವಪ್ರಕಾಶ		—	೩ ಆಣೆ
ಪಂಚಾಚಾರ ಪ್ರಕಾಶಿಕಾ		—	೩ ಆಣೆ
ಶ್ರೀಗುರುಶತ್ವೋಪದೇಗಳು	(೩ನೆಯ ಆವೃತ್ತಿ)	—	೩ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ		—	೪ ಆಣೆ
ವೀರಶೈವಾಚಾರವಿಧಿ	(೪ನೆಯ ಆವೃತ್ತಿ)	—	೪ ಆಣೆ
ಲಿಂಗಧಾರಣವಿಧಿ		—	೪ ಆಣೆ
ಗರ್ಭಾಧಾನವಿಧಿ		—	೪ ಆಣೆ
ವಿವಾಹವಿಧಿ	(೪ನೆಯ ಆವೃತ್ತಿ)	—	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ		—	೪ ಆಣೆ
ವೀರಶೈವ ಅಂತ್ಯೇಷ್ಟಿ-ಶ್ರಾದ್ಧವಿಧಿ		—	೪ ಆಣೆ
ವೈದಿಕವಾಜ್ಮಯರಹಸ್ಯ		—	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	(೩ನೆಯ ಆವೃತ್ತಿ)	—	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ		—	೪ ಆಣೆ
ವೈದೋಪನಿಷತ್ಸಂಗ್ರಹ	(ಸಂಸ್ಕೃತ) (೨ ನೆಯ ಆವೃತ್ತಿ)	—	೬ ಆಣೆ
ಸಚ್ಯಾಸಾಶ್ರಮವಿಮರ್ಶತತ್ವನಿರ್ಣಯ	(೩ನೆಯ ಆವೃತ್ತಿ)	—	೬ ಆಣೆ
ಸಿದ್ಧಾಂತ ಶಿಖಾಮಣಿ	(ಮೂಲಮಾತ್ರ ಚಕ್ರಸ್ಥೆಯ)	—	೮ ಆಣೆ
ಶಿವಾದ್ವೈತಕರಭಾಷಾ	(ಸಂಸ್ಕೃತ)	—	೮ ಆಣೆ
ವೀರಶೈವಮಹಾತ್ಮರು		—	೮ ಆಣೆ
ಜಸವಧ್ಯಾಂತರಿವಾರ	(೨ನೆಯ ಆವೃತ್ತಿ)	—	೮ ಆಣೆ
ಅಗಮಪರಿಜ್ಞಾನ		—	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು	(ತೆಲುಗು)	—	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ		—	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ	ನಕ್ಷತ್ರಮಾಲಿಕಾ	—	೮ ಆಣೆ
ಕನ್ನಡ ನ್ಯಾಯಶತಕಮ್		—	೮ ಆಣೆ
ಮಕುಟಾಗಮಃ		—	೮ ಆಣೆ
ಕಾರಣಾಗಮಃ		—	೧೨ ಆಣೆ
ಸೂಕ್ಷ್ಮಾಗಮಃ		—	೧೨ ಆಣೆ
ಚಂದ್ರಜ್ಞಾನಂ-ಗಮಃ		—	೧ ರೂ.
ಸಿದ್ಧಾಂತೆನಾರಾವಳಿ	(ಶ್ರೀಲೋಚನಶಿವಾಚಾರ್ಯಕೃತ)	—	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ		—	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ		—	೧ ರೂ.
ಮಾಹೇಶ್ವರ ದೀಕ್ಷಾವಿಧಿ	(೩ನೆಯ ಆವೃತ್ತಿ)	—	೧ ರೂ.
ಸಚಿತ್ರ ರೇಣುಕವಿಜಯ	(೩ ನೆಯ ಆವೃತ್ತಿ)	—	೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		—	೧ ರೂ.
ವೀರಮಾಹೇಶ್ವರಚಂದ್ರಿಕೆ		—	೧ ರೂ.
ವೈದಿಕಶಿವಪೂಜಾವಿಧಿ	(ವೈದಿಕಸ್ವರಯುಕ್ತವಾಮಮು ೩ನೆಯ ಆವೃತ್ತಿ)	—	೧೫ ರೂ.
ಶ್ರೀಶರಭಾಷ್ಯಂ	(೨ ನೆಯ ಆವೃತ್ತಿ)	—	೧೫ ರೂ.
ಶಿಷ್ಯರ ಮನೆಗಳಿಗೆ ರಜಿಸ್ಟರ್ ಬುಕ್		—	೧೫ ರೂ.
ರೇಣುಕವಿಜಯ ಮಹಾಪುರಾಣ	(ಕನ್ನಡ ಭಾಷಾಂತರವಿಲ್ಲ)	—	೨ ರೂ.
ವೀರಶೈವರತ್ನ	(೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು		೨ ರೂ.
ಸಿದ್ಧಾಂತಶಿಖಾಮಣಿ	(ಕನ್ನಡ ಟೀಕಾಸಹಿತ)	—	೨॥ ರೂ.
A brief life-sketch of Pandit Sri Kashinatha Shastriji	**(English)**		**4 As.**
The Philosophical Aspect of Virasaivism	**(English)**	...	**8As.**
Speeches by Pandit Shri Kashinatha Shastriji	**(English)**		**12 As.**
ಶಿವಶರಣರು	(ಇನ್ನು)	—	ರೂ. ೧-೮-೦
ಶಿವಶಿಷ್ಯಾಚಾರಿಕಾ	(ಲಂಕಾರ)	—	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore-

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರನರ್‌ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಪಾಗನೂರು ಬೃಹನ್ಮಹಾಧ್ಯಕ್ಷರಾದ ವೆಗಿ ಪಂಗಿ ಶ್ರೀ ಶಾಶೀಪ್ರಾಶಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಪಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ. ಪಿ ಖರ್ಚು ಸೇರಿ ೩ ರೂ.೧೦ ಆ.

ಸಂಪುಟ ೩೦] ಸೋಮವಾರ ತಾ॥ ೬ ನೇ ಆಗಸ್ಟ್ ೧೯೫೬ [ಸಂಚಿಕೆ ೧೨

ರೇಣುಕವಿಜಯಪುರಾಣಂ

(ಶ್ರಾವಣಮಾಸವು ಬಂದಿತು)

ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾಬೋಧಕವಾದೀಪುರಾಣವು ಕರ್ಣಾಟಕ ಭಾಷೆಯಲ್ಲಿ ಭಾಮಿನಿ ಪದ್ಯರೂಪವಾಗಿ ಈಗ ಎರಡನೇ ಆವೃತ್ತಿ ಮುದ್ರಿಸಲ್ಪಟ್ಟಿದೆ. ಈ ಪುರಾಣದಲ್ಲಿ ೨೦ ಸಂಧಿಗಳಿದ್ದು ಶ್ರೀರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಬಹುಮನೋಹರವಾಗಿ ನಿರ್ಣಿಸಲ್ಪಟ್ಟಿವೆ. ಈ ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಹಾಗು ಅಂದವಾದ ಬೈಂಡಿನಿಂದೊಡಗೂಡಿದೆ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳಾದ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ. ಸದ್ಯ ಶ್ರಾವಣಮಾಸವು ಸಮಾಪನಾಗಿದ್ದು ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪಠಿಸಿ, ಪೂಜಿಸಿ, ಜನತಾತ್ಮರಾಗಬೇಕೆಂದು ಕೋರಿಕೆ ಬೆಲೆ ರೂ. ೩-೦-೦

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪತ್ರವ್ಯವಹಾರ

[ಬಾಕ್ಸ್‌ದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಮಹಾಪೂಜಾ ಮತ್ತು ಪ್ರವಚನ, ಹಬ್ಬಿಳ್ಳಿ

ಸಿರುಗುಪ್ಪ ತಾಲೂಕ ಹಬ್ಬಿಳ್ಳಿ ಚರಂತಿಮಠದ ಶ್ರೀ ಕರಿವೃಷಭೇಂದ್ರಸ್ವಾಮಿಗಳು ಪ್ರತಿವರ್ಷ ಪದ್ಧತಿಯಂತೆ ತಮ್ಮ ಮಠದಲ್ಲಿ ಜರುಗುತ್ತಿರುವ ಈ ಮಹಾಕಾರ್ಯಕ್ಕೆ ಊರಿನ ಶ್ರೀ ಹಂಪಿಸಾವಿರದೇವರು ಎಮ್ಮಿಗನೂರು ಮಹಾಂತಿನಮಠದ ಶ್ರೀ ಷ॥ ಬ್ರ॥ "ಕವಿಕಲಾನಿಧಿ" ಶ್ರೀಗುರುಸಿದ್ಧಶಿವಾಚಾರ್ಯರನ್ನು ಬರಮಾಡಿಕೊಂಡಿರುವರು. ಶ್ರಾವಣ ಪ್ರತಿಪದದಿಂದ ಭಾದ್ರಪದ ಶು॥ ೧ ನರಿವಿಗೆ ಶ್ರೀಗುರುಸಿದ್ಧ ಉದಯ ೫ ಘಂಟೆಯಿಂದ ೭ ಘಂಟೆಯವರೆಗೆ ಶ್ರೀಗಳವರ ಶ್ರೀರುದ್ರಾಭಿಷೇಕ ಮಹಾಪೂಜಾ, ಸಾಯಂಕಾಲ ೫ ಘಂಟೆಯಿಂದ ೭ ಘಂಟೆಯವರೆಗೆ ಶ್ರೀಜಗದ್ಗುರು ರೇಣುಕವಿಜಯ ಪುರಾಣಪ್ರವಚನವನ್ನು ಶ್ರೀಗಳವರು ತಮ್ಮ ಅಮೃತ ವಾಣಿಯಿಂದ ಬಹು ಮನೋಹರವಾಗಿ ಆಶೀರ್ವಚನಗೊಡಿಸುವರು. ಈ ಮಹಾಕಾರ್ಯಕ್ರಮಕ್ಕೆ ಸರ್ವರೂ ಆಗಮಿಸಿ ಶ್ರೀರೇಣುಕೇತರ ಕೃಪಾಶೀರ್ವಾದಪಡೆಯ ಪಡೆದು ಧನ್ಯರಾಗಬೇಕೆಂದು ಕೋರುವ,

ಕಾರ್ಯದರ್ಶಿ, ಸಮಸ್ತಭಕ್ತಸಮಾಜಕ್ಕೆಯು
ಶ್ರೀಚರಿವೃಷಭೇಂದ್ರಸ್ವಾಮಿ

ಗೋಕರ್ಣ ಯಾತ್ರಾಕ್ರಮ ಮತ್ತು ಪೂಜಾ ವಿವರ

ಲೇಖಕರು—ಡಿ. ವಿ. ವೀರೇಗೌಡ, ಅಲ್ಲೂರು

ಇಲ್ಲಿ ಮುಖ್ಯವಾಗಿ ನೋಡತಕ್ಕ ಪ್ರದೇಶಗಳು ಅನಂತವಾಗಿದುವಲ್ಲ ಮೊದಲು ಯಾತ್ರಿಕರಿಗೆ ಸಿಕ್ಕತಕ್ಕ ದೇವಾಲಯ ಭದ್ರಕಾಳಿ, ಎರಡನೇ ದೇವಾಲಯ ನೇಕಟರಮಣ, ಮೂರನೇದು ಗಣೇಶದೇವಾಲಯ, ನಾಲ್ಕನೇ ಪ್ರದೇಶವೇ ಎರಡುಪ್ರಾಕಾರಗಳುಳ್ಳ ಆತ್ಮಲಿಂಗ ವಿರುವ ಮಹಾಬಲೇಶ್ವರದೇವಾಲಯ, ಮಹಾಬಲೇಶ್ವರ ದೇವಾಲಯದ ಬಲಭಾಗದಲ್ಲಿ ಒಂದನೇ ಪ್ರಾಕಾರದ ಪ್ರಥಿವುವೇ ಜಂಡೇಶ್ವರಲಿಂಗ, ಮಹಾಬಲೇಶ್ವರ ದೇವಾಲಯದ ಪಶ್ಚಿಮದ್ವಾರದಲ್ಲಿ ಹೊರಬಿದ್ದು ಬಲಗಡೆಗೆ ಹೋದರೆ ಅದಿಗೋಕರ್ಣವೆಂಬ ಶಿವಲಿಂಗದ ದೇವಾಲಯ, ಆದರ ಮುಂಭಾಗಕ್ಕೆ ಹೋದರೆ ಎದುರಿಗೆ ಕಾಣುವುದೇ ಯೋಗಾಲ, ಬಲಭಾಗಕ್ಕೆರುವುದೇ ಸಾಕ್ಷೇಶ್ವರ ಲಿಂಗವಿರುವ ದೇವಾಲಯ ಮುಂಭಾಗಕ್ಕೆ ಸಿಕ್ಕುವುದೇ ವೀರಭದ್ರನ ದೇವಾಲಯ, ಸಾರ್ವತಿಮಂದಿರ ಅಥವಾ ತಾಮ್ರಗೌರಿ, ಆದರ ಮುಂಭಾಗಕ್ಕೆರುವುದೇ ಅಸ್ತಿವಿಸರ್ಜನಾ ಕೊಳ, ಇವ್ಹಾದಮೇಲೆ ಸುಹಾಬಲೇಶ್ವರ ದೇವಾಲಯದ ಮುಂಭಾಗದ ರಸ್ತೆಯಲ್ಲಿ ಳಲ್ಲಾಂಗು ಹೋದರೆ ಎದುರಿಗೆ ಕಾಣುವುದೇ ಭೋಗೇಶ್ವರಿವೆ ಅವಜಸಮುದ್ರ, ಸಮುದ್ರವ ಬಲಭಾಗಕ್ಕೆರುವುದೇ ರಾಮತೀರ್ಥ ಲಕ್ಷ್ಮಣ ತೀರ್ಥ ಸೀತಾ ತೀರ್ಥ ಈ ಮೂರು ತೀರ್ಥಗಳು ಒಂದೇ ಕೊಳ್ಳೆ ಮೂರುಭಾಗದಿಂದ ಬೀಳುತ್ತವೆ ಅಲ್ಲಿಂದ ಒಂದು ಮೈಲಿ ಪ್ರದೇಶ ಗುಡ್ಡಮೇಲೆ ಹೋದರೆ ಮಮುದ್ರದ ಪಡದಲ್ಲಿ ಸಿಕ್ಕುವುದೇ ಶಟಾಮುಖತೀರ್ಥ, ಅದರ ಮೇಲ್ಭಾಗದಲ್ಲಿ ಸುಮಾರು ಒಂದು ಇಂಚು ಪಕ್ಕವಾಗಿ ಹರಿಯುವ ತೀರ್ಥನೇ ಕಪಿಧಾರೆ ಸಹಸ್ರಧಾರೆಂದು, ಇಲ್ಲಿ ಒಂದು ಶಿವಲಿಂಗಮಾತ್ರವಿದೆ. ಅಲ್ಲಿಂದ ಪೂರ್ವಭಾಗಕ್ಕೆ ನಾಲ್ಕು ಫರ್ಲಾಂಗು ದೂರದಲ್ಲಿರುವುದೇ ಗೋಗರ್ಭ, ಇವಿಷ್ಟು ಮುಖ್ಯವಾಗಿ ನೋಡತಕ್ಕ ಪ್ರದೇಶ. ಸಮುದ್ರದ ಎಡಭಾಗಕ್ಕೆ ಉತ್ತರದಲ್ಲಿ ಸುಡಾರು ಒಂದು ಮೈಲು ದೂರದಲ್ಲಿ ರುದ್ರಪಾದನೆಂಬ ದೇವಾಲಯವಿರುತ್ತೆ. ಸಾಮಾನ್ಯ ನೋಡಬೇಕೆಂಬ ಹಂಬಲವಿದ್ದವರು ಮಾತ್ರ ಅಲ್ಲಿಗೆ ಹೋಗುತ್ತಾರೆ ಶ್ರೀ ಮಹಾಬಲೇಶ್ವರ ನುಂದರ ದಲ್ಲಿ ಪ್ರತಿಫಿಸ್ಟವೂ ತ್ರಿಕಾಲವೇಳೆಯಲ್ಲಿ ಶಾಸ್ತ್ರೋಕ್ತ ನಾಗಿ ಪೂಜೆಯು ನಡೆಯುತ್ತಿದ್ದುದಲ್ಲದೆ ದಿನ ಒಂದಕ್ಕೆ ಸುಮಾರು ೪೦ರವತ್ತು ಸೇರು ಅಕ್ಕಿಯ ಅನ್ನ ವನ್ನು ಕ್ರಮ ದಂತೆ ನೈವೇದ್ಯರೂಪವಾಗಿ ಅರ್ಪಿಸುತ್ತಾರೆ.

ಪುಣ್ಯತಿಥಿಮಹೋತ್ಸವ, ಎಮ್ಮಿಗನೂರು

ಶ್ರೀಮದ್ವಿದ್ಯಾನಗರ ದಕ್ಷಿಣಕಾಶಿ ಹಂಪಿ ಸಾವಿರ ದೇವರು ಶ್ರೀಗುರು ಮುಮಾಂತಿಥಮಹೆದ ಪಟ್ಟಾಧ್ಯಕ್ಷ ಶ್ರೀ ಷ॥ ಬ್ರ॥ ಲಿಂಗೈಕ್ಯ ಶ್ರೀಮಹಾಂತಾಮ್ಯಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಯಮೂಲಕ ದಿನಾಂಕ ೩೮-೭-೫೬ ಶನಿವಾರ ಪ್ರಾತಃಕಾಲ ಶ್ರೀಗುರುಸಿದ್ಧಶಿವಾಚಾರ್ಯರ ನೇತೃತ್ವದಲ್ಲಿ ಶ್ರೀಮಹಾಂತಾಮ್ಯಶಿವಾಚಾರ್ಯರ ಗದ್ದುಗೆಗೆ ಶ್ರೀಮಠದ ವಿಜಂಟರಾದ ವೇ॥ ಬಸವರಾಜ ಶಾಸ್ತ್ರಿಗಳ ವೇರೋಹಿತ್ಯದಲ್ಲಿ ಕಂಪ್ಲಿ ಪಾಠಶಾಲಾ ವಿದ್ಯಾರ್ಥಿಗಳ ವೇದಪೋಷಪೂರ್ವಕವಾಗಿ ಪಂಚಾಭಿಷೇಕ ಪೂಜೆಯು ಜರುಗಿತು. ಈ ಪೂಜಾಕಾರ್ಯಕ್ಕೆ ಹಬ್ಬಿಳ್ಳಿ ಶ್ರೀಗಳವರು ಸಾಗಲಾಪುರದ ಶ್ರೀಗಳವರು ಕಂಪ್ಲಿ ಗಂಗಣ್ಣನವರು ಆಗಮಿಸಿದ್ದರು. ಶ್ರೀಗಳವರು ಗದ್ದುಗೆಯ ದರ್ಶನ ಪೂಜೆ ಮಂಗಲಮಾಡಿಕೊಂಡು ಮಠಕ್ಕೆ ಬಂದ ನಂತರ ಗಂಗಣ್ಣನವರು ತಮ್ಮ ಮಂಜುಳವಾಣಿಯಿಂದ ಭಕ್ತಿಯ ವಚನಗಳನ್ನು ಹೇಳಿದರು. ಬಳಿಕ ಶ್ರೀಗಳವರು ತಮ್ಮ ಅಮೃತವಾಣಿಯಿಂದ ನವಪಥ ಭಕ್ತಿ, ಎಂಬ ವಿಷಯದಮೇಲೆ ಅತ್ಯನೆಕೊಡಿಸಿ ಸರ್ವರಿಗೂ ತುಪ್ತಾತ್ಮನಾದನವನ್ನು ಮಾಡಿದರು.

ಗೂಗ್ಲು ವೆಕ್ಷಕ್ಷ, ಎಮ್ಮಿಗನೂರು

ಪ್ರಾಂತಪುನಿಶ್ಚಿಂಗಡಣಾ, ಮಸೂದೆಯ ಮೇಲೆ ಲೋಕಸಭೆಯಲ್ಲಿ ಚರ್ಚೆ ನಡೆದಾಗ, ಅಲ್ಲಿ ಭಾಗವಹಿಸಿದ್ದ ಬಹುಮಂದಿ ಸದಸ್ಯರು ವಿಶಾಲ ಸೇರಿದ ಬೃಹದ್ವಿಶಾಖ ಮುಂಬೈಪ್ರಾಂತ್ಯಕ್ಕೆ ಮರಾಠಿಯಾಗಬೇಕೆಂಬ ಸಲಹೆಗೆ ಜೋಲು ಕೊಟ್ಟು ಮುಂಬೈ ಪ್ರಶ್ನೆಗೆ ಇಷ್ಟೊಂದು ಸರಿಯಾದ ಮಾರ್ಗವೆಂದು ತೀರಿಸಿದರು.

ಪಂಚಾಚಾರ್ಯಪ್ರಭಾ

೧೯೫೬ ನೆಯ ಆಗಸ್ಟ್ ತಾ॥ ೬ ನೆಯ ಸೋಮವಾರ

ಲಿಂಗಧಾರಣವೂ-ಪೂಜಾಫಲವೂ

ಪ್ರಸಂಚದಲ್ಲಿರುವ ಪ್ರತಿಯೊಬ್ಬ ಮನುಷ್ಯನು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆಯಬೇಕು. ಈ ಪುರುಷಾರ್ಥಗಳನ್ನು ಕೊಡಲು ಶಿವನು ಅಧಿಕಾರಿಯಾಗಿದ್ದಾನೆ. ಆದ್ದರಿಂದ ಅವನ ಅನುಗ್ರಹವನ್ನು ಪಡೆಯಲು ವೇದದಲ್ಲಿ ಹೇಳಿದಂತೆ ಶಿವನ ಸ್ವರೂಪವಾದ ಲಿಂಗವನ್ನು ಗುರುವು ಶಿಷ್ಯನಿಗೆ ಅನುಗ್ರಹಿಸುವದು ಉಚಿತವಾಗಿರುವದು. ಇದಕ್ಕೆ ದೀಕ್ಷೆಯೆಂದು ಹೆಸರು

ಗುರುವು ದೀಕ್ಷಾಬದ್ಧನಾದ ಶಿಷ್ಯನನ್ನು ದರ್ಭೆಯ ಆಸನದಲ್ಲಿ ಕುಳ್ಳರಿಸಿ ಪ್ರಣವಾದಿಯಾದ ಹಂಸಗಾಯತ್ರೀ ಮಂತ್ರದಿಂದ ಪ್ರಾಯಶ್ಚಿತ್ತಹೋಮವನ್ನು ಮಾಡಿದ ನಂತರ, ಬ್ರಹ್ಮನನ್ನು ವಿಷ್ಣುವಿನಲ್ಲಿಯೂ, ವಿಷ್ಣುವನ್ನು ರುದ್ರನಲ್ಲಿಯೂ, ರುದ್ರನನ್ನು ಮಹೇಶ್ವರನಲ್ಲಿಯೂ, ಮಹೇಶ್ವರನನ್ನು ಶಿವನಲ್ಲಿ (ಲಿಂಗದಲ್ಲಿ) ಯೂ ಮುಳುಗುತ್ತಿರುವಂತೆ ಧ್ಯಾನಿಸಬೇಕು. ಈ ಪ್ರಕಾರ ಶಿವಕಳೆಯಿಂದ ಕೂಡಿದ ಲಿಂಗವನ್ನು ಶಿಷ್ಯನು ಶಿವ-ಅಗ್ನಿ-ಗುರುಗಳ ಸಾಕ್ಷಿಯಾಗಿ ಸ್ವೀಕರಿಸಿ ಗುರುಗಳು ಹೇಳುವ ನಿಯಮಗಳನ್ನು ಪಾಲಿಸಬೇಕು.

ಶಿವದೀಕ್ಷೆಯಾದವನು ಸ್ನಾನಹೋಗುವ ಕಷ್ಟ ಒದಗಿದರೂ ಲಿಂಗಪೂಜೆ ಮಾಡದ ಭೋಜನವಾದರೂ ಬಾರದು ಲಿಂಗಕ್ಕೆ ಅರ್ಪಿಸದ ಪದಾರ್ಥಗಳನ್ನು ಸೇವಿಸಬಾರದು ಪ್ರತಿದಿನವೂ ಒಂದು ಆಪವಾ ಎರಡು ಅಥವಾ ಮೂರು ಸಾರಿ ಲಿಂಗಪೂಜೆಯನ್ನು ಮಾಡಬೇಕು. ಈ ಇಷ್ಟಲಿಂಗವನ್ನು ಬೆಳ್ಳಿ-ಒಂಗಾರದ ಕರಡಿಗೆಯಲ್ಲಿ ಇಟ್ಟು ಸಬಾ ವಕ್ತಸ್ಥಳದಲ್ಲಿ ಧರಿಸಬೇಕು ಕ್ಷಣ ಮಾತ್ರವೂ ಲಿಂಗವನ್ನು ಆಗಲಿ ಇರಕೂಡದು

ಗುರುವಿನ ಹಸ್ತವು ಶಿವನ ತಿರಿಸ್ಸಿನ ಮೇಲೆ ಇಡಲ್ಪಟ್ಟು ಅತೀರ್ವಾದಪೂರ್ವಕ ಲಿಂಗವು ಶಿಷ್ಯನನ್ನು ಸೇರುವುದರಿಂದ ಇದಕ್ಕೆ ವೇಧಾದೀಕ್ಷೆಯೆಂದು ಅನ್ನುವರು ಗುರುವಿನಿಂದ ಶಿವ(ಪಂಚಾಕ್ಷರ)ಮಂತ್ರವು ಶಿಷ್ಯನ ಕಿವಿಯಲ್ಲಿ ಉಪದೇಶಿಸಲ್ಪಡುವುದರಿಂದ ಇದಕ್ಕೆ ಮಂತ್ರದೀಕ್ಷೆಯೆಂದು ಅನ್ನುವರು. ಗುರುವು ತನ್ನ ಕೈಯ್ಯಲ್ಲಿಟ್ಟು ಪೂಜಿಸಿದ ಲಿಂಗವನ್ನು ಶಿಷ್ಯನ ಕೈಯ್ಯಲ್ಲಿಡುವುದಕ್ಕೆ ಕ್ರಿಯಾದೀಕ್ಷೆಯೆಂದು ಅನ್ನುವರು ಈ ಮೂರು ತೆರನಾದ ದೀಕ್ಷೆಯಿಂದ, ಶಿಷ್ಯನಲ್ಲಿರುವ ಮೂರು ವಿಧದ ದೋಷಗಳು ನಾಶವಾಗಿ ಚಿತ್ತಶುದ್ಧಿಯುಂಟಾಗುವದು ಹಸುರು ಹುಲುವು ಭೃಮರವನ್ನು ಸರ್ವದಾ ಧ್ಯಾನಿಸುತ್ತ ಕಾಲಕ್ರಮದಲ್ಲಿ ಭೃಮರನೇ ತಾನಾಗುವಂತೆ ಲಿಂಗಧಾರಿಯಾದ ಮನುಷ್ಯನು ಶಿವನ ತದೇಕಧ್ಯಾನ-ಪೂಜಾದಿಗಳಿಂದ ಲಿಂಗಸ್ವರೂಪಿಯಾದ ಶಿವನೇ ತಾನಾಗುವನು. ಇದೇ ಲಿಂಗಾಂಗಸಾಮರಸ್ಯ ಅಥವಾ ಶಿವ ಜೀವೈಕ್ಯ ಇದುವೇ ವೀರಶೈವ ಮತದ ಅಂದರೆ ಲಿಂಗಧಾರಿಗಳ ಮುಖ್ಯ ಧ್ಯೇಯವಾಗಿರುವದು. ಇದನ್ನು ಎಲ್ಲ ವೀರಶೈವರೂ ಸಾಧಿಸಿ ಈ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ ಋಣಕ್ಕೆ ಪಾತ್ರರಾಗಬೇಕು

ಬ್ರಹ್ಮಶಬ್ದದಿಂದ ಲಿಂಗವು ತಿಳಿಸಲ್ಪಡುತ್ತಿದೆ. ಆ ಬ್ರಹ್ಮಕ್ಕೆ ಈಶ್ವರನು ಅಧಿಪತಿಯಾಗಿರುತ್ತಾನೆ. ಆದ್ದರಿಂದ ಲಿಂಗದ ಸಂಬಂಧವು ಶರೀರಶುದ್ಧಿಯಮ್ಮಂತು ಮಾಡುತ್ತದೆ. ಈ ಬಗ್ಗೆ ಲಿಂಗಪುರಾಣದ ಉತ್ತರ ಭಾಗ ಅಧ್ಯಾಯ ೨೧ರಲ್ಲಿ

ಧಾರಯಂತಿ ಸದಾಲಿಂಗಂ ಉತ್ತಮೋಂಗೇ ಪವಿತ್ರಕಃ।
ವೇದೇಷು ಶಾಸ್ತ್ರ ಶಂಸೇಷು ಪುರಾಣೇಷ್ವಾಗಮೇಷು ಚ ॥೧೬॥
ಪ್ರಾತ್ಯಹಾನ್ಯ ಸಮಾಖ್ಯಾತಂ ಲಿಂಗಧಾರಣಮುತ್ತಮಂ।
ಬ್ರಹ್ಮಣಃ ಲಿಂಗಮಾಖ್ಯಾತಂ ಬ್ರಹ್ಮಣಾ ಪರಿಕೀರ್ತ್ಯತೆ ॥೧೭॥

ಹೀಗೆಂದು ಲಿಂಗಧಾರಣೆಯ ಮಹತ್ವವು ವಿವರಿಸಲ್ಪಟ್ಟಿರುತ್ತದೆ.

ಗುರುವು ಶಿಷ್ಯನಿಗೆ ದೀಕ್ಷೆಯನ್ನು ಕೊಡುವಾಗ ಲಿಂಗವನ್ನು ಶಿಷ್ಯನ ಕೈಯ್ಯಲ್ಲಿಟ್ಟು ಯಾವ ಮಂತ್ರದಿಂದ ಶಿಷ್ಯನನ್ನು ಸ್ವೀಕರಿಸುತ್ತಾನೋ ಆ ಮಂತ್ರಕ್ಕೆ ಪಾಶುಪತ ಮಂತ್ರವೆಂದು ಹೆಸರು ಈ ಮಂತ್ರವು ಲಿಂಗಧರಿಸಿದವರನ್ನು ಪವಿತ್ರರನ್ನಾಗಿ ಮಾಡುವುದರಿಂದಲೂ ಶಿವನ ಸ್ವರೂಪವನ್ನು ತಿಳಿಸಿಕೊಡುವುದರಿಂದಲೂ ಇದಕ್ಕೆ ಪವಿತ್ರವೆಂದು ಹೆಸರು ಬಂದಿರುತ್ತದೆ ಆದುದರಿಂದ ಎಲ್ಲ ಕಾಲದಲ್ಲಿಯೂ ಲಿಂಗವನ್ನು ಧರಿಸಿಯೇ ಇರಬೇಕು "ಲಿಂಗಧಾರೀ ಸದಾ ಶುದ್ಧಃ" ಎಂಬ ಲಿಂಗ ಮಹಾಪುರಾಣೋಕ್ತಿಯಂತೆ ಲಿಂಗವನ್ನು ಧರಿಸಿದ ವೀರಶೈವರು ಯಾವಾಗಲೂ ಪರಿಶುದ್ಧರಾಗಿರುವುದರಿಂದಲೇ ವೀರಶೈವ ಮತವು ಪ್ರಸಂಚದಲ್ಲಿ ಶ್ರೇಷ್ಠವಾಗಿರುವುದು ಆದರೆ ಕಾಲಾನತಿಯಿಂದ ಈಗಿನ ನಾಗರಿಕರು ಈ ಬಗ್ಗೆ ಎಷ್ಟೋ ಆಕ್ಷೇಪಣೆಗಳನ್ನು ಕೂಗುತ್ತಾರೆ ಇದು ಅವರ ಭ್ರಾಂತಿಯೇ ಹೊರತು ಮತ್ತೇನೂ ಅಲ್ಲ

ವೇದವಿಹಿತವಾದ ಲಿಂಗಧಾರ ಬ್ರಾಹ್ಮಣನು ಶಾಸ್ತ್ರ ರೀತಿಯಾಗಿ ಶಿವಪೂಜಾಕರ್ಮನಿಷ್ಠನಾಗಿ ಜ್ಞಾನನಿಷ್ಠನು ಪಡೆಯಬೇಕು ಈ ಪ್ರಕಾರ ಕರ್ಮದ ಮೂಲಕ ಸಾಧಿಸಿದ ಜ್ಞಾನದ ಫಲವೇ ಮುಕ್ತಿಯಾಗಿರುವದು ಆದುದರಿಂದ ಲಿಂಗಧಾರಿಯು ಮೊದಲು ಕರ್ಮ ರೂಪವಾದ ಲಿಂಗಪೂಜೆಯನ್ನು ಬಲಿಸಬೇಕು ಲಿಂಗಕ್ಕೆ ಸ್ನಾನಮಾಡಿಸುವದು ಭಸ್ಮ ಧರಿಸುವದು ಶ್ರೀಗಂಧ ಅಷ್ಟಗಂಧಗಳನ್ನು ಲೇಪಿಸುವದು, ಮಂತ್ರಾಕ್ಷತೆ, ಪತ್ರ, ಪುಷ್ಪಗಳನ್ನು ಸಮರ್ಪಿಸ ವದು, ದೀಪವನ್ನು ಬೆಳಗುವದು, ಕರ್ಪೂರಾರತಿಯನ್ನು ಮಾಡುವದು, ಭಕ್ಷ್ಯಾದಿಗಳನ್ನು ನಿವೇದಿಸುವದು ತಾಂಬೂಲ ದಕ್ಷಿಣೆಗಳನ್ನು ಕೊಡುವದು ವಸ್ತ್ರವನ್ನು ಹೊದಿಸುವದು ಈ ಪ್ರಕಾರ ಅರ್ಚನೆ ಮಾಡುವ ಕಾರ್ಯವು ೧೨ ಬಗೆಯಾಗಿರುವದು ಪರಶಿವನನ್ನು ಲಿಂಗದಲ್ಲಿ ಧ್ಯಾನಮಾಡುವದು ಆರ್ಘ್ಯ ಪಾದ್ಯ ಆಚಮನಗಳಿಗಾಗಿ ಜಲವನ್ನು ಸಮರ್ಪಿಸು ವದು, ಮಜ್ಜನಕ್ಕಾಗಿ ಪಂಚಾಮೃತವನ್ನು ಅರ್ಪಿಸು ವದು ಹೂಮಾಲೆಯನ್ನು ಧರಿಸುವದು, ಸುವಾಸನ ಎಣ್ಣೆಯನ್ನು ಲೇಪಿಸುವದು, ವಸನೆ (ರುದ್ರಾಕ್ಷಸರ-ಸರ್ವಾಭರಣ)ಗಳನ್ನು ಧರಿಸಿ ಅಲಂಕರಿಸುವದು, ಭಕ್ಷ್ಯ-ಭಾಜಮರ ಬೀಸನೆಗೆ ಇತ್ಯಾದಿ ಉಪಚಾರಗಳನ್ನು ಸಮರ್ಪಿಸಿ ಕನ್ನಡಿ ಪಂಚೋನಾವ-ರಂಬಿಪ್ಪನಿ-ಗೀತಾ (ಹಾಡು ಗಾರಿಕೆ) ವೀಣಾದಿವಾದ್ಯಗಳನ್ನು ನುಡಿಸುವದು ಕಾಲ ಲಯಾನುಸಾರವಾಗಿ ತಾಂಡವಗಳೆಂಟು ನರ್ತನ ಸ್ರದ ಸ್ತೋತ್ರಮಾಡುವದು, ನಮಸ್ಕರಿಸುವದು, ಶಿವನ ಕಲ್ಯಾಣ ಗುಣಗಳನ್ನು ಸದ್ಗಗುರುವಿನ ಕೈಕರ್ಪನವಾಡುವದು, ಇನ್ನಾದರ್ಗಳನ್ನು ಬೇಡುವನು, ಅನಂತರ ಮೊದಲಿನಂತೆ ಕರಡಿಗೆಯಲ್ಲಿಟ್ಟು ಧಾರಣಮಾಡುವದು ಈ ಬಗೆಯಾದ ಉಚಾರಗಳು ಆಗಮ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುತ್ತವೆ

ಹೀಗೆ ಪೂಜೋಪಚಾರಗಳಿಂದ ಲಿಂಗಾರ್ಚನೆಯನ್ನು ಯಾರು ಭಕ್ತಿಯಿಂದ ಮಾಡುತ್ತಾರೋ ಅವರಿಗೆ ಲಭಿಸುವ ಪುಣ್ಯಫಲಗಳನ್ನು ವರ್ಣಿಸಲು ಬ್ರಹ್ಮನಿಗೂ ಕೂಡಾ ಸಾಧ್ಯವಾಗಲಾರದು. ಪ್ರಸಂಚದಲ್ಲಿರುವ ಎಲ್ಲ ಭಕ್ತರ ಅಭಿಗ್ರಹಕ್ಕಾಗಿಯೇ ಲಿಂಗಮಧ್ಯದಲ್ಲಿ ಮಹಾದೇವನು ಯಾವಾಗಲೂ ನೆಲೆಸಿರುವನೆಂದು ಲಿಂಗಪುರಾಣವು ಸಾರುತ್ತಿದೆ.

ಲಿಂಗಮಧ್ಯೇ ಮಹಾದೇವಃ ಸಾಕ್ಷಾನ್ನಿತ್ಯಂ ವ್ಯವಸ್ಥಿತಂ।
ಅನುಗ್ರಹಾಯಲೋಕಾನಾಂ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥೧೪॥
(೬ನೇ-ಪೂ.ಭಾ-ಅ-೨೦)

ಶಿಕ್ಷ ಮಾಡುವ ಲಿಂಗಪೂಜೆಯಿಂದ ಕೋಟಿ ಜನ್ಮದ ಪಾಪವು ನಾಶವಾಗಿ ಗರ್ಭವಾಸ ಜನ್ಮದ ಮುಖಗಳಿಂದ ಬಿಡುಗಡೆಯಾಗಿ ಶಿಕ್ಷಸುಖವನ್ನು ಪಡೆಯುವ ಶಕ್ತಿಯು ಲಭಿಸುತ್ತದೆ. ಲಿಂಗಪೂಜೆಮಾಡಿ ವಿಸರ್ಜಿಸಿದ ಹೂವು ಮುಂತಾದ ನಿರ್ಮಾಲ್ಯವನ್ನು ಸ್ವೀಕರಿಸುವುದರಿಂದ ಶೈಲಾಸವಾಸ ದೊರೆಯುವದೆಂದೂ ಪಾದೋದಕ ತೀರ್ಥಾದಿಗಳನ್ನು ಪಾನಮಾಡುವುದರಿಂದ ಶಂಕರ ಸಮೀಪವಾಸವನ್ನು ಸಿಗುವುದೆಂದೂ ಶಿವನಿಗಾಗಿ ಅರ್ಪಿಸಿದ ಫಲ-ಅನ್ನಾದಿಗಳನ್ನು ಸೇವಿಸುವುದರಿಂದ ಸದ್ಗತಿಯಾಗು ವದೆಂದೂ ಲಿಂಗಪುರಾಣದಲ್ಲಿ ಹೇಳಲ್ಪಟ್ಟಿರುತ್ತದೆ. ಹಾಗಲ್ಲದೆ ಪ್ರಸಾದದಲ್ಲಿ ಸಾಧಾರಣ ಪದಾರ್ಥಬುದ್ಧಿಯೂ ಗುರುವಿನಲ್ಲಿ ಸಾಮಾನ್ಯಮನುಷ್ಯಕಲ್ಪ ಭಾವನೆಯೂ, ಲಿಂಗದಲ್ಲಿ ಶಿಲೆಯೆಂಬ ಬುದ್ಧಿಯೂ ಯಾವಲ್ಲಿ ಇರುವು ದೋ ಅಂತಹ ಪಾಪಿಷ್ಠನಿಗೆ ಪ್ರಕ್ಷತ್ರಾ ಮೊದಲಾದ ದೋಷಗಳು ಲಭಿಸುವವು ಲಿಂಗಧಾರಿಗೇ ಅಂಥವನ ಹೆಸರನ್ನೂ ಕೂಡಾ ಉಚ್ಚರಿಸಲಾಗದಿರುವ ಶಾಸ್ತ್ರವು ಹೇಳುತ್ತದೆ ಈ ಪ್ರಕಾರ ಲಿಂಗಧಾರಣ ಪೂಜಾಫಲಗಳು ಲಿಂಗಮಹಾಪುರಾಣದಲ್ಲಿ ಉಕ್ತವಾಗಿರುವುದರಿಂದ ಲಿಂಗಧಾರಿಗಳಾದ ವೀರಶೈವರು ಸದಾ ಲಿಂಗದಿಂದ ದೂರಾಗದೆ ಯಥಾವಿಧಿಯಾಗಿ ಪೂಜಿಸಿ-ಸ್ಥಿತಿಸುಖಾಗಮಿಗಳಾಗಬೇಕು. ಲಿಂಗಪೂಜೆ ಪವಿತ್ರವಾದ ಶ್ರಾವಣಮಾಸದಲ್ಲಿ ಎಲ್ಲರೂ ವಿಶೇಷ ಪೂಜೋಪಚಾರಗಳಿಂದ ಶಿವನನ್ನು ಪೂಜಿಸಿ ಕೃತಾರ್ಥರಾಗಲೆಂದು ಬಯಸುತ್ತೇನೆ

ಶಕ್ತಿವಿಶಿಷ್ಟಾದ್ವೈತವೇ ವೀರಶೈವಸಿದ್ಧಾಂತ

ದ್ವೈತ ಅದ್ವೈತ, ವಿಶಿಷ್ಟಾದ್ವೈತ ಮತಗಳಂತೆ ಶಕ್ತಿ ವಿಶಿಷ್ಟಾದ್ವೈತ (ವೀರಶೈ) ಮತವು ವೈದಿಕಮತವಾಗಿದ್ದರೂ ಸಹ ಕೆಲಕಾಲದಿಂದೀಚೆಗೆ ಸಂಸ್ಕೃತವಿದ್ಯೆಯನ್ನು ಕಲಿಯದೆ ಇದ್ದ ವೀರಶೈವರನೇಕರು 'ಶಕ್ತಿವಿಶಿಷ್ಟಾದ್ವೈತ' ಎಂಬ ಪದದಲ್ಲಿ ಬಿದ್ದಿರುವ ಅದ್ವೈತ ಶಬ್ದವನ್ನು ನೋಡಿ ಅದ್ವೈತಸಿದ್ಧಾಂತದ ತಮ್ಮ ಸಿದ್ಧಾಂತ ವೆಂದು ತಿಳಿದು ದೇಶಭಾಷೆಯಲ್ಲಿರುವ ಅದ್ವೈತಕರವಾದ ಪಂಚದಶಿ, ವಿಚಾರಸಾಗರ, ವಾಸಿಷ್ಠ, ಜ್ಞಾನೇಶ್ವರಿ ಮೊದಲಾದ ಗ್ರಂಥಗಳನ್ನು ನೋಡುತ್ತ ಬಂದು ಮಾಯಾದ್ವೈತಸಿದ್ಧಾಂತವೇ ವೀರಶೈವಸಿದ್ಧಾಂತವೆಂದು ಭ್ರಮಿಸಿ ಪವಿತ್ರವೂ, ಸಕಲ ಕೃಶಿಸತ್ಯವೂ, ಸನಾತನವೂ ಆದ ತಮ್ಮ ಶಕ್ತಿವಿಶಿಷ್ಟಾದ್ವೈತ ತತ್ವವನ್ನು ಮರೆತು ಹೆಸರಿಗೆ ಮಾತ್ರ ಲಿಂಗಧಾರಿಗಳಾಗಿ ಬಂದಿರುವರು ಸಂಸ್ಕೃತವಿದ್ದಿದ್ದ ಅದ್ವೈತಮತಗ್ರಂಥಗಳ ಕನ್ನಡದಲ್ಲಿ ಪರಿವರ್ತನೆಯಾದಂತೆ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತ ಗ್ರಂಥಗಳು ಕನ್ನಡದಲ್ಲಿ ಪರಿವರ್ತನೆಯಾಗದಿರುವುದೇ ಇದಕ್ಕೆ ಕಾರಣವಾಗಿರುವುದು ಹೀಗಾಗಿ ಕನ್ನಡನಾಡಿನಲ್ಲಿ ಅದ್ವೈತಗ್ರಂಥಗಳೇ ಎಲ್ಲರ ಕೈಯಲ್ಲಿ ಬಂದುವು. ಕೆಲವರಂತೂ ಸಿಜಗುರುಗಳ ಅರ್ಥ ಪುಸ್ತಕಗಳನ್ನು ಒಸಿ ಇವೇ ಹಟ್ಟರಶಾಸ್ತ್ರಗಳೆಂದು ಭ್ರಮಿಸಿ ಇದೆಲ್ಲಾ ವೀರಶೈವ ತತ್ವನೆಂದೇ ತಿಳಿಯುತ್ತ ನಿಜವಾದ ಸ್ವಮತಜ್ಞಾನದಿಂದ ದೂರಾಗುತ್ತಿರುವರು ಮೇಲ್ನುಂಡ ಕನ್ನಡ ವಿಚಾರಸಾಗರದ ಗ್ರಂಥಗಳೇ ಇವರಿಗೆ ಆಧಾರ ಗ್ರಂಥಗಳಾಗಿವೆ ಈ ಮತದಲ್ಲಿ ಅಲ್ಪಸ್ವಲ್ಪ ತಿಳಿದವ ವಿದ್ವಾಂಸ ಅವರೂ ಸಹ ವೀರಶೈವರಿಗೆ ಲಿಂಗಧಾರಣ-ಲಿಂಗ ಪೂಜೆಗಳು ಮಾತ್ರ ವೇರೆಯೇ ಹೊರತು ಮಿಕ್ಕವುಗಳೆಲ್ಲ ಅದ್ವೈತಾನುಭವದೇ ಎಂದು ಅಭಿಪ್ರಾಯವ್ಯಕ್ತಪಡಿಸುವದು. ಹೀಗೆ ನಾನಾಮೂಲಕ ವೀರಶೈವನುತತ್ವ ನಿಜವಾದ ತತ್ವಗಳು ಕಣ್ಮರೆಯಾಗಿ ಕೃತಕ ತತ್ವಗಳು ರೂಢಿಯಲ್ಲಿ ಬಂದಿವೆ

ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತಕ್ಕೂ ಅದ್ವೈತ ಮತಕ್ಕೂ ಏನೂ ಸಂಬಂಧವಿಲ್ಲ ಶಕ್ತಿವಿಶಿಷ್ಟಾದ್ವೈತ ಮತಕ್ಕೆ ಶ್ರೀರೇಣುಕಾದಿ ಪಂಚಾಚಾರ್ಯರು ಕರ್ತೃಗಳಾಗಿದ್ದಾರೆ. ಅದ್ವೈತಮತಕ್ಕೆ ಶಂಕರಾಚಾರ್ಯರು ಕರ್ತೃಗಳಾಗಿದ್ದಾರೆ. ರೇಣುಕಾದ್ಯಾಚಾರ್ಯರು ಜ್ಞಾನನಿಷ್ಠರ್ಕ ಸಮುಚ್ಚಯದಿಂದ ಮುಕ್ತಿಯೆಂದು ಹೇಳಿದರೆ ಶಂಕರಾಚಾರ್ಯರು ಜ್ಞಾನನಿಷ್ಠೆಯಿಂದಲೇ ಮುಕ್ತಿಯೆಂದು ಹೇಳುತ್ತಾರೆ. ಪಂಚಾಚಾರ್ಯರು ಜಗತ್ತು ಸತ್ಯವೆಂದರೆ ಶಂಕರಾಚಾರ್ಯರು ಜಗತ್ತು ಮಿಥ್ಯವೆನ್ನುತ್ತಾರೆ. ಪಂಚಾಚಾರ್ಯರು ಬ್ರಹ್ಮವು ಸರ್ವಜ್ಞತ್ವಾದಿ ಕಲ್ಯಾಣಗುಣವಿಶಿಷ್ಟ ವೆಂದರೆ ಶಂಕರಾಚಾರ್ಯರು ನಿರ್ವಿಶೇಷವೆಂದು ಹೇಳುತ್ತಾರೆ. ಪಂಚಾಚಾರ್ಯರು ಕ್ರಿತಿಗಳಲ್ಲಿ ಹೇಳಿದ ಭೇದ-ಅಭೇದಗಳೆರಡೂ ಪಾರಮಾರ್ಥಿಕವೆಂದರೆ ಶಂಕರಾಚಾರ್ಯರು ಅಭೇದವೊಂದೇ ಪಾರಮಾರ್ಥಿಕವೆಷ್ಟುವರು ಪಂಚಾಚಾರ್ಯರು ಶಿವಯೋಗದಿಂದ ಮುಕ್ತಿಯೆಂದರೆ ಶಂಕರಾಚಾರ್ಯರು ವಿಚಾರದಿಂದಲೇ ಮುಕ್ತಿಯೆಷ್ಟುವರು, ರೇಣುಕಾದ್ಯಾಚಾರ್ಯರು ಮಹೇಶ್ವರರೊಬ್ಬ ನಿನ್ನೇ ಪಾತ್ರವೃಷ್ಟರೆಂದರೆ ಅರ್ಚಸಬೇಕೆಂದು ವಿಧಿಸಿದರೆ ಶಂಕರಾಚಾರ್ಯರು ಅವಿಶ್ವಾದಿ ಪಂಚದೇವತೆಗಳ ಪೂಜೆಯನ್ನು ವಿಧಿಸಿರುವರು. ಪಂಚಾಚಾರ್ಯರು ಶಕ್ತಿಯು ಪ್ರಜ್ಞಾರೂಪವಾಗಿದ್ದರೂ ಮುಕ್ತಿದೆಶೆಯಲ್ಲಿ ಸ್ವರೂಪಶಕ್ತಿಯಾಗಿದೆ ಶಿವನಿಗೆ ಸಮಾನವಾಗಿದೆ ಶಿವನ ಮೂಲಭೂತವಾದ ಶಿವಶಕ್ತಿಯಲ್ಲಿ ಲೀನವಾಗುತ್ತಿದೆಯೆಂದು ಹೇಳಿದರೆ ಶಂಕರಾಚಾರ್ಯರು ಬ್ರಹ್ಮಸ್ವರೂಪದಿಂದ ಅವಿದ್ಯೆಯು

ಸ್ವರೂಪಕಃ ಪಶ್ಯತೇ ಆಗುತ್ತದೆಂದು ಹೇಳುತ್ತಾರೆ. ಪಂಚಾಚಾರ್ಯರು ಜಗತ್ತು, ಬ್ರಹ್ಮದ ಪರಿಣಾಮವೆಂದರೆ ಶಂಕರಾಚಾರ್ಯರು ವಿವರ್ತವೆನ್ನುವರು ರೇಣುಕಾ ವ್ಯಾಚಾರ್ಯರು ಚಿತ್ಪ್ರತಿಬಾಸದಿಂದ ಶಿವಶ್ಚೈತ್ಯಾಪ್ತಿ ಯೆಂದು ಹೇಳಿದರೆ ಶಂಕರಾಚಾರ್ಯರು ಚಿತ್ತಾಪ್ತಿಗಳು ಸಾತವಾ ಪರಮಾನಂದಪ್ರಾಪ್ತಿಯೇ ಮುಕ್ತಿಯೆಂದು ಹೇಳುವರು ಹೀಗೆ ಎಲ್ಲಾ ವಿಷಯಗಳಲ್ಲಿಯೂ ವೈಲ ತ್ಯವೇ ಕಂಡುಬರುತ್ತಿರುವಾಗ ಆಪಕ್ಷಿಲ್ಲ ಪರ್ಯಾ ಲೋಚನೆಯಿಲ್ಲದೆ ಅಲ್ಲಲ್ಲಿ ಹೇಳಲ್ಪಟ್ಟ ಕೆಲವು ಅಪ್ರಯತ್ನಕರ ಗಳಾದ ವಾಕ್ಯಗಳನ್ನು ಕೇಳಿ ವೀರಶೈವಮತವನ್ನು ಅಪ್ರಯತ್ನವಿದ್ವಾಂಸರಲ್ಲಿ ಅಂತರ್ಧಾನಮಾಡಿದರೆ ಪಂಚಾ ಚಾರ್ಯಧರ್ಮವನ್ನಾದರೂ ಹೇಳಲ್ಪಟ್ಟ ಮುಕ್ತಿಸಾಧನ ಗಳಾದ ಪಂಚಾಚಾರಗಳೂ-ಅವ್ಯಾವರಣಗಳೂ ಮಹೇ ಶಾದಿ ಪಟ್ಟಶೈಲಾರಗೆಗಳೂ ಲಿಂಗಧಾರಣ ಮಹಾ ವ್ರತವೂ ಇತ್ಯಾದಿಗಳಿಲ್ಲಾ ಅರ್ಥವಿಲ್ಲದಂತಾಗುವದು. ಅದುದರಿಂದಲೇ -ಅಪ್ಪಯ್ಯಾಡಿಂಬದಲ್ಲಿ ಅಲೆಯುವ ವೀರಶೈವಮಹಾನ್ಗಿಯರ ಉಪಯೋಗಕ್ಕಾಗಿ ಸಂಸ್ಕೃತ ಭಾಷೆಯಲ್ಲಿದ್ದ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಸಿದ್ಧಾಂ ತವು ಅನ್ನ ಡಭಾಷೆಯಲ್ಲಿ ಟೀಕಾಸಹಿತ ಪ್ರಕಾಶವಾಗಿ "ಶಿವಾದ್ವೈತಮಂಜರಿ" ಎಂಬ ನಾಮದಿಂದ ಕಾಶೀನಾಥ ಗ್ರಂಥಮಾಲೆಯಲ್ಲಿ ಪರಿಶೋಧಿಸುತ್ತಿರುವದು ಇದರಂತೆ ಕಾಶೀಶಾಥಗ್ರಂಥಮಾಲೆಯಲ್ಲಿ ಶ್ರೀಕರಭಾಷ್ಯದ ಚತು ಸ್ಸೂತ್ರಗಳೂ ಅನ್ನ ಡದಲ್ಲಿ ಪ್ರಕಾಶವಾಗಿರುವವು ಹೀಗೆ ಒಂದೊಂದಾಗಿ ಶಕ್ತಿವಿಶಿಷ್ಟಾದ್ವೈತ (ವೀರಶೈವ)ಸಿದ್ಧಾಂ ತದ ತತ್ವಗಳು ಅನ್ನ ಡದಲ್ಲಿ ಪ್ರಕಾಶವಾಗಿ ಬರುತ್ತಿರು ವುದು ಅನ್ಯಮತಿಗಳಿಗೆ ಸಹನೆಯಾಗದೆ ಹೋಯಿತು ಇತ್ತೀಚೆಗಂತೂ ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವರ ಪರವಾದ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ವೇದಾಂತ ಅಧ್ಯಾಸ ಶಾಸ್ತ್ರವಾಗಿ ಮಂಜೂರಾಗಿರುವುದನ್ನು ನೋಡಿ ತಾಳಲಾರದೆ ಬಹಿರಂಗವಾಗಿ ಅದನ್ನು ಪ್ರತಿಭಟಿಸುವ ಶಕ್ತಿ ಸಾಲದೆ ಬೇರೆಯವರ ಮುಖಾಂತರ ಶ್ರೀಕರಭಾಷ್ಯ ಶಿವಾದ್ವೈತಮಂಜರಿ, ಗ್ರಂಥಗಳಮೇಲೆ ಟೀಕೆಯನ್ನು ಮಾಡಿಸಹಕ್ತಿದ್ದಾರೆಂದು ತಿಳಿದುಬರುತ್ತದೆ ಅದ್ದರಿಂದ ವೀರಶೈವಮತೀಯರು ಇಂಥ ಅಪದ್ಧ ಹಾಗು ವೀರಶೈವ ಕ್ಕುವಿರೋಧವಾದ ಟೀಕೆಗಳಿಗೆ ಮನಗೊಡದೆ ಯಥಾ ಯೋಗ್ಯವಾದ ತತ್ವದಿಂದೊಡಗೂಡಿದ ಶಕ್ತಿವಿಶಿಷ್ಟಾ ದ್ವೈತ ಸಿದ್ಧಾಂತವನ್ನೇ ಪ್ರಥಾವನಾಪ್ಟುಕೊಂಡು ಆ ಶ್ರಕಾರ ಹರ-ಗುರುಭಕ್ತಿಪರಾಯಣರಾಗಿ ಲಿಂಗಪೂಜಾ ನಿಷ್ಠರಾಗಿ ಕೈವಲ್ಯಪದವಿಯನ್ನು ಪಡೆಯಲೆಂದು ಬೇಡು ಕ್ಕೇನೆ.

ಎಂ. ವಿಶ್ವೇಶ್ವರಶಾಸ್ತ್ರಿ, ಅರಾಧ್ಯಮರ

ವರ್ತಮಾನಸಂಗ್ರಹ

ಚನ್ನಪ್ಪನವಾಲಿ ಮತ್ತೆ ಕಾಂಗ್ರೆಸ್ಸಿಗೆ

ಗಣತಿ ರಲ್ಲಿ ಕಾಂಗ್ರೆಸ್ಸನ್ನು ಬಿಟ್ಟು ಕರ್ನಾಟಕ ವಿಶೇ ಕರಣ ಪಕ್ಷ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷವನ್ನು ಸೇರಿದ್ದ ಹಾಗೂ ಗಣತಿ ರ ಸ್ವಾತಂತ್ರ್ಯ ಚಳವಳಿಯ ನಾಯಕರಾದ ಶ್ರೀ ಚನ್ನಪ್ಪನವಾಲಿಯವರು ಮೊದಲಾಗಿ ನೂರಕ್ಕೂ ಹೆಚ್ಚು ಜನರು ಮತ್ತೆ ಕಾಂಗ್ರೆಸ್ಸಿಗೆ ಸೇರಲು ನಿರ್ಧರಿಸಿರುವರೆಂದು ತಿಳಿಯಲಾಗಿದೆ.

ಆಗಸ್ಟ್ ೯ ರಂದು ಬೆಳಗಾಂ ಜಿಲ್ಲೆಯ ಸಂಸಗಾವ್ ವಲ್ಲಿ ನಡೆಯುವ ಸಮಾರಂಭದಲ್ಲಿ ಅವರು ಕಾಂಗ್ರೆ ಸ್ಸನ್ನು ಸೇರುವರು. ಕರ್ನಾಟಕ ಪಿ. ಎಸ್. ಪಿ ಯ ಅಧ್ಯಕ್ಷ ಶ್ರೀ ರಾಯಪ್ಪಗೌಡ ಪಾಟೀಲ್, ಶ್ರೀ ಶಾಂತ ಹಾಗೂ, ಶ್ರೀ ವೀರಪ್ಪ ರೆಡ್ಡಿ ಮೊದಲಾದವರೂ ಈ ಗುಂಪಿಲ್ಲಿದ್ದಾರೆ.

ಸೂಯೆಜ್ ಕಾಲುವೆಬಗ್ಗೆ ಚರ್ಚಿಸಲು ಏಸೆನ್-ಹೋವರ್‌ರ ನಕಾರ

ಕಳೆದ ಗುರುವಾರ ಆಜಸ್ಟ್ ಸರ್ಕಾರವು, ವಿಶ್ವದ ಅತಿ ಮುಖ್ಯ ಜಲಮಾರ್ಗವಾದ ಸೂಯೆಜ್ ಕಾಲುವೆಯನ್ನು ನಿಯಂತ್ರಣ ಮಾಡಿಕುವುದಂತೆ ಅಂಥಾಗುವ ಪತ್ರ ವ್ಯವಹಾರ ಬಗ್ಗೆ ಕಾಲ ಪ್ರಮುಖ ಪ್ರಕಾಶ ಆಜಸ್ಟ್‌ರೊಡನೆ ಪಡೆಸಿರಬಹುದಾದ ಪತ್ರ ವ್ಯವಹಾರದ ವಿಷಯವನ್ನು ಕಿಸ್ಕಿಂದು ತುಂಬಿದ್ದ ಪತ್ರಿಕಾಗೋಷ್ಠಿಯಲ್ಲಿ ಚರ್ಚಿ ಸಲು ಏಸೆ ಹೋವರ್ ನಿರಾಕರಿಸಿದರು.

ಜಗತ್ತಿನ ರಾಷ್ಟ್ರಗಳ ಶಕ್ತಿಯನ್ನು ದುರುಪಯೋಗ ಮಾಡಬಾರದೆಂದು ಒತ್ತಿ ಹೇಳುತ್ತ ನೆರೆಹೊರೆಯ ರಾಷ್ಟ್ರ ಗಳಿಗೆ ಹಾಗೂ ಆಮೆರಿಕದ ಅರ್ಧ ವೃವಸ್ಥೆಗೆ ಬಹು ಮುಖ್ಯವಾದ ಈ ಕಾಲುವೆಯನ್ನು ಅತ್ಯಂತ ದಕ್ಷವಾದ ರೀತಿಯಲ್ಲಿ ಬಳಸಬೇಕಾದದ್ದು ಅಗತ್ಯವೆಂದೂ ಇದಕ್ಕಾಗಿ ಯುಕ್ತಶ್ರದ್ಧೆಗಳನ್ನು ಕೈಗೊಳ್ಳಬೇಕೆಂದೂ ಅವರು ಸ್ಪಷ್ಟ ಪಡಿಸಿದರು

ಸೂಯೆಜ್ ಕಾಲುವೆಯನ್ನು ಆಂತರ ರಾಷ್ಟ್ರೀಕರಣ ಕ್ಕೊಳಪಡಿಸಬೇಕೆಂಬ ಸಲಹೆಯನ್ನು ಅಮೆರಿಕದ ಪಣಾ ಮಾ ಕಾಲುವೆಯ ಆಂತರ ರಾಷ್ಟ್ರೀಕರಣಕ್ಕೆ ಹೋಲಿಸ ಬಹುದೆ ಎಂಬ ಮಹಿಳಾ ವರದಿಗಾರರೊಬ್ಬರ ಸೂಚನೆ ಯನ್ನು ಏಸೆನ್‌ಹೋವರ್ ಅಲ್ಲಗಳೆದರು

ದಕ್ಷಿಣ ಭಾರತಕ್ಕೆ ಒಂದು ಅತ್ಯಾಧುನಿಕ ಪ್ರೆಸ್

ಕೇಂದ್ರದ ಯೋಜನೆ

ಅತ್ಯಾಧುನಿಕ ಯಂತ್ರೋಪಕರಣಗಳಿಂದ ಸಜ್ಜಿತ ವಾದ ಮುದ್ರಣ ಶಾಲೆಯೊಂದನ್ನು ತೀಳ್ಳಿದಲ್ಲಿ ದಕ್ಷಿಣ ಭಾರತದಲ್ಲಿ ಸ್ಥಾಪಿಸಲಾಗುವುದು

ಇದಕ್ಕಾಗಿ ಕೊಯಮತ್ತೂರಿಗೆ ೧೨ ಮೈಲಿ ದೂರದಲ್ಲಿ ಮಟ್ಟುಪಾಳಯಂ ರಸ್ತೆಯಲ್ಲಿ ನೋಡಿರುವ ೧೩೦ ಎಕರೆ ನಿವೇಶನವೊಂದನ್ನು ಭಾರತ ಸರ್ಕಾರದ ವರ್ತ್ಸ್ ಸಚಿವ ಶಾಖೆ ಕಾರ್ಯದರ್ಶಿ ಶ್ರೀ ಎಂ. ಆರ್. ಸುಬ್ರಹ್ಮಣ್ಯ ಪರಿಶೀಲಿಸಿರು.

ಈ ಮುದ್ರಣಾಲಯದಲ್ಲಿ ಸಮೂರು ೧೦೦೦ ಜನ ಕೆಲಸಗಾರರಿರುತ್ತಾರೆ. ಎಲ್ಲ ಸರ್ಕಾರಿ ಪ್ರಕಟಣೆಗಳ ಮುದ್ರಣವನ್ನೂ ಇಲ್ಲಿ ನಡೆಸಲಾಗುವುದು.

ನುಂಬೈ ರಾಜ್ಯದಲ್ಲಿ ಉಳುವವನಿಗೇ ಭೂಮಿ ಕಾನೂನು ಜಾರಿ

ಮುಂಬೈ ರಾಜ್ಯದ ಭೂ ಸಮಸ್ಯೆಯ ಪರಿಹಾರದಲ್ಲಿ ಒಂದು ಕ್ರಾಂತಿಕಾರಕ ಹೆಜ್ಜೆಯೆಂದು ವರ್ಣಿಸಲಾದ "ಉಳುವವನಿಗೇ ಭೂಮಿ" ಕಾಯಿದೆಯು ಇದೇ ಆಗಸ್ಟ್ ೧ ನೇ ತಾರೀಕಿನಿಂದ ರಾಜ್ಯದಾದ್ಯಂತ ಜಾರಿಗೆ ಬಂದಿತು.

ಭೂಮಿಯನ್ನು ಸಾಗುವಳಿ ಮಾಡುತ್ತಿರುವವನಿಗೆ ಅದರ ಸ್ವಾಮಿತ್ವವನ್ನು ನೀಡುವ ಸಲುವಾಗಿ ಕಳೆದ ಅಧಿವೇಶನದಲ್ಲಿ ಮುಂಬೈ ಶಾಸನಸಭೆಯು ಗಳಿಆ ರ ಮುಂಬೈ ಗೇಣಿ ಮತ್ತು ವ್ಯವಸಾಯ ಭೂ ಶಾಸನಕ್ಕೆ ಹಲವಾರು ತಿದ್ದುಪಡಿಗಳನ್ನು ಸೂಚಿಸಿ ಕಾಯಿದೆಯನ್ನು ಬದಲಾಯಿಸಿತು.

ಬಣ್ಣದ ಬೆಡಗು ಬೇಡ

ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಮದ್ರಾಸ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರು ಹೂವಿ ಮತ್ತು ರಂಗು ರಂಗಿನ ಸೀರೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ.

ಪ್ರಯೋಗ ಶಿಕ್ಷಣ ತರಗತಿಯ (ಕ್ಲಿನಿಕಲ್) ವಿದ್ಯಾರ್ಥಿ, ವಿದ್ಯಾರ್ಥಿನಿಯರ ಉಡುಪುಗಳ ವಿಷಯದ ಪ್ರಕಾರ ವಿದ್ಯಾರ್ಥಿನಿಯರು ಒಗೆಯಬಹುದಾದ ಬಿಳಿಯ ಸೀರೆ ಮತ್ತು ಕುಪ್ಪಸಗಳನ್ನು ಧರಿಸಬೇಕು; ಇಲ್ಲವೆ ಹೆಚ್ಚು ಬಣ್ಣವಿಲ್ಲದ ಬಟ್ಟೆಯನ್ನು ಬಳಸಬೇಕು. ಫ್ರಾಕ್ ಕೋಟುಗಳ ಆಂಗ್ಲೋ-ಇಂಡಿಯನ್ ವಿದ್ಯಾರ್ಥಿನಿಯರು ಇಚ್ಛೆಪಟ್ಟರೆ ಫ್ರಾಕುಗಳನ್ನೇ ಬಳಸಬಹುದು ಆದರೆ ಎಲ್ಲರೂ ಪಾದಗಳನ್ನು ಪೂರ್ಣವಾಗಿ ಮುಚ್ಚಿಕೊಳ್ಳುವ ಪಾದರಕ್ಷೆಗಳನ್ನು ಅಗತ್ಯವಾಗಿ ಧರಿಸಬೇಕು.

ರಾಮ ರಾಮ

ಇಂದು ಪೆರಿಯರ್ ಶ್ರೀ ಇ. ವಿ. ರಾಮಸ್ವಾಮಿ ನಾಯಕರವರು ಶ್ರೀ ರಾಮಚಂದ್ರ ಭಾವಚಿತ್ರವನ್ನು ಹೊತ್ತ ವೀರ್ಯಳ್ಳಿ ಸುಟ್ಟು ಎಲ್ಲಾ ಶ್ರದ್ಧೆಗಳನ್ನು ಕೈಗೊಂಡರು. ಆದರೆ ಎಲ್ಲಾ ಸಂಕ್ರದಾಯಗಳ ಸಂತರ ಶ್ರೀರಾಮಚಿಂದರ ಭಾವಚಿತ್ರ ನಾಶಕ್ಕೆ ಯಾಕಿತ್ತು. "ಶ್ರೀ ರಾಮಚಂದ್ರನ ಪರಾಧಾರಾಗಿ" ಅಗ್ನಿ ಆಹುತಿಯಾಗುವ ದನ್ನು ತಪ್ಪಿಸಿಕೊಂಡ. ಇದೊಂದು ಮದ್ರಾಸ್ಸಿನಲ್ಲಿ ಪಡೆದ ವಿಚಿತ್ರ ಘಟನೆ

ಶ್ರೀ ನಾಯಕರವರನ್ನು ಬಂಧಿಸಲು ಯತ್ನಿಸಿದಾಗ ಅವರ ರಕ್ಷಣೆಯಲ್ಲಿ ಹೊಡೆದಿದ್ದ ನಾಯಿಯು ಅವರನ್ನು ಬಂಧಿಸಲು ಬಿಡಲಿಲ್ಲ. ಆದರೆ ರಾಮಸ್ವಾಮಿ ನಾಯಕರ್ ರವರೇ ಶ್ರೀರಾಮನ ಪ್ರೇರಣೆಯಿಂದಲೋ ಏನೋ ನಾಯಿಯನ್ನು ಪಕ್ಷಕ್ಕೆ ಳಕುಬಿಸಿಕೊಟ್ಟು ತಾವೇ ಪೋಲೀಸರ ವಶರಾದರು.

ನಾಯಕರಿಗೆ ಆದೇಶ ತಲುಪಲು ತಡವಾಗಲು ಕಾರಣ

ಮೈಸೂರು ಶಾಸನ ಸಭೆ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಕೆ ಹನುಮಂತಯ್ಯನವರಿಗೆ ಕಳೆದ ಏಳು ದಿವಸಗಳ ಹಿಂದೆಯೇ ದೆಹಲಿಯಿಂದ ರವಾನೆಯಾಗಿದೆಯೆಂದು ವರದಿಯಾಗಿ ವಿಷಯ ಉಂಟು ಮಾಡಿದ್ದ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಆದೇಶವು ಈಗ ತಲುಪಿದೆಯೆಂದು ತಿಳಿದುಬಂದಿದೆ.

ಎ ಐ. ಸಿ. ಸಿ ಕಚೇರಿಯಿಂದ ನೇರವಾಗಿ ರವಾನೆ ಯಾಗಬೇಕಾಗಿದ್ದ ಮೈಸೂರಿಗೆ ಸಂಬಂಧಿಸಿದ ಪತ್ರವು, ಒರಿಸ್ಸಾ ಮುಖ್ಯ ಮಂತ್ರಿಗಳಿಗೆ, ಒರಿಸ್ಸಾಕ್ಕೆ ಸಂಬಂಧಿ ಸಿದ ಪತ್ರವು "ಕುಮಾರಕೃಪಾ" ಕ್ಕೂ ತಲುಪಿ, ಈ ವಿಳಂಬಕ್ಕೆ ಎಡೆಗೊಟ್ಟಿವೆಯೆಂದು, ಲಕ್ನೋದಿಗ ಮೇಲೆ ವಿಶಾಖ ಬರೆಯುವಾಗಲೇ ಅಧಿನಾ ವಿಶಾಖ ಬರೆದ ಲಕೋಟೆಗೆ ಅದೇಶದ ಪತ್ರಗಳನ್ನು ಹಾಕುವಾಗಲೋ ಈ ಪ್ರಮಾದ ಆಗಿದೆಯೆಂದು ತಿಳಿದುಬಂದಿದೆ.

ಸುದ್ದಿ ಸಂಗ್ರಹ

ಪೂರ್ವ ಮೆಡಿಟರೇನಿಯನ್ ಪ್ರದೇಶದಲ್ಲಿ ಮುನ್ನೆ ಚ್ಚರಿಕೆ ಸೇನಾ ವ್ಯವಸ್ಥೆ ಕ್ರಮಗಳನ್ನು ಕೈಗೊಳ್ಳಲಾಗು ತ್ತಿದೆಯೆಂದು ಬ್ರಿಟಿಷ್ ಕಾಮನ್ವೆಲ್ತ್‌ಸಚಿವಯಲ್ಲಿ ಪ್ರಧಾನ ಉಡ್ಡರವರು ಪ್ರಕಟಿಸಿದ ಕೂಡಲೆ, ಬ್ರಿಟಿಷ್ ಸರಕಾರವು ಆಜಪ್ಟ್‌ನಲ್ಲಿರುವ ಬ್ರಿಟಿಷ್ ಪ್ರಜೆಗಳಿಗೆ ಆಜಸ್ಟ್ ಬಿಟ್ಟು ಬರಬೇಕೆಂಯ ಎಚ್ಚರಿಕೆ ಇತ್ತಿದೆ.

* * *

"ಸೂಯೆಜ್ ಕಾಲುವೆಯನ್ನು ಆಜಸ್ಟ್ ತಪ್ಪ ರಕ್ಷಿಸ ಕೊನೆಯ ತೊಟ್ಟು ಇರುವ ತನಕ ರಕ್ಷಿಸುವುದಾಗಿ" ಆಧ್ಯಕ್ಷ ನಾಸೆರ್ ಆಜ್ಞೆಲ್ ನಾಸೆರರು ಆಜಪ್ಟಿನ ವಿಶ್ವವಿದ್ಯಾನಿಲಯದ ಯುವಕರನ್ನು ಉದ್ದೇಶಿಸಿ ಮಾತ ನಾಡುತ್ತ ಘೋಷಿಸಿದರು.

* * *

"ಅಂಬರ್ ಚರಕವು, ಮುಖ್ಯವಾಗಿ ಹಳ್ಳಿಗಳಲ್ಲಿ ಅದಾಯಕರವಾದ ಉದ್ಯೋಗವನ್ನೊದಗಿಸುವಲ್ಲಿ ಹಾಗೂ ಆಹಾರಕ್ಕೆ ವರಡನೆಯದಾದ ಪರಕ್ಷ ತಯಾರಿಸುವ ಉದ್ಯಮವನ್ನು ವಿಕೇಂದ್ರೀಕರಿಸುವ ಮಾರ್ಗದಲ್ಲಿ ಮಹ ತ್ತರ ಸಾಧ್ಯತೆಗಳನ್ನು ಳ್ಳಿದೆಯೆಸುವ ವಸ್ತುವೆಂಬುದರಲ್ಲಿ ಸಂದೇಹವಿಲ್ಲ."

* * *

"ಕರ್ನಲ್ ನಾಸೆರ ವರ್ತನೆಯು ಶಾಂತಿಗೆ ಮಾಯಂ ಆಪಾಯವಾಗಿದೆ" ಎಂದು ಘೋಷಿಸುವ ನಿರ್ಣಯ ಒಂದನ್ನು ಫ್ರಾನ್ಸಿನ ರಾಷ್ಟ್ರೀಯ ಅಸೆಂಬ್ಲಿ ಅಂಗೀ ಕರಿಸಿತು.

* * *

ಮೈಸೂರು ರಾಜಕೀಯ ಪರಿಸ್ಥಿತಿಯ ಬಗ್ಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡ್ ಜುಲೈ ೩೬ ನೇ ತಾರೀಖು ಕೈಗೊಂಡ ತೀರ್ಮಾನದ ಅಧಿಕೃತ ತಿಳಿವಳಿಕೆ ಈಗ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ತಲು ಪಿದೆಯೆಂದು ತಿಳಿದುಬಂದಿದೆ.

* * *

ಗುಜರಾತ್, ಮಹಾರಾಷ್ಟ್ರ ಮತ್ತು ವಿದರ್ಭಗಳ ನೆಲ್ಲಿಗೆಯಿಂದ ದೊಡ್ಡದಾದ ದ್ವಿಭಾಷಾ ಮುಂಬೈ ಸ್ಟಾಂತ್ಯದ ರಚನೆಯಾಗಬೇಕೆಂಬ ಸಲಹೆಯಷ್ಟೆ ಮಿ

ಪರಿಶೀಲಿಸಬೇಕೆಂದು ಕಾಂಗ್ರೆಸ್ ಹೈಕಮಾಂಡನ್ನು ಕೇಳುವ ಮನವಿಯೊಂದಕ್ಕೆ ಲೋಕಸಭೆಯ ಸುಮಾರು ೧೮೦ ಪದಸ್ಥರು ಸಹಿ ಹಾಕಿದ್ದಾರೆ ಇನ್ನೂ ಹೆಚ್ಚು ಮಂದಿಯ ಸಹಿಯನ್ನು ಪಡೆಯಲು ಯತ್ನವು ನಡೆಯುತ್ತಿದೆ

* * *

ಸೂಯೇಜ ಕಾಲುವೆ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಹತೋಟಿ ಸ್ಥಾಪಿಸುವ ವಿಷಯ ಪರಿಶೀಲಿಸಲು ಆಗಸ್ಟ್ ೧೬ ರಂದು ಲಂಡನ್ನಿನಲ್ಲಿ ೨೪ ರಾಷ್ಟ್ರಗಳ ಸಮ್ಮೇಳನ ವೊಂದು ನಡೆಯಲಿದೆಯೆಂದು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸ್ ಸೂಚಿಸಿದವು

* * *

ಸೂಯೆಜ್ ಕಾಲುವೆಯನ್ನು ಅಂತರಾಷ್ಟ್ರೀಯ ಹತೋಟಿಗೆ ಒಳಪಡಿಸಬೇಕೆಂಬ ಪಶ್ಚಿಮ ರಾಷ್ಟ್ರಗಳ ಸಲಹೆಯನ್ನು ಈಜಿಪ್ಟ್‌ನ ಅಧಿಕೃತ ವಲಯಗಳು ತಿರಸ್ಕರಿಸಿದವು

* * *

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಪಕ್ಷದ ನಾಯಕತ್ವಕ್ಕೆ ಇತ್ತಿರುವ ರಾಜೀನಾಮೆಯನ್ನು ಪರಿಶೀಲಿಸಲು ಪಾಸಣ ಸಭಾ ಕಾಂಗ್ರೆಸ್ ಪಕ್ಷದ ಸಭೆ ಆಗಸ್ಟ್ ೧೬ ನೇ ತಾರೀಖು ಬೆಳಿಗ್ಗೆ ೯.೩೦ ಕ್ಕೆ ರೆಸಿಡೆನ್ಸಿಯಲ್ಲಿ ಸೇರುವುದು

* * *

ಪೂರ್ವ ಮೆಡಿಟರೇನಿಯನ್ ಪ್ರದೇಶದಲ್ಲಿ ಜರೂರು ಕೆಲಸಗಳಿಗಾಗಿ ಬ್ರಿಟಿಷ್ ಸೇನೆಯ ರಿಸರ್ವ್ ವಿಭಾಗದ ವಿಶೇಷ ಸೃನಿಕರಿಗೆ ಕರೆಯೀಯುವ ನೋಟಣಾ ಆಜ್ಞೆ ಗಳಿಗೆ ರಾಣೆ ಎಲಿಜಾಬೆತ್ ಸಹಿ ಹಾಕಿದರು

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಬಂಧಿತ್ತು ಒಮ್ಮೆ ತಲೀಲಗಳಿಂದ ತೂಡಿದ ಫೋಟೋ	೦—೬—೦
ಶ್ರೀಲಿಂಗ ಜಾಡರ್ಯ ಲಿಂಗವಂತಿನದ ಫೋಟೋ(ನಾನಾವಿಧವಣ್ಣಗಳಿಂದ ಮುದ್ರಿತವಾದುದು)ಸೈಜು ೧೪ X ೧೦ ಬೆಲೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗವಪ್ರತಾರದ ಫೋಟೋ (ಚಿಕ್ಕಸೈಜು)	೦—೧—೬
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ವಿಶಿಷ್ಟಾದ್ವೈತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀರೇಣುಕಾಚಾರ್ಯರು ಲಿಸ್ಟ್ಮಹರ್ಷಿಗಳಿಗೆ- ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೧—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗವಪ್ರತಾರದ ಫೋಟೋ ಸೈಜು ೧೪ X ೧೦ ಬೆಲೆ ೧೪	೦—೪—೦
" " " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಸೂಕ್ತರ ಶಿವಾಚಾರ್ಯರು ಭೂಧರ್ಭದಿಂದ ಆವಾಹಿಸುವ ಫೋಟೋ	೦—೧—೬
ಶ್ರೀ ರೇಣುಕ ಜಾರ್ಯರು ರುದ್ರ ಮುಖಶಕ್ತರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಷಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧೀಪಸನನ ಪ್ರಾರ್ಥನೆಯಂತೆ ೧ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಶೈವಶಿವಾಚಾರ್ಯರ್ಯಾಮಹಾಸ್ವಾಮಿಗಳವರ ಫೋಟೋ (ನಾನಾವಿಧವಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೦—೬
ಶ್ರೀಪಾದುಗುರು ಯಾವ ಸೀಜಾಸನಾಧೀಶ್ವರ ಶ್ರೀ ಅಗಸ್ಟ್ಯಂ ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೬
ಶ್ರೀಮದ್ ಬಂಭಾಪುರೀ ಸೀಹಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯರ ಮಹಾಸ್ವಾಮಿಗಳವರ ಫೋಟೋ ..	೦—೦—೬
ಶ್ರೀಷಡುಜ್ಜ ಯಾವ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೪—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಪಾದ್ಯಹಾದಾಜರವರು ವಿರಾಜಿಸುತ್ತಿರುವ ಫೋಟೋ	೦—೦—೬
ಶ್ರೀಜಗದ್ಗುರುರಂಭಾಪುರೀ ೭೬ವರ್ಷದ ಸ್ವಾಸಿಶಲ್ಲಟ್ಟಿರುವ ಶಿಲಾಶಾಸನಗಳು ...	೦—೬—೦

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	...	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	...	೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	...	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆ	...	೧ ಆಣೆ
ಶ್ರೀಪಂಚಾಚಾರ್ಯ ಮಂಗಲೋತ್ಸಾವಳಿ (೧೧ನೆಯ ಆವೃತ್ತಿ)	...	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	...	೨ ಆಣೆ
ಶ್ರೀರುದ್ರಮುಖಿವಿನಾಚಾರ್ಯಶತಕ	...	೨ ಆಣೆ
ಶಿವಶಕ್ತಿವಿಲಾಸ	...	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	...	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	...	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)		೩ ಆಣೆ
ಜನಮಾದಿವಿಜಿತಕೃದರ್ಪಣ (೫ನೆಯ ಆವೃತ್ತಿ)	...	೩ ಆಣೆ
ಪಂಚಾಚಾರ್ಯಪ್ರಕಾಶ	...	೩ ಆಣೆ
ಪಂಚಾಚಾರ ಪ್ರಕಾಶಿಕಾ	...	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	...	೩ ಆಣೆ
ಶ್ರೀಪಟ್ಟಪಂಡಿತಾರಾಧ್ಯರ ಕಾಲನಿರ್ಣಯ	...	೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...	೪ ಆಣೆ
ಲಿಂಗಧಾರಣವಿಧಿ	...	೪ ಆಣೆ
ಗರ್ಭಾಧಾನವಿಧಿ	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	...	೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ	...	೪ ಆಣೆ
ವೈದಿಕಾನಾಧ್ಯಯರಹಸ್ಯ	...	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	...	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ	...	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ)	...	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ)	...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	...	೮ ಆಣೆ
ತಿವಾದ್ವೈತಕರಂಧಾನಾ (ಸಂಸ್ಕೃತ)	...	೮ ಆಣೆ
ವೀರಶೈವಮಹಾತ್ಮರು	...	೮ ಆಣೆ
ಜಸವಧರ್ಮಾಂತದಿವಾಕರ (೨ನೆಯ ಆವೃತ್ತಿ)	...	೮ ಆಣೆ
ಆಗಮಪರಿಜ್ಞಾನ	...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	...	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ವಕ್ಷತ್ರಮಾಲಿಕಾ	...	೮ ಆಣೆ
ಕನ್ನಡ ನ್ಯಾಯಶತಕಮ್	...	೮ ಆಣೆ
ಮಕುಟಾಗಮಃ	...	೮ ಆಣೆ
ಕಾರಣಾಗಮಃ	...	೧೨ ಆಣೆ
ಸೂಕ್ಷ್ಮಾಗಮಃ	...	೧೨ ಆಣೆ
ಚಂದ್ರಜ್ಞಾನಾಗಮಃ	...	೧ ರೂ
ಸಿದ್ಧಾಂತಸಾರಾವಳಿ (ಶ್ರೀವೀಜಪಶಿವಾಚಾರ್ಯಕೃತ)	...	೧೨ ಆಣೆ
ತಿಪಾಸೂತ್ರಸಿದ್ಧಾಂತದರ್ಪಣ	...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	...	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	...	೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	...	೧ ರೂ
ವೀರಮಾಹೇಶ್ವರಚಂದ್ರಿಕೆ	...	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತವಾದುದು. ೩ನೆಯ ಆವೃತ್ತಿ)		೧॥ ರೂ.
ಶ್ರೀಕರಭಾಷ್ಯಂ (೩ ನೆಯ ಆವೃತ್ತಿ)	...	೧॥ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	...	೧॥ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಪ್ತದಿ)	...	೨ ರೂ.
ವೀರಕ್ಷಿವರತ್ನ (೫ನೆಯ ಆವೃತ್ತಿ. ೩೦ ಮಹತ್ವದ ಫೋಟೋಗಳಿರುವುವು		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ)	...	೫॥ ರೂ.
A brief bio-sketch of Pandit Sri Kashinatha Shastriji (*English*)		4 As,
The Philosophical Aspect of Virasaivism (*English*)	...	8As
Speeches by Pandit Shri Kashinatha Shastriji (*English*)		12 As.
ಶಿವದೀಕ್ಷಾರತ್ನ (ಅರಬಿ)	...	೫. ೮-೦-೦
ಸಂಧಿಕೌಮುದೀಕಾರಿಕಾ (ಕನ್ನಡ)	...	೩ ಆಣೆ,

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brihanmathadhyaksha Sri Mahadeviah at Sri Panchacharya Electric Press, Sayaji Rao Road, Mysore

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿವರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ವರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮತಾಧ್ಯಕ್ಷರಾದ ವೇದಿ ಪಂ॥ ಶ್ರೀ ಶಾತೀಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮತಾಧ್ಯಕ್ಷರಾದ ಶ್ರೀ ಮಹಾದೇವಯ್ಯಸವರು [ವಿ ಪಿ ಖರ್ಚು ಸೇರಿ ೩ ರೂ/೧೦ ಆ.

ಸಂಪುಟ ೩೦] ಸೋಮವಾರ ತಾ॥ ೧೩ ನೇ ಆಗಸ್ಟ್ ೧೯೫೬ [ಸಂಚಿಕೆ ೧೩

ರೇಣುಕವಿಜಯಪುರಾಣಂ

(ಶ್ರಾವಣಮಾಸವು ಬಂದಿತು)

ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾಬೋಧಕನಾದೀಪುರಾಣವು ಕರ್ನಾಟಕ ಬಾಷೆಯಲ್ಲಿ ಭಾಮಿನಿ ಪದ್ಯರೂಪವಾಗಿ ಈಗ ಎರಡನೇ ಆವೃತ್ತಿ ಮುದ್ರಿಸಲ್ಪಟ್ಟಿದೆ ಈ ಪುರಾಣದಲ್ಲಿ ೨೦ ಸಂಧಿಗಳಲ್ಲಿದ್ದು ಶ್ರೀರೇಣುಕಗುರುಸಾರ್ವಭೌಮರ ಸಮಗ್ರಲೀಲೆಗಳು ಒಹುಮನೋಹರವಾಗಿ ವರ್ಣಸಲ್ಪಟ್ಟಿವೆ ಈ ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಭದ್ರವಾದ ಹಾಗು ಅಂದವಾದ ಬೈಂಡಿನಿಂದೊಡಗೂಡಿದೆ ಅಲ್ಲಲ್ಲಿ ಸಂದರ್ಭಾನುಸಾರ ಚಿತ್ರಗಳು ಸೇರಿಸಲ್ಪಟ್ಟಿವೆ. ಸದ್ಯಕ್ಕೆ ಶ್ರಾವಣಮಾಸವು ಸಮೀಪವಾಗಿದ್ದು ಪ್ರತಿಯೊಬ್ಬ ಗುರುಬಕ್ತರೂ ಈ ಮಹಾಪುರಾಣವನ್ನು ತರಿಸಿಕೊಂಡು ಪರಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿತೆ ಬೆಲೆ ರೂ. ೨-೦-೦

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪತ್ರವ್ಯವಹಾರ

[ಚಾಕ್ಷೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಷ್ಟೆ —ಸಂ]

ಶ್ರಾವಣಮಾಸ ಪೂರ್ಣಿಮಮಹೋತ್ಸವಾಹ್ವಾನ ಪತ್ರಿಕಾ

ತುಮಕೂರು ತಿಪ್ಟೂರ್ ಚಕ್ಕನಾಯಕನಹಳ್ಳಿ ತಾಲ್ಲೂಕು ಶ್ರೀ ಕುಪ್ಪೂರು ಗದ್ದುಗೆ ಮಠದ ಷ॥ ಬ್ರ॥ ಶ್ರೀ॥ ಜಂಪದ್ಯಶೇಖರಪಟ್ಟಾಚಾರ್ಯಸ್ವಾಮಿಗಳು ಶ್ರೀ ರುದ್ರಮುನಿಪಟ್ಟಾಮ ಸಂವತ್ಸರದ ಶ್ರಾವಣ ಶುದ್ಧ ಪಾಡ್ಯಮಿ ತಾ॥ ೭-೮-೧೯೫೬ ನೇ ಮಂಗಳವಾರದಿಂದ ತಾ॥ ೪-೮-೧೯೫೬ ನೇ ಮಂಗಳವಾರ ಪೂರ್ತಾ ಶ್ರೀಸ್ವತ್ಪಾಪಾನಾದ ಶ್ರೀ ಮರುಳಸಿದ್ಧೇಶ್ವರಸ್ವಾಮಿಗೆ ಪ್ರತಿಕಿತ್ಯ ಬ್ರಾಹ್ಮೀಮುಹೂರ್ತಕಾಲ (ಬೆಳಿಗ್ಗೆ ೪-೩೦ ರಿಂದ ೮ ಗಂಟೆಯವರೆಗೆ) ವೇ॥ ವಿದ್ವಾಂಸಿ ಆರ್ ಎಸ್ ಮಹೇಶಾಸ್ತ್ರಿ, ರಾಂಪುರ ಇವರ ಪೌರೋಹಿತ್ಯದಲ್ಲಿ ರುದ್ರಾಭಿಷೇಕ ಮತ್ತು ಸಹಸ್ರಪಲ್ಯಾರ್ಚನೆ ನಡೆಯುವದು. ತಾ॥ ೧೧ ೮-೫೬ ನೇ ಶನಿವಾರ ಬೆಳಿಗ್ಗೆ ಘಾಸ ರಿಂದ ೬ ಘಂಟೆವರೆಗೆ ಸಲ್ಲುವ ಮಿಥುನ ಲಗ್ನದಲ್ಲಿ ಷಟುಗಳಿಗೆ ತಿವರಿಕ್ಷಾ ಸಂಸ್ಕಾರವೂ ಜರಿಯುವುದು ಪ್ರತಿದಿವಸ ಸಾಯಂಕಾಲ ಅರಿಸೀಕೆರೆ ತಾ॥ ಶಾಗನೆಳಿ ವೇ॥ ಷಟ್ಟ ವೇ॥ ಶ್ರೀ॥ ಸಿದ್ಧಾಂತಿ ಮತ್ತು ಪೌರಾಣಿಕ ವಿ ವೀರಸಂಗಶಾಸ್ತ್ರಿಗಳಿಂದ ಪುರಾಣಶ್ರವಣವು ಂದು ತಿಂಗಳು ಶ್ರಾವಣ ಮಾಸದಲ್ಲಿ ಜರಿಯುವುದು.

ಅನೇಕ ಭಕ್ತಮಂಡಲಿಯವರು ಮೇಲ್ಕಂಡ ಮಹಾ ಪುಣ್ಯಾದಿಗಳನ್ನು ಪ್ರತಿದಿವಸ ನಡೆಸಲು ಭಕ್ತಿಯಿಂದ ಒಪ್ಪಿರುತ್ತಾರೆ ಸರ್ವರೂ ಸಕಾಲಕ್ಕೆ ಬಂದು ಶ್ರೀ ಸ್ವಾಮಿಯ ಸಂದರ್ಶನಾತಿಶಯಾದಿ ಪಡೆದು ಧನ್ಯರಾಗ ಬೇಕಾಗಿ ಅಪೇಕ್ಷಿಸುತ್ತೇನೆ

ಭಕ್ತಮಂಡಳಿ, ಕುಪ್ಪೂರು ಗದ್ದಿಗೆಮಠ

ಗುರುವು ಭಕ್ತೋದ್ಧಾರಕನು

ಲೇ.—ರುದ್ರಾರಾಧ್ಯಶಾಸ್ತ್ರಿ, ಯಡಗೋಡ

ನಮಗೆ ಪ್ರಾಪ್ತವಾದ ದುಡ್ಡನ್ನು ಹೆಚ್ಚು ಮಾಡಿ ಕೊಳ್ಳುತ್ತ ಅದರಿಂದ ಭಂಗಾರ, ಬೆಳ್ಳಿ, ಹೊಲ, ಮನೆ ಖರೀದಿಮಾಡುತ್ತ ಹೇಗೆ ಸುಖವಾಗಿರುತ್ತೀನೆಯೋ ಹಾಗೆ ನಾವೆ ಅನಂತ ಜನ್ಮಗಳಲ್ಲಿ ಪುಣ್ಯಮಾಡುತ್ತಾ ಬಂದು ಈಗ ಮಾನವ ಜನ್ಮ ಪಡೆದಿದ್ದೀನೆ. ಈ ಮಾನವ ಜನ್ಮವು ತನ್ನ ಹೆಸ್ಸಕ್ಕೆ ತಾನೇ ಸಾರ್ಥಕವಾಗ ಲಾರದು. ಅದು ಸಾರ್ಥಕವಾಗಬೇಕಾದರೆ "ಗುರು" ಎಂಬ ವಸ್ತುವು ಬೇಕೇ ಬೇಕು ಅಂಧಾ ಸದ್ಗುರುವು ಸತ್ಶಿಷ್ಯನಿದ್ದೆಡೆಗೆ ತಾನೇ ಅಗಮಿಸಿ ಭಕ್ತನ ಹೃದ ಯಾಂತರಾಳವನ್ನು ತಿಳಿದು ಭಕ್ತಿಯೆಂಬ ಬೀಜವನ್ನು ಪಸರಿಸಿದ 'ಮನೆ'ಯೆಂಬ ಭೂಮಿಯಲ್ಲಿ ಹಾಕಿ ಫಲಕಾರಿಯನ್ನಾಗಿ ಮಾಡಿ ಮುಂದಿನ ಮುಕ್ತಿ ಗ್ರಾಮಕ್ಕೆ ಯಾದಿ ತೋರಿಸಕರ್ತವನಾಗಿದ್ದಾನೆ. ಪ್ರತ ಶಿಷ್ಯನಾಗಿ ತಿವಪುರಾಧಿಪರಾಗಿ ಭಕ್ತೋದ್ಧಾರದ ಕಾರ್ಯವೇ ಕೈಲಾಸವೆಂದಾಜ್ಞಾಪಿಸಿದ ಗುರುವೇ ಸದ್ಗುರುವು.

ಈ ಅರುವನ್ನು ಕೊಡುವ ಗುರುವು ಸದ್ಭಕ್ತಿಯ ನಾಗಿ ಭಕ್ತೋದ್ಧಾರಲೋಲನಾಗಿದ್ದಲ್ಲಿ ಯಾರಿಗೂ ಯಾವ ಯಡರುತೊಡರುಗಳು ಬರಲಾರವು ಯಾವ ನೊಬ್ಬನು ಜ್ಞಾನಸಂಪಾದನೆಗಾಗಿ ಅನೇಕ ಗ್ರಂಥಗಳನ್ನು ಓದುವನು, ಅನೇಕ ಜಾಗೆಗಳಲ್ಲಿ ಪುರಾಣ ಕೇಳುವನು, ಅನೇಕ ವಿದ್ವಾಂಸರ ಸಂಗಮಾಡುವನು ಹೀಗಿದ್ದರೂ ತತ್ವಜ್ಞಾನಿದ್ದಿದ್ದೆ ಹಟವಾದ, ಡಾಂಭಿಕತನ, ಶುಷ್ಕಿಕ, ದುರಾಶೆ ಇವೆಲ್ಲವುಗಳನ್ನು ಸದ್ಗುರುವಿನ ಸಹವಾಸ, ಸದ್ಗುರು ಬೋಧೆ ಇವುಗಳಿಂದ ದೂರಮಾಡಿಕೊಂಡು ಮುಕ್ತಿ ಯನ್ನು ಹೊಂದುವನು. ಇದಕ್ಕೆ ಭಕ್ತಿಯು ಬೇಕು ಅನ್ನುತ್ತಾರೆ ಈ ಪ್ರಕಾರದ ಭಕ್ತೋದ್ಧಾರ ಕಾರ್ಯವು ಗುರುವಿನಲ್ಲಿ ಸದಾ ಇದ್ದು ಭಕ್ತರನ್ನು ಅತಿ ವಿಶ್ವಾಸ ದಿಂದ ಬೋಧಿಸಬೇಕು ಗುರುಗಣ (ಜಂಗಮರಾ) ದವರು ಶುದ್ಧ ಶೀಲರಾಗಿ ಸದ್ಭಕ್ತನೆಯುಳ್ಳವರಾಗಿದ್ದು ಕೊಂಡು ಭಕ್ತರಲ್ಲಿ ಹವ್ಯ ಕವ್ಯಾದಿಗಳನ್ನು ತೀರಿಸುತ್ತಾ ಹೊಟ್ಟೆ ಬಟ್ಟೆಗಾಗಿ ಬೇಕಾದ ದಂಧೆ ಮಾಡುತ್ತಾ ಹೋದರೆ ಗುರುಗಳ ಕರ್ತವ್ಯವೆನಿಸಲಾರದು ಇದಕ್ಕಾಗಿ ಜಂಗಮನಾದ ನಾನೂ ಅವರಲ್ಲಿ ಬೇಡಿಕೊಳ್ಳುತ್ತೇನೆ ಜಂಗಮರೇ ಈ ಕಡೆ ಲಕ್ಷ್ಯಗೊಟ್ಟು ಸತ್ಶಿಲಾಗಾರಿ ಗುರುವೆಂಬ ನಾಮಕ್ಕೆ ಯೋಗ್ಯರಾಗಿರಿ

ಭಕ್ತರೇ? "ಗುರು ಮುಟ್ಟಿದ್ದು ಗುಡ್ಡೆ" ಎಂಬ ಶ್ರೇಷ್ಠ ವಾಗಿದ ಕಡೆಗೆ ಲಕ್ಷ್ಯಗೊಟ್ಟು ಗುರುಗಳಲ್ಲಿ ಅತಿ ವಿಶ್ವಾಸವುಳ್ಳವರಾಗಿ ಭಕ್ತಿವಿಜ್ಞಾತರಾಗಿ ಗುರು ಬೋಧೆಯ ಮಂತ್ರಜಪದಿಂದ ಧನ್ಯಾತಾತ್ಮರಾಗಿ ಮುಕ್ತಿ ಹೊಂದುವಿರೆಂದೇ ನಮ್ಮ ಆತ್ಮದ ದೃಢ ಸಂಕಲ್ಪ ವಾಗಿದೆ

ಪುರಾಣಶ್ರವಣ ಯಡಗೋಡ

ಇದೇ ಶ್ರೀಶಕೆ ೧೮೭೮ ನೇ ದುರ್ಮುಖಿನಾಮ ಸಂವತ್ಸರದ ಶ್ರಾವಣ ಶು॥ ೧ ಮಂಗಳವಾರದಿಂದ ಒಂದು ತಿಂಗಳು ಪೂರ್ತಿ ವೆರೆಗೆ ಶ್ರೀತವೆರೆಶ್ವರದಂತೆ ಯಡ ಗೋಡ ಪ್ರಾಪಟ್ಟಣ ಶ್ರೀ ವೇ॥ ಸಿ॥ ರುದ್ರಾರಾಧ್ಯಶಾಸ್ತ್ರಿ ಗಳವರು ಬೆಳಿಗ್ಗೆ ರುದ್ರಾಭಿಷೇಕ, ಸಂಜೆಗೆ ಶ್ರೀ ದೇವಿ ಪುರಾಣ ಓದುವರು ಈ ಪ್ರಕಾರ ಧರ್ಮಕಾರ್ಯಾಶ್ರಮ ಇಟ್ಟುಕೊಂಡಿದ್ದಾರೆ ಆಲ್ಲದೆ ಊಗಾರಲೇ ಶಾಸ್ತ್ರಿಗಳವರು ಮೂಸೂರ ಭಕ್ತಾದಿಗಳಿಂದ ಬಂದ ತಾ॥ ೧೩-೮-೧೯೫೬ ರಿಂದ ೧೧ ದಿವಸಗಳ ವರೆಗೆ ಪೂರಾದ ಬಿಕ್ಷವನ್ನೆ ಒಪ್ಪಿಕೊಂಡಿದ್ದಾರೆ. ಆತಂತರ ಬರುವವರಿಗೆ ಅವಕಾಶ ದೊರೆಯುವದು ಅವರೂಪವಾಗಿದೆ. ಈ ಬಿಕ್ಷವನ್ನಿ ಬಂದ ಮಧ್ಯಾಹ್ನದಲೇ ಧರ್ಮಾರ್ಥ ಮಂಗಳಸ್ನೆತ್ರಾ ವಲಿಯನ್ನು ಪ್ರಿಂಟುಮಾಡಿಸಿ ಶ್ರಾವಣ ಆಪೇಕ್ಷೆಯ ಅಧಿಕಾರಿಯನ್ನು ವೇಳೆಗೆ ಈ ನೊಣಕ ಪ್ರಶ್ನೆಗಳನ್ನು ಪ್ರಕಟಿಸಲಾಗುವದು ಸರ್ವರೂ ಈ ಧರ್ಮಾರ್ಥ ಪ್ರಕಟಿಸುವ ಪುಸ್ತಕಕ್ಕೆ ಧನಸಾಯಮಾಡಿ ಶ್ರೀ ಶಿವ ಕೈಬೆಗೆ ಪಾತ್ರರಾಗಲೆಂದು ನನ್ನ ವಿಷಂತಿಯು.

ಪಾಠಶಾಲಾ ಸೆಕ್ರೆಟರಿ
ಹಾಲಪ್ಪ ಪಾಮಯ್ಯ ಯಡಗೋಡ

ಪಂಚಾಚಾರ್ಯಪ್ರಭಾ

೧೩ನೆಯ ಆಗಸ್ಟ್ ತಾ|| ೧೩ನೆಯ ಸೋಮವಾರ

ದ್ವಿಭಾಷಾಪ್ರಾಂತರಚನೆಯು ಸರ್ವಸಮ್ಮತವೆ ?

ಭಾಷಾನಾರ ಪ್ರಾಂತರಚನೆಯಾಗಬೇಕೆಂದಿದ್ದ ಭಾರತೀಯರು ಬಹುದಿನದ ಬೇಡಿಕೆಯಂತೆ ಭಾರತ ಸರ್ಕಾರವು ಆ ಕಾರ್ಯವನ್ನು ಕೈಗೊಂಡು ಕೆಲವುಕಡೆ ಏಕ ಭಾಷಾ ಪ್ರದೇಶಗಳನ್ನೂ ಕೆಲವು ಕಡೆ ದ್ವಿಭಾಷಾ ಪ್ರದೇಶಗಳನ್ನೂ ರಚಿಸುತ್ತಿರುವುದು, ಸರ್ವಸಮ್ಮತವಾಗಲಾರದೆಂದು ಅನಿಸುತ್ತದೆ ಈಗಾಗಲೆ ಮಂತ್ರಿಗಳು ಸಮ್ಮತಿಸಿದ್ದ ಪಶ್ಚಿಮಒಂಗಾಳ-ಬಿಹಾರಗಳ ವಿಲೀನವನ್ನು ಅಲ್ಲಿಯ ಜನತೆಯು ದೂರೀಕರಿಸಿ ಬೇರೆ ಬೇರೆ ಪ್ರಾಂತಗಳನ್ನು ಮಾಡಿಕೊಂಡರು ಮೈಸೂರು ಅಂಧ್ರ ತಮಿಳು ನಾಡುಗಳ ಸಮ್ಮಿಲನಕ್ಕೆ ಜನತಾ ವಿರೋಧ ಬಂದು ಅವೂ ಬೇರೆ ಬೇರೆ ಪ್ರದೇಶಗಳಾದವು ಹೀಗೆ ಎಲ್ಲಾ ಕಡೆ ಯಲ್ಲಿಯೂ ಭಾಷಾವಾರ ರೀತಿಯಂತೆ ಪ್ರಾಂತಗಳನ್ನು ರಚಿಸುತ್ತಿರುವ ಈ ನೂತನ ಯೋಜನೆಯಲ್ಲಿ ಮಹಾರಾಷ್ಟ್ರ-ಗುಜರಾಥ ಕಚ್ಚೆ ಮೊದಲಾದ ಭಾಗಗಳನ್ನು ಸೇರಿಸಿ ದ್ವಿಭಾಷಾ ಮುಂಬೈ ಪ್ರಾಂತರಚನೆಯ ಶೀಲವನ್ನು ಭಾಂತಸರ್ಕಾರವು ಯೋಚಿಸಿರುವುದು ಸರಿಯೇ ತಪ್ಪೇ ಎಂಬುದಕ್ಕೆ ಈಗ ಆಕಸ್ಮಿಕಾಬಾಧಿತವಾಗಿ ನಡೆಯುತ್ತಿರುವ ಕೋಲಾಹಲಗಳೇ ಸಾಕ್ಷಿಯಾಗಿರುವುದು ಈ ಹಿಂದೆ ಇದೇ ಪರಿಸ್ಥಿತಿಯು ಮುಂಬೆಯಲ್ಲಿ ನಡೆಯಿತು ಪಂಜಾಬಿನಲ್ಲಿ ಈ ಬಗ್ಗೆ ನಡೆದಿರುವ ಕೋಲಾಹಲವು ಇನ್ನೂ ಮುಗಿದಿರುವುದಿಲ್ಲ ದ್ವಿಭಾಷಾ ಪ್ರಾಂತ ರಚನೆಯ ಪರಿಣಾಮವು ಹೀಗೆ ವಿಷಾದಕರವಾಗಿ ನಡೆಯುತ್ತಿದ್ದಾಗ್ಯೂ ನೋಡುತ್ತಿರುವ ಸರಕಾರವು ಭುನಃ ಭುನಃ ದ್ವಿಭಾಷಾ ಪ್ರಾಂತ ರಚನೆಯನ್ನೇ ಮುಂದುಮಾಡುತ್ತಿರುವುದು ಭಾರತದ ದರ್ದೈವ್ಯವೆಂದು ಯಾರೂ ಹೇಳದೆ ಇರಲಾರರು ಇಡೀ ಭಾರತವು ಭಾಷಾನಾರ ರೀತಿಯಲ್ಲಿ ಒಂದೊಂದಾಗಿ ಒಡೆದರೆ, ಅವು ಅಲ್ಲಲ್ಲೇ ಸ್ವತಂತ್ರವಾಗಿ ಭಾರತದ ವಿಕತಂತ್ರಕ್ಕೆ ಧಕ್ಕೆ ಬಂದೀತೆಂಬ ಭಯವು ಕೇಂದ್ರ ಸರ್ಕಾರಕ್ಕೆ ಇರುವುದರಿಂದಲೇ ದ್ವಿಭಾಷಾ ಪ್ರದೇಶ ರಚನೆಯನ್ನು ಮುಂದೊಡ್ಡಿರಬಹುದೆಂದು ಅನಿಸಿಕೆಯಿದೆ ಹಾಗಿದ್ದು ಪಕ್ಷದಲ್ಲಿ ಭಾಷಾವಾರ ಪ್ರಾಂತರಚನೆಯು ಗೊಂದಲಕ್ಕೆ ಹೋಗಬಾರದಾಗಿತ್ತು ಮಾಡಿದ್ದಾಯಿತು ಆ ಪ್ರಕಾರ ಭಾರತದಲ್ಲೆಲ್ಲಾ ಭಾಷಾವಾರವೇ ಪ್ರದೇಶಗಳನ್ನು ವಿಂಗಡಿಸುವದು ಸೂಕ್ತವಾಗಿ ತೋರುತ್ತದೆ

ನುಂಬೈನಗರವು ಮಹಾರಾಷ್ಟ್ರಭಾಗದಲ್ಲಿದ್ದು ಅದು ಮಹಾರಾಷ್ಟ್ರದ್ದೇ ಎಂಬುದನ್ನು ರಾಷ್ಟ್ರದ ಮಹಾನಾಯಕ ರಾದಿಯಾಗಿ ಸಕಲರೂ ಪಪ್ಪುಕ್ತಿರುವಾಗ ಅದನ್ನು ಮಹಾರಾಷ್ಟ್ರದಲ್ಲಿ ಸೇರಿಸದಿದ್ದುದಕ್ಕೆ ಎನ್ತೆಷ್ಟು ಪ್ರಮಾದ ಗಳು ನಡೆಯುತ್ತಿವೆಯೆಂಬುದು ಎಲ್ಲರ ಗಮನಕ್ಕೆ ಬರ ಹತ್ತಿದೆ ಇಂದು ಮುಂಬೈನಗರದ ಪ್ರಶ್ನೆಯು ಭಾರತ ಸರಕಾರಕ್ಕೆ ಬಗೆಹರಿಯದ ಸಮಸ್ಯೆಯಾಗಬೇಕಾದರೆ, ಮಹಾನಾಯಕರಲ್ಲಿ ವಮ್ಮತವಿಲ್ಲವೆಂದೆ ಹೇಳಬಹುದು ಮುಂಬೈ ಮಹಾರಾಷ್ಟ್ರಕ್ಕೆ ಸೇರದಿದ್ದರೆ ಶ್ರೀ ದೇಶಮುಖರ ರಾಜೀನಾಮೆ, ದ್ವಿಭಾಷಾಪ್ರಾಂತಕ್ಕೆ ಸೇರದಿರೆ ಶ್ರೀ ಮೊರಾರ್ಜಿದೇಸಾಯಿಯರ ರಾಜೀನಾಮೆ ಹೀಗೆ ನಾಯಕರೇ ಇಬ್ಬಗೆಯಾಗಿ ನಡೆದರೆ ದೇಶದಲ್ಲಿ ವಕ್ಕಟ್ಟು ಹೇಗೆ ನೆಲೆಗೊಳ್ಳಬಹುದು ಹಳ್ಳಿಯ ಕೈಕರು ಏನೋ ಒಂದು ನಂದಿಗೆಯಿಂದ ಮಹಾತ್ಮಾಗಾಂಧಿಯವರ ಹೆಸರು ತಳ್ಳಿ ನೋಡೂಡಿದ ಎತ್ತಿನ ಜೋಡಿಯ ಗುರುತಿ ಓಟುಕೊಟ್ಟುದನ್ನು ಕಾಂಗ್ರೆಸ್ ಭಕ್ತರಾದ ನಾಯಕರು ಮಹತ್ಕಾರ್ಯ ತಪ್ಪನ್ನು ಸಾಧಿಸದೆ ಪ್ರಜೆಗಳ ಮೂಢ ವಿಶ್ವಾಸವನ್ನು ಲೆಕ್ಕಿಸದೆ ತಮ್ಮ ತಮ್ಮ ಹಟಭಾವನೆಗಳ ತಮ್ಮ ಮುಂದುವರಿಸಿ ಸುಮ್ಮನೆ ಜನತೆಯ ಶ್ರಾಣವನ್ನು ಹಿಂಡುತ್ತಿದ್ದಾರೆ. ತಮ್ಮಲ್ಲಿಯ ವಕ್ಕಟ್ಟನ್ನು ನಾಗರಿಗಳಿಗೆ ದೇಶದಲ್ಲಿ ವರ್ಗಭೇದವೆಂದು ಸಾರುತ್ತಾರೆ. ಹೀಗೆ ಮತ ಭೇದದಲ್ಲಿರುವ ನಾಯಕರು ತಮ್ಮ ಧೋರಣಗಳನ್ನೇ ಮುಂದುವರಿಸುತ್ತಿರುವುದರಿಂದ ದೇಶದಲ್ಲಿ ಶಾಂತಿಯು ನೆಲೆಗೊಳ್ಳುವುದು ಅಸಂಭವನೀಯವೇ ಸರಿ ಆದುದರಿಂದ ಕೇಂದ್ರ ಸರ್ಕಾರವು ಶೀಘ್ರವೆ ಎಲ್ಲಾಡೆ ಅಹಿಂಸಾತ್ಮಾಖಾದಿನಲ್ಲಿ ನಡೆಯುತ್ತಿರುವ ಹಿಂಸಾಕೃತ್ಯ ನಿಲ್ಲಿಸಲು ಪ್ರಯತ್ನಿಸುವುದಲ್ಲದೆ ಭಾಷಾನಾರ ಪ್ರಾಂತ ರಚನೆಗೆ ಸುಗುಮವಾದ ಮಾರ್ಗವನ್ನು ನಿರ್ಪಡಿಸುವುದು ಸೂಕ್ತವಾಗಿ ತೋರುತ್ತದೆ

ಆತ್ಮನಿಭಾರ ಸಾಸಪತ್ರಿಕೆಯ ಸಂವಾದಕರಿಗೆ ಎಚ್ಚರಿಕೆ

ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಶ್ರೀ ಸೋಮನಾಥಾದಿ ಪಂಚತಿವಲಿಂಗಗಳಿಂದವತರಿಸಿ ವೀರಶೈವಮತವನ್ನು ಸ್ಥಾಪಿಸಿ ಚಕ್ರಯರ್ಮಗಳಲ್ಲಿಯೂ ಧರ್ಮಪರಿಪಾಲನ ಮಾಡುತ್ತ ಒಂದಿರುವದು ಸುಪ್ರಸಿದ್ಧ ವಿಷ್ಟೆ ಆ ಪ್ರಕಾರ ವೀರಶೈವಮತಸಿದ್ಧಾಂತವನ್ನೂ ಪೂರ್ವಕಾಲದಲ್ಲಿ "ಶಕ್ತಿವಿಶಿಷ್ಟಾದ್ವೈತಸಿದ್ಧಾಂತ "ವೆಂದು ನಿರ್ಣಯಿಸಿರುವರು ಈ ಸಿದ್ಧಾಂತವನ್ನೆ ವೆದವಾಕ್ಯ ಶಿವಾಗಮಗಳೂ ವೀರಶೈವ ಭಾಷ್ಯಗಳೂ ಪ್ರಕಿಪಾದಿಸುತ್ತಿರುವವು

ಯತ್ರಾ ವಿಶ್ವಾಮ್ಯವಿಕಲ್ಪಂ ಸ್ವಾಭಾವಿಕಮನುಪ್ರಮೆಂ। ನನುಸ್ಸ್ಫುಟ ಮಹೇಶಾಯ ಮಹಾದೇವಾಯ ಕೂಲಿನೇ ॥೭॥ ಯಾಮಾಹು ಸರ್ವಲೋಕಾನಾಂ ಪ್ರೌಢಿಂ ಶಾಸ್ತ್ರಾಪಾರಗಾಃ । ತಾಂ ಧರ್ಮಚಾರಿಣೀಂ ಕಂಥೋಂ ಪ್ರಣಮಾಮಿ ಪರಾಂ ಶಿವಾಂ ॥೭॥

ಸಿ॥ ಶಿ॥ ಪುಟ ೭

ಸಿದ್ಧಾಂತಶಿಖಾಮಣಿಯ ಈ ಮಂಗಲಶ್ಲೋಕಗಳಲ್ಲಿ ಗ್ರಂಥಕಾರರು ಶಿವನಿಗೂ ಎಕ್ತಿಗೂ ಅವಿನಾಭಾವ ಸಂಬಂಧವನ್ನು ತೋರಿಸಿರುತ್ತಾರೆ ಇದೇ ವೀರಶೈವ ಸಿದ್ಧಾಂತದ ಮೂಲ ರಹಸ್ಯವಾಗಿದ್ದು ಶಕ್ತಿವಿಶಿಷ್ಟಾದ್ವೈತವೆನಿಸುವದು ಈ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಮುಮುಕ್ಷುಗಳಲ್ಲಿಸ್ಥಿರ ಸಿದ್ಧಾಂತಶಿಖಾರುಣಿಕೆ ಗ್ರಂಥದಿಂದ ಅವಶ್ಯವಾಗಿ ತಿಳಿಯಬೇಕು ಜೀವನ ಮತ್ತು ಶಿವರ ಅದ್ವೈತವೇ (ಸಾಮರಸ್ಯವೇ) ಶಕ್ತಿವಿಶಿಷ್ಟಾದ್ವೈತ ವೆನಿಸುವದು ಶಕ್ತಿಯು ಪರಶಿವನಲ್ಲಿ ಅವಿನಾಭಾವ ಸಂಭಂಧದಿಂದಿದ್ದು ನಿತ್ಯವೆನಿಸಿರುವದು ಈ ವಿಷಯ ಕ್ಕೆ ಸಿದ್ಧಾಂತಶಿಖಾಮಣಿ ಗ್ರಂಥದ ಪುಟ ೨ ರಿಂದಾ ೧೧ ರ ವರೆಗೆ ನೋಡಬಹುದು

ಸರ್ವಾದ್ವೈತಶಿರಸನಸ್ಥಲದಲ್ಲಿ ಸಿ॥ ಪುಟ ೧೯೯ರಲ್ಲಿ "ಕ್ರಿಯಾಪ್ರಧಾನಂ ಕಕ-ವ್ಯಂ " ಎಂದು ಹೇಳಿ ಸಿರುವರು ಅದ್ವೈತದಲ್ಲಿ ಅಸಸ್ತಾನ್ ಪಾದರು ಶಿವನು ಸ್ವಾಮಿಯಾಗಿದ್ದಾನೆ ಜೀವನು ಆ ಶಿವನನ್ನು ಆಶ್ರಯಿಸಿ ಕೊಂಡಿದ್ದಾನೆ ಆದ್ದರಿಂದ ಪೂಜನೆಯು ಭೇದದ ದ್ವಿಯಿಂದಲೇ ಶ್ರೀ ಶಿವನನ್ನು ಪೂಜಿಸಬೇಕು ಶಿವ ಜೀವರ ಭೇದವ್ಯವಹಾರವು ಶಿವಪ್ರಜಾದಿ ಕ್ರಿಯೆಗಳಿಗೆ ಕಾರಣವಾಗಿರುವದರಿಂದ ಶಿವಲಿಂಗಪೂಜಾದಿ ಕರ್ಮ ನಿಷ್ಠನು ಶಿವಜೀವರಲ್ಲಿ ಅದ್ವೈತವನ್ನು ಆಚರಿಸ ಬಾರದು. ಪೂಜಾದಿವ್ಯವಹಾರವು ಯಾವಾಗಲೂ ಭೇದ ದಿಂದಲೇ ಕೂಡಿರುವದು ಆದುದರಿಂದ ಲಿಂಗಪೂಜ ಕನು ಅದ್ವೈತದಲ್ಲಿ ನಿರತನಾಗಬಾರದು (ಪುಟ ೧೯೯ ರಿಂದಾ ೧೯೫ ರ ವರೆಗೆ) ಶಿವಪೂಜಾಕರ್ಮನಿಷ್ಠನಾದ ಮಾತ್ರೆಶ್ವರನಿಗೆ ಶಿವ ಜೀವರ ಏಕ್ಯತೆ ಹೇಗೆ ಸಮ್ಮತ ವಲ್ಲವೋ ಹಾಗೆಯೇ ಶಿವನಿಗೂ ಅವನ ಶರೀರಗಳಾದ ಕೃಥಿವ್ಯಾದ್ಯಷ್ಟಮೂರ್ತಿಗಳಿಗೂ ಅದ್ವೈತವು ಸಮ್ಮತ ವಲ್ಲ ಶಿವನಿಗೆ ಪೃಥಿವಿ, ಅಪ್, ತೇಜಸ್ಸು, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಎಂಬ ಎಂಟು ಶರೀರ ಗಳು ಹೇಳಲ್ಪಟ್ಟಿವೆ ಈ ಶರೀರ-ಶರೀರಭಾವವು ಅಧಿ ಶಾಸ್ತ್ರ-ಅಧಿದೈವಭಾವದಿಂದಲೇ ಉಪಪನ್ನವಾಗು ವದೇ ಹೊರತು ಸ್ವರೂಪೈಕ್ಯದಿಂದ ಉಪಪನ್ನವಾಗ ಲಾರದು ಕೃಥಿವ್ಯಾದಿಗಳು ಕಾರ್ಯರೂಪವಾಗಿರುವವು. ಶಿವನು ಕಾರಣನಾಗಿರುವನು ಆದುದರಿಂದ ಕೃಥಿವ್ಯಾದಿ ಗಳಂತೆ ಆತ್ಮವು ಕೂಡಾ ಸಾಕ್ಷಾತ್ ಶಿವಕಾರಿಯಾಗದು. ಕೃಥ್ವಿ ಮೊದಲ್ಗೊಂಡು ಆತ್ಮಪರ್ಯಂತಮಾಗಿ ಎಂಟು ಪ್ರಕಾರವಾಗಿರುವ ಪ್ರಪಂಚವು ಶಿವನ ಶರೀರವೆನಿಸಿರುವದು. ಶಿವನು ಸರ್ವತತ್ತ್ವಾತೀಯಾಮಿಯಾಗಿರುವನು ಮತ್ತು ಅತ್ಮತೆಯಿಗೊಂಡಿದ್ದಾನೆ. ಶಿವನ ಶರೀರವೆನಿಸಿದ ಈ ಪ್ರಪಂಚವೊತ್ತಿಕೆ ಆತ್ಮರೂಪಿಯಾದ ಶಿವನಿಗೆ ಅಭೇದವಿರುವದಿಲ್ಲ ಅರ್ಥಾತ್ ಭೇದವೇ ಇರುವದು ಇನ್ನು ಶರೀರವೆನಿಸಿಕೊಂಡು ಭಿನ್ನವಾಗಿ ಕೃಥಿವ್ಯಾದಿ ಪ್ರಪಂಚವು ಶರೀರಿಯೆನಿಸಿಕೊಂಡಿರುವ ಶಿವನನ್ನು ಬಿಟ್ಟು ಪ್ರತ್ಯೇಕವಾಗಿಯೂ ಇರುವದಿಲ್ಲ ಅರ್ಥಾತ್ ಶಿವನಿಗೂ ಅವನಿಗೆ ಶರೀರಭೂತಗಳಾದ ಪ್ರಪಂಚಕ್ಕೂ ಗಳಿಗೂ ಭೇದಾಭೇದವೆನ್ನುವದೇ ಶ್ರೀಜಗದ್ಗುರು ರೇಣುಕಭಗವತ್ಪಾದರ ಅಭಿಪ್ರಾಯವು ಈ ಭೇದಾ ಭೇದವೇ ವೀರಶೈವ ಸಿದ್ಧಾಂತದ ರಹಸ್ಯವಾಗಿರುವುದು ಈ ಪ್ರಕಾರವಾಗಿರುವ ಅಪ್ಪಸಶರೀರಗಳೆನಿಸಿದ ಕೃಥಿವ್ಯಾದಿ ಗಳಿಗೆ ವಿಲಕ್ಷಣನಾಗಿರುವ ಶಿವನನ್ನು ಯಾವನು ನಿತ್ಯ ದಲ್ಲಿಯೂ ಧ್ಯಾನಿಸುವನೋ ಅವನು ಅತ್ಯನುಚಿತ ನಿರಾಸಕರಿಂದ ಹೇಳಿಸಿಕ್ಕಿಳ್ಳನು

ಆದ್ದರಿಂದ ಜೀವಾತ್ಮನು ಅತ್ಯತಂತ್ರನು ಪರಮಾತ್ಮನು ಸ್ವತಂತ್ರನು ಈ ವಿಷಯವನ್ನೇ ವೀರಶೈವ ಪಂಡಿತರಾದ ಶ್ರೀಪಶಿಪಂಡಿತರು ಬ್ರಹ್ಮಸೂತ್ರಭಾಷ್ಯದಲ್ಲಿ ದ್ವೈತಾದ್ವೈತವೆನೆಂದಿದ್ದಾರೆ ಶಿವನು ಪರಮಾತ್ಮ ಸ್ವರೂಪ ಸಗುಣ ಹಾಗೂ ನಿರ್ಗುಣನಾಗಿದ್ದಾನೆ ಜೀವ ತ್ವವು ಸತ್ಯ, ಪ್ರಪಂಚವು ಸತ್ಯ ಎಂಬ ಬಗ್ಗೆ ವೀರಶೈವ (ಶಕ್ತಿವಿಶಿಷ್ಟಾದ್ವೈತ) ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಶಿವಾಚಾರ್ಯಭಗವತ್ಪಾದರು ಸಿದ್ಧಾಂತಶಿಖಾ ಮಣಿಯಲ್ಲಿ ಎಳ್ಳಷ್ಟನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ ಅತ್ಯವಿಚಾರಪತ್ರಿಕಾಕರ್ತರೇ ! ನೀವು ಸಿದ್ಧಾಂತಶಿಖಾ ಮಣಿಯ ಸಂಪೂರ್ಣ ವಿಷಯವನ್ನು ಗ್ರಹಿಸದೆ ಎಲ್ಲೊ ಕೆಲವು ವಿಷಯಗಳನ್ನೆ ನೋಡಿಕೊಂಡು ತಪ್ಪು ಕಲ್ಪಿ ಕೊಂಡು ವೀರಶೈವ ಪಂಡಿತರ ಮೇಲೆ ದೋಷಕೆಡವು ವುದು ನಿಮ್ಮ ದೌರ್ಜನ್ಯವಾಗಿದೆ ಈ ದೋಷದಿಂದ ನಿಮ್ಮ ಇನ್ಮಾಂತರದಲ್ಲಿ ಗಳಿಸಿದ ಸತ್ಕರ್ಮದ ಫಲವು (ಪುಣ್ಯ) ನಶ್ಯವಾಗುತ್ತದೆ ಆದ್ದರಿಂದ ಶ್ರೀಜಗ ದ್ಗುರು ರೇಣುಕಭಗವತ್ಪಾದರು " ಸಿದ್ಧಾಂತಶಿಖಾಮಣಿ ಯಲ್ಲಿ ' ನಿವೆರಿಸಿದ ಸಿದ್ಧಾಂತವನ್ನು ನೀವು ಸರಿಯಾಗಿ ನೋಡಿ ಅರ್ಥಮಾಡಿಕೊಳ್ಳಬೇಕು

ವೇದಾಂತಿಗಳು " ಪರಬ್ರಹ್ಮ " ಎಂಬ ಶಬ್ದಕ್ಕೆ ಜೀವನನ್ನು ವಿಷಯನೆನ್ನಾಗಿ ಹೇಳುತ್ತಾರೆಯೋ, ಆ ಚಿಂಂತರ ಜಗತ್ಕಾರಣನಾದ ಸಚ್ಚಿದಾನಂದಸ್ವರೂಪ ನಾದ ಪರಶಿವನ್ನೆ ಪರಬ್ರಹ್ಮ (ಲಿಂಗವು) ಶಕ್ತಿವಿಶಿಷ್ಟ ವಾಗಿರಿ. ವುದು ಚಿಕ್ಷಾಮಗ್ರಿಯಿಂದಾಗಿ ಸ್ವೇಚ್ಛೆಯಿಂದ ನಾನಾ ವಿಧ ವಿಶ್ವಮಂಗಲಪರಿಪೂರ್ಣವಾಗಿ ಧರಿಸುವನೆಯೂ, ನೇತ್ರಾಪರ್ಣವುಳ್ಳವನೂ ಸರ್ವತೋವಿಪ್ಲವಗಮನ ಆದ ಪರಮಾತ್ಮನು ಶಕ್ತಿಯುಕ್ತನಾಗಿರುವುದರಿಂದ ವೀರಶೈವ ಮಾಹಾತಾರ್ಯರು ' ಶಕ್ತಿವಿಶಿಷ್ಟಾದ್ವೈತ" ಸಿದ್ಧಾಂತ ವೆಂದು (ಸಿದ್ಧಾಂತಶಿಖಾಮಣಿ ಪುಟ ೧೧ರಿಂದಾ ೧೫ ರ ವರೆಗೆ) ಸ್ಪಷ್ಟವಾಗಿ ವಿವರಿಸಿರುವರು ಶಕ್ತಿಯು ಪರಶಿವ ಬ್ರಹ್ಮವಸ್ತುವಲ್ಲಿ ಅವಿನಾಭಾವದಿಂದಿದ್ದು ನಿತ್ಯಸತ್ಯವಾಗಿರು ವುದು ಎಂಬೀಸಂಗತಿಯನ್ನು ಅವರಿಂದಲೇ ತಿಳಿಯಬೇಕು ಜಗದುತ್ಪತ್ತಿಕಾರಣೀಭೂತಳಾಗಿರುವ ವುದು ಶಕ್ತಿವಿಶಿಷ್ಟ ಬ್ರಹ್ಮವಿಂದುಸ್ಪಷ್ಟವಾದ ಜಗತ್ತೂ ಕೂಡ ಶಕ್ತಿವಿಶಿಷ್ಟವಾಗಿರುವುದು ಜೀವನು ಸ್ಥೂಲ ಚಿದಚಿದಾತ್ಮಕ ಶಕ್ತಿವಿಶಿಷ್ಟನಾಗಿರುವನು. ಜೀವನ ಸ್ಥೂಲ ಚಿಚ್ಛಕ್ತಿಯು ಕೆಂಚಿದ್ಭಾಸ್ಕರನಾಗಿರುವುದು ಜೀವನು ಈ ಎರಡು ವಿಧ ಶಕ್ತಿಗಳಿಗೆ ಅಕ್ಯಯವಾದ ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವನು ಅರ್ಥಾತ್ ಇಚ್ಛಾಶಕ್ತಿವಿಶಿಷ್ಟನಾಗಿರುವನು ಪರಶಿವನು ಸಚ್ಚಿದಾ ನಂದಸ್ವರೂಪನಾಗಿರುವನು ಮತ್ತು ಚಿರಾತರ ಪ್ರಪಂಚ ವ್ಯಾಪಕನೂ, ನಿತ್ಯನೂ, ಸತ್ಯನೂ ಆಗಿರುವನು. ವೀರ ಶೈವ ಸಿದ್ಧಾಂತದಲ್ಲಿ ಶಿವ ಜೀವರಿಗೆ ಭೇದಾಭೇದವನ್ನು ಮಾತ್ರ ಹೇಳಿರುವುದು. " ತತ್ತ್ವಮಸಿ' " ಅಹಂ ಬ್ರಹ್ಮಾಸ್ಮಿ " " ಸೇಹಶಾತ್ಮಾ ಪ್ರಜ್ಞಾನಂ " ಇತ್ಯಾದಿ ವಾಕ್ಯಗಳು ಮುಕ್ತಾವಸ್ಥೆಯಲ್ಲಿಯ ಅದ್ವೈತ ವನ್ನು ಬೋಧಿಸುತ್ತವೆ. ಈ ವಾಕ್ಯಗಳು ಸುಗವ ಮಾರ್ಗದಿಂದ ಸಾಮಂಜಸ್ಯವನ್ನುಂಟುಮಾಡುವವು ಇದೇ ಮಾರ್ಗವನ್ನೇ ವೀರಶೈವ ಮತಾಚಾರ್ಯರು ಆಮಶರಿಯರು ಅಂದಮೇಲೆ ವೀರಶೈವ ಪಂಡಿತರು ಹಾಗೂ ಮತಾಚಾರ್ಯರೂ " ಅದ್ವೈತಭಾವದಮೇಲೆ ಯಾವ ರೀತಿಯಿಂದಲೂ ದ್ವೇಷವಿಲ್ಲವು ನೂಡಿಯೆ ದಿಲ್ಲ. ಮತ್ತು ಆಂಶಂಶಾತ್ಮಕವಾದೀ ಜಗತ್ತು ಶಿವಮಯವಾಗಿರುವದು. ಕೃತ್ಸ್ನವೂ ಸಮಸ್ತ ಪ್ರಪಂ

ವನ್ನೂ ಶಿವನನ್ನೂ ಅದ್ವೈತಶಾಖವನೆಯೆಂದ ಕಾಣುವದ ರಿಂದರೇ ಶಿವೈಕ್ಯವೆಶುವದು ಇಂಥ ಶಿವಪ್ರಪಂಚ ಸೃಷ್ಟಿಯು ಅಧಾರಾಧೇಯಭಾವವುಳ್ಳದಾಗಿರುವುದು ಶಿವನು ಆಧಾರವಾಗಿರುವನು. ಇದಕ್ಕೆ " ಪ್ರಜ್ಞಾನಂ ಬ್ರಹ್ಮ " " ಸತ್ಯಂ ಜ್ಞಾನಮನಂತಂ ಬ್ರಹ್ಮ " ಮುಮು ಕ್ಷುವು ಶಿವಸ್ವರೂಪಿಯೇ ಲಿಸವಾಗಿರುವನು ನಿ ಪಿ ೧೩೬ರಿಂದ ೧೩೯ ರ ವರೆಗೆ ನೋಡುವುದು.

ಯಾವುದು ಅದ್ವೈತಸಿದ್ಧಾಂತದ ಮಹಾವಾಕ್ಯ ವೆಂದು ಪರಿಗಣಿಸಲ್ಪಟ್ಟಿದೆಯೋ! ಅದ್ವೈತದ ಆತ್ಮ ನಂದನೇ ಶ್ರೀಜಗದ್ಗುರುಯೆಂಬ ಯತಿಗಳೆಲ್ಲರೂ ತಿಳಿದಿರುವರೋ ಅದಿಲ್ಲವೂ ವೀರಶೈವ ಸಿದ್ಧಾಂತದಲ್ಲಿ ಆಳವಟ್ಟಿದೆ ಸ್ಥೂಲ ಸೂಕ್ಷ್ಮ ಕಾರಣಕರಿರಂಳ್ಳಿ ಇಷ್ಟ, ಪ್ರಾಣ, ಭಾವ, ಲಿಂಗಕ್ಕೂ ಸೃಷ್ಟಾಪ್ತಿಯಿಂದ ಅಂತ್ಯದವರೆಗೂ " ಶಿವಜೀವೈಕ್ಯ " ವಿದ್ಯೆಯ ಸರ್ವತಂತ್ರಸ್ವತಂತ್ರ ಶಕ್ತಿ ಸಂಬಂಧ ಮಹಾಗುರು ರೇಣುಕಭಗವತ್ಪಾದರ ಲಿಂಗಾಂಗ ಸಾಮರಸ್ಯರೂಪ ೧೦೧ ಸ್ಥಲದಲ್ಲಿ ಸ್ಪಷ್ಟವಾಗಿವೆ ವ್ಯಕ್ತೈಸ್ಥೇಷದಿಂದಲೇ " ಮತತತ್ವವದ " ರಹಸ್ಯ ತಿಳಿಯದೆಯೇ ಶರರ ಒತ್ತಾಯದ ದೋಳೆಯಿಂದಲೋ " ನೀವು " ವರ್ತಸಿದ್ದೀರಿ ಶ್ರೀಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರ ಶೆಸರನ್ನು ಪುನಃ ಪುನಃ ತಕ್ಕೊಂಡು ಅವರು ಹೀಗೆ ಹೇಳಲ್ಲಾ ಎಂದು ಬಡಬಡಿ ಸುತ್ತಾ ಮನಸ್ಸಿಗೆ ಬಂದಂತೆ ಪಂಡಿತರನ್ನು, ಭಾವ್ಯ ಕಾರರನ್ನು ಕುಚೋದ್ಯಮಾಡುತ್ತಾ ಬುದಿರುವಿರಿ ಇದರ ಪ್ರಾಯಶ್ಚಿತ್ತವನ್ನು ಇದೇ ಜನ್ಮದಲ್ಲಿ ನೀವು ಅನುಭವಿಸ ಬೇಕಾಗುವದು

ನಿಮ್ಮ ಜೂವ ಸಂಚಿಕೆ ೧೯೩೬ ಪು ೩೩ ರಲ್ಲಿ ಈರೀತಿ ಬರೆದಿರುವಿರಿ ' ಬ್ರಹ್ಮ ಮತ್ತು ತಿವ " ಒಂದೆಯಾದರೂ ಅದ್ವೈತ ಅಂದರೆ ಶಿವನಿಗೆ ಅನ್ಯವಾಗಿ ಯಥಾರ್ಥವಾದ ವಸ್ತುವ್ಯಾವದೂ ಇಲ್ಲ ವೆಂದು ಅರ್ಥವಾದರೂ, ಶಿವನಿಗೆ ಅನ್ಯವಾಗಿ ಪ್ರಪಂ-ಚವು ಸಕ್ಯವಾಗಿದೆ ಎಂದು ಹೇಳಿದರೆ ಶಿವಾದ್ವೈತಕವಾಗುವ ದಿಲ್ಲವಾದರೂ ನಿಮ್ಮ ಶಿವಾದ್ವೈತದಲ್ಲಿ ಬ್ರಹ್ಮಾದ್ವೈತ ವಿಲ್ಲವೆಂಬುದಾಗಿ ವೀರಶೈವಪಂಡಿತರು ನುಡಿಯುತ್ತಿ ರುವರು ಎಂದು ಹಾಸ್ಯಮಾಡಿರುವಿರಿ ಮತ್ತು ನೀವೇ ವೀರಶೈವ ಮತಸ್ಥಾಪನಾಚಾರ್ಯರು ಶ್ರೀ ಜ॥ ರೇಣುಕ ಭಗವತ್ಪಾದರನ್ನೇ ಮುಂದುಮಾಡಿ ನೀವೇ ನಿಮ್ಮ ಮನಸ್ಸಿಗೆ ಬಂದಂತೆ ಬರೆದುಕೊಂಡು ಶ್ರೀ ಗುರು-ಶಾಂತ ಶಾಸ್ತ್ರಿಗಳನವನ್ನು, ಪಂ॥ ನಾಗಭೂಷಣಶಾಸ್ತ್ರಿಗಳವರನ್ನು, ಮನೆಯ ಹಳಬು ನಿಮ್ಮ ಹೃದಯವನ್ನು ಖಾಂತಮಾಡಿ ಕೊಂಡಿರುವಿರಿ ' ಶಾಸ್ತ್ರವನ್ನು ಮುಚ್ಚುವ " ಮನ ಬಂದಂತೆ ಶಾಸ್ತ್ರ ಬೋಧಿಸುವ, ಬರೆಯುವ, ಪ್ರಚಾರ ಮಾಡುವ ತಮಗೆ ತಿಳಿಯದಿರುವ ಗ್ರಂಥಕ್ಕೆ " ನಿರೋಧ ವನ್ನು ಬೆಳಸಿ " ಅದ್ವೈತದ ಮೇಲೆ ದ್ವೇಷಮಾಡು ವವರು ಎಂದು ಏಕೈನೋ ದೋಷಗಾಡಲಿಕ್ಕೆ ಹೊರಟು ನಿಮ್ಮ ಆಡಂಬರವನ್ನು ಕೊಚ್ಚಿಕೊಳ್ಳುವಲ್ಲಿ ಪಂಡಿತ ಅಂದರೆ ಹೊಟ್ಟೆಪಾಡಿಗಾಗಿ ಇಟ್ಟುಕೊಂಡ ಹೆಸರು. ಎಂದು ಭಾಷ್ಯ ಬರೆದಿರುವಿರಿ ಅದರೂ ಸಿದ್ಧಾಂತಶಿಖಾ ಮಣಿಯಲ್ಲಿ ಪೂರ್ವಭಾಗ ಅಂಗಸ್ಥಲ ಹಾಗೂ ಉತ್ತರ ಭಾಗ ಲಿಂಗಸ್ಥಲವನ್ನು ಸಂಪೂರ್ಣವಾಗಿ ನೋಡಿ ಶ್ರೀಮಚಾರ್ಯರಿಂ ಸಿದ್ಧಾಂತವನ್ನು ಗುರುಮುಖ ದಿಂದ ತಿಳಿಯಿರಿ " ಶ್ರೀ ಸಿದ್ಧಾಂತಶಿಖಾಮಣಿ " ಗ್ರಂಥದಲ್ಲಿ ವೇದಾಂತ, (ಅದ್ವೈತವು) ತುಬಿ ತುಳುಕು ತ್ತಿದೆ. ಈಸಿದ್ಧಾಂತದಲ್ಲಿ ಅದು ಶಾಶ್ವತ್ಯಾ ಮತ್ಸ್ಯನೆಯನ್ನು ಕೊಟ್ಟಿದೆ. ವೀರಶೈವರ ಮುಖ್ಯ ವೈಶಿಷ್ಟ್ಯವಾದ " ಶ್ರೀಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಹಾಗೂ ಪಟ್ಟಸ್ಥಲ, ಸ್ಥೂಲ ಷಡ್‌ಲಿಂಗ ಅಂಚರ ಕ್ರಿಯೆಗಳು, ಶ್ರೀಸಿದ್ಧಾಂತ ಶಾಸ್ತ್ರೀಕಾಲ್ಯ ವ್ಯಾಪಾರಿಸಿ, ಅತ್ಯಾತುಭವಿಗಳಾಗುವ ಇಂಥ ಶಿವಕರಣರು ಅರವತ್ತೂ ನಿಂದಿಸಲಾರರು ನೀವು ವೀರಶೈವ ಪಂಡಿತರನ್ನು ನಿಂದಿಸುವದನ್ನು ನೋಡಿದರೆ ಈ ಮತೀಯರು ಹೌದೋ ಅಲ್ಲವೋ? ಎಂಬ ಸಂಶಯ ವಾಗುತ್ತದೆ ಇನ್ನಾದರೂ ನಿಮಗೆ ಅಂಟಿರುವ ರಾಯ ವನ್ನು ದೂರಮಾಡಿಕೊಳ್ಳುವಿರಾಗಿ ನಂಬುತೆನೆ.

ಮತಸಿದ್ಧಾಂತದ ಬಗ್ಗೆ ವಾದ ವಿವಾದ ಮಾಡುವದು ನಿಮ್ಮ ಕರ್ತವ್ಯವಲ್ಲಾ. ಶ್ರೀಯದಾಚಾರ್ಯರಿಂದ ತಿಳಿದು ಪಡೆಯುವುದು ಮತೀಯರ ಕರ್ತವ್ಯವು. ಮತಸ್ಥಾಪಕರ ಸಿದ್ಧಾಂತವೇ ಸಿದ್ಧಾಂತವು. ಇದು ಸೂಜ್ಞರ ಕರ್ತವ್ಯವು ಮತಸಿದ್ಧಾಂತ ವಿಷಯದಲ್ಲಿ ನಿಮಗೆ ಸಂಶಯ ವಿದ್ದರೆ ನೀನೇ ಖುದ್ದಾಗಿ ಸಮಕ್ಷವು ಮಹಾಚಾರ್ಯ ಭಗವತ್ಪಾದರಲ್ಲಿ ಅಗಳಮಾಡಿಕೊಂಡು ಅಪ್ಪಣೆಯನ್ನು ಶಾಂತರೀತಿಯಿಂದ ಆಲಿಸಿದರೆ ತಿಳಿಯುವುದು. ನಿಮ್ಮ ಮನೆಯಲ್ಲಿದ್ದೇ ಕುಳಿತು ಮತಬಂಧಂತೆ ಮಾತನಾಡಿ ದರೆ ಬರೆದರೆ ಪ್ರಚಾರಮಾಡಿದರೆ ನಿಮಗೆ ಬರುವ ಪ್ರತಿ ಫಲವು ಇಂದದೇ ಎಂದು ಹೇಳಲಿಕ್ಕಾಗದು ಶಾಂತ ಮಾರ್ಗವನ್ನು ತಾವು ಅವಲಂಬಿಸಬೇಕು ಅಂದರೆ " ವೀರಶೈವ ಮತಾಚಾರ್ಯರ " ಅಪ್ಪಣೆಯನ್ನು ಪಡೆದು ಈ ವಿಷಯವನ್ನು ತಾವು " ಪ್ರಸಿದ್ಧಪಡಿಸು ವುದು " ಇಲ್ಲವಾದರೆ " ಅಕಾಂತ ವಾತಾವರಣವನ್ನು " ಹುಟ್ಟಿಸಿದ ಅಪರಾಧವು ನಿಮ್ಮದು ನಾಗಣ್ಣನವರೇ ಎಚ್ಚರಾಗಿರಿ ಶ್ರೀ ವೀರಶೈವ ಸಚ್ಛಾಸ್ತ್ರವನ್ನು " ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರಿಂದ " ತಿಳಿದು ಪ್ರಸಿದ್ಧಿಸಿರಿ ಇಂಥ ಸದ್ಬುದ್ಧಿಯನ್ನು ಶ್ರೀ ಶಿವ ಶಕ್ತಿಯರು ನಿಮಗೆ ಅನುಗ್ರಹಿಸಲಿ

ಧರ್ಮಕ್ಕೆ ಜಯವಾಗಲಿ

ಧರ್ಮಾಭಿಮಾನಿ
ಆರ್ ಹೆಚ್ ವೀರಭದ್ರಯ್ಯಸ್ವಾಮಿ,
C o ಶ್ರೀ ಮುಕ್ತಿಮಂದಿರ ಗುರುಕುಲಮಠಂ

ಸಂತೋಷಪರ್ವಕ

ತಿನಮೋಗ್ಗಾ ತಾಲ್ಲೂಕು ಹಾರನಹಳ್ಳಿ ಗ್ರಾಮದ ಲ್ಲಿರುವ ಶ್ರೀ॥ ಜ॥ ರಂಭಾಪುರೀ ಸಂಸ್ಥಾನದ ಆಸ್ಥಾನ ವಿದ್ವಾನ್ ಕೆ·ತಿನಾಥಾಚಾರ್ಯ ವೇ॥ ಬ್ರ॥ ಶ್ರೀ॥ ಗುಬ್ಬೀ ಶಿವರುದ್ರಶಾಸ್ತ್ರಿಗಳವರ ಪುತ್ರ ಚಿ॥ ಶಿವಾನಂದ ಸ್ವಾಮಿಯು ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀ ಜ॥ ರೇಣುಕಾಚಾರ್ಯರ ಕೃಪೆ ಯಿಂದ ಉತ್ತೀರ್ಣನಾದನೆಂದು ತಿಳಿಸಲು ಸಂತೋಷಿಸು ತ್ತೇವೆ ಓರ್ವ ಸಹಪಾಠಿ

ಗಡಿನಿವಾಡಗಳ ಇತ್ಯರ್ಥಕ್ಕೆ ಸೂತ್ರ

ಪಾರ್ಲಿಮೆಂಟಿನ ಸದಸ್ಯರಾದ ಶ್ರೀಗಳಾದ ಎಸ್ ನಿಜಲಿಂಗಪ್ಪ ವಿ ಕೆ ಧಾಗೆ ಎ ಎಂ. ಜಯಸೂರ್ಯ, ಮಾಧವರೆಡ್ಡಿ ಮತ್ತು ಯೆಲ್ಲಾ ರೆಡ್ಡಿಯವರು ಕೇಂದ್ರದ ಗೃಹಸಚಿವ ಪಂಡಿತ ಗೋವಿಂದವಲ್ಲಭ ಪಂತರನ್ನು ದಿಹಲಿಯಲ್ಲಿ ಭೇಟಿ ಮಾಡಿ, ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳ ನಡುವಣ ಗಡಿವಿವಾದಗಳ ಇತ್ಯರ್ಥ ಕ್ಕಾಗಿ ಸೂತ್ರವೊಂದನ್ನು ಅವರಿಗೆ ಒಪ್ಪಿಸಿದರು ಹಾಗೆ ಮಾಡಲು ಆ ನೂರು ಪ್ರದೇಶಗಳ ಪಾರ್ಲಿಮೆಂಟ್ ಸದಸ್ಯರು ಆಯಾರಿಗೆ ಅಧಿಕಾರ ನೀಡಿದ್ದರು.

ಒಂದು ಗ್ರಾಮ ಅಥವಾ ರಿವನ್ಯೂ ಸರ್ಕಲಿನಲ್ಲಿನ ಜನರ ಪೈಕಿ ಕನಿಷ್ಠಪಕ್ಷ ೬೦ ರಷ್ಟು ಜನರಾದರೂ ಹಿಂದೀ ಭಾಷಾ ಮಾರ್ಗಕ್ಕೆ ಸೇರಿದಲ್ಲಿ ಗಡಿಪ್ರದೇಶ ಅವುಗಳ ನೆರೆಯ ಪ್ರದೇಶವೊಂದಿಗೆ ಸೇರಿಸಲು ಗ್ರಾಮ ಅಥವಾ ರಿವನ್ಯೂ ಸರ್ಕಲ್ಲನ್ನು ಮೂಲ ಘಟಕವನ್ನಾಗಿ ಪರಿಗಣಿಸಬೇಕೆಂಬುದು ಈ ಸೂತ್ರದ ಮುಖ್ಯಾಂಶ ವೆಂದು ಹೇಳಲಾಗಿದೆ.

' ಶಾಲೆಗಳಲ್ಲಿ ಪ್ರಥಮ ಭಾಷೆ ಕನ್ನಡವಾಗಲಿ '

ಪಂಡಿತಮಂಡಲಿ ನಿರ್ಣಯ

ಬೆಂಗಳೂರು ನಗರದಲ್ಲಿ ನಡೆದ ವಿದ್ಯಾಪಾಲಾ ಪಂಡಿತ ಮಂಡಲದ ೧೭ನೇ ಸಮ್ಮೇಳನದಲ್ಲಿ ಶಾಲೆಗಳಲ್ಲಿ ಕನ್ನಡ ವನ್ನು ಪ್ರಥಮ ಭಾಷೆಯನ್ನಾಗಿ ಪರಿಗಣಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸುತ್ತ ಈ ಕೆಳಗೆ ಕಂಡ ನಿರ್ಣಯಗಳನ್ನು ಸ್ವೀಕರಿಸಿತು.

ಪ್ರೌಢಶಾಲೆಗಳಲ್ಲಿ ಕನ್ನಡ ಸಂಸ್ಕೃತ ಮತ್ತು ದೇಶ ಭಾಷಾ ಬೋಧನೆಗೆ ಅರು ವಿಶೇಷತ್ತುಗಳಿರಬೇಕು.

ಎಸ್. ಎಸ್. ಎಲ್. ಸಿ. ಪರೀಕ್ಷೆಯು ಸಂಸ್ಕೃತ ಕನ್ನಡಗಳ ಮಟ್ಟದ ಪ್ರಥಮ ದ್ವಿತೀಯ ಶ್ರೇಣಿಗಳಿರಬೇಕು.

ಕೈಪ್ಪುಲು ತರಗತಿಗಳಿಗೆ ಕನ್ನಡ ಗದ್ಯಭಾಗವು ಇಂಗ್ಲೀಷ್ ಗದ್ಯಭಾಗದಂತೆ ಉತ್ತೀರ್ಣವಾದ ಸಾಹಿತ್ಯದ ಆಯ್ಕೆಗಳಿಂದ ಕೂಡಿದುದಾಗಿರಬೇಕು ಈಗ ವಿದ್ಯಾ ಶಾಲೆಯು ನಡೆಯುತ್ತಿರುವ ವಿದ್ವತ್ ಪಂಡಿತ ಮತ್ತು ಮೌಲ್ವಿ ಪರೀಕ್ಷೆಗಳನ್ನು ಇನ್ನು ಮುಂದೆ ವಿಶ್ವವಿದ್ಯಾ ನಿಲಯದೇ ನಡೆಯಿಸಬೇಕು.

ಪಂಡಿತ ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದವ ರನ್ನೇ ಸೀನಿಯರ್ ಪ್ರೈಮರೀ ತರಗತಿಗಳಿಗೆ ಕನ್ನಡದ ಬೋಧಕರನ್ನಾಗಿ ನಿಯಮಿಸಬೇಕು

ವಿದ್ವಾ, ಪಂಡಿತ ವ-ತ್ತು ಮೌಲ್ವೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಇಂಟರ್, ಬಿ ಎ ಪರೀಕ್ಷೆಗಳಲ್ಲಿ ಅಂಗ್ಲಭಾಗಕ್ಕೆ ಕುಳಿತುಕೊಳ್ಳಲು ವಿಶ್ವವಿದ್ಯಾನಿಲಯವು ಅನುಮತಿಯನ್ನು ಕೊಡಬೇಕು.

ಮೈಸೂರು ವಿಶ್ವವಿದ್ಯಾನಿಲಯವು ಮದ್ರಾಸಿನಲ್ಲಿರು ವಂತೆ ಬಿ ಓ ಎಲ್ ಮತ್ತು ಎಂ. ಓ ಎಲ್. ಪರೀಕ್ಷೆ ಗಳನ್ನು ನಡೆಯಿಸಬೇಕು

ಕನ್ನಡ ಪಂಡಿತ ಪರೀಕ್ಷೆಯನ್ನು ಪ್ರತಿ ವರ್ಷವೂ ನಡೆಯಿಸಬೇಕು ಮತ್ತು ಇವಕ್ಕೆ ಬೆಂಗಳೂರನ್ನು ಒಂದು ಪರೀಕ್ಷಾ ಕೇಂದ್ರವನ್ನಾಗಿ ಮಾಡಬೇಕು

ಕರ್ನಾಟಕ-ಕೇರಳ ವಿಲೀನ ಯೋಜಿಸಲಾಗದ ಸಲಹೆ

ಹುಬ್ಬಳ್ಳಿ ೩೧೦ " ಕರ್ನಾಟಕ ಮತ್ತು ಕೇರಳದ ಜನತೆಗೆ ಸಾಮಾನ್ಯ ಹಿತದ ಅಂಶಗಳಾವುವೂ ಇಲ್ಲದಿರು ವುದರಿಂದ ಈ ವಿಷಯ ಪ್ರದೇಶಗಳನ್ನು ವಿಲೀನಗೊಳಿಸ ಬೇಕೆಂಬುದು ಯೋಜಿಸಲಾಗದ ಸಲಹೆ " ಎಂದು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚಜ್ಜಬಸಪ್ಪ ಅಂಬಲಿ ಯವರು ಹುಬ್ಬಳ್ಳಿಯಲ್ಲಿ ಗತ್ರಕರ್ತರಿಗೆ ತಿಳಿಸಿದರು

" ಕರ್ನಾಟಕ-ಕೇರಳಗಳು ವಿಲೀನವಾಗಿ ದ್ವಿಭಾಷಾ ಪ್ರಾಂತ್ಯರಚನೆಯಾಗಬೇಕೆಂದು ರಾಜ್ಯಪುನರ್‌ವಿಂಗಡಣೆ ಮೊದಲಿ ಲೋಕಸಭೆಯಲ್ಲಿ ಶ್ರೀ ಬಿ ಶಿವಂಕರ್‌ರವರು ತಂದಿರುವ ಶಿದ್ಧಪಡಿಗೆ ಕರ್ನಾಟಕ ಕಾಂಗ್ರೆಸ್‌ನೆ ಒಪ್ಪಿಗೆ ಪಡೆದಿತ ಇಂತಹ ವಿಷಯಗಳಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯದೇ ಅಂತಿಮ ನಿರ್ಧಾರ ' ಎಂದು ಅವರು ಹೇಳಿದರು

ಅಂನ್ನ ಮತ್ತು ಮಹಾರಾಷ್ಟ್ರದ ನಾಯಕರು ದ್ವೇಷ ಭಾವನೆಗಳಿಗೆ ಎಡೆಯಿಲ್ಲದಂತೆ, ಬಹುಸಂಖ್ಯಾತ ಕನ್ನಡಿ ಗರಿರುವ ಗಡಿ ಪ್ರದೇಶಗಳನ್ನು ಹೊಸ ಕನ್ನಡ ರಾಜ್ಯಕ್ಕೆ ಬಿಟ್ಟುಕೊಡುವಂತೆ ಅಕಯವನ್ನು ಶ್ರೀ ಅಂಬಲಿಯ ವರು ವ್ಯಕ್ತಪಡಿಸಿದರು

ಸಂಚಾರಿಯ ಸರಸವಾಣಿ

ರಷಿಯನ್ನರು ದೈವದ್ರೋಹಿಗಳೆಂದು ಹೇಳುತ್ತಿರುವ ಅಮೇರಿಕದ ಅಧ್ಯಕ್ಷರು ನೆರೆರಾಷ್ಟ್ರಗಳನ್ನು ಅಖಾಡಾಯು ವಿಷಕ್ಕೆ ಗುರಿಮಾಡಲೆತ್ನಿಸುವ ಇವರೆಂಥ ಕ್ರೈಸ್ತಿಯನ್ನು ರೆಂದು ಬೇರೊಬ್ಬರು ಹೇಳುತ್ತಿರುವಂತೆ ಮಗ ಸಚ್ಚರೂ ಚೆಂಡಿಯಲ್ಲಿ ಸೊಸೆ ವಿಧವೆಯಾಗಲಿಂ ಎಂಬ ನೀತಿಯು ಅಮೇರಿಕಾದ ಅಧ್ಯಕ್ಷರಲ್ಲಿ ಇರುವುದಲ್ಲವೆ?

* * *

ಸಿಲೋನಿನಲ್ಲಿ ಅತ್ತ-ಬಟ್ಟೆ ಕೊಟ್ಟು ವೇರೆಯವರಿಂದ ಭಿಕ್ಷೆಬೇಡಿಸಿ ದುಡ್ಡುಗಳಿಸುವ ' ಮುದಲಾರಿ 'ಗಳಿಂಚ ಕಂಟ್ರಾಕ್ಟರುಗಳ ಸಂಖ್ಯೆ ಹೆಚ್ಚುತ್ತಿರುವಂತೆ ಭಾರತದಲ್ಲಿ ಅರಿಯದ ಜಡ ಹುಡಿಗಯರನ್ನು ಕರೆದೊಯ್ದು ಚಾರತ್ರದ ವ್ಯಾಪಾರಕ್ಕೆ ಹಚ್ಚುವ ' ಮುಂಬೈ ದಲಾಲಿ ' ಗಳ ಸಂಖ್ಯೆಯೂ ದೆಳೆಯುತ್ತಿರುವುದಲ್ಲವೆ?

* * *

ಸಚ್ಚಕ್ಕೆ ಹಿಂಜರಿಯದೆ, ಇಚ್ಛಬಂದಾಗ ಹೊರಡುವ, ಕೂಡಲೆ ನಿಂತುಹೋಗುವ, ಸಚ್ಚನ್ನೇ ಪ್ರತೀಕ್ಷಿಸುವ ವಾರಪತ್ರಿಕೆ ಚೀಕೆಂದು. ರಾಜಾಜಿ ಹೇಳಿದರಂತೆ. ಮೊದಲೇ ಮತ್ತು ಕೊನೆಯ ಕಡೆಗಳಲ್ಲಿ ಬಿಟ್ಟಿರಿ ಸಾಮಾನ್ಯವಾಗಿ ರಾಜಾಜಿ ಬಯಸುವ ಪತ್ರಿಕೆಗಳು ಕಡಾಪರದಲ್ಲಿ ಅತೀಸವಿರುತ್ತವೆ.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಶೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು, ದೇವನಾಗರಿಭಾಷೆಯಲ್ಲಿದ್ದಿತು. ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರಿಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೂರುಸೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಪೋಷಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ಲೂ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರು ಲಿಂಗವನ್ನು ಧರಿಸಿರುವ ಫೋಟೋ ೦—೬—೦
ಶ್ರೀರೇಣುಕಾಚಾರ್ಯರ ಲಿಂಗಾಭಿಷೇಕದ ಫೋಟೋ (ಸ್ನಾನ ಮಾಡಿಸುತ್ತಿರುವುದು) ಸೈಜು ೧೪ × ೧೦ ಬೆಲೆ ೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರ ಫೋಟೋ (ಚಿಕ್ಕಸೈಜು ೦—೦—೩
ಶ್ರೀಜಗದ್ಗುರು ಪಂಚಪೀಠಾಧ್ಯಕ್ಷರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೪—೦
ಶ್ರೀರೇಣುಕಾಚಾರ್ಯರು ಆಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೧—೧—೦
ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗಾವತಾರದ ಫೋಟೊ ಸೈಜು ೧೪ × ೧೦ ಬೆಲೆ ೧—೪—೦
" " " " ಚಿಕ್ಕ ಸೈಜು ಬೆಲೆ ೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧೂಳಗಿರಿಂದ ಅವತಾರವು ಫೋಟೋ ೦—೦—೬
ಶ್ರೀ ರೇಣುಕಾಚಾರ್ಯರು ಮಧ್ಯಮುನೀಶ್ವರ ಶಿವಾಚಾರ್ಯರಿಗೆ ಕಲ್ಯಾಣದಲ್ಲಿ ಜ್ಞಾನವನ್ನು ಉಪದೇಶಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಶ್ವಕರ್ಮಾಚಾರ್ಯರಿಗೆ ಇಂದ್ರಮುನೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಶ್ವಬ್ರಾಹ್ಮಣ ಸಾರ್ವಭೌಮರಿಗೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯರಿಗೆ ಶಿವಾಗಮಗಳನ್ನು ಉಪದೇಶಿಸುವ ಫೋಟೋ (ನಾನಾವಿಧಬಣ್ಣದ್ದು) ೦—೪—೦
ಶ್ರೀ ಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣೆಮಾಡುವ ಫೋಟೋ ೦—೧—೬
ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಷಷ್ಠಲಿಂಗಶಿವಾಚಾರ್ಯರ ಫೋಟೋ ೦—೧—೬
ಶ್ರೀಸದ್ಧರ್ಮಾಧೀಶ ಶ್ರೀರೇಣಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ ೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ ೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ ೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಣಿಯವರು ವಿರಾಜಿಸುತ್ತಿರುವ ಫೋಟೋ ೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಹೊಸ ಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ) ... ... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ... ... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ... ... ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ ... ... ೧ ಆಣೆ
ಶ್ರೀಸಂಜೀವಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ) ... ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ... ೨ ಆಣೆ
ಶಿವಶತ್ರಿವಿಲಾಸ ... ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ... ೨ ಆಣೆ
ಬಿಲ್ವಮಹಾತ್ಮ್ಯ (೩ನೆಯ ಆವೃತ್ತಿ) ... ೩ ಆಣೆ
ಸಂಧ್ಯಾಪ್ರಕಾಶ ಶಿವಪೂಜಾವಿಧಿ (೧೧ನೆಯ ಆವೃತ್ತಿ) ... ೩ ಆಣೆ
ಅನಸೂಯಾಪತಿಜಾತಕತ್ವದರ್ಪಣ (೫ನೆಯ ಆವೃತ್ತಿ) ... ೩ ಆಣೆ
ಪಂಚಾಚಾರ್ಯಪ್ರಕಾಶ ... ೩ ಆಣೆ
ಪಂಚಾಚಾರ ಪ್ರಕಾಶಿಕಾ ... ೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) ... ೩ ಆಣೆ
ಶ್ರೀಪಟಿಪಂಡಿತಾರಾಧ್ಯರ ಕಾಲನಿರ್ಣಯ ... ೪ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ) ... ೪ ಆಣೆ
ಲಿಂಗಧಾರಣವಿಧಿ ... ೪ ಆಣೆ
ಗರ್ಭಾಧಾನವಿಧಿ ... ೪ ಆಣೆ
ವಿವಾಹವಿಧಿ (೮ನೆಯ ಆವೃತ್ತಿ) ... ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ... ೪ ಆಣೆ
ವೀರಶೈವ ಅಂತ್ಯೇಷ್ಟಿ-ಶ್ರಾದ್ಧವಿಧಿ ... ೪ ಆಣೆ
ವೈದಿಕವಾಙ್ಮಯರಹಸ್ಯ ... ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ... ೪ ಆಣೆ
ಕರ್ತೃವಿಚಿಷ್ಣಾದ್ವೈತಸಿದ್ಧಾಂತ ... ೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ... ೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ) ... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ... ೮ ಆಣೆ
ಶಿವಾದ್ವೈತಕರಭಾಷಾ (ಸಂಸ್ಕೃತ) ... ೮ ಆಣೆ
ವೀರಶೈವಮಹಾತ್ಮರು ... ೮ ಆಣೆ
ಅನಸೂಯಾಪತಿವಾಸರ (೨ನೆಯ ಆವೃತ್ತಿ) ... ೮ ಆಣೆ

ಅಗಸನಸರಿಪ್ರಾಸ ... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ... ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ ... ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ ... ೮ ಆಣೆ
ಕನ್ನಡ ನ್ಯಾಯಶತಕಮ್ ... ೮ ಆಣೆ
ಮಕುಟಾಗಮ ... ೮ ಆಣೆ
ಕಾರಣಾಗಮ ... ೧೨ ಆಣೆ
ಸೂಕ್ಷ್ಮಾಗಮ ... ೧೨ ಆಣೆ
ಚಂದ್ರಜ್ಞಾನಾಗಮ ... ೧ ರೂ
ಸಿದ್ಧಾಂತಸಾರಾವಳಿ (ಶ್ರೀಮೋಘಶಿವಾಚಾರ್ಯಕೃತ) ... ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ... ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ... ೧ ರೂ
ಮಾದೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ... ೧ ರೂ
ಶಿವತತ್ವ ರೇಣುಕವಿಜಯ (೩ನೆಯ ಆವೃತ್ತಿ) ... ೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ... ೧ ರೂ.
ವೀರಮಾಹೇಶ್ವರಚಂದ್ರಿಕೆ ... ೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತವಯುಕ್ತವಾದುದು. ೩ನೆಯ ಆವೃತ್ತಿ) ... ೧೫ ರೂ.
ಶ್ರೀವರಭಾವ್ಯಂ (೨ನೆಯ ಆವೃತ್ತಿ) ... ೧೫ ರೂ.
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್ ... ೧೫ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ) ... ೩ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಾತ್ರದ ಫೋಟೋಗಳಿರುವುವು) ... ೩ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ... ೫॥ ರೂ.
A brief life-sketch of Pandit Sri Kashinatha Shastriji (*English*) 4 As,
The Philosophical Aspect of Virasaivism (*English*) ... 8 As.
Speeches by Pandit Shri Kashinatha Shastriji (*English*) 12 As
ಶೀಲಸಿದ್ಧಿ (ಅರಬಿ) ... ೩ ೧೯-೦
ಶೀಲಸಿದ್ಧಿಕಾರಿಕಾ (ಅರ್ಥಸಹಿತ) ... ... ೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahmmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತಂ ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಪಂಕಜಾತಜನಿತರ್ ಪಂಚಾಸ್ಯಸೃಷ್ಟೀಶಾದಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೂಲೋಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಂತೀಶಾಭಿಶಾಸ್ತ್ರಿಗಳವರು.

ಚಾರ್ಜಿಗೆ ಇಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ.೧೧ ಆ

ಸಂಪುಟ ೩೦] ಸೋಮವಾರ ತಾ॥ ೨೦ ನೇ ಆಗಸ್ಟ್ ೧೯೩೩ [ಸಂಚಿಕೆ ೧೪

ಪತ್ರವ್ಯವಹಾರ

[ಬಾಹ್ಮೀಯಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕೆಂದು —ಸಂ]

ಆತ್ಮವಿಚಾರ ಪತ್ರಿಕೆಯ ಅಪಸ್ಮಾರ

ಈ ಪತ್ರಿಕಾ ಸಂಪಾದಕರು ಸಾಮಾನ್ಯನಾಗಿ ಇಂಗ್ಲೀಷು ವಿದ್ಯಾಭ್ಯಾಸಿಗಳಾಗಿದ್ದು ಆದಕ್ಕೆ ತಕ್ಕ ಧನ ಸಂಗ್ರಹದ ನಾನಾ ಉದ್ಯೋಗಗಳನ್ನು ಕಲ್ಪಿಸಿಕೊಂಡು ಈವರೆಗೆ ಧನಾರ್ಜನೆಯಲ್ಲಿಯೇ ಬಂದರು ಇದೂ ಸಾಲದ್ದಕ್ಕೆ ತಮ್ಮ ೭೨ ನೆಯ ವರ್ಷದ ವಿರಾಮ ಕಾಲದಲ್ಲಿಯೂ ಸಹ ಧನಸಂಗ್ರಹದ ಈ ವೃತ್ತಿಯನ್ನು ಪುನಃ ಹಿಡಿದಿದ್ದಾರೆ ಆದರೆ ಈ ನೇದಾಂತ ಪತ್ರಿಕೆಯನ್ನು ನಡೆಸಿಕೊಂಡು ಹೋಗಬೇಕಾದರೆ ಮೊದಲ ನೆಯದಾದ ಸಂಸ್ಕೃತ ವಿದ್ವತ್ತು ಗ್ರಂಥಾವಲೋಕನ ದಿಂದುಂಟಾದ ಅನುಭವ, ಮೇಲಾಗಿ ಸತ್ಯಸಂಧತೆ ನಿಷ್ಪಕ್ಷಪಾತ ಮನೋವೃತ್ತಿ, ಇಂಥಾ ಸದ್ಗುಣಗಳಿದ್ದರೇನಿ ಪತ್ರಿಕಾಚಾಲನೆಯಲ್ಲಿ ಇವರು ಯಕಶ್ಚಿತ್ ಪಡೆಯಬಹುದು ನಾಚಿಕೆವ್ಯವಹಾರ ಸಹ ಅದರಿಂದ ಜ್ಞಾನವನ್ನು ಸಂಪಾದಿಸಬಹುದು ಶ್ರೀಮಾನ್ ನಾಗಣ್ಣನವರಿಗೆ ಮೇಲ್ಕಂಡ ಯಾವ ಸಾಧನಗಳೂ ಇಲ್ಲವೆಂಬುದು ಇವರ ಒರವಣಿಗೆ ಯಿಂದಲೇ ವ್ಯಕ್ತವಾಗುತ್ತದೆ ಇವರು ಮೊದಲೊದಲು ತಮ್ಮ ಆತ್ಮವಿಚಾರ ಪತ್ರಿಕೆಯಲ್ಲಿ ಕ್ರೈಸ್ತ ಬೈಬಲ್ಲಿನ ವಚನಗಳನ್ನು ಕನ್ನಡಕ್ಕೆ ಪರಿವರ್ತಿಸಿ, ಸರ್ವೇಶ್ವರನ ಅಂಕಿತದಲ್ಲಿ ಬರೆಯತೊಡಗಿದರು ಬೈಬಲ್ಲಿನ ಪರಿಶಾಪವು ಪೌರಿಯಾದಮೇಲೆ ನೇದಾಂತವಿಚಾರವನ್ನು ಬೋಧಿಸುವ ದಾಸರ ಪ್ರದ, ವೈದ್ಯವಿಚಾರ ನಿಘಂಟುಗಳ ವಚನ ಇತ್ಯಾದಿ ಗ್ರಂಥಗಳ ಪ್ರಚಾರಮಾಡಲುಯತ್ನ ಕ್ರಮಾದರು ತಮ್ಮ ವಿದ್ಯಾಸಾಮರ್ಥ್ಯವು ಇಷ್ಟರಲ್ಲಿ ಪರ್ಯವಸಾನವಾಯಿತು. ಆನಂತರ ಅಂತೆಯೇ ಯಾರೋ ಒಬ್ಬರು ಕ್ಷೌರಕ್ರಿಯೆ ಬ್ರಾಹ್ಮಣಪಂಡಿತರನ್ನು ಆಶ್ರಯಿಸಿ ಕೋರಿ ಅವರ ಸಹಾಯದಿಂದ ಆತ್ಮವಿಚಾರ ಪತ್ರಿಕೆಗೆ ದಾಸ್ಯವನ್ನು ಭರ್ತಿಮಾಡಲುಶಕ್ತಿಮಿಸಿದರೆಂದೂ ಈ ಪಂಡಿತರು ಅಬ್ಬೇಪಾ ನೇದಾಂತಪಂಡಿತರಿದ್ದು ತಮ್ಮ ಅನೋಭೆವಾದ ಪಾಂಡಿತ್ಯದಿಂದ ವೀರಶೈವಸಿದ್ಧಾಂತ ನನ್ನು ಬ್ರಹ್ಮಾದ್ವೈತದ ಕಡೆಗೆ ಎಳೆಯುತ್ತಿದ್ದಾರೆಂದೂ ಇವರಿಂದ ಬರೆಯಲ್ಪಟ್ಟ ಲೇಖವಮಾಲೆಯಿಸ್ಥೀ ಸಂಪಾದಕರಾದ ನಾಗಣ್ಣನವರು ತಮ್ಮ ಭಾಷೆಗೆ ಪರಿವರ್ತಿಸಿ ಕೊಂಡು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಪ್ರಾರಂಭಿಸಿ ದರೆಂದೂ ಸಿದ್ಧಾಂತಶಿಖಾಮಣಿಯ ಕೆಲವು ಶ್ಲೋಕ ಗಳಿಗೆ ಮೇಲ್ಕಂಡ ಪಂಡಿತರಿಂದ ಅರ್ಥೈಸಿಕೊಂಡ ನೇದಾಂತ ಪರವಾಗಿ ವ್ಯಾಖ್ಯಾನಮಾಡಿಸಿ ಆವಶ್ಲೇ ಕಾಪಿಮಾಡಿ ವೀರಶೈವಧರ್ಮದ ಮೇಲೆ ತಮ್ಮ ಪ್ರಭಾವವನ್ನು ವೀರರು ಹೊರಬೀಳ್ಲಾರೆಂದೂ ತಿಳಿದುಬರಕ್ಕಿದೆ ಇದ ಲ್ಲದೆ ಇತ್ತೀ ನೊದಲಾದ ಯಾವಿಧವಿಷಯ ಪಂಡಿತರ ವಿಷಯ ದಲ್ಲಿಯೂ ವೀರಶೈವ ಮತಪ್ರವರ್ತಕಾಚಾರ್ಯರಾದ ಜಗದ್ಗುರುವರ್ಯರ ನಾಗೂ ನಿರಂಜನಪ್ರಣವ ಸ್ವರೂಪಿ ಗುರುವರ ಜಯಿಸುವ ಮತಾಸ್ಥಾಪಿಗಳವರ ವಿಷಯ ದಲ್ಲಿಯೂ ಬಹು ಪ್ರಚ್ಛನ್ನವಾಗಿಯೂ ಪ್ರಕಾಶವಾಗಿಯೂ ಲೇಖನವಮಾಲೆಯನ್ನು ಪ್ರಾರಂಭಿಸಿ ತಮ್ಮ ಅಲ್ಪವಿದ್ಯಾ ಪ್ರಭಾವದಿಂದ ವೀರಶೈವ ಪ್ರಪಂಚವನ್ನು ಕೆರಳಿಸುತ್ತಿ ದ್ದಾರೆ ವೀರಶೈವಧರ್ಮದ ಮೇಲೆ ಅನ್ಯಮತ ಪಂಡಿತ ರಿಗೆ ಅಮಮಾನ ಉಂಟಾಗುವಂತೆ ಪ್ರಚೋದಿಸುತ್ತಿ ದ್ದಾರೆ

ವೀರಶೈವಧರ್ಮವೂ ಮತ್ತು ವೀರಶೈವ್ಯನಮತವೂ ಏಕದೇವನ್ಯಾಯವನ್ನು ಬೋಧಿಸುವ ಮತಗಳಾಗಿರು ತ್ತವೆ ವೀರಶೈವರು "ಶಿವೇತರ ದೈವನಾಸ್ತಿ" ಎಂಬು ದಾಗಿ ತಮ್ಮ ಏಕದೇವನ್ಯಾಯವನ್ನಾ ಚರಿಸುತ್ತಾರೆ ವೈಷ್ಣವರೂ ಹಾಗೆಯೇ ' ವಿಷ್ಣುವೇತರ ದೈವಾನಾಸ್ತಿ ' ಎಂಬುದಾಗಿ ಏಕದೇವನ್ಯಾಯವನ್ನಾ ಚರಿಸುತ್ತಿದ್ದಾರೆ ವೀರಶೈವಧರ್ಮವು ಕರ್ಮ, ಜ್ಞಾನಸಮುಚ್ಚಯ ವಾದದ್ದು

ವಜ್ರಾಶ್ಮವಾಮಿ ಧರ್ಮಾಣ್ಯಂ ಪಶ್ಚಿಮಲ ಜ್ಞಾನಸಂಯುತಂ।
ಪಶ್ಚಿಮ್ಯಮಜ್ಞಾನರಹಿತ್ಯಂ ಪಂಚಾಚಾರಾಭಿಸಂಜ್ಞಿತಂ ।
ಸತ್ಯಂ ಪಾಶಕ್ಷಯಕರಂ ಕರ್ಮಜ್ಞಾನಸಮುಚ್ಚಯಂ ॥

ಎಂಬ ಕಾರಣಾಗಮದ ವಚನದಿಂತೆಯೂ,

ಆಚಾರಂ ಮಹತಾಂಧ್ಯಕ್ಷಾಸ್ಯಾಂ ಪ್ರುನರ್ತಂತೇಷು ಲೌಕಿಕಾಃ।
ಜ್ಞಾನೇನಾಚಾರಯುಕ್ತೇನ ಪ್ರಸೀದತಿಮಹೇಶ್ವರಃ ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾ ದೀಕ್ಷಾವತಾನ್ವಿತಂ ॥

ಎಂಬ ಸಿದ್ಧಾಂತಶಿಖಾಮಣಿಯ ವಚನದಿಂತೆ ವೀರ ಶೈವಮತವು ಕರ್ಮಜ್ಞಾನಸಮುಚ್ಚಯವಾಗಿರುತ್ತ ದೆಂಬುವುದು ನಿರ್ವಿವಾದವಾಗಿರುತ್ತದೆ

ಶ್ರೀಮಾನ್ ನಾಗಣ್ಣನವರು ಹಿಂದಿನ ಮಹನೀಯ ರಿಂದ ವಿರಚಿಸಲ್ಪಟ್ಟಿರುವ ಗದ್ಯ, ಪದ್ಯ, ಶ್ಲೋಕ ಮುಂತಾ ದುವನ್ನು ಸಂಸ್ಕರಿಸಲೂ ಸಹ ಸಾಮರ್ಥ್ಯವಿಲ್ಲದೆ, ಎರಡ ನೆಯವರಿಗೆ ಕಾಣಿಕೆ ಕೊಟ್ಟು ಬರಿಸಿಕೊಂಡು ತಮ್ಮದೇ ಆದ ಕೈಚಿಯಿಂದು ಉದ್ದಾಮಪಂಡಿತರನ್ನೂ, ಆಚಾರ ವಂತ ಸ್ವಧರ್ಮನಿಷ್ಠರನ್ನೂ, ಹಿರಿಯರನ್ನೂ, ಗುರು ಗಳನ್ನೂ, ಧರ್ಮತತ್ವಗಳನ್ನೂ ಮತಪಂಥಂತೆ ಹಳಿ ಯುತ್ತಿರುವುದನ್ನು ಅವರ ವರ್ತನೆಯಲ್ಲಿ ಕಾಣಬಹು ದಾಗಿದೆ.

ಶ್ರೀ ನಾಗಣ್ಣನವರು ಇವರ ಅಮಭಾವಿಗಳು ಶಾಸ್ತ್ರ ಸಮುದ್ರದಲ್ಲಿ ಬಹಳ ದೂರ ಮುಂದುವರಿದಿದ್ದೇನೆ ಎಂದು ಭ್ರಮೆಪಡುತ್ತಿರುವುದು ಕಣ್ಣು ಕತ್ತಲೆವನ್ನು ಕಟ್ಟು ಗಾಣಕ್ಕೆ ಹೂಡಿದ ಎತ್ತು ಗಾಣವನ್ನು ಸುತ್ತುತ್ತಾ ತಾನು ಬಹುದೂರ ಪ್ರಯಾಣಮಾಡಿರುತ್ತೇನೆಂದು ಭಾವಿಸುವಂತಿರುತ್ತದೆ ಕಣ್ಣುಬಿಚ್ಚಿದಾಗ ತನ್ನ ಪ್ರಯಾ ಣದ ಅರವು ಆ ಎತ್ತಿಗೆ ಹೇಗಾಗುತ್ತದೋ ಹಾಗೆಯೇ ಶ್ರೀಮಾನರಿಗೆ ಮುಂದೆ ಆಗಿರಲು ಇವರು ತಮ್ಮ ಪತ್ರಿಕಾ ಮುಖೇನ ವಾದವಿವಾದ ಮೂಲ ವೀರಶೈವ ತತ್ವಗಳಲ್ಲಿ ಅರಿಯಬೇಕೆಂಬು ಆಕಶಪಡುತ್ತಿರುವಂತೆ ಕಾಣುತ್ತದೆ ಹಾಗಿದ್ದರೆ ಪಟ್ಟೂಅಲ್ಪಾಂಹಗಳೂ ತಿಳಾಪ ಭವಿಗಳೂ ಆದ ಪಬ್ಲಿರುಗಳ ಸೇವಾನಿರತರಾಗಿ ಧರ್ಮ ವಪ್ಪರಿತು ಅನುಭವಿಸಿ ತಿನಸಾಯುಷ್ಯವನ್ನು ಪಡೆಯ ಲಿಕ್ಕಿಸುವುದು ಒಳಿತು; ಇಷ್ಟಾದರೂ ಕುತರ್ಕದಿಂದ ಮತಭಿನ್ನಾಯಿಗಾಗಿ ಪಾಪಕೂಪದಲ್ಲಿ ಬೀಳುವಂತೆ ಮಾಡು ತ್ತಿರುವ ಈ ತೆರನಾದ ಪಡತೆಯಿಂದ ದೂರವರಿದು ಇದು ವರೆಗೆ ವೀರಶೈವಸಮಾಜಕ್ಕಾ ತತ್ವಗಳಿಗೂ ಮಾಡಿ ರುವ ಅಪಚಾರಕ್ಕಾಗಿ ವೀರಶೈವ ಸಮಾಜದ ಕ್ಷಮೆ ಯನ್ನು ಬೇಡಬೇಕಲ್ಲದೆ ಇಷ್ಟಮುಂದೆ ಸಭ್ಯತೆಯಿಂದ ವರ್ತಿಸಬೇಕಾಗಿ ಸೂಚಿಸಬಯಸುತ್ತೇನೆ. ಒಂದುವೇಳೆ ಈ ಮತದಲ್ಲಿ ಪಂಬೆಕೆ ಇಲ್ಲದಿದ್ದರೆ ನಿಮಗಿಷ್ಟವಾದ ಧರ್ಮವನ್ನು ಸ್ವೀಕರಿಸಲು ನೀವು ಸ್ವತಂತ್ರರಿದ್ದೀರಿ, ನಿನ್ನನ್ನು ಹಡೆಯುವವರೂ ಇಲ್ಲ ವೃಥಾ ವೀರ ಶೈವರನ್ನೂ, ವೀರಶೈವಧರ್ಮವನ್ನೂ, ಗುರುಗಳನ್ನೂ, ಪಂಡಿತರನ್ನೂ ಮತಪಂಥಂಕೆ ಟೀಕಿಸಲು ನಿಮಗೇನು ಅಧಿಕಾರವಿದೆ? ಸಮಾಜವು ನಿಮ್ಮ ಕೈಕೆಳಗಿಲ್ಲ ಧರ್ಮವು ನಿಮ್ಮ ಅಧೀನದ್ದಲ್ಲ ಇದುವರೆಗೂ ನೀವು ತಿಳಿದೋ ತಿಳಿಯದೆಯೋ ಮಾಡಿರುವ ಅಪರಾಧವನ್ನು ಸಮಾಜವು ಕ್ಷಮಿಸುವಂತೆ ಇಷ್ಟುಮೇಲಾದರೂ ನಿಮ್ಮ ನಡತೆಯನ್ನು ತಿದ್ದಿಕೊಳ್ಳುವಿರೆಂದು ಭಾವಿಸುಗಾಗಿದೆ

ಚಂದ್ರಶೇಖರಸ್ವಾಮಿಗಳು,
ಮಧ್ವಾನಸ್ವಾಮಿಮಠ, ಕುಷ್ಟಗಿ

ಶ್ರಾವಣಮಾಸದ ಪೂರ್ಣೋತ್ಸವ ಸೂಚಿ

ಪ್ರತಿವರ್ಷದಂತೆ ಇಕ್ಕೆ ಮರದಲ್ಲಿ ಸ॥ ಪ್ರ॥ ಉಮಾಪತಿವಾಚಾರ್ಯ ಪಟ್ಟಾಧ್ಯಕ್ಷರ ಸ್ಮೃಧಿಯಲ್ಲಿ ಶ್ರಾವಣ ಶು॥ ೫ ಶನಿವಾರದಿಂದ ಪ್ರಾತಕಾಲ ೬ ಘಂಟೆ ಯಿಂದ ೧೧ ಘಂಟೆಯ ವರೆಗೆ ಕರ್ಕಗದ್ದಿಗೆಯ ಮಹಾ ರುದ್ರಾಭಿಷೇಕ ೧೧ ರಿಂದಾ ೨೨ ವರೆಗೆ ಗಣಹೃಸ್ತಿ ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯ ವರೆಗೆ " ಪ್ರಭುಲಿಂಗಲೀಲೆ " ಪುರಾಣಪ್ರವಚನವು ವೇ॥ ಪಂ॥ ವಿರುಪಾಕ್ಷಶಾಸ್ತ್ರಿಗಳು ಹಿರೇಮಠ ಯಿಂಗಳಿಗಿ ಸಾ॥ ಗದಗ ಇವರಿಂದ ಸುಶ್ರಾವ್ಯವಾಗಿ ಸಾಗಿದೆ ಕಾರಣ ಸಮಸ್ತ ಮಹಾಶಯರು ಶ್ರವಣಾಪಂದ ಪಡೆದು ಗುರುವರ್ಯ ನಾಶಿರ್ವಾದಕ್ಕೆ ಪಾತ್ರರಾಗಬೇಕು.

ತಿಪ್ಪಯ್ಯ ಹಚ್ಚಬಸಯ್ಯ ವಸ್ತ್ರದ

ನೂತನ ಮುಖ್ಯಮಂತ್ರಿಗಳಿಂದ ಪ್ರಮಾಣವಚನ ಸ್ವೀಕಾರ

ಮೈಸೂರು ರಾಜ್ಯ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ " ಅಕಿಣಾಧೀಯ ಬಹುಮತ " ದೊಡನೆ ಜುಲಾಯಿತಾದ ಸದ್ಯದ ಮಂತ್ರಿಮಂಡಲದಲ್ಲಿ ರಿವಿನ್ಯೂ ಸಚಿವರಾಗಿದ್ದ ಶ್ರೀ ಕಡಿದಾಳ್ ಮಂಜಪ್ಪ ನವರು ೧೯ ನೇ ತಾರೀಖು ಭಾನುವಾರ ಬೆಳಿಗ್ಗೆ ೧೧-೪೫ ಕ್ಕೆ ಮೈಸೂರಿನಲ್ಲಿ ರಾಜಪ್ರಮುಖರ ಮುಂದೆ ಸಂಸ್ಥಾನದ ಪೂರ್ಣ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಪಂಚಾಚಾರ್ಯಪ್ರಭಾ

೧೯೫೬ ನೆಯ ಆಗಸ್ಟ್ ತಾ|| ೨೦ನೆಯ ಸೋಮವಾರ

ಅದ್ವೈತ ಹಾಗು ಶಕ್ತಿವಿಶಿಷ್ಟಾದ್ವೈತಗಳ ತಾರತಮ್ಯ

ನಾಮಲೇದಾರ ಸಬ್‌ಇನ್ಸ್‌ಪೆಕ್ಟರರಿಂದ ಹಿಡಿದು ಗವರ್ನರರವರೆಗೆ ಎಲ್ಲಾ ನೌಕರವರ್ಗದವರನ್ನು ಒಂದು ವರ್ಷದ ಮೇಲೆ ಎರಡುವರ್ಷದ ಒಳಗಿನ ಅವಧಿಯಲ್ಲಿ ಬೇರೆ ಸ್ಥಳಗಳಿಗೆ ವರ್ಗಾಯಿಸಬೇಕು ಒಂದೇ ಭಾಷೆಯ ಪ್ರಾಂತಗಳಾಗುವುದರಿಂದ ಎಲ್ಲ ನೌಕರರನ್ನು ಎಲ್ಲ ತಾಲೂಕು ಜಿಲ್ಲೆಗಳಿಗೆ ವರ್ಗಾಯಿಸಬಹುದು ಹೀಗೆ ಮಾಡುವುದರಿಂದ ಲಂಚಕ್ಕೆ ಅವ್ಕಾಶ ದೊರೆಯಲಾರದು. ಲಂಚಪಿರೋಧಕ್ಕೆ ಇದೇ ರಾಮಬಾಣವೆಂತಿರುವದು

ಗ್ರಾಮಪಂಚಾಯಿತಿ ಜೀರಮಪ್ಪರು ಎರಡು ವರ್ಷ ತಪ್ಪದೆ ಮೂರು ವರ್ಷಕ್ಕೊಮ್ಮೆ ಬದಲಾಯಿಸಬೇಕು ಒಮ್ಮೆ ಆರಿಸಿ ಬಂದವರನ್ನು ಪುನಃ ತಕ್ಷೀಲ್ದಾರರು ಅಂದರೆ ಹಳ್ಳಿಗಳಲ್ಲಿ ಪಾರ್ಟಿಯಾಗುವ ಸಂಭವವಿರುವ ದಿಲ್ಲ ಇವುಗಳ ಹೊರತಾಗಿ ಉಳಿದ ಎಲ್ಲಾ ಖಾತೆಗಳ ಆಡಳಿತಗಳು ಬ್ರಿಟಿಷರ ಆಡಳಿತಕ್ರಮದಂತೆ ನಡೆದರೆ ಸರ್ವಾನುಕೂಲವಾಗುವದು

ದೇಶಮಧ್ಯದಲ್ಲಿ ಇತ್ತೀಚೆಗೆ ಜಾರಿಯಲ್ಲಿ ಬಂದಿರುವ ಭಾನುವಾರದ ರಜಾದಿನವು ನೌಕರವರ್ಗದವರಿಗೆ ಅನ್ಯಯಿಸಬೇಕೇ ಹೊರತು ವ್ಯಾಪಾರಿವರ್ಗದಲ್ಲಿ ಇದನ್ನು ಅನ್ವಯಿಸುಸೋಡಿರು ಈ ಪಂಥ್ಯಿತಿಯನ್ನು ನೋಡಿದರೆ ಭಾನುವಾರದ ದಿನವು ಪ್ರತಿಯೊಂದು ನಗರ ಪಟ್ಟಣ ಗಳಲ್ಲಿ ಯಾರೋ ದಿವ್ಯವ್ಯಕ್ತಿಗಳು ಸತ್ತುಹೋದ ದುಃಖದಿನಾಚರಣೆಯಂತೆ ಭಾಸವಾಗಿ ಸಟ್ಟಣಗಳೆಲ್ಲಾ ಅನಂಗಲಕ್ಕಳಾಗಿ ತೋರುವವು ಈ ದಿನ ವ್ಯಾಪಾರವು ಪೂರ್ಣ ಕಟ್ಟಾಗಿ ಬಡಬಗ್ಗರ ಪೊಟ್ಟೆಗೆ ಗೇರುಬಡಿದಂತಾಗಿರುವುದು. ಈಗ ಟೌನಿನ ವ್ಯವ ಹಾರವು ಶಿಂಬಳಹೋಗಿ ಎಷ್ಟೋ ಅಘರ್ಷಗಳು ಸಂಭವಿಸು ತ್ತಿರುವವು ಅದುದರಿಂದ ಭಾನುವಾರದ ರಜೆಯನ್ನು ದೇಶದ ವ್ಯವಹಾರದಲ್ಲಿ ಅಷ್ಟೊಂದು ಕಟುವಾಗಿ ಅಪಯೋಗಿಸಬಾರದು

ಆಳುವ ಸರ್ಕಾರವು ಆಡಳಿತವನ್ನು ಪಡೆಯಿಸಿಕೊಳ್ಳ ಬೇಕೇ ಹೊರತು ಹೆಜ್ಜಾಗಿ ವ್ಯವಹಾರಗಳಲ್ಲಿ ಕೈಹಾಕ ಬಾರದು ಇದರಿಂದ ಸರ್ಕಾರವು ತನ್ನ ಬಿಗಿಯನ್ನು ತಾನೇ ಕಳೆದುಕೊಂಡಂತಾಗುವದು. ಈ ಮಾತು ಈಗ ೧೦ ವರ್ಷಗಳಿಂದ ನಡೆದುಬಂದ ಆಹಾರನಿಯಂತ್ರಣದ ಅಡಳತೆಯಿಂದ ಸರಕಾರಕ್ಕೆ ವೇದ್ಯವಾಗಿರುವುದು ವ್ಯಾಪಾರಕ್ಕೆ ಅನುಕೂಲಮಾಡಿಕೊಟ್ಟು ವ್ಯಾಪಾರವ ರನ್ನು ಮುಂದೆ ಬಿಟ್ಟರೇ ದೇಶದ ಶ್ರೀಮಂತಿಕೆ ಯೊಬಬನ್ನು ಅಮೇರಿಕಾದ ದೈತ್ಯಿಯಂತೆ ಅಂತು ಕೊಳ್ಳಬಹುದು ವ್ಯಾಪಾರವ್ಯವಸ್ಥೆಯನ್ನು ಮೂಲೆಗೊತ್ತಿದರೆ ದೇಶದ ಶ್ರೀಮಂತಿಕೆಯನ್ನೇ ಮೂಲೆಗೊತ್ತಿದಂತಾಗು ವದು ಪ್ರತಿಯೊಂದು ರಾಷ್ಟ್ರದಲ್ಲಿ ಸರಕಾರದ ದುಡ್ಡು ಶ್ರಮಿಗಳ ದುಡ್ಡು ಕೂಡಿಯೇ ದುಡಿಯಬೇಕು 'ಬರೀ ಸರಕಾರದ ದುಡಿಮೆಯಿಂದ ಯಾವ ಪ್ರಯೋಜನವೂ ದೊರಯಲಾರದು, ಆದುದರಿಂದ ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ವಳ್ಳಲತನಕ್ಕೆ ಅನುಕೂಲ ವಾದ ಯಂತ್ರೋಪಕರಣಗಳು, ಗೊಬ್ಬರ, ಬೀಜ ಮೊದ ಲಾದವುಗಳನ್ನು ಸದಗಿಸಿಕೊಟ್ಟು ಇದೆಷ್ಟು ಬೆಳಸುವ ದಲ್ಲದೆ ರೈತ್ಯ ಮೇಟಾರ ಮೊದಲಾದ ಸಾಧನೆಗಳೊಡನೆ ವ್ಯಾಪಾರಕ್ಕೆ ಸಹಾಯ ಒದಗಿಸಿಕೊಟ್ಟು ವ್ಯಾಪಾರವನ್ನು ಹೆಚ್ಚಿಸಿ ಭಾರತದ ಹಸರನ್ನು ಮುಂದುವರಿಸಬೇಕು "ಉತ್ತಮ ಖೇತಿ-ಮಧ್ಯಮ ವ್ಯಾಪಾರ-ಕನಿಷ್ಟನೌಕರಿ" ಎಂದು ಹೇಳುವ ಹಿರಿಯರ ಉಕ್ತಿಯಂತೆ ಈ ದೇಶದಲ್ಲಿ ವಳ್ಳಲತನ ವ್ಯಾಪಾರಗಳೇ ಎಂದಿನಿಂದಲೂ ಶ್ರಧಾನಗೊರಿ ಯಲ್ಲಿರುವುದು ಇವನ್ನು ಮರಿದರೆ ಭಾರತದ ಬೆನ್ನು ಮೂಗಳೆಯೇ ಮುರಿದಂತೆಯಾಗಿ ರಾಜ್ಯವು ತಿಳಿಲವಾಗು ವುದು ಹೊರದೇಶಗಳಗೂ ನಮ್ಮ ದೇಶಕ್ಕೂ ಮತ್ತ ದಂತರವುಂಟು ಅವನ್ನು ಹೋಲಿಸಿ ಆದರಿಂತ ಮಾಡ ಹೋದರೆ ಅನರ್ಥಪರಂಪರೆಯಷ್ಟೆ ಕಾಣುವದೇ ಹೊರತು ಸೌಖ್ಯವನ್ನು ಪಡೆಯಲಾರೆವು ಇದನ್ನರಿತು ಸರಕಾರವು ಆಮೂಜಾನವಾಗಿ ನಡೆದು ಬಂದ ಹಿರಿಯರ ವಾಕ್ಯಗ ಳನ್ನೂ ದೇವವಾಣಿಯನ್ನೂ ನಂಬಿ ಆದರಂತೆ ನಡೆದಲ್ಲಿ ಶ್ರೀಕಾಲದಲ್ಲಿಯೂ ಭಾರತಕ್ಕೆ ಜಯವುಂಟು

॥ ಸತ್ಯಮೇವಜಯತೇ ॥

ಧಾರವಾಡದಲ್ಲಿ ಮುಂದಿನ ಸಾಹಿತ್ಯ ಸಮ್ಮೇಳನ

ಮೂವತ್ತೊಂಭತ್ತನೆಯ ಕನ್ನಡ ಸಾಹಿತ್ಯ ಸಮ್ಮೇ ಳನವು ಡಿಸೆಂಬರ್ ಕೊನೆ ವಾರದಲ್ಲಿ ಧಾರವಾಡ ದಲ್ಲಿ ನಡೆಯಲಿದೆ ಸಮ್ಮೇಳನಕ್ಕೆ ಸಂಬಂಧಪಟ್ಟ ಸಕಲ ವ್ಯವಸ್ಥೆಯನ್ನು ಕರ್ನಾಟಕ ವಿಶ್ವವಿದ್ಯಾ ನಿಲಯದವರು ಮಾಡಿರಿದ್ದಾರೆ. ಈ ಬಗ್ಗೆ ವಿಶ್ವ ವಿದ್ಯಾನಿಲಯದ ಅಧಿಕಾರಿ ವರ್ಗದವರಿಂದ ಪತ್ರಿಕೆಗೆ ಪತ್ರ ಬಂದಿದೆ.

ವೀರಶೈವ ಸಿದ್ಧಾಂತದ ಬಗ್ಗೆ ಅತ್ಮವಿಚಾರ ಪತ್ರಿಕಾ ಸಂಪಾದಕರಿಗೆ ಎಚ್ಚರಿಕೆ

(ಹಿಂದಿನಿಂದ ಮುಂದುವರಿದುದು)

ಶ್ರೀಮಾನ್ ನಾಗಲಿಂಗಸ್ವಾಮಿಗಳವರು ನಿಮ್ಮ ೧೯೩೬ ರ ಜಗತ್ಪತಿಗಳ ಸಂಚಿಕೆಯ ಪುಟ ೩೨ ರಲ್ಲಿ " ಮರಕ್ಕೆ ಅಧಿಪತಿಯಾಗತಕ್ಕವನು ಬಾಲಸನ್ಯಾಸಿಯೇ ಆಗಬೇಕು " ಎಂದು ಹೇಳಿರುತ್ತೀರಿ ಕೊನೆಗೆ ಗೃಹಸ್ಥಾಶ್ರಮದಲ್ಲಿಬ್ದು ಜ್ಞಾನಿಗಳಾಗಿ ಸಂಸಾರದಲ್ಲಿ ಜ್ಞಾನಾಗ್ನಿಯನ್ನು ಹೊಂದಿರತಕ್ಕವರನ್ನೇ ವೀರಶೈವ ಗುರುವಾಗಿರತಕ್ಕಾಗಿ ಜಂಗಮಯಸಕ್ತರಲ್ಲದ ಉಕ್ತಮ ವಾಗಿರುತ್ತೆದೆಂದು ವಕೀಲರು ನಿರ್ಣಯವಿತ್ತಿರುವಿರಿ ಹೀಗೆ ಎರಡರ್ಥಗಳ ದುರಾದ ಮಾಡುತ್ತ ಹೋಗುವುದು ಧರ್ಮಶಾಸ್ತ್ರ ಸೀತಿಯೇ? " ವೀರಶೈವ ಕ್ರಿಯಾ ಸಾರ ಶಿವಸೂತ್ರ " ಗಳಲ್ಲಿ ವಿವರಿಸಿರಂತೆ ಆಚಾರನುಷ್ಠಾನ ವೀರಶೈವ ಮತೀಯರ ಕರ್ತವ್ಯವು ಮತೀಯರಲ್ಲಿ, ಧರ್ಮಸಂಸ್ಥಾರನ್ನು ಪಡೆದವರಿಗೆ, ಶ್ರೀಜಗದ್ಗುರು ಪಂಚಪೀಠಗಳಲ್ಲಿ ಭಯಭಕ್ತಿ, ಉಳ್ಳವರಿಗೆ, ಶ್ರೀಮದ್ ರಾಜಾಧಿರಾಜಗುರುತ್ರಯರಿಂದ ಜ್ಞಾನ ದೊರೆಯುವುದೇ ಹೊರತು ನಿಮ್ಮಂಥವರ ಬೋಧೆಯಿಂದ ಎಂದೂ ದೊರೆಯಲಿಲ್ಲವರದು ಮೂಲ ಸಿದ್ಧಾಂತವನ್ನೆ ಬದಲಿಸುವ ಸಾಮರ್ಥ್ಯವೆ ಮೂರು ಲೋಕಗಳಲ್ಲಿ ಆವಾರಿಗೂ ಸಾಧ್ಯವಿಲ್ಲವೆಂಬವದನ್ನು ನೆನಪಿಸಿಕೊಳ್ಳಿರಿ ನೀವು ವರ್ಣಿಸಿರುವ ಮೈಸೂರು ಅಸ್ಥಾನ ವಿದ್ವಾನ್ ಸಂ|| ಎನ್ ಆರ್. ಕಂಬಸವಶಾಸ್ತ್ರಿಗಳು ಅದಿಯಾಗಿ ಎಲ್ಲ ಪಂಡಿತರು ಟೀಕಾಕಾರರೇ ಆಗಿರುವರು ಮೂಲ ಸಂಸ್ಕೃತದ ಹಾಗೂ ಕನ್ನಡ ಭಾಷಾಂತರದಲ್ಲಿಯು ಲೋಪದೋಷಗಳನ್ನು ತೆಳಿದು ನಿರ್ಣಯಿಸಬೇಕೆಂಬು ವವರು ಕೊನೆಯು ನಿರ್ಣಯಕ್ಕೆ ಶ್ರೀಜಗದ್ಗುರು ಪಂಡಾಚಾರ್ಯ ಭಗವತ್ಪಾದರಲ್ಲಿಯೇ ಬ್ಯಾಧಿಸಿ ಅಪ್ಪಣೆಪಡೆದು ತೀರ್ಮಾನಿಸುವುದು ಸುಸ್ಪಷ್ಟವಾದ ಮಾರ್ಗವು, ಹಾಗೆ ಮಾಡದೆ ವಿರುದ್ಧವಾಗಿ ಪ್ರಚಾರ ಮಾಡುವುದು ಅಕ್ಷಮವಾಗುವುದು ಇದು ಮಹಾ ಅಪರಾಧವು ಇದಕ್ಕೆ ಕ್ಷಮೆಯೇ ಇಲ್ಲವೆಂಬುವುದನ್ನು ಗಟ್ಟಿಯಾಗಿ ತಿಳಿದುಕೊಳ್ಳಿರಿ ಮತ್ತು ೧೯೩೬ ರ ಆಗಷ್ಟ ೪ನೆಯವಾರ ಪತ್ರಿಕೆ ಪುಟ ೨೭ ರಲ್ಲಿ ಮೈಸೂರಿನಲ್ಲಿದ್ದ ಕೈ|| ಸಂ|| ಶಾಕಿಲಾಶಾಸ್ತ್ರಿಗಳವರ "ಸಿದ್ಧಾಂತಶಿಖಾಮಣಿ" ಹಾಗೂ ಇತರೇ ಗ್ರಂಥಗಳಿಗೆ ನೀವು ಪ್ರಸಿದ್ಧಿಪಡಿಸಿರುವಂತೆ ಸ್ವತಂತ್ರ ವಾಗಿ ಕನ್ನಡದಲ್ಲಿ ಅರ್ಥವನ್ನು ಒದಿದಿಲ್ಲಾ ಈ ಹಿಂದೆ ಎಷ್ಟೋಸಂಡಿತರು ಆದರಂತೆ ಪ್ರಸಿದ್ಧಿ ಸಿದ್ಧಾರೆ ಅಲ್ಲದೆ ಆಚರಿಸುತ್ತಿಲಿದ್ದಾರೆ ವೇದಾಗಮಗಳಲ್ಲಿ ಪೂರ್ವ ಉತ್ತರ ಭಾಗ ಗಳಲ್ಲಿಯು ವಿಷಯವಿಭಜನೆಯು "ಶ್ರೀಸಿದ್ಧಾಂತಶಿಖಾಮಣಿಯ' ಅಂಗಸ್ಥಲ, ಲಿಂಗಸ್ಥಲದಲ್ಲಿದೆ ಇದನ್ನು ದೂಷಿತ ದೃಷ್ಟಿ ಯಿಂದ ನೋಡುವವರಿಗೆ ತಿಳಿಯಲು ಸಾಧ್ಯವಿಲ್ಲಾ ಸಂ|| ಶ್ರೀಕಾಶಿಕಾಶಾಸ್ತ್ರಿಗಳು ಶಿವಾಗಮಭಾಷ್ಯಾದಿಯಕ್ಕೂ ವೀರಶೈವ ಸಿದ್ಧಾಂತಕ್ಕೂ ವಿರುದ್ಧವೆಂದು ತೋರಿದ ವಿಷ ಯಗಳನ್ನು ತೆಗೆದುಹಾಕಿರಬಲ್ಲಿ ಪ್ರಸ್ತಾವನೆಯಲ್ಲಿ ಆವರೇ ಸ್ವತಹ್ಸಹಿಸಿದ್ದಾರೆ ಹೀಗಿದ್ದು ಅವರು " ಅಸ್ಮೈತದ ದ್ವೇಷದಿಂದ ತೆಗೆದಿರುವರು " ಎಂದು ಸ್ವತಹ್ಪಡಿಸಿದ್ದೀರಿ ಪಂಡಿತ ಶ್ರೀ ಶಾಕಿಲಾಶಾಸ್ತ್ರಿಗಳವರು " ಅದ್ವೈತದ ದ್ವೇಷಿಗಳಲ್ಲ ಅವರು ಸಿದ್ಧಾಂತತಿಖಾಮಣಿಯ ಕನ್ನಡ ಟೀಕೆಯಲ್ಲಿ ಅದ್ವೈತದ ಸಿದ್ಧಾಂತವನ್ನೆ ಪ್ರಸಿದ್ಧಿ ಸಿರುವರು ನಿಮ್ಮ ದುರಾಗ್ರಹದ ಕಣ್ಣಿಗೆ ಹಾಗೆ ಕಾಣಿಸುವುದು ಸರಿಯಾದ ಬುದ್ಧಿಯಿಂದ ಓದಿ ನೋಡಿರಿ. ನಿಮಗೆ " ಮುದಿತಚ್ಚು ಬೇರೆ ಹಿಡಿದರಿ ಕ್ಕಿಲ್ಲವೆ ? ಮತ್ತು ಶ್ರೀ ಪಂ|| ಪಿ ಆರ್ ಶರಿಬಸವ ಶಾಸ್ತ್ರಿಗಳು ಶ್ರೀ ಎಂ ಬಸವಲಿಂಗಶಾಸ್ತ್ರಿಗಳು ಕನ್ನಡದಲ್ಲಿ ಬರೆದ " ತಿಪಾದ್ವೈತ ಮಂಜರಿ " ಗ್ರಂಥವನ್ನು ಸರಿಯಾಗಿ ನೋಡಿರಿ ತಮಗೆ ಸಮಾಜದಲ್ಲಿ ಅಶಾಂತಿಯನ್ನು ಪ್ರಸ್ತುಬ್ಧ ವಾತಾವರಣವನ್ನು ಹುಟ್ಟಿಸಿದ ಆರೋಪಿಗಳು ನೀವು. ಮರೆಯದಿರಿ ನಾವು ರೂಢಿ ಕ್ರಿಯೆಗಳನ್ನು ಬಿಟ್ಟು ನೀವು ಸೂಚಿಸುವುದನ್ನು ಯಾರಿಗಾದರೂ ಬಿಟ್ಟುಕೊಟ್ಟು ಸನ್ಯಾಸಿಗಳಂತೆ ಭಿಕ್ಷಾನ್ನವನ್ನು ಮಾತ್ರ ಸ್ವೀಕರಿಸುವದಿಲ್ಲ "ಸರ್ವಇಂದ್ರಿಯಭೋಗವಸ್ತುಂಯ" ಸಂಸ್ಥಾಪನೆಯು ಹೊಡಿಸುವ ಆತ್ಮಾಮಳವಿಗಳೆಂದು ನೈಸೂರಿನ ಜಾ-ಗಂ-ಜಾಯೆಂದು ಜಪತಾಕಿಹೊಳ್ಳು ವರು ನಿಮ್ಮ ಕೆಳಕಿನಲ್ಲಿ ನಿಮ್ಮ ಕತ್ಸಲೆಯನ್ನರಿಯರಿ ಅಧರ್ಮಸಂಸ್ಥಾರದ ಪ್ರಭಾವನೇ ಹೀಗೆ. ನರ್ಮದಲ್ಲಿ ನಿಮ್ಮ ವಕೀಲರಿಯು ನಡೆಯುವೆದಿಲ್ಲ ಎಚ್ಚರಿಕೆ

ಆರ್. ಎಚ್ ವೀರಭದ್ರಯ್ಯಸ್ವಾಮಿ
ಗುರುಕುಲ ಮುಕ್ತೆಮಂದಿರ

ಶ್ರೀಜಗದ್ಗುರು ರೇಣುಕಾಚಾರ್ಯ ಪುರಾಣ ಮಹೋತ್ಸವ ಪರಿಸಮಾಪ್ತಿ ಆದವಾಗಿ

ಕರ್ನೂಲ ಜಿಲ್ಲಾ ಪೈಕೆ ಆದವಾಣಿ ಗ್ರಾಮದ ವ್ಯಾಪ್ತಿ ಶ್ರೀ ವೀರಭದ್ರ ದೇವೆಸ್ಥಾನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವನ್ನು ಶ್ರೀ ವೇ|| ಗಂಗಾಧರ ಸ್ವಾಮಿಗಳು ಕುಮ್ಮ ಟಿಗಿ ನುಶ ಮೆಸಿಗಿ ಇವರು ಹಾಗು ಸಮಸ್ತ ದೈವಜರು ಸಮ್ಮಿಲಿತರಾಗಿ ಒಂದುತಿಂಗಳು ಪರಿಯಂತರವೂ ಶ್ರೀ ವೇ|| ತೋಟಕ್ಕಯ್ಯಶಾಸ್ತ್ರಿಗಳು ಹರ್ಲಾಪುರ ಇವರು ವೇದಾಂತಪರವಾಗಿ ಜಗದ್ಗುರುಗಳ ವರ ಮಹಿಮೆಯನ್ನು ಜೆನ್ನಾಗಿ ಹೇಳಿದರು ಸಂಗೀತ ದೊಡನೆ ಶ್ರೀ ವೇ|| ಗುರುಸಿದ್ಧಯ್ಯನವರು ಶಿಲಾಮಠ ಹೊಳಲುಗುಂದಿ ಇವರು ಪುರಾಣ ಓದುವುದರಲ್ಲಿ ಶಿವೈಕರು ದಿನಾಂಕ ೧೫-೯-೩೬ ನೇ ದಿವಸ ಮಹಾ ಗಣಾರಾಧನೆ ಮಾಡಿಸಿ ಮುಗಿಸಿದರು ಈ ಮಂಗಲ ಕಾರ್ಯಕ್ಕೆ ಬಚ್ಚಾರಿಯಿಂದ ಹಬ್ಬಿಳ್ಳರದ ಕರಣಿಕ ಯೋಗಿ ಮಹಾದೇವಸ್ವಾಮಿಗಳು, ಗದಗ ಶ್ರೀಜಗದ್ಗುರು ರೇಣುಕಾಚಾರ್ಯಮಂದಿರ ಅಧ್ಯಕ್ಷರಾದ ಶ್ರೀ ಸಂ|| ಬ್ರ|| ಜೆಕ್ಕನಮಲ್ಲಿಂರು ಮಹಾಸ್ವಾಮಿಗಳವರು ಶ್ರೀ ಪ|| ಬ್ರ|| ಪಟ್ಟಿದವಸ್ವಾಮಿಗಳು ಶಿಲಾಮಠ ಹೊಳಲುಗುಂದಿ ಇವ ರೆಲ್ಲರು ಆಗಮಿಸಿ ವ್ಯಾಖ್ಯಾನನಾಡಿ ಜನ ಜಾಗೃತಿ ಮಾಡಿದರು ಈ ಕಾರ್ಯ ಪ್ರಯತ್ನ ಶೀಲರಾದ ಮೆಸ್ಸಿ ಗಂಗಾಧರಸ್ವಾಮಿಗಳವರು ಆದವಾಣಿಯ ಯಾವತ್ತು ಭಕ್ತ ಮಾಹೇಶ್ವರರ ಪ್ರಯತ್ನ ದಿಂದಲೇ ಪಡೆದೆದ್ದು ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಿಪೂರ್ಣ ಇವರೆಲ್ಲರಿಗೆ ಕಲ್ಯಾಣಮಾಡಲೆಂದು ಕೋರುವ

ವೀರಶೈವಸಮಾಜ ಸೇವಾಸಂಘ
ಕಾರ್ಯದರ್ಶಿ ಬಳ್ಳಿಕ್ಕಿಳ್ಳಿ ಅಳ್ಳಪ್ಪ, ಆದವಾಣಿ

ಅಖಿಲಭಾರತ ವೀರಶೈವಮಹಾಧೀಶ್ವರರಿಗೆ ನಿಡಸೇಸಿ ಜ್ಞಾನಮಂಡಲದ ವಿನ್ನಹ

ಪ್ರಾಚೀನಕಾಲದಿಂದಲೂ ಭಾರತದಲ್ಲಿ ಅನೇಕ ಮತ ಧರ್ಮಗಳಿದ್ದು, ಪ್ರತಿಯೊಬ್ಬ ತತ್ವಪ್ರತರ್ಕರು ತಮ್ಮ ಮತಧರ್ಮಗಳ ಪ್ರಸಾರಕ್ಕಾಗಿ ಮಠಮಂದಿರಗಳನ್ನು ಸ್ಥಾಪಿಸಿ ಆ ಮಠಾಧಿಕಾರಿಗಳ ಮುಖಾಂತರ ಜಪಸಂಖ್ಯ ಕ್ರವನ್ನು ಬೆಳಿಸಿಕೊಂಡು ಧರ್ಮಪ್ರಸಾರ ಮಾಡುತ್ತ ಬಂದಿದ್ದಾರೆ ಅದೇ ಪ್ರಕಾರ ವೀರಶೈವಮತದಲ್ಲಿಯೂ ಅನೇಕ ಮಠಗಳಿವೆ ಮಠಾಧಿಕಾರಿಗಳಿದ್ದಾರೆ ಹಿಂದೆ ರಾಜರೇಯ ಆಶ್ರಿತತೆ, ವಿಶೇಷವಾಗಿದ್ದಕಾಲದಲ್ಲಿ ಸಮಾ ಜಕ್ಕೆ ಮೇಲಿಂದ ಮೇಲೆ ವಿಶೇಷ ಆಘಾತಗಳು ಆಗು ತ್ತಿದ್ದುದರಿಂದ ಮಠಾಧಿಕಾರಿಗಳಿಬ್ಬ ಸಂಘಟಿತರಾಗಿ ಆಘಾತವಾದ ಕಟ್ಟುನಿಟ್ಟುಗಳನ್ನು, ನಿಯಮನಿಬಂಧ ಗಳನ್ನು ರಚಿಸಿಕೊಂಡು ಸಮಾಜಸುಧಾರಣೆಯ, ಧಾರ್ಮಿಕ ಜಾಗೃತಿಯ ಕಾರ್ಯಗಳನ್ನು ಕೈಕೊಂಡು ಪೌರಪ್ರತಿ ನಿಧ್ಯ ರೂಪಿಸಿತ್ತಿದ್ದರು ರಾಜ್ಯೀಯ ಅವಲಂಬೈದ್ರ ಕಾರ್ಯಗಳೇ ಸಾಗದಂತಾಗಿ ಎಲ್ಲೆಲ್ಲಿಯೂ ನಿರುದ್ಯೋಗ ತಲೆ ಎತ್ತಿದಾಗ ಕಾಯಕವೇ ಕೈಲಾಸವೆಂದು ಸಾರಿ ಹಳ್ಳಿ ಗರ ಅಭಿವೃದ್ಧಿಗೆ ಸಹಾಯವಿತ್ತು, ಸಮಷ್ಟಿಜೀವನಕ್ಕೆ ಪ್ರೋತ್ಸಾಹವಿತ್ತು, ಸಮಾಜದ, ದೇಶದ ಏಳ್ಗೆಗಾಗಿ ಹೆಣಗಿದರು. ವೀರಶೈವಮತಗಳು ವೃತ್ತಿಶಿಕ್ಷಣದ ಕೇಂದ್ರ ಗಳಾಗಿ ಗ್ರಾಮಗಳ ಅಭಿವೃದ್ಧಿಗೆ ಬಹು ಮುಖ್ಯವಾಗಿ ಸಹಾಯ ಸಲ್ಲಿಸಿದವು ದುರ್ಬಲತೆಯಿಂದ ರಾಜ್ಯಗಳೆ ಉಸಿಯುತ್ತಿದ್ದಾಗ ಧರ್ಮಗಳೆ, ಸಾಂಸ್ಕೃತಿಕ, ಶಿಕ್ಷಣೆಕ ಮತ್ತು ಸಮಾಜ ಜೀವನಪೆಗೆಗಳುಮಠಗಳಲ್ಲೇ ಜನಿಯು ತ್ತಿದ್ದುದರಿಂದ ಮಹಾಧಿಕಾರಿಗಳು ರಾಜರ ಮತ್ತು ಜನ ತೆಯ ಗೌರವಾದರಗಳಿಗೆ ಪಾತ್ರರಾಗಿದ್ದರು. ಈಗಲೂ ಎಷ್ಟೋನೆಪೆಗಳು ಆರೀಪಧಾರ್ಮಿಕ ಪುನರುಜ್ಜೀವನಕ್ಕೆ ಹೆಣಗಿತ್ತಿಲೇ ಇವೆ. ಹಿಂದೆ ಮಠಗಳ ಅಂತರ್ಯವಸ್ಥೆ ಮತ್ತು ಪರಸ್ಪರ ಸಮ್ಮಂಧಗಳು ರಾಜಕೀಯಮಾದರಿ ಯಲ್ಲಿ ಸಂಘಟಿಸಲ್ಪಟ್ಟಿದ್ದವು. ಆದರೆ ದುರ್ದೈವದಿಂದ ಆ ಹಿಂದಿನ ಸಂಘಟನೆ ಇಂದು ಮರಾಧೀಶ್ವರರಲ್ಲಿ ಉಳಿದಿಲ್ಲ ಇಂದು ಮಠಗಳು ಸಹಜೀವನ ತಳಹದಿಯು ಮೇಲೆ ಸಂಘಟಿಸಲ್ಪಟ್ಟು ಮೊದಲಿನಂತೆ ಹಳ್ಳಿಗಳ, ನಾಡಿನ ಪುನರುದ್ಧಾರಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬೇಕು

ವೀರಶೈವ ಮತವನ್ನು ವಿಶಾಲವಾದ ಧರ್ಮದೃಷ್ಟಿ ಇಷ್ಟೆಲ್ಲಿಯೂ ಕಂಡುಬರದು ಸಕಲ ಪ್ರಾಣಿಗಳ ಹಿತ ವನ್ನು ಬಯಸುವ ನಮ್ಮ ಉದಾತ್ತತತ್ವಗಳ ಸ್ಥಾನವನ್ನು ಸಂಕುಚಿತ ಆಚರಣೆಗಳು ಆಕ್ರಮಿಸಿವೆ ಅನೈಕ್ಯ ಬಹು ಸಾಯಕತ್ವ ಹಾಗೂ ತತ್ವಸಂಶೋಧನೆಯ ಅಧಾವದ ಮೂಲಕ ಜಾತಿಪಂಗಡಗಳ ಪ್ರತ್ಯೇಕತಾಭಾವನೆಯ ತೀಕ್ಷ್ಣತೆಯಿಂದ ಳೆಯು ಹೊಸ ಪಂಥಗಳೇ ಹುಟ್ಟಿ ಸಮಾ ಜದಲ್ಲಿ ಅತೀವ ಶಿಥಿಲತೆಯು ವೈದಿಸಿರಿವೆ ಇದೇ ಪರಿಸ್ಥಿತಿಯು ಮುಂದುವರಿದರೆ ಸಮಾಜಕ್ಕೆ ಕ್ಷೇಮವಿಲ್ಲ ಸಮಾಜವು ಇಂಥ ಅನೇಕ ಕರಣ ಪ್ರಸಂಗಗಳನ್ನು ಎದಿರಿಸಿದೆ. ಇಂತಹ ಪ್ರಸಂಗಗಳನ್ನೆಲ್ಲ ಮಠಗಳು ಸಂಘ ಟಿತವಾಗಿ ಧರ್ಮಾಳ ಉಜ್ಜಿತತ್ವಗಳನ್ನು ಪ್ರಸಾರಮಾಡಿ ಸಮಾಜವನ್ನು ರಕ್ಷಿಸುತ್ತಿಬಂದಿದೆ. ಈಗಲೂ ಅದೇ ತರದ ಕರಣಪರಿಸ್ಥಿತಿಯು ಸ್ಪಾಪಿಸಿತಾಗಿದೆ ಭವ ಮಹಿಮರಾದ ರೇಣುಕಾದಿ ಆಚಾರ್ಯರೂ ಬಸವಾದಿ ಪ್ರಮಥರೂ ಭಕ್ತರ ಹಾಗೂ ಶಿಷ್ಯಕೋಟಿಯ ಪ್ರಗತಿ ಮತ್ತು ಉದ್ಧಾರಕ್ಕಾಗಿಯೇ ಆಸೇತು ಹಿಮಾಚಲ ಪರ್ಯಂತ ಮಠಗಳ ನಿರ್ಮಾಣಕ್ಕೆ ಪ್ರೋತ್ಸಾಹವಿತ್ತು ಅನಂತರವಾಗಿ ಶ್ರಮಿಸಿ ವಿಶಿಷ್ಟವಧರ್ಮವನ್ನು ರಕ್ಷಿಸಿ ದರು ಆ ಮಹಾಪುರುಷರ ಪರಿಶ್ರಮವನ್ನು ಆನುಸರಿಸಿ ಇಂದಿನ ಎಲ್ಲ ಗುರುವಿರಕ್ತಮೂರ್ತಿಗಳು ಒಂದೆಡೆಸೇರಿ ಸಮಾಜದ ದುಸ್ಥಿತಿಗೆ ನಿವಾರಣೋಪಾಯವನ್ನು ಕಂಡು ಹಿಡಿಯಬೇಕಾಗಿದೆ ಭಕ್ತರ ಮತ್ತು ಶಿಷ್ಯಕೋಟಿಯ ಉದ್ಧಾರಕ್ಕಾಗಿ ಕಾರುಣ್ಯದಿಂದ ಮುಂದೆ ಬರಬೇಕೆಂದು ಮರಾಧೀಶ್ವರರಲ್ಲಿ ಜ್ಞಾನಮಂಡಳವು ವಿನ್ನವಿಸುತ್ತದೆ

ನಮ್ಮ ಸಮಾಜದ ಆನ್ಯೋನ್ಯತೆಯ ನಮ್ಮ ತತ್ವ ಪ್ರಕಾಶ ಕುಂಠಿತವಾಗಿ ತತ್ವಸಂಶೋಧನೆ ನಿಂತುಹೋಗಿ ಸಮಾಜವು ಪರ್ವತಸಂಗಡಗಳ ಮಾತ್ಸರ್ಯ ಆಸೂಯೆ ಗಳಲ್ಲಿ ಬೆಂದುಹೋಗುತ್ತಿದೆ ಸಮಾಜದ ಪ್ರತಿಯೊಬ್ಬ ಮುಂದಾಳುಗಳು ಮತ್ತು ಮಾತಾಧೀಶ್ವರರು ಸಂಘಟಿತ, ಸಹಕಾರಗಳ ಮಹತ್ವನನ್ನು ಅರಿತುಕೊಂಡು ಅವಕ್ಕೆ ಅಡ್ಡಿಯಾಗಿರತಕ್ಕ ಕೊರತೆಗಳನ್ನು ದೂರಗೊಳಿಸಲು ಪ್ರಯತ್ನಿಸಬೇಕು ಸಂಘಟನೆಗಾಗಿಯೇ ವೀರಶೈವ ಜ್ಞಾನಮಂಡಲವು ವೀರಶೈವಮಹಾಧೀಶ್ವರರ ಅಧಿವೇಶವ ನವನ್ನು ಪಂಡವಾಡಿಗಿಯಲ್ಲಿ ಕರೆದಿರುತ್ತದೆ ಆ ಅಧಿವೇಶ ನದಲ್ಲಿ ನಮ್ಮ ಧರ್ಮ ಮತ್ತು ಮತತತ್ವಗಳ ಪ್ರಸಾರಕ್ಕೆ ಯಾವ ರೀತಿನಾತ್ಮಕ ಕಾರ್ಯಗಳನ್ನು ಕೈಕೊಳ್ಳಬೇಕು ಎನ್ನುವ ವಿಷಯದಲ್ಲಿ ವಿಸ್ತೃತೋಚಿವಿಚಾರವಿನಿಮಯ ವು ಜರಿಯುವುದೆಂಬುದರಿಂದ ಸಮಾಜಾಭಿಮಾನಿ ಗಳಾದ ಪ್ರತಿಯೊಬ್ಬ ಮುಂದಾಳುಗಳು ಮತ್ತು ಪೂಜ್ಯ ರಾದ ಮಹಾಧೀಶ್ವರರು ದೊಡ್ಡ ಸಂಖ್ಯೆಯಲ್ಲಿ ಅಧಿವೇಶ ನಕ್ಕೆ ಆಗಮಿಸಿ ಸಂಕಲ್ಪಿತಧರ್ಮಕಾರ್ಯಗಳನ್ನು ಹುಸಿಸ್ಸು ಗೊಳಿಸಬೇಕೆಂದು ಜ್ಞಾನಮಂಡಲವು ವಿನಂತಿಸಿಕೊಳ್ಳು ತ್ತದೆ

ಪ್ರಭಾರಕಾರ್ಯದರ್ಶಿ
ಶ್ರೀರೇಣುಕಸಿದ್ಧ ಸ್ವಾಮಿಗಳು, ಕುಪ್ಪಿಗಿ

ಬೊಂಬಾಯಿ ಗೌರ್ನರ್ ಆಗಿ ಶ್ರೀ ಪ್ರಕಾಶರು

ಮದ್ರಾಸ್ ಸಂಸ್ಥಾನದ ಗೌರ್ನರ್ ಆಗಿರುವ ಶ್ರೀ ಪ್ರಕಾಶರವರನ್ನು ನೂತನ ಬೊಂಬಾಯಿ ಸಂಸ್ಥಾನದ ಗೌರ್ನರ್ ಆಗಿ ಕೇಂದ್ರ ಸರ್ಕಾರ ನೇಮಿಸಲಿದೆ ಎಂದೂ, ಇವರಿಗೆ ಹುದ್ದೆಯಷ್ಟು ಅಂಗೀಕರಿಸಲು ಶ್ರೀ ಪ್ರಕಾಶ ರವರು ಒಪ್ಪಿರುವುದಾಗಿಯೂ [illegible] ಗಳಿಂದ ತಿಳಿದುಬಂದಿದೆ.

ವರ್ತಮಾನಸಂಗ್ರಹ

ನವೆಂಬರ್ ೧ ರಿಂದ ೧೪ ಪ್ರಾಂತಗಳು

ಭಾರತದ ಹೊಸಸ್ವರೂಪ

ರಾಜ್ಯಗಳ ಪುನರ್ವ್ಯವಸ್ಥೆ ಶಾಸನ ಮತ್ತು ಬಿಹಾರ ಪಶ್ಚಿಮ ಬಂಗಾಳ (ಪ್ರದೇಶಗಳ ವರ್ಗಾವಣೆ) ಶಾಸನಗಳ ಪ್ರಕಾರ ೧೯೫೬ ನವೆಂಬರ್ ೧ ರಿಂದ ಭಾರತ ಈ ಮುಂದೆ ಕಂಡ ೧೪ ಪ್ರಾಂತಗಳನ್ನೊಳಗೊಂಡಿರುತ್ತದೆ

ಮೈಸೂರು, ಮದರಾಸು, ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ಕೇರಳ, ಮಧ್ಯ ಪ್ರದೇಶ, ಒರಿಸ್ಸಾ, ಪಂಜಾಬ್ ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ

ಇವಲ್ಲದೆ, ಆರು ಕೇಂದ್ರ ಆಡಳಿತದಲ್ಲಿನ ಪ್ರದೇಶ ಗಳಿರುತ್ತವೆ ಅವು ಅಂಡಮ್ಮಾ ಮತ್ತು ನಿಕೋಬಾರ್ ದ್ವೀಪಗಳು, ದೆಹಲಿ, ಹಿಮಾಚಲ ಪ್ರದೇಶ, ಲಕ್ಷದ್ವೀಪ ಮತ್ತು ಅಮೀರ್‌ದಿವಿ ದ್ವೀಪಗಳು, ಮಣಿಪುರ ಮತ್ತು ತ್ರಿಪುರ

ರಾಜಪ್ರಮುಖರ ಹುದ್ದೆಗಳೂ ಎ ಬಿ ಮತ್ತು ಸಿ ಎಂಬ ವರ್ಗಗಳೂ ರದ್ದಾಗುವುವು

ರಾಷ್ಟ್ರಪತಿ ಪ್ರಸಾದರಿಂದ ಕನ್ನಡ ಪ್ರಾಂತದ ಉದ್ಘಾಟನೆ

ಎರಡು ಕೋಟಿ ಕನ್ನಡಿಗರ ಹೆಬ್ಬಯಕೆಯ ಸಾಫಲ್ಯ ವೆನಿಸಿದ ವಿಕೇಕೃತ ಕನ್ನಡ ಪ್ರಾಂತವನ್ನು ರಾಷ್ಟ್ರಪತಿ ದಾ|| ರಾಜೇಂದ್ರ ಪ್ರಸಾದರು ನವೆಂಬರ್ ೧ ರಂದು ಉದ್ಘಾಟನೆ ಮಾಡುವರು

ಮೈಸೂರು, ಕೊಡಗು ಪ್ರಾಂತಗಳೊಂದಿಗೆ ಮುಂಬೈ ಮದರಾಸು ಮತ್ತು ಹೈದರಾಬಾದ್ ಪ್ರಾಂತಗಳ ಕನ್ನಡ ಭಾಗಗಳೂ ಸೇರಿ ರೂಪುಗೊಳ್ಳುವ 'ನೂತನ ಮೈಸೂರುರಾಜ್ಯ' ವನ್ನು ಉದ್ಘಾಟಿಸುವಂತೆ ಕೋರಿರು ಮೈಸೂರು ಸರ್ಕಾರದ ಆಮಂತ್ರಣವನ್ನು ರಾಷ್ಟ್ರಾಧ್ಯಕ್ಷರು ಅಂಗೀಕರಿಸಿದ್ದಾರೆಂದು ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಪತ್ರಿಕಾಕರ್ತರಿಗೆ ತಿಳಿಸಿದರು

ನೂತನ ಪ್ರಾಂತದ ಜನನದ ಸೂಚನೆಗಾಗಿ ಹಲವು ಉತ್ಸವಗಳು ನಡೆದು, ಕೊನೆಯಲ್ಲಿ ಈ ಉದ್ಘಾಟನಾ ಸಮಾರಂಭ ಅದ್ದೂರಿಯಿಂದ ಜರುಗುವುದು

ಜನವರಿ ೩೦ ರ ಬದಲು ಜೂನ್‌ನಲ್ಲೇ ಶಿಕ್ಷಣ ವರ್ಷಾರಂಭ

ಶ್ರೀ ಕೆ ಹನುಮಂತಯ್ಯನವರ ಮಂತ್ರಿಮಂಡಲ ಜನರಿಗೆ ತೀವ್ರ ಶಿಕ್ಷಣ ಸುಧಾರಣೆಗಳ ಅಂಗನಾಗಿ ಸಂಸ್ಥಾನ ದಲ್ಲಿ ಈಗ ಶಿಕ್ಷಣ ವರ್ಷವು 'ಸರ್ವೋದಯ ದಿನ' (ಜನವರಿ ೩೦) ದಂದು ಆರಂಭವಾಗುತ್ತಿರುವ ಪದ್ಧತಿ ಹೋಗಿ, ಇನ್ನು ಮುಂದೆ ಪುನಃ ಮುಂಚಿನಂತೆಯೇ ಜೂನ್ ತಿಂಗಳಲ್ಲಿ ಶಾಲಾ ವರ್ಷ ಮರುವಾಗಲಿದೆ

ಜೂನ್ ಮಾರ್ಚ್ ಶಾಲಾ ಅವಧಿಯೇ ಇರಲೆಂದು, ಆಡಳಿತದಲ್ಲಿನ ಶಾಸನಸಭಾ ಕಾಂಗ್ರೆಸ್ ಪಕ್ಷವು ಶ್ರೀ ಕಡಿದಾಳ್ ಮಂಜಪ್ಪನವರ ನೂತನ ಸಂಪುಟಕ್ಕೆ ಆದೇಶವನ್ನಿತ್ತಿದ

ಜೂನ್-ಮಾರ್ಚ್ ವ್ಯವಸ್ಥೆ ಅಭ್ಯಾಸವಾಗಿರುವ ಪ್ರದೇಶಗಳು ಈಗ ಒಂದುಗೂಡಿರುವುದರಿಂದ ಹಳೇ ವ್ಯವಸ್ಥೆಯೇ ಬಳಕೆಗೆ ಬರುವುದಗಕ್ಕವೆಂದು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿದ್ದನ್ನು ಪಕ್ಷ ಅನುಮೋದಿಸಿದೆ

ಭಾರತದಲ್ಲಿ ಜನವರಿ ೩೦ ರಂದು ಶಿಕ್ಷಣ ವರ್ಷ ಪುರುವಾಗುವ ಪದ್ಧತಿಯಿಲ್ಲವಾದ್ದರಿಂದ ಪ್ರಕೃತ ಮೈಸೂರಿಗೆ ಸೇರುವ ಇತರ ಭಾಗಗಳಿಗೆ ಈಗಿನ ವ್ಯವಸ್ಥೆ ಯಿಂದ ತೊಂದರೆಯಾಗುವುದೆಂದು ಅಭಿಪ್ರಾಯ ವ್ಯಕ್ತಪಟ್ಟಿದೆ

ಜೂನ್ ಮಾರ್ಚ್ ಅವಧಿಯ ಶಾಲಾ ವರ್ಷದ ವ್ಯವಸ್ಥೆಯನ್ನು ಮತ್ತೆ ಬಳಕೆಗೆ ತರುವುದಕ್ಕೆ ಆಗತ್ಯವಾದ ಸರ್ಕಾರಿ ಆಜ್ಞೆಗಳು ಶೀಘ್ರದಲ್ಲೇ ಹೊರಬೀಳುವ ನಿರೀಕ್ಷೆಯಿದೆ

ನೂತನ ಮೈಸೂರಿನ ನಾಲ್ಕು ವಿಭಿಜನ್‌ಗಳು

'ಮಾನಸಿಕ ಸಂಘಟನೆ' ಮಾಡುವ ರೀತಿಯಲ್ಲಿ ವಿಭಿಜಗಳನ್ನು ವಿಭಜಿಸುವ, ಜಿಲ್ಲೆಗಳ ವಲ್ಲಿಗಳನ್ನು ಪುನರ್‌ವ್ಯವಸ್ಥೆಗೊಳಿಸುವ ವಿವಿಜ ಕೇಂದ್ರಗಳನ್ನ ಅಂತಿಮವಾಗಿ ಅರಿಸುವ ಕಾರ್ಯ, ಹೊಸತ ರಾಜ್ಯ ಸರ್ಕಾರಕ್ಕೆ ಬಿಡಲಾಗಿದೆ' ಎಂದು ಮೈಸೂರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಪತ್ರಿಕಾಕರ್ತ ರಿಗೆ ತಿಳಿಸಿದರು.

ಅಂತರ ಪ್ರಾಂತೀಯ ಸಚಿವ ಸಮಿತಿಯ ಅಂಗೀಕಾರ ಪ ದಿರುವ ತಾತ್ಕಾಲಿಕ ವಿವಿಜಗಳು: ೧. ಬೆಂಗಳೂರು ೨ ಮೈಸೂರು, ೩ ಬೆಳಗಾಂವ, ೪. ಗುಲ್ಬರ್ಗ.

ನವೆಂಬರ್ ೧ ರಿಂದ ಅಸ್ತಿತ್ವಕ್ಕೆ ಬರಲಿರುವ ಈ ನಾಲ ತಾತ್ಕಾಲಿಕ ವಿವಿಜಗಳಲ್ಲಿ ಸೇರುವ ಜಿಲ್ಲೆಗಳು:

ಬೆಂಗಳೂರು

ಬೆಂಗಳೂರು, ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳು

ಕೇಂದ್ರ ಕಚೇರಿ. ಬೆಂಗಳೂರು

ಮೈಸೂರು

ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ದಕ್ಷಿಣ ಕನ್ನಡಜಿಲ್ಲೆಗಳು ಮತ್ತು ಕೊಡಗು

ಕೇಂದ್ರಕಚೇರಿ: ಮೈಸೂರು.

ಬೆಳಗಾಂವ

ಮುಂಬೈ ಕರ್ನಾಟಕದ ಎಲ್ಲ ಜಿಲ್ಲೆಗಳು.

ಕೇಂದ್ರ ಕಚೇರಿ ಬೆಳಗಾಂವ

ಗುಲ್ಬರ್ಗ

ಮೈಸೂರಿಗೆ ಸೇರಲಿರುವ ಹೈದರಾಬಾದಿನ ಎಲ್ಲ ಕನ್ನಡಜಿಲ್ಲೆಗಳು

ಕೇಂದ್ರ ಕಚೇರಿ ಗುಲಬರ್ಗಾ.

ಅಧಿಕಾರಿಗಳು

ಈ ನಾಲ್ಕು ವಿವಿಜಗಳಿಗೂ, ಈ ಕೆಳಕಂಡ ನಾಲ್ಕು ಮೈಸೂರಿನ ಅಧಿಕಾರಿಗಳನ್ನು ವಿವಿಜಾಧಿಕಾರಿಗಳ ರಾಗಿ ಸಚಿವ ಸಮಿತಿ ಆಯ್ಕೆ ಮಾಡಿದೆಯೆಂದು ತಿಳಿ ಬಂದಿದೆ

೧ ಎನ್ ಸೂಧವರಾವ್
೨ ಎನ್. ಎಸ್ ಹಿರಣ್ಣಯ್ಯ.
೩. ಕೆ ಬಿ ರಾಮನಾಥಯ್ಯ.
೪ ಕೆ ಪಿಪ್ಪೆಗುದ್ದಯ್ಯ

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಎಂಭತ್ತು ಅಮೃತಲಿಲೆಗಳಿಂದ ಕೂಡಿದ ಫೋಟೋ ೦—೫—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ(ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ ೦ ೪—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೊ (ಚಿಕ್ಕ ಸೈಜು) ೦—೧—೨

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಶಿಷ್ಯಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀರೇಣುಕಾಚಾರ್ಯರು ಆಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ ೦—೩—೦

" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಕಲ್ಪಿತ ಧರ್ಮಕ್ಕೆ ಮಾತೃಕ ಪೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧೀಕ್ಷಾಪಾ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಆಕಾಶ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦

ಶ್ರೀಚಾರಿತ್ರಾವಸ್ಥೆಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ತಿರಿಪಿಡಾರಿಮಹಾಸುರ ಫೋಟೋ ೦—೧—೬

ಶ್ರೀಜಗದ್ಗುರು ಘೋರ ನಿಜಾಸಾಧಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ . ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ಮರಣಾರ್ಥವಾಗಿ ಶ್ರೀ ಜಗದ್ಗುರು ಶಾಂತವೀರ ಶಿವಾಚಾರ್ಯರು ಹುಕ್ಕಳಿಯಲ್ಲಿ ಸ್ಥಾಪಿಸಿರುವ ಶಿವಲಿಂಗದ ಫೋಟೋ ೦—೧—೬

ಪಂಡಿತ ಶ್ರೀಚಾರಿತ್ರಾಚಾರ್ಯಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ ೦—೩—೦

ಪಂಡಿತ ಶ್ರೀಚಾರಿತ್ರಾಚಾರ್ಯಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ ೦—೪—೦

ಶ್ರೀರಂಭಾಪುರೀ ಜಗದ್ಗುರುಗಳವರ ಸ್ಮರಣಾರ್ಥವಾಗಿ ಶ್ರೀಮದ್ಭಾಪಾಡಾಚಾರ್ಯರು ವಿರಚಿಸಿರುವ ಫೋಟೋ .... ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ವಿಶಾಲಾಕ್ಷಲಿಂಗ ... ೦—೫—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸಿದ್ಧಾಂತಶಿಖಾಮಣಿ

(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಏರಡುಸಾವಿರ ವರ್ಷಗಳ ಹಿಂದಿ ಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯ ರಿಂದ ರಚಿಸಲ್ಪಟ್ಟದ್ದು ವೇದನಗರಿಭಾಷೆಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕ ಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದಮ್ಮ ಮನಗಂಡ ಶ್ರೀ ಪಂಡಿತ ಶ್ರೀಚಾರಿತ್ರಾಚಾರ್ಯಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆ ಪಾತ್ರರಾದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವೈಭವವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದ ರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಏರಡನೇ ಮುದ್ರಣವು ಪಂಡಿತರ ಸಹಾಯ ದರಿಂದ ವೇ|| ಬ್ರ|| ಮಹಾದೇವಯ್ಯಶಾಸ್ತ್ರಿಗಳವರಿಂದ ಮುದ್ರಿಸ ಪ್ರಕಾಶಿತವಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತಪ್ಪಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. ೨-೫-೦

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

Edited, Printed and Published by Brahmasrimathadhyakshaka Sri Mahadeveeah at Sri Panchacharya Electric Press, Sayaji Rao Road, Mysu

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮಂತ್ರೋಪದೇಶರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪು ದೀಯೋಕಮಂ ॥

ಸಂಸ್ಥಾಪಕರು—ಪಾಗನೂರು ಬೃಹನ್ಮಹಾಧ್ಯಕ್ಷರಾದ ನೇಗಿ ಪಂ॥ ಶ್ರೀ ಶಾಶೀಷಾಫಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಪಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯಶಿವರು [ವಿ ಪಿ ಖರ್ಚು ಸೇರಿ ೩ ರೂ.೧೧ ಆ.

ಸಂಪುಟ ೩೦] ಸೋಮವಾರ ತಾ॥ ೧ ನೇ ಅಕ್ಟೋಬರ್ ೧೯೫೬ [ಸಂಚಿಕೆ ೨೦

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ದಸರಾಮಹೋತ್ಸವ

ಶ್ರೀ ರಂಭಾಪುರೀ ನುಡಾಸಂಸ್ಥಾನಮಠ, ಬಾಳೆಹೊನ್ನೂರು

ಶ್ರೀ ದುರ್ಮುಖಿನಾಮ ಸಂವತ್ಸರದ ಶ್ರೀಜಗದ್ಗುರುಗಳವರ ದಸರಾ (ನವರಾತ್ರಿ ಪ್ರತಾಚರಣೆ) ಮಹೋತ್ಸವವು ಶ್ರೀ ರಂಭಾಪುರೀ ಮಹಾಪೀಠದಲ್ಲಿ ನಡೆಯುವಂತೆ ನಿಶ್ಚಯಿಸಿರುವುದರಿಂದ ಮುಂದೆ ಕಾಣಿಸಿದ ಕಾರ್ಯಕ್ರಮಾನುಗುಣವಾಗಿ ನೂತನ ಲಾಲಪರಿಸ್ಥಿತಿಯನ್ನ ಸುಸರಿಸಿ ಮಹಾಶೈಭವದಿಂದ ನೆರವೇರಿಸಲಾಗುವುದೆ ಈ ಮಹೋತ್ಸವದಲ್ಲಿ ಸರ್ವರೂ ಭಾಗಿಗಳಾಗಿ ಶ್ರೀ ಕ್ಷೇತ್ರನಾಥನ ಕೃಪೆಗೆ ಮತ್ತು ಶ್ರೀ ಜಗದ್ಗುರು ದೇವರ ಆಶೀರ್ವಾದಕ್ಕೆ ಪಾತ್ರರಾಗಿ ಧನ್ಯರಾಗಬೇಕೆಂದು ಸೂಚಿಸುತ್ತೇನೆ

ಪೂಜಾಕಾರ್ಯಕ್ರಮ

ಶ್ರೀ ಸ್ಥಿರಾಧಿಯವರ ಪೂಜಾಕಾರ್ಯಕ್ರಮವು ಆಶ್ವೀಜ ಶು॥ ೧ ತಾ॥ ೫–೧೦–೫೬ ನೇ ಶುಕ್ರವಾರ ಮೊದಲು ಗೊಂಡು ವಿಜಯದಶಮಿ ಪರ್ಯಂತರ ಪ್ರತಿನಿತ್ಯವೂ ಬೆಳಿಗಿನ ೫ ಘಂಟೆಯಿಂದ ಪೂಜಾನುಷ್ಠಾನ ಮತ್ತು ವೇದಾಗಮ ಉಪನಿಷತ್ ಗೀತಾಪಾರಾಯಣ ನಂತರ ೧೦ ಘಂಟೆಯಿಂದ ಗಜಶಾಸ್ತ್ರಾದಿ ಚತುರಂಗಬಲದೊಡನೆ ಅಗ್ರೋದಕವನ್ನು ತರುವುದು

ಶ್ರೀಜ ಶು॥ ೬ ತಾ॥ ೧೦–೧೦–೫೬ ಬುಧವಾರ ಸರಸ್ವತಿಪೂಜಾ.

ಶ್ರೀಜ ಶು॥ ೯ ತಾ॥ ೧೩–೧೦–೫೬ ಶನಿವಾರ ಆಯುಧಪೂಜಾ.

ದರ್ಬಾರ್ ಕಾರ್ಯಕ್ರಮ

ಶ್ರೀ॥ ೫–೧೦–೫೬ ನೇ ಶುಕ್ರವಾರದಿಂದ ತಾ॥ ೧೪–೧೦–೫೬ ನೇ ಭಾನುವಾರದವರೆಗೆ ಪ್ರತಿನಿತ್ಯ ಸಾಯಂಕಾಲ ೬ ಘಂಟೆಗೆ ಶ್ರೀಜಗದ್ಗುರುಗಳವರ ಸಿಂಹಾಸನಾರೋಹಣ ನಂತರ ವೇದಘೋಷ, ಪಂಡಿತರ ಭಾಷಣ ಕೀರ್ತನಾದಿಗಳು, ಕಲಾವಿದರ ಕಲಾಪ್ರದರ್ಶನ ಸಂಗೀತ ಪ್ರಸಂಗ ಇತ್ಯಾದಿ ಕಾರ್ಯಗಳು ಮಹಾಸಂಸ್ಥಾನದ ಸಿಬ್ಬಂದಿ ಜನರ ನಜರು ಮುಜುರೆಗಳು, ಸುಮಂಗಲೆಯರಿಗೆ ಹರಿದ್ರಾ, ಕುಂಕುಮ, ಗಂಧ, ಪುಷ್ಪ ವಿನಿಯೋಗ ಮಹಾಮಂಗಳಾರತಿ, ಪುಷ್ಪಾಂಜಲಿ, ಸಭಾವಿಸರ್ಜನ.

ವಿಜಯದಶಮಿ ಕಾರ್ಯಕ್ರಮ (ತಾ॥ ೧೪–೧೦–೧೯೫೬ ಭಾನುವಾರ)

ಪ್ರಾತಃಕಾಲ ಪೂಜಾದಿಗಳು, ಮಧ್ಯಾಹ್ನ ೧೩–೧೫ ಘಂಟೆಗೆ ಸಲ್ಲುವ ಶುಭ ಘಸುರ್ಲಗ್ನದಲ್ಲಿ ಶ್ರೀಮತಿ ಕೈ॥ ಕರಣಮ್ಮನವರ ಸಂಕಲ್ಪಾನುಸಾರ ಶ್ರೀ ಚಾಮುಂಡೇಶ್ವರೀ ಪ್ರತಿಷ್ಠೆಯು, ಶಿವೈಕ್ಯ ಶ್ರೀಜಗದ್ಗುರು ಮಹಾ ॥ ॥ ಸ್ವಾಮಿಗಳವರ ಗದ್ದುಗೆಗಳ ಮೇಲೆ ಶಿವಲಿಂಗ ಪ್ರತಿಷ್ಠೆಯು (ಶ್ರೀ ಎಸ್. ಜಿ. ಶಿವಲಿಂಗಯ್ಯನವರು, ಅರಸೀಕೆರೆ, ಇವರ ಸೇವಾ) ಶ್ರೀಮತಿ ಪುಟ್ಟಮ್ಮನವರ ಸಂಕಲ್ಪಾನುಸಾರ ಚಂದ್ರಮೌಳೀಶ್ವರ ಲಿಂಗಪ್ರತಿಷ್ಠೆಯು. ಡಾ॥ ಎಂ. ಸಿ. ಸಂಜಕ್ಕನವರಿಂದ ಸಮರ್ಪಿತವಾದ, ಶಿವೈಕ್ಯ ಶ್ರೀಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಶಿಲಾಮೂರ್ತಿ ಪ್ರತಿಷ್ಠಾಮಹೋತ್ಸವ ಮತ್ತು ಶಿವದೀಕ್ಷಾ ಸಂಸ್ಕಾರವು ಅನ್ನಸಂತರ್ಪಣೆ. ೨ ಘಂಟೆಯಿಂದ ಸಕಲ ಬಿರುದಾವಳಿಗಳೊಡನೆ ಬಾಳೇಹೊನ್ನೂರು ಪೇಟೆಯಲ್ಲಿ ಶ್ರೀಜಗದ್ಗುರುಗಳವರ ಸುವರ್ಣರಜತಕಾರ್ಯ ಗಾಂಡೋಲಿಕಾ (ಅಡ್ಡ ಪಲ್ಲಕ್ಕಿ) ಮಹೋತ್ಸವ ಪೂರ್ವಕ ಶಮಿಪೂಜಾ ಉತ್ಸವಾನಂತರ ಸಿಂಹಾಸನಾರೋಹಣ, ಪ್ರಾಸ್ತಾವಿಕ ಭಾಷಣ, ಕಾಣಿಕಾಸಮರ್ಪಣ, ಶ್ರೀಜಗದ್ಗುರು ಮಹಾಸನ್ನಿಧಿಯವರ ವಿಶ್ವಶಾಂತಿ ಶುಭಸಂದೇಶ ಭಾಷಣ, ಶಮಿ ವಿನಿಯೋಗ, ಶ್ರೇಯಃಪ್ರಾರ್ಥನೆಗಳು, ಮಹಾಮಂಗಳ.

ಶ್ರೀಜ ಶು॥ ೧೧ ತಾ॥ ೧೫–೧೦–೫೬ ನೇ ಸೋಮವಾರ ಪ್ರಾತಃಕಾಲ ೧೦ ಘಂಟೆಯಿಂದ ಸಭಾಕಾರ್ಯಕ್ರಮ ಪಂಡಿತರ ಸನ್ಮಾನ ಪದವೀಪ್ರದಾನಾದಿಗಳು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ ಯಾದ್ದರಿಂದ ಸರ್ವರೂ ಭಾಗಿಗಳಾಗಿ ಧನ್ಯರಾಗಬೇಕು

ಏಜಂಟ್,
ಶ್ರೀರಂಭಾಪುರೀ ಮಹಾಸಂಸ್ಥಾನಮಠ
ಬಾಳೆಹೊನ್ನೂರು.

ದಸರಾಮಹೋತ್ಸವ

ಮೈಸೂರು

ಪ್ರತಿವರ್ಷದ ಪದ್ಧತಿಯಂತೆ ಇದೇ ಆಕ್ಟೋಬರ ೫ ನೇ ತಾರೀಖಿನಿಂದ ಮೈಸೂರಿನಲ್ಲಿ ದಸರಾಮಹೋತ್ಸವವು ಪ್ರಾರಂಭವಾಗಿ ೯ ದಿನಸ ದರ್ಬಾರುಗಳು ನಡೆಯುವವು. ೧೪ ನೇ ತಾರೀಖು ವಿಜಯದಶಮಿ ಭಾನುವಾರ ದಿವಸ ಶ್ರೀಮನ್ಮಹಾರಾಜರು ಅನೆಯ ಮೇಲೆ ಸಿಂಗರಿಸಲ್ಪಟ್ಟ ಚಿನ್ನದ ಅಂಬಾರಿಯಲ್ಲಿ ಕುಳಿತು ಚತುರಂಗಬಲದೊಡನೆ ಸಂಪ್ರದಾಯದ ಪ್ರಕಾರ ೩–೪೫ ಕ್ಕೆ ಅರಮನೆಯಿಂದ ಹೊರಟು ಪ್ರಜೆಗಳಿಂದ ಅರ್ಪಿಸುತ್ತಿರುವ ನಜರು-ಮುಜರೆಗಳನ್ನು ಸ್ವೀಕರಿಸುತ್ತ ಬನ್ನಿಮಂಟಪಕ್ಕೆ ತೆರಳುವರು. ಅಲ್ಲಿ ಶಮೀ ಪೂಜೆಮಾಡಿ ಮಿಲ್ಟ್ರಿಪೆರೆಡ್ ಮುಗಿಸಿಕೊಂಡು ಮರಳಿ ರಾತ್ರಿ ಅರಮನೆಗೆ ಮೆರವಣಿಗೆಯಿಂದ ಆಗಮಿಸುವರು.

ನೂತನ ಮೈಸೂರು ಗೌರ್ನರ್ ಆಗಿ ರಾಜಪ್ರಮುಖರು

ಮೈಸೂರಿನ ರಾಜಪ್ರಮುಖರು ನೂತನ ಮೈಸೂರಿನ ಗೌರ್ನರ್‌ಆಗಿ ಮುಂದುವರೆಯುವರು ಎಂದು ಬೆಂಗಳೂರ್ ಲಾಲ್‌ಬಾಗ್‌ನಲ್ಲಿ ನಡೆದ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಆವರ ಸನ್ಮಾನ ಸಮಾರಂಭದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಜಿನ್ನಪ್ಪನವರು ಈ ಸಂಬಂಧದಲ್ಲಿ ಮೈಸೂರು ಮಾಡಿಕೊಂಡ ಪ್ರಾರ್ಥನೆಗೆ ದೆಹಲಿ ನಾಯಕರುಗಳು ಒಪ್ಪಿದ್ದಾರೆಂದು ಪ್ರಕಟಿಸಿದರು.

ಸ್ವೀಕಾರ

ಗಂಗಾವತಿ ತಾಲೂಕಿ ಬೂದಗುಂಪಿಯಲ್ಲಿ ನಡೆದ ಶ್ರೀ ಶರಣಬಸವೇಶ್ವರ ಪುರಾಣ ಸಮಾಪ್ತಿಯಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 2 ರೂ.ಗಳು ಶ್ರೀ ಚನ್ನಬಸವಶಾಸ್ತ್ರಿ ಬ್ಯಾಗವಾಟಿ ಹಿರೇಮಿಕ ಇವರ ವ್ಯಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಸಿರುಗುಪ್ಪಾ ತಾಲೂಕ ಹಚ್ಚೊಳ್ಳಿಯಲ್ಲಿ ನಡೆದ ರೇಣುಕವಿಜಯ ಪುರಾಣ ಸಮಾಪ್ತಿ ಕಾಲದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 1 ರೂ ಎಮ್ಮಿಗನೂರು ಶ್ರೀಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದ ಹಾರೈಸುತ್ತೇನೆ.

ಪಂಚಾಚಾರ್ಯಪ್ರಭಾ

೧೯೫೬ ನೆಯ ಆಕ್ಟೋಬರ್ ತಾ॥ ೧೩ನೆಯ ಸೋಮವಾರ

ಜ್ಞಾನಮಂಡಲದ ಕರ್ತವ್ಯ

ಶಿವಪ್ರತಿಕಿರವೂ ಜಗದಾದಿಯಿಂದ ನಡೆದು ಬಂದುದೂ ಆದ ವೀರಶೈವಮತಕ್ಕೆ ಲಿಂಗದಾರಣ-ಲಿಂಗಪೂಜಾದಿಕ್ರಿಯೆಗಳು ಪ್ರಾಮುಖ್ಯವಾಗಿರುವವು. ಇವನ್ನು ಒಡಗಿಸಿಕೊಡುವವರು ಆಸುವಂಶೀಯರಾದ ಗುರುವರ್ಗದ ಜಂಗಮರು ಅಂದರೆ ಮುರಾದಿಕಾರಿಗಳು. ಈ ಮುರಾಧಿಕಾರಿಗಳ ಮೂಲಪುರುಷರೂ ಮತಸ್ಥಾಪನಾಚಾರ್ಯರೂ ಆದ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವಮತದ ಸಕಲಕರ್ಮಗಳಿಗೆ ಸಾಕ್ಷೀಭೂತರಾಗಿರುವರು ಆದುದರಿಂದಲೇ ಪ್ರತಿಯೊಬ್ಬ ವೀರಶೈವನು ಕರ್ನಾರಂಭದಲ್ಲಿ ಪಂಚಾಚಾರ್ಯರ ಸಾನ್ನಿಧ್ಯೀಭೂತವಾಗಿ ಪಂಚಕಲಶಗಳನ್ನು ಸ್ಥಾಪಿಸಿ ಪೂಜಿಸಿ ಮುರಾದಿಕಾರಿಗಳ ದ್ವಾರಾ ಅವರ ಅಶೀರ್ವಾದವನ್ನು ಪಡೆದು, ಧನ್ಯನಾಗುತ್ತಾನೆ ಈ ಸಂಪ್ರದಾಯವು ಅನಾದಿಕಾಲದಿಂದ ನಡೆದುಬಂದಿದ್ದಾಗಿರುವುದು ಇವತ್ತಿನದೆ ಶ್ರೀಜಗದ್ಗುರು ಪಂಚಾಚಾರ್ಯ ಜಗದ್ಗುರ್ವಾದರಿಂದ ಜೀರ್ಣೋದ್ಧಾರವಾದ ಅಷ್ಟಾವರಣ-ಪಂಚಾಚಾರಗಳು ವೀರಶೈವನ ನವವಿಧಭಕ್ತಿಯ ಸಾಧನಗಳಾಗಿಯೂ ಷಟ್‌ಸ್ಥಲಗಳು ಮುಕ್ತಿಸೋಪಾನಗಳಾಗಿಯೂ ಇರುತ್ತವೆ ಎನ್ನಿ ಸಮ್ಮುರು ಉಪದೇಶಮಾತ್ರದಿಂದಲೇ ದೊರೆಯಬೇಕಾದ ಕಾರಣ ಅಲ್ಲಲ್ಲಿ ಗುರುಕುಲಗಳು ಸ್ಥಾಪಿತವಾಗಿ, ಅವೇ ಮಠ ಮಂದಿರಗಳಾಗಿ ಪರಿಗಣಿಸಲ್ಪಟ್ಟವು ಈ ಕಾರ್ಯವು ತಡೆಯಿಲ್ಲದೆ ಶಾಶ್ವತವಾಗಿ ನಡೆಯಲೆಂದೇ ಮತಗಳಿಗೆ ಸಮಾಜದಿಂದಲೂ, ರಾಜಾಧಿರಾಜರಿಂದಲೂ ಧರ್ಮಾಧಿಕಾರವು ಕೊಡಲ್ಪಟ್ಟು ಭೂಮಿ ಸೀಮೆಗಳು ದಾನ ಮಾಡಲ್ಪಟ್ಟವು ಹೀಗೆ ಗುರು ಶಿಷ್ಯಸಂಬಂಧವೂ ಧರ್ಮಬಿಂಧನೆಗಳೂ ಯುಗಯುಗಾಂತರದಿಂದ ಒಳ್ಳೇ ಬಿಗಿಯಾಗಿ ನಡೆಯುತ್ತ ಬಂದು, ಕಲಿಕಾಲಮಹಿಮೆಯಿಂದಲೋ ಅನ್ಯಮತೀಯರ ಹಾನಿಳಿಯಿಂದಲೋ ಈ ಮತದ ಪ್ರಾಶಸ್ತ್ಯವು ಕುಂಠಿತವಾಗಹತ್ತಿತು. ಮುರಾದಿಕಾರಿಗಳು ತಮ್ಮ ಕರ್ತವ್ಯದಿಂದ ದೂರಾದರು ಇವರಿಂದ ಅನ್ಯಮತತತ್ವಗಳ ಅಕ್ರಮಣಕ್ಕೆ ಹಾದಿಯಾಯಿತು ತನ್ಮೂಲಕ ಸಮಾಜವು ಒಡಕು ಛಿದ್ರವಾಗಿ ಸಮಾಜಬಲವೇ ಹಾಳಾಯಿತು, ಇನ್ನೂ ಹಾಳಾಗುತ್ತಲೇ ಇದೆ ಈ ಮಸ್ಥಿತಿಯನ್ನು ಸರಿಪಡಿಸುವುದಕ್ಕಾಗಿಯೇ ನಿಡಸೇಸಿ ಜ್ಞಾನಮಂಡಲವು ಉದಯವಾಗಿರುವುದೆಂದೂ, ಆದರ ಪರಿಣಾಮವಾಗಿ ವಿಜಾಪುರ ಜಿಲ್ಲಾ ಜಾಗಲಕೋಟೆ ತಾಲೂಕಿನ ಸಂದಪಾಡಿಗಿಯಲ್ಲಿ ಮುರಾಧಿಕರ ಸಮ್ಮೇಲನವನ್ನು ಕರೆದಿರುವುದಾಗಿಯೂ ಆ ಜ್ಞಾನಮಂಡಲದ ಕಾರ್ಯದರ್ಶಿಗಳಿಂದ ತಿಳಿದುಬರುತ್ತದೆ ಇವರು ಈ ಮಹಾಕಾರ್ಯಕ್ಕಾಗಿ ಸಾಹಸಪಡುತ್ತಿರುವುದು ಸ್ತುತ್ಯವೇ ಸರಿ ಆದರೆ ಈ ಪ್ರಯತ್ನವು ಅಲ್ಪಕಾಲದ ಧನಾರ್ಜನೆಗಾಗಲಿ, ಸ್ವಪ್ರತಿಷ್ಠೆಗಾಗಲಿ, ಪಕ್ಷಸಂಘಗಳ ಪ್ರಭಾವಕ್ಕಾಗಲಿ ಒಳಗಾಗದೆ ದೀರ್ಘಕಾಲದ ಧರ್ಮೋನ್ನತಿಗೂ ಸಮಾಜದ ಐಕ್ಯತೆಗೂ ನೆರವಾಗಲೆಂದು ಆಶಿಸುತ್ತೇವೆ.

ಭವಿಷ್ಯವಾಣಿ

ವಿಶಾಲ ಮೈಸೂರಿನ ಮುಖ್ಯನಾಯಕರು

ದುರ್ಮುಖಿವರ್ಷ ಸಂವತ್ಸರದ ಆಷಾಢ ಶು॥ ೧ ಸೋಮವಾರ (ತಾ॥ ೯-೭-೫೬) ಉದಯ ೪॥ ಗಂಟೆಗೆ ಸಂದಿಸಿದ ಪ್ರಶ್ನಸಿಂಹಲಗ್ನದ ಆಧಾರದ ಪ್ರಕಾರ ಇದೇ ನವಂಬರ ೧೧ನೇ ತಾರೀಖಿಗೆ ಉದಯವಾಗಲಿರುವ ವಿಶಾಲ ಮೈಸೂರು ದೇಶಕ್ಕೆ ಕರ್ನಾಟಕ ರತ್ನಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರು ಗವ್ವರ್ನರರಾಗಿಯೂ ಕೆ ಪಿ ಸಿ ಸಿ ಮಾಜಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿಯೂ ನುಂಯುವರಿಯುವರು ಈ ಉಭಯ ಮಹೋದಯರಿಂದ ಜಾತ್ಯಾತೀತ, ಸಮತಾವಾದ ರಾಜ್ಯವ್ಯವಸ್ಥೆಯಾಗಿ ಬಸವಕಲ್ಯಾಣವು ನೆನೆಸಿಗೆ ಬರುವುದಲ್ಲದೆ ಕಾಯಕವೇ ಕೈಲಾಸ, ಪರಹಿಂಸೆಯೇ ಪಾಪ, ಅಂತರಂಗಶುದ್ಧಿ, ಬಹಿರಂಗಶುದ್ಧಿ ಮೊದಲಾದ ಗುಣಗಳು ಜನತೆಯಲ್ಲಿ ನಡಮೂಡುವಂತೆ ಕೈವಲ್ಯಾನುಭವ ಮೆಂಟಪಗಳು ಸಿದ್ಧವಾಗುವವು

ನಿಜದಮಂತ್ರವ ಜಗಕೆಸಾರಿದ ।
ನಿಜದತತ್ರವ ಜಗಕೆತೋರಿದ ।
ನಿಜದಯಂತ್ರವ ಜಗಕೆಬೀರುತ ನಿಜದಧ್ವಜವಿಡಿದ ॥
ನಿಜಕ ನಿಜಲಿಂಗವ್ವನ್ಯರು ।
ನಿಜದ ರ ಜ್ಯಕೆ ಮಂತ್ರಿ ಮುಖ್ಯರು ।
ನಿಜದ ಮೈ ಸೂರೊಡೆಯ ಕಾಯಚಾವೆಂದ್ರೆಪ್ರಭುವರಗೆ ॥೧॥

ಬಜಳನ ಮಂತ್ರಿಪ್ಯ ರುಜಿಸಿದೆ ।
ಪ್ರಜ್ವಲಿಪ ಮೈಸೂರು ಮಂತ್ರಿಯ ।
ಕಜ್ಜವನು ಕೃಕೊಳ್ಳಲೋಸುಗ ಬುವಿಗೆ ಶಾನಿಳಿದು ॥
ಸಜ್ಜನರ ಸಂರಕ್ಷಣಾರ್ಥದಿ ।
ಉಜ್ವಲವ ರಾಷ್ಟಾದಿಕಾರಕೆ ।
ಉಜ್ವಲಿಸಿಪ ವೌದಯತಾಸಿಯು ಬಸವಸೀನಲ್ಲೆ ॥೨॥

ಕನ್ನಡವ ಕಲ್ಯಾಣಾರಾಜ್ಯದಿ ।
ಘನ್ನರಸಿತನು ಬಪದಮಂಟಪ ।
ವನ್ನು ರಚಿಸೊನ್ನುತದ ಮತವನು ಪ್ರಜಪ್ರಭುತ್ವದಲಿ ॥
ಜನ್ನಬವೇಶ್ವರ ಸ್ಥಾಂಧಿಯ ।
ಉನ್ನತೋನ್ನತ ದೀಕ್ಷೆಮೋಕ್ಷನ ।
ನನ್ನಿಯಿಂ ತೋರಿಳಿಗೆ ಅಭಿನವ ಬಸವಮಂತ್ರಿಕ ॥೩॥

ಶ್ರೀ ಸಿದ್ಧಾಂತಿ ತಿಪ್ಪೇರುದ್ರಶಾಸ್ತ್ರೀ
ಶ್ರೀ ರೇಣುಕೇಶ್ವರ ದೇವಸ್ಥಾನ, ಮೈಸೂರು.

ಪತ್ರವ್ಯವಹಾರ

[ಬಾಹ್ಯೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಕರ್ನರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಪಂಡಿತ ಶ್ರೀ ಜಗದೀಶಶಾಸ್ತ್ರಿಗಳವರ ಕೈಲಾಸಗಮನ

ಇದೇ ಶಾ ೫ ಗಳಂದು ಭಾ ರು ೩ ಗುರುವಾರ (ತಾ॥ ೬-೯ ೫೬) ರಾತ್ರಿ ೧೧ ೩೦ ಸೆಂಟೆಗೆ ಸೊಲ್ಲಾಪುರದಲ್ಲಿ ವೀರಗೋತ್ರೀಯರೂ, ಸಂಸ್ಕೃತ-ಕನ್ನಡ ವಾಙ್ಮಯದ ಸುಪ್ರಸಿದ್ಧ ಸಾಹಿತಿಗಳೂ, ಸೊಲ್ಲಾಪುರ ಶ್ರೀಗುರುವೀರರೇಶ್ವರ ಗುರುಕುಲದ ಮೂಲೇ ಪ್ರಧಾನಾಧ್ಯಾಪಕರೂ ಶಿವಪೂಜಾ ಧುರೀಣರೂ ಆದ ಕುಲಪತಿ ಸಾಹಿತ್ಯರತ್ನ ವೆ॥ ಸಜಿ ನಾಲವಾರ ಜಗದೀಶ ಶಾಸ್ತ್ರಿಗಳವರು ತಮ್ಮ ೯೬ ನೇ ವಯಸ್ಸಿನಲ್ಲಿ ತಿಪ್ಪೆಕ್ಯೆಯಾದ ರೆಂದು ಳಿಗಹಿಸಲು ಬಹು ವಿಷಾದವೆನಿಸುತ್ತದೆ

ಶ್ರೀ ಶಾಸ್ತ್ರಿಗಳವರ ಬಾಲ್ಯ ಜೀವನದಲ್ಲಿಯ ಪವಿತ್ರ ಘಟನೆಗಳು ಅಪಾರವಾಗಿವೆ ಅಲ್ಲಿವುಗಳನ್ನು ಚಿಂತ್ಯ ಗ್ರಂಥವಲ್ಲಿ ಬರೆಯುವುದೇ ಸಮುಂಜಸ ಶ್ರೀಶಾಸ್ತ್ರಿಗಳು ಅನೇಕ ವರ್ಷಗಳವರೆಗೆ ವಾರದ ಪಾಠಶಾಲೆಯಲ್ಲಿಯೂ ತರುವಾಯ ಕೆಲವರ್ಷಗಳವರೆಗೆ ಶ್ರೀಮದ್ವೀರಶೈವ ಗುರುಕುಲ ಸಂಸ್ಥೆಯಲ್ಲಿಯೂ ಪ್ರಾಧ್ಯಾಪಕತ್ವವನ್ನು ಒಳ್ಳೆ ದಕ್ಷತೆಯಿಂದ ನಾನಿಸಿದರಲ್ಲದೆ, ಶ್ರೀಗುರು ಹೋಟಗೀಶ್ವರರ ಆಜ್ಞೆಯಂತೆ ಅನೇಕ ಧರ್ಮಗ್ರಂಥಗಳನ್ನೂ ಚರಿತ್ರಗ್ರಂಥಗಳನ್ನೂ ನಿರ್ಮಿಸಿ, ವೀರಶೈವೆತಿಹಾಸವನ್ನೇ ಮುಂದುವರಿಸಿದ ಮಹಾ ಕೀರ್ತಿ ಪಾತ್ರರಾಗಿದ್ದಾರೆ. ಇವರಿಗೆ ಮಕ್ಕಳು ಮೊಮ್ಮಕ್ಕಳು ಅಳಿಯಂದಿರು ಮುಂತಾದ ಸೌಭಾಗ್ಯಸಂಪತ್ತು ವಿಪುಲವಾಗಿದ್ದರೂ, ನಿಜವಾದ ಸಂಪತ್ತು ಗ್ರಂಥರಾಶಿಯೇ ಆಗಿತ್ತು

ಸಾಮಾನ್ಯವಾಗಿ ಇಂದು ಕರ್ನಾಟಕವು ಮಹಾರಾಷ್ಟ್ರವೇಕಗಳಲ್ಲಿರುವ ವೀರಶೈವ ಕವಿ ಪಂಡಿತರಲ್ಲಾಗಲಿ, ಪೌರಾಣಿಕ, ಕೀರ್ತನಕಾರರಲ್ಲಾಗಲಿ, ಗುರು-ವಿರಕ್ತ ವರ್ಗಗಳಲ್ಲೇ ಆಗಲಿ ವಿದ್ಯಾನಂತರಾಗಿದ್ದವರಲ್ಲರೂ ಶ್ರೀಶಾಸ್ತ್ರಿಗಳವರ ಅಮೃತಹಸ್ತದಿಂದಲೇ ಎಂದು ಹೇಳವರ ಅತಿಶಯೋಕ್ತಿಯಾಗುವಂತಿಲ್ಲ ಹೀಗೆ ಇವರ ವಿದ್ಯಸಂಪತ್ತು ಅನಂಖ್ಯವಾಗಿ ಹಬ್ಬಿದೆಯಲ್ಲವೆ, ವೀರಶೈವ ಸಮಾಜಪುರುಷನ ಪಂಚಮುಖಗಳಂತಿರುವ ಪಂಚಮಹಾಪೀಠಗಳ ವೈಕ ಇಂದಿನ ಶ್ರೀಚರಾಚಾರ್ಯರು ಕೂಡ ಶ್ರೀ ಶಾಸ್ತ್ರಿಜಿಯವರಲ್ಲಿ ಶಾಸ್ತ್ರಾಧ್ಯಯನಮಾಡಿ ಪರಮಾಚಾರ್ಯರಾಗಿದ್ದಾರೆ

ಶ್ರೀ ಶಾಸ್ತ್ರಿಗಳವರ ಹಸನ್ಮುಖಮೂರ್ತಿ, ವಿಶ್ವಕೋಟಿಯ ವಿದ್ಯಾನಿಕರಣದಿಂದುಂಟಾದ ಪರಿಶುಭ್ರ ಕೀರ್ತಿ, ಲೋಕಶಾಸ್ತ್ರಾನುಭವಗಳಲ್ಲಿರುವ ಸಾಮೂಹಿಕ ಸ್ಫೂರ್ತಿ, ಆಪಾರ ವಿದ್ವತ್ಪ್ರತಿಭೆ ವಿನಯ ಪರಿಪೂರ್ಣ ಮುಂತಾದ ಗುಣರತ್ನಗಳು ಅವರಿಗೆ ಜನ್ಮಜಾತಗಳಾಗಿ ಬಂದವುಗಳು. ಒಂದೇಮಾತಿನಲ್ಲಿ ಹೇಳಬೇಕೆಂದರೆ ಸ್ವಸ್ವರೂಪವನ್ನು ಮರೆತು ಹಿಂದೆ ಬಿದ್ದಿದ್ದ ಇಂದಿನ ಬಾರತೀಯ ಜೀಳಿಗೆಗೆ ತನ್ನ ಸ್ವತಂತ್ರರೂಪವನ್ನು ತೋರಿಸಿಕೊಟ್ಟ ಧೀರಮನಸ್ವಿಗಳ ಮುಂದಾಳು ಶ್ರೀ ಮಹಾತ್ಮಾಜಿಯವರು ದೂರ ದೂರ ಸಂಚಾರಮಾಡಿ, ಮಾನವ ಹೊಸೆಗಾರಿಕೆಯೇನೆಂಬುದನ್ನು ತಿಳಿಯಪಡಿಸಿ ಸಾಮಾಜಿಕ ವರ್ಗವನ್ನು ಸುಧಾರಿಸಿದ್ದರಿ, ಶ್ರೀ ಶಾಸ್ತ್ರಿಜಿಯವರು ಆ ಮಹಾಕಾರ್ಯವನ್ನು ಕೂತಲ್ಲೇ ಮಾಡಿದ್ದಾರೆ. ಅಲ್ಲದೆ ಹಿಂದೂ ಧರ್ಮಶಾಸ್ತ್ರವಿಷಯವಲ್ಲಿ ದೊಡ್ಡ ಸಲಹೆಗಾರರಾಗಿ ಸಂಸ್ಕೃತ ಕ್ಷೇತ್ರದಲ್ಲಿ ಮಾಡಿದ ಶಾಸ್ತ್ರಸೇವೆ ಮಹಾಸೇವೆಯ ಫಲವಾಗಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಶಿವಾ

ರಾಜೇಂದ್ರ ಶಿವಮಹಾಚಾರ್ಯರ ಘನಸನ್ನಿಧಾನದ " ಕುಲಪತಿ " ಎಂಬ ಮಹಾಬಿರುದನ್ನು ಪಡೆದರು. ಹೀಗೆ ಜಗನ್ಮಾನ್ಯರಾದ ಕುಲಪತಿ ಸಾಂಖ್ಯ ಜಗದ್ವಿಕಶಾಸ್ತ್ರಿಗಳವರ ಶಿಷ್ಯೆಕ್ಯದಿಂದ ಸಮಾಪನವಾದ ಹಾಸ್ಯಯಾಗಿದೆ.

ಶೋಕಸಭೆ

ಸ್ವರ್ಗಸ್ಥರಾದ ಶ್ರೀ ಶಾಸ್ತ್ರಿಗಳವರ ಪುಣ್ಯಸ್ಮರಣೆಯ ನಿಮಿತ್ತ ಸೊಲ್ಲಾಪುರದ ಶ್ರೀಮದ್ವೀರಶೈವ ಗುರುಕುಲ ಸಂಸ್ಥೆಯಲ್ಲಿ ಪಂ॥ ವಿದ್ವರಾಮಯ್ಯಸ್ವಾಮಿ ಜಂಗಮ ಸೂಪರ್ರಿಂಟೆಂಡೆಂಟರ ಅಧ್ಯಕ್ಷತೆಯಲ್ಲಿ ತಾ॥ ೧೬-೯-೫೬ ನೇ ದಿನ ಸಂಜೆ ೬-೩೦ ಘಂಟೆಗೆ ಶೋಕಸಭೆ ಜರುಗಿತು ಸಭೆಯಲ್ಲಿ ಭಗವತ್ಪ್ರಾರ್ಥನೆಯ ನಂತರ ಶಿವೈಕ್ಯ ಶಾಸ್ತ್ರಿಗಳ ಗುರುಕುಲೀಯ ವಿದ್ಯಾರ್ಥಿ ಮೇದಾರಾಧ್ಯಕರ್ಮಿಗಳವರು " ಶೋಕಬಂದುಗಳು " ಎಂಬ ಕರುಣರಸ ಭರಿತವಾದ ತಿಳಿಗನ್ನಡ ಕವಿತೆಯೊಂದನ್ನು ಹಾಡಿದರು. ಪಂ॥ ಗುರುಮೂರ್ತಿಶಾಸ್ತ್ರಿ ಮಂದ್ರೂಪಕರ್ ವೈದ್ಯರಾಜರು, ೨ ಪಂ॥ ಸೋಮಾರಾಧ್ಯ ಶರ್ಮರು, ೩ ಚಿದಾನಂದಶಿವಾಚಾರ್ಯರು ೪ ವೀರಣ್ಣಶಾಸ್ತ್ರಿಗಳು, ೫ ಅಲಂಪ್ರಭು ಪುರಾಣಿಕರು, ೬ ಗಂಗಾಧರಶಾಸ್ತ್ರಿಗಳು, ೭. ಎಲ್ ಜಿ ಹಿರೇಮಠರು ಆ. ಮರಿಕಟ್ಟಿ ಗುರವ್ವತಾಯಿಯವರು ಮುಂತಾದವರು ಶ್ರದ್ಧಾಂಜಲಿ ಪೂರ್ವಕ ಭಾಷಣಮಾಡಿದರು

ಸಭೆಯಲ್ಲಿ ಶ್ರೀಮದ್ವೀರಶೈವ ಗುರುಕುಲದೊಡೆಯರಾದ ಶ್ರೀ ॥ ಷ॥ ಬ್ರ॥ ಯೋಗಿರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ಸ್ವಾತಂತ್ರ್ಯರಣೋತ್ಸಾಹದಾದ ಶ್ರೀ ಶಾಸ್ತ್ರಿಗಳ ಕೀರ್ತಿಯು ಅಖಂಡವಾಗಿ ಬೆಳಗಲೆಂದೂ, ಅವರ ಧರ್ಮಿಷ್ಠತೆಯ ಲೋಪವಿಲ್ಲದೆ ಬಂಧುಬಾಂಧವರೂ ಸಾಮಾಜಿಕ ವರ್ಗಕ್ಕೂ ಉಂಟಾದ ಸಂತಾಪವನ್ನು ಸಹನಾಶಕ್ತಿಯನ್ನೆಲೆಂದೂ ಜಗತ್ಪಾತ್ರವರನ್ನು ಸ್ಮರಿಸುತ್ತಾ ಧಾರ್ಮಿಕ ಸ್ವಸ್ತಿವಚನಗಳನ್ನು ಪಠಿಸಿದರು ತರುವಾಯ ವಿದ್ಯಾರ್ಥಿಗಳ ಲೋಪಕ್ಷಣಪೂರ್ಣವೂ ಆದ ಪ್ರಾರ್ಥನೆಯೊಂದಿಗೆ ಶೋಕಸಭೆಯು ಮೌನವನ್ನಾಚರಿಸಿತು ಕಡೆಗೆ ಶ್ರೀ ಶಾಸ್ತ್ರಿಗಳವರ ಪುಣ್ಯಸ್ಮರಣೆಯನ್ನು ಶ್ರೀಮದ್ವೀರಶೈವ ಗುರುಕುಲೀಯ ಕಸ್ಟರಿಯವರಾದ ಶ್ರೀ ಎಲ್ ಜಿ ಹಿರೇಮಠರು ಓದಿದ ಬಳಿಕ ಶಾಂತಿಪಾಠವಾಗಿ ಸಭೆಯು ಸಮಾಪ್ತಗೊಂಡಿತು

ವೇ॥ ನೀಲಕಂಠಶಿರ್ಮಾ
ಸೊಲ್ಲಾಪುರ ಶ್ರೀಮದ್ವೀರಶೈವ ಗುರುಕುಲೀಯರು)

ನಭಜನಾ ಮತ್ತು ಶ್ರೀಶರಣಬಸವೇಶ್ವರ ಪುರಾಣಸಮಾಪ್ತಿ, ಬಾದರಗುಂಪಿ

ಗಂಗಾವತಿ ತಾ॥ ಜೈಕಿ ಬಾದರಗುಂಪಿ ವಿರಕ್ತಮಠಾಧ್ಯಕ್ಷ ಶ್ರೀಮನ್ನಿರಂಜನ ಬಸವಲಿಂಗಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರೀ ೧೯೫೬ ದುರ್ಮುಖಿ ಸಂವತ್ಸರ ಶ್ರಾವಣ ಶುಕ್ಲ ೧ ಮಂಗಳವಾರದ ಇಷ್ಟಲಿಂಗ ಭಜನಾಮಂಡಳಿಯವರು ಪ್ರತಿನಿತ್ಯ ಪ್ರಾತಃಕಾಲ ಮಿಂದು ಮಡಿಯಿಂದ ಶ್ರೀಜಗದಾಚಾರ್ಯರ ಪಂಚಪೀಠಗಳೊಡನೆ ಅಂಗೊಳಗೆ ಭಜನೆ ಪೂಜೆ ಮುಂತಾದ ಮುಖ್ಯ ದೇವರುಗಳಿಗೆ ಕಾಯಿ ಕರ್ಪೂರ ಮಂಗಳಾರತಿಯನ್ನು ನಾಡಿಸುತ್ತ ಬೀದಿಬೀದಿಗಳಲ್ಲಿ ಹಾಯ್ದು ಸ್ವಸ್ಥಾನಕ್ಕೆ ಸೇರುತ್ತಿದ್ದಿತು ಮತ್ತು ಪ್ರತಿದಿನ ೬ ಘಂಟೆಯಿಂದ ೮ ಘಂಟೆವರೆಗೆ ಪುರಾಣ ಪ್ರವಚನವು ಈ ಪ್ರಾಂತದ ಪ್ರಸಿದ್ಧ ಪುರಾಣ ಹೇಳುವ ಪುರಾಣಪ್ರವಚನಪಟುಗಳೂ ಆದ ವೇ॥ ಪಂ॥ ಸೋಮಾರಾಧ್ಯ ಶರ್ಮರು ಬಾದರಗುಂಪಿ ಹತ್ತಿ ಶ್ರೀ ಭೀಮಸಮುದ್ರಿಯವರು ಸುವ್ಯವಸ್ಥಿತವಾಗಿ ಜರುಗುತ್ತಿದ್ದಲ್ಲದೆ ಸಂಗೀತ ಪ್ರವೀಣರೂ ಆದ ಬಿದನೂರಿನ ಸೇವಾನಿರತೆಯಾದ ಬಾದರಗುಂಪಿಯ ಸದ್ಭಕ್ತರ ಸೇವಾನಿರತೆಯಿಂದ ಸಂಗೀತ ಪ್ರವಚನಾದಿಗಳಿಂದ ಸಮಾಪ್ತಿಯಾಯಿತು. ಈ ಪುರಾಣ ಸಮಾಪ್ತಿಯ ಪ್ರಯುಕ್ತ ತಾ॥ ೧೭-೯-೫೬ ಸೋಮವಾರ ದಿವಸ ಶ್ರೀಶರಣಬಸವೇಶ್ವರ ಪುರಾಣ ಸಮಾಪ್ತಿ ಮತ್ತು ಶ್ರೀ ಲಿಂಗಕ್ಕೆ ರುದ್ರಾಭಿಷೇಕವೂ, ಸಹಸ್ರಬಿಲ್ವಾರ್ಚನೆಯೂ, ಮಧ್ಯಾಹ್ನ ೧೨ ಘಂಟೆಗೆ ಮೇಲ್ಕಂಡ ಶ್ರೀಗಳವರ ಪಾದಪೂಜೆಯೂ, ಮಹಾಗಣಾರಾಧನೆಯೂ ಜರುಗಿದವು ತದನಂತರ ಸಾಯಂಕಾಲ ೪ ಘಂಟೆಗೆ ತಳಲುತೋರಣಗಳಿಂದಲಂಕೃತವಾದ ಪುರ ವೀಧಿಯಲ್ಲಿ ಶ್ರೀ ಪುರಾಣಮಹೋತ್ಸವವು ಸಕಲ ವಾದ್ಯವೈಭವದೊಡನೆ ಹೊರಟಿತು ಉತ್ಸವವು ಹೊರಟ ಮುಕ್ಕಾಲು ಘಂಟೆಯ ಮೇಲೆ ದೇವೇಂದ್ರನು ೪-೫ ನಿಮಿಷ ಅಕ್ಷಲ್ಪವೃಷ್ಟಿಗರೆದು ತನ್ನ ಸೇವೆಯನ್ನು ಸಲ್ಲಿಸಿದನು ಈ ಗ್ರಾಮಕ್ಕೆ ತೀರಾ ಸಮಿಪದಲ್ಲಿರುವ ತವ್ವಾರ್ಪುರ, ಹಾಲುಸಮುದ್ರ, ಯರಡೋಣಿ ಜೆನ್ನಹಳ್ಳಿ, ಕಾರ್ಟಗಿ ಮುಂತಾದ ಗ್ರಾಮದವರ ಸಹಾಯಸಂಪತ್ತಿಯಿಂದ ಈ ಮಹಾಕಾರ್ಯವು ಅತಿ ಮನೋರಂಜಕವಾಗಿ ಜರುಗಿತು ಅನಂತರ ಉತ್ಸವವು ರಾತ್ರಿ ೧೧ ಘಂಟೆಗೆ ಸ್ವಸ್ಥಾನಕ್ಕೆ ತಲ್ಪಿತು. ಅಮೇಲೆ ಪುರಾಣಸಮಾಪ್ತಿ ಸಂಗಲವನ್ನು ಮೇಲ್ಕಂಡ ಶಾಸ್ತ್ರಿಗಳಿಂದ ಆಚರಿಸಲ್ಪಟ್ಟಿತು. ಸರ್ವರಿಗೂ ಪ್ರಸಾದ ವಿನಿಯೋಗವಾಯಿತು ಈ ಪುಣ್ಯಕಾರ್ಯದಲ್ಲಿ ತಕ್ಕರಾದವರಿಗೂ ದಿನದಾರ್ಯರು ನಿತ್ಯಮಂಗಲವನ್ನೇ ಯಲೆಂದು ಪ್ರಾರ್ಥಿಸುವೆನು

ಕುಲಕರ್ಣಿ ಬಸವಯ್ಯ, ಬಾದರಗುಂಪಿ

ವೀರಶೈವಮಹಾಪೀಠೋಶ್ವರರಿಗೆ ಸೂಚನೆ

ಲೇ — ಶ್ರೀ ರೇಣುಕಾಚಾರ್ಯಮಂದಿರದ ಅಧ್ಯಕ್ಷರು, ಗದಗ

ವಿಜಾಪುರ ಜಿಲ್ಲಾ, ನಂದವಾಡಿಗಿಯಲ್ಲಿ ಇದೇ ಅಕ್ಟೋಬರ್ ತಾ॥ ೧೭-೧೮ ಈ ದಿನಾಂಕಗಳಲ್ಲಿ ವೀರಶೈವ ಮಾರಾಧ್ಯರ ಅಧಿವೇಶನವನ್ನು ಕರೆಯಲಾಗಿದೆಯೆಂದು ನಿ ಬಿ ನಾಡಗೌಡರ ಪ್ರಚಾರಕಾರ್ಯ ದರ್ಶಿಗಳವರು ಲೋಕಮಾನ್ಯವಾದ ಪಂಚಾಚಾರ್ಯ ಪ್ರಭಾಪತ್ರಿಕೆ ದಿನಾಂಕ ೧೬ ಸೆಪ್ಟೆಂಬರ್ ೧೯೫೬ ರ ೧೫ ನೇ ಸಂಚಿಕೆಯಲ್ಲಿ ಲೇಖನ ಪ್ರಕಟಿಸಿರುವದನ್ನು ನೋಡಿ ಪರಮಾನಂದ ಸಂತೋಷವಾಯಿತು. ಒಂದು ಕುಟುಂಬಕ್ಕೆ ಯೋಗ್ಯವಯಜಮಾನರು ಇದ್ದರೆ ಸುಗಮವಾಗಿ ಕಾರ್ಯಗಳು ಜರಗುವಂತೆ ಈ ಅಧಿವೇಶನ ಕಾರ್ಯಕ್ಕೆ ಯೋಗ್ಯ ಅಧ್ಯಕ್ಷರು ಆವಶ್ಯಕೀಕು ಅಧ್ಯಕ್ಷರಿಲ್ಲದ ಸಭೆಯೂ, ರಾಷ್ಟ್ರನಾಯಕರಿಲ್ಲದ ದೇಶವೂ ವ್ಯರ್ಥವೆಂದು ನೀತಿಕಾರರು ಹೇಳಿರುವರು ಆದ್ದರಿಂದ ಈ ಅಧಿವೇಶನಕ್ಕೆ ಗುರುವರ್ಗ, ವಿರಕ್ತವರ್ಗ ಈ ಪಾರ್ಟಿಗಳಿಗೆ ಸೇರದೇ ಇರತಕ್ಕ ಮಧ್ಯಸ್ಥರೆರ್ಕಾನಾದ ಕಜ್ಜಾರನ್ನೇ ಅಧ್ಯಕ್ಷರೆನ್ನು ಮಾಡಬೇಕು ಇವರು, ಗುರುಗಳು ಹಾಗೂ ವಿರಕ್ತರು ಸಮಾಜದ ಕಾರ್ಯಗಳನ್ನು ಹ್ಯಾಗೆ ಮಾಡಬೇಕೆಂಬುದನ್ನು ತಿಳಿದವರೂ ಧರ್ಮನೀತಿ ರಾಷ್ಟ್ರನೀತಿಗಳನ್ನ ರಿತವರೂ ಆಗಿರಬೇಕು

ಮಾರುತಿ ದೇವಸ್ಥಾನವಾದರೇನು ? ದೇವಿಯ ಮಂದಿರವಾದರೇನು " ಮಲಗಿದ್ದಕ್ಕೆ ನಿದ್ರೆ ಬಂದರೆ ನಾಕು ಹೆಚ್ಚಿನ ನಿಷಯ ಯಾತಕ್ಕೆ ಬೇಕು ಶಾಂತಿ ನಿರ್ವಹಣೆಯಿಂದ ಅಧಿವೇಶನದುದ್ದಕ್ಕೂ ನಂದವಾಡಿಗಿ ಸ್ವಾಮಿಕ್ಕೂ ಜಯಶ್ರೀದವಾದ ಕೇತಾಬರ ಬೇಕು ಆದ್ದರಿಂದ ಸದ್ಯಃ ನಯೋವ್ಯದ್ಧರೂ, ಪಂಡಿತರೂ, ಪೂಜಾರಿಸ್ವಾಮಿಗಳೂ, ಆದ ಶ್ರೀ॥ಷ॥ಬ್ರ॥ ಪ್ರಣವ ಸ್ವರೂಪಿಗಳಾದ ಕೂಡಲ ಗಮಮಠಾಧ್ಯಕ್ಷ ಮಾತಾ ಸ್ವಾಮಿಗಳವರು ಹುಬ್ಬಳ್ಳಿ ಹಿರೇಮಠದ ಶ್ರೀ ಪಟ್ಟದ ಸ್ವಾಮಿ ವಕ್ಕೇಲರು ರಾಷ್ಟ್ರಪ್ರಧಾರೀಣರಾದ ಶ್ರೀ ವೇ॥ ಶಿವಮೂರ್ತಿಸ್ವಾಮಿಯವರು ಹಿರೇಮಠ ಆಳವುಂಡಿ ಇಂತಹ ಪಜ್ಞರನ್ನೇ ಅಧ್ಯಕ್ಷರನ್ನು ಮಾಡಿದರೆ ಮಹಾ ಧೀರರು ವೀರೇಷ ಕೂಡಲಿಕ್ಕೆ ಕಾರಣವಾಗುತ್ತದೆ ನಂದವಾಡಿಗಿ ಅಧಿವೇಶನದ ಸ್ವಾಗತ ಕಮಿಟಿಯವರು ಈ ಮೂರುಜನಗಳಲ್ಲಿ ಒಬ್ಬರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿ, ಎಲ್ಲಾ ಪತ್ರಿಕೆಗಳಿಗೆ ಲೇಖನಗಳನ್ನು ಕೊಟ್ಟು ಪ್ರಸಿದ್ಧ ಗೊಳಿಸಬೇಕು. ಅಸ್ತು!

ಕರ್ನಾಟಕದ ಯಾವತ್ತೂ ಗ್ರಾಮಗಳ ಭಕ್ತಮಾಹೇಶ್ವರರೇ, ಜ್ಞಾನಮಂಡಳದ ಹಾಗು ಮಾರಾಧ್ಯರ ಅಭಿಮಾನಿಗಳೇ, ನಿಮ್ಮ ಗ್ರಾಮಗಳಲ್ಲಿ ಈ ಬಗ್ಗೆ ಸಭೆಗಳನ್ನು ಮಾಡಿ, ಅಧ್ಯಕ್ಷರನ್ನು ಯಾರನ್ನು ಮಾಡಬೇಕೆಂದು ಕರಾಯಿಸಿ ಪ್ರಭಾಪತ್ರಿಕೆಯಲ್ಲಿ ಲೇಖನಕೊಡಿರಿ

ಶ್ರೀ ರೇಣುಕವಿಜಯ ಮಹಾಪುರಾಣಸಮಾಪ್ತಿ, ಹುಲಗೂರು

ಧಾರವಾಡ ಜಿಲ್ಲೆ ಶಿಗ್ಗಾಂವಿ ತಾಲೂಕ ಹುಲಗೂರ ಗ್ರಾಮದಲ್ಲಿ ಶ್ರೀಜಗದ್ಗುರು ಪ್ರಸನ್ನರೇಣುಕ ವೀರ ಗಂಗಾಧರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಚರಣಸೇವಾನಿರತರೂ ಹರಗುರುಚರಣ ಪದ್ಮಕ್ತರೂಯಣರೂ ಸದಾಚಾರ ಸಂಪನ್ನರೂ ಸುಪ್ರಸಿದ್ಧರೂ ಆದ ಸಂಗಪ್ಪ ಅತ್ತಿವೇಪ್ಪ ಅತ್ತಿಗೇರಿ ಇವರ ಸ್ವರ್ಗಸ್ಥಪದಲ್ಲಿ ಇದೇ ತಾಲೂವಾಹನರಲ್ಲಿ ೧೯೭೨ನೇ ನಮರ್ಮಖನಾಮ ಸಂವತ್ಸರದ ಶ್ರಾವಣ ಶುದ್ಧ ಪ್ರತಿಪದೆ ತಾ॥ ೭-೮-೧೯೫೬ ಮಂಗಳವಾರದಿಂದ ಪ್ರತಿನಿತ್ಯ ಬೆಳಗಿನ ೬ ಘಂಟೆಯಿಂದ ೯ ಘಂಟೆಯ ವರೆಗೆ ಶ್ರೀ ರುದ್ರಾಭಿಷೇಕವು ೧೧ ಘಂಟೆಯ ವರೆಗೆ ಹುಲಗೂರ ಗ್ರಾಮದ ವೇ॥ ಪಂ॥ ಸಂಗಯ್ಯವರರು ತವರಿಮಠ ಇವರಿಂದ ನಿಮ್ಮುಕ್ತ ಪ್ರಕಾರವಾಗಿ ಸಾಗುವಂತಾಯಿತ್ತು ಅಲ್ಲದೆ ರಾತ್ರಿ ಯಾದರೂ ಶ್ರೀರೇಣುಕವಿಜಯ ಸುಪ್ರಾಪುರಾಣ ಪ್ರವಚನವನ್ನು ಹೆಣ್ಣುಮಕ್ಕಳು ಗಂಡುಮಕ್ಕಳು ಸರಿಯಾಗಿ ತಿಳಿದು ಆಚರಿಸುವಂತೆ ಸರ್ವ ಮತಿಯರಿಗೂ ಅನ್ವಯಿಸುವಂತೆ ಹೇಳುತ್ತಿದ್ದರು ಶ್ರೀರೇಣುಕ ವಿಜಯ ಮಹಾಪುರಾಣ ಪ್ರವಚನವನ್ನು ಸರ್ವಮತಿಯರೂ ಪುರಾಣದಲ್ಲಿರುವ ಭಕ್ತಿ ಜ್ಞಾನ ವೈರಾಗ್ಯ ವಿಷಯಗಳನ್ನು ಕೇಳಿ ಆನಂದತುಂದಿಲಹೃದಯರಾದರು

ತಾ॥ ೮-೯-೫೬ ಮಂಗಳವಾರ ಅಮಾವಾಸಿಯ ದಿವಸ ಶ್ರೀ ರುದ್ರಾಭಿಷೇಕವನ್ನೂ ಶ್ರೀರೇಣುಕವಿಜಯ ಮಹಾಪುರಾಣಮುಕ್ತಾಯದ ಆಂಥಣೆಯನ್ನೂ ಒಳ್ಳೇ ವಿಜೃಂಭಣೆಯಿಂದ ಜರುಗಿಸಿ ಸಮಾಪ್ತಿಗೊಳಿಸಲಾಯಿತು ಈ ಕಾರ್ಯವನ್ನು ಮಾಡಿದ ಯಾವತ್ತು ಮಹಾಜನರಿಗೆ ಸಕಲ ಸಂಪದವನ್ನು ಆಯುರಾರೋಗ್ಯ ಭಾಗ್ಯವನ್ನು ಪರಮವಯಾಳುವಾದ ಪರಮೇಶ್ವರರು ಶ್ರೀರೇಣುಕಭಗವತ್ಪಾದಾಚಾರ್ಯರೂ ನಿತ್ಯಸುಮಂಗಲವನ್ನಿತ್ತು ಕಾಪಾಡಲೆಂದು ಬೇಡುವ,

ವೀರಪ್ಪ ವೀರಸಂಗಪ್ಪ ಸೊಬರದ
ಸಾ॥ ಹುಲಗೂರ.

ಗಜಾನನೋತ್ಸವ, ಜಂಬಿಗಿ (ತಾ॥ ವಿಜಾಪುರ)

ದಿನಾಂಕ ೧೫-೯-೫೬ ನೇ ದಿವಸ ಇಲ್ಲಿ ಗಜಾನನ ಉತ್ಸವವನ್ನು ವಿಜೃಂಭಿಸಲಾಗಿತ್ತು ಅದರಲ್ಲಿ ಮುಖ್ಯ ಗುರುಗಳೇ ಪಾತ್ರವನ್ನು ವಹಿಸಿದ್ದರು ಕಾರ್ಯಕ್ರಮಗಳನ್ನು ಗೊತ್ತುಪಡಿಸಿವ ಪ್ರಕಾರ ಮೊದಲಿನ ದಿವಸ ಗಜಾನನನನ್ನು ತರುವದು ಕೂಡ್ರಿಸುವದು ಮಂಗಳ ಕರ್ಪೂರಾರತಿಯಾಗಿ ಪ್ರಸಾದ ಹಂಚುವದು ಮರು ದಿವಸ ಜಾಲಕರ ಕಾವ್ಯಗಾಯನ ೩ ನೇ ದಿವಸ ಆಟಗಳು ೩ ನೇ ದಿವಸ ಶಿಬಂಧಸ್ಪರ್ಧೆ ಕಡೆ ದಿವಸ ಸಭೆಯ ಕಾರ್ಯ ನೆರವೆರಿಸಲಾಯಿತು. ಆಗ ಪ್ರಮುಖ ಜನರು ಬಂದಿದ್ದರು ಅಧ್ಯಕ್ಷರು ಮತ್ತು ಉಪಸ್ಥಿತರುಗಳು ಗಜಾನನ ಉತ್ಸವ ಬಗ್ಗೆ ಕೆಲವು ಮಾತನಾಡಿದ ತರುವಾಯ ಬಾಲಕರಿಗಾಗಿ ಕೊಡತಕ್ಕ ಬಹುಮಾನ ಹಂಚಲಾಯಿತು. ನಂತರ ಒಂದೇ ಮಾತರಂ ಗೀತೆಯೊಡನೆ ಸಭೆಯ ವಿಸರ್ಜನೆ ಯಾಯಿತು.

ಉತ್ಸವಸಮಿತಿ

ಗ್ರಹಣಹಿಡಿದ ವೀರಶೈವ ಸಿದ್ಧಾಂತ

ಸುಮಾರು ಒಂದು ವರ್ಷದಿಂದ ಶುಷ್ಕವಾದವನ್ನೆ ಬೈಸಿರುವ ಲಿಂಗಾಂಗಿಸಾಮರಸ್ಯದ ಜ್ಞಾನಸಿದ್ಧಿಯ ಸಂಸ್ಪೃತಗಂಥವಿದ್ದಿದ ಭವಿಗಳಲ್ಲಿ ವೇದಾಂತತ್ರಿವಣ ಮಾಡಿ ಕೇವಲ ಧನಾರ್ಜನೆಯೇ ಜೀವನದ ಗುರಿಯಾಗಿ ಉಳ್ಳ ಶ್ರೀಮಾನ್ ಎಂ. ಎಲ್. ನಾಗಣ್ಣನವರು ಪರಮೀಯ ಪಂಡಿತರ ಪ್ರೇರಣೆಯಿಂದ ಶಾಸ್ತ್ರಜ್ಞಾನವಲ್ಲದೆ ಸಾವಿರಾರು ವರ್ಷಗಳಿಂದ ನಡೆದು ಕೊಂಡು ಬಂದ ಒಂದು ಸಂಪ್ರದಾಯ ತತ್ವಸಂಸ್ಕೃತಿಯನ್ನು ಬದಲಾಯಿಸಲು ಹೊರಟಿರುವುದು ವಿಶ್ವಾಮಿತ್ರನ ಸೃಷ್ಟಿಯಂತೆ ಅಘಾತವಾಗಿದೆ

೧. ವೀರಶೈವಸಿದ್ಧಾಂತವೂ ಅದ್ವೈತವೂ ಒಂದೇ ಆದರೆ ಅದ್ವೈತಿಗಳು ನಮ್ಮ ವೀರಶೈವಸಿದ್ಧಾಂತವನ್ನು ಅಭ್ಯಾಸಿಸಲು ಸಿದ್ಧರಿರುವರೆ ?

೨. ನಮ್ಮಲ್ಲಿರುವ ಲಿಂಗಾಂಗಿಸಾಮರಸ್ಯ ಅಷ್ಟಾವರಣಷಟ್‌ಸ್ಥಲ ಮೊದಲಾದ ಮತಕ್ರಿಯೆಗಳು ಅದ್ವೈತದಲ್ಲವೆಯೆ ?

ಬಹುದಿನಗಳಿಂದಲೂ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಅಭ್ಯಾಸವು ಪ್ರಾರಂಭವಾಗಿ ಇದುವರೆಗೂ ಸನಾಜದಲ್ಲಿ ಪಂಡಿತರ ಹಾಗು ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ ಮತ್ತು ಅನೇಕ ವಿದ್ಯಾರ್ಥಿಗಳು ಅಭ್ಯಾಸಮಾಡಿ ಬೋಧಕರೂ ಬ್ರಹ್ಮನಿಷ್ಠರೂ ಆಗಿದ್ದಾರೆ ಅದ್ದರಿಂದ ಆತ್ಮನಿಜಾರ ಪತ್ರಿಕಾ ಸಂಪಾದಕರ ಭ್ರಾಂತಿಗೆ ಯಾರೂ ಗಮನಕೊಡಬಾರದೆಂದು ಸಮಾಜಜಾಂದನೆರಲ್ಲಿ ಪ್ರಾರ್ಥಿಸುತ್ತೇವೆ ಈವರೆಗೆ ಪಂಚಾಚಾರ್ಯಪ್ರಭಾ ಸಂಪಾದಕರು ಸಮರ್ಪಿಸಿರುವ ವಿಚಾರ ತ್ಯಾಜ್ಯಗಳಾಗಿದೆ ಮೊನ್ನೆ ಶ್ರೀ ರಂಭಾಪುರೀ ವೀರಸಿಂಹಾಸನಾಧೀಶ್ವರರಾದ ಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರೇಶ್ವರ ಜಗದ್ಗುರು ಮಹಾ( ) ಸನ್ನಿಧಿಯವರು ಬೆಂಗಳೂರು ಕಾಲೇಜಿನ ಪ್ರಿನ್ಸಿಪಾಲರನ್ನು ಪಂಡಿತರತ್ನಂ ಗುರು ಶಾಂತಶಾಸ್ತ್ರಿಗಳನ್ನು ಬರಮಾಡಿಕೊಂಡು ಈ ರಕ್ತ ವಿಶಿಷ್ಟಾದ್ವೈತವೇದಾಂತವನ್ನು ಸರ್ಕಾರದವರು ಸಂಸ್ಕೃತಕಾಲೇಜಿನಲ್ಲಿಟ್ಟಿರುವುದು ಬಹಳಸಂತೋಷದ ಸಂಗತಿಯೆಂದೂ, ಶ್ರೀಕರಭಾಷ್ಯ ವಿಶಾದ್ವೈತ ಮಂಡರೀ ಗ್ರಂಥಗಳು ವೀರಶೈವಸಿದ್ಧಾಂತದ ಪಟ್ಟ ಸ್ಥಲತತ್ವವನ್ನು ಜ್ಞಾನಾಗಿ ಪ್ರತಿಪಾದಿಸುತ್ತವೆಂದೂ ತಮ್ಮಹಿಂದಿನ ಜಗದ್ಗುರುಗಳವರ ವೇ॥ ಸಂ॥ ಉಮಾಜಿಗಿ ಶಂಕರಶಾಸ್ತ್ರಿಗಳ ಕೈ॥ ಪಂ॥ ಶ್ರೀ॥ ವೇ॥ ಕಾಶೀನಾಥ ಶಾಸ್ತ್ರಿಗಳ ಅಭಿಷ್ಟವ್ಯ ಈ ವಿದ್ಯಾಭ್ಯಾಸದ ಮೂಲಕ ನೆರವೇರಿದೆಯೆಂದೂ ಆಪ್ತಕೆಕೊಡಿಸಿದರಲ್ಲದೆ ಈ ಶಕ್ತಿವಿಶಿಷ್ಟಾದ್ವೈತತತ್ವಸ್ಪರ ಅಭ್ಯಾಸಮಾಡಿ ಉತ್ತೀರ್ಣರಾದವರಿಗೆ ಬಹುಮಾನಕೊಡಲು ಮೂರು ಸಹಸ್ರ ರೂಪಾಯಿಗಳ ಮೂಲನಿಧಿಯಿಡಲು ಆತೀರ್ವದಿಸಿದ್ದಾರೆ. ಅದ್ದರಿಂದ ಶ್ರೀಮಾನ್ ಎಂ ಎಲ್ ನಾಗಣ್ಣನವರು ಧರ್ಮದ ಮರೆಯಲ್ಲಿ ವ್ಯಾಪಾರಮಾಡುವುದನ್ನು ಬಿಟ್ಟು ಹಿಂದಿನಂತೆ ತಮ್ಮ ಉದ್ಯೋಗವನ್ನು ನಡೆಸಲಿ ಈ ಪವಿತ್ರತತ್ವಸಂಸ್ಕೃತಿಯನ್ನು ಅಳಿಸಲು ಯತ್ನಿಸದಿರಲಿ

ವೀರಶೈವವಿದ್ಯಾರ್ಥಿಗಳು ತರ್ಕ, ವ್ಯಾಕರಣ, ಅಲಂಕಾರಶಾಸ್ತ್ರದ ಜ್ಞಾನವಿಷ್ಟೆಯ ಎಲ್ಲಾ ಮತಗಳ ಸ್ವರೂಪಗಳನ್ನು ತಿಳಿದು ತಮ್ಮ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಆಮೂಲಾಗ್ರವಾಗಿ ಬ್ರಹ್ಮನಿಷ್ಠರೂ ಅನುಭವವುಳ್ಳ ಶಾಸ್ತ್ರಜ್ಞರೂ ಆದ ಪಂಡಿತರತ್ನರಲ್ಲಿ ಅಭ್ಯಾಸಮಾಡುತ್ತಿದ್ದಾರೆ, ತಪ್ಪುತಿಳುವಳಿಕೆಗಳಿಗೆ ಕಾರಣವಿಲ್ಲ

ಆತ್ಮವಿಚಾರ ಪತ್ರಿಕಾ ಸಂಪಾದಕರು ಧರ್ಮನಿಷ್ಠರಾದರೆ ಮೇಲ್ಕಂಡ ವಿಚಾರಗಳಿಗೆ ಸಮಾಜದ ಪ್ರತಿಕ್ರಿಯೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಯಾವ ದೋಷವೂ ಕಂಡುಬಾರದಿದ್ದರೆ ಕೂಡಲೇ ಸ್ವಮತಾದ್ವೈಗ್ರಹವನ್ನು ನಿಲ್ಲಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ದಕ್ಷಿಣಾಮೂರ್ತಿ ಮಹಾಂತಿಸಮರ್ಥ
ಬೆಂಗಳೂರು.

ಜಂಬಿಗಿ ಶ್ರೀಗಳವರ ಶ್ರಾವಣಮಾಸದ ಕಾರ್ಯಕ್ರಮದ ವಿವರ

ಶ್ರಾವಣ ಶುದ್ಧ ಪ್ರತಿಪದೆಯಿಂದ ಪ್ರಾರಂಭವಾದ ಶ್ರೀ ರುದ್ರಾಭಿಷೇಕ ಪರಣ ವಾರಾಂಯಷಾದಿಗಳು ಯದಾ ಸಾಂಗವಾಗಿ ಜರುಗಿ ಭಾದ್ರಪದ ಶುದ್ಧ ಷಷ್ಠಿ ಸೋಮವಾರ ದಿ॥ ೧೦-೯-೫೬ ನೇ ದಿನಸ ಸಮಾಪ್ತಿಯಾಯಿತು ಅಂದು ಶ್ರೀ ಗುರುಲಿಂಗೇಶ್ವರ ಮಹಾಸ್ವಾಮಿಗಳ ಕರ್ತೃಗದ್ದಿಗೆಗೆ ಶ್ರೀ ಪರ್ವತೇಶ್ವರ ಮಹಾಸ್ವಾಮಿಗಳ ಗದ್ದಿಗೆಗೆ ವಿದ್ಯುಕ್ತವಾಗಿ ಪೂಜಿಸಿ ಮಹಾಮಂಗಳಾರುತಿಯೊಡಗೂಡಿ ಆಚಾರ್ಯರ ಜಯಘೋಷದೊಂದಿಗೆ ಪುಂಡಿಗೊಂಡಿತು

ಇದೇ ಭಾದ್ರಪದ ಶುದ್ಧ ದಶಮಿ ದಿವಸ ಜಂಬಿಗಿ ಗ್ರಾಮದಲ್ಲಿಯೇ ಶ್ರಾವಣ ಮಾಸ ಪೂರ್ತಿಯಾಗಿ ನಡಿಸಿಕೊಂಡುಬಂದ ನಂದಿಯ ಆಗಮನ (ಬಸವ ಚರಿತ್ರೆ) ಪುರಾಣ ಸಮಾಪ್ತಿ ಕಾರ್ಯಕ್ಕೆ ಹೊಸ ಮರದಲ್ಲಿ ಶ್ರೀ ಪಂಡಿತ ಪರ್ವತೇಶ್ವರಶಿವಾಚಾರ್ಯರನ್ನು ಭತ್ತ ಜಾತಮಾಡಿ ವೈಭವದಿಂದ ಬರಮಾಡಿಕೊಂಡು ಅವರ ಅಧ್ಯಕ್ಷತೆಯಲ್ಲಿಯೇ ಪುರಾಣ ಸಮಾಪ್ತಿ ಕಾರ್ಯಕ್ರಮ ಪ್ರಕ್ಕಿ ಉತ್ಸವ ಹೊರಡಿಸಿ ಮಧ್ಯಾಹ್ನಕ್ಕೆ ಗಣಾರಾದನೆ ಪೂರೈಸಿದ ನಂತರ ಸಾಯಂಕಾಲ ಮತ್ತೆ ಸ್ವಾಮಿಗಳನ್ನು ಮರಕ್ಕೆ ಬರ ಮಾಡಿಕೊಂಡು ಎಲ್ಲ ಪಕ್ಕರು ಅಮೃತಾನಿಯಿಂದ ಸಮಪದೇಶ ಕೇಳಲಾಪುರಾಣ ಬೇಡಿಕೊಂಡಕಾರಣ ತಮ್ಮ ಅಸ್ಖಲಿತ ವಾಣಿಯಿಂದ ಪ್ರಾರಂಭದಲ್ಲಿ ಪಂಚಾಚಾರ್ಯರ ಅವತಾರ ಅನಂರ ಮಾಡಿಸಿ ಕರ್ತವ್ಯ ಅವರ ಅನುಯಾಯಿಗಳ ಸಮಸ್ತ ವಿಂರಕ್ತವ ಜನಾಂಗದೊಬ ವಿಷಯದ ಒಗ ಸಮಂಜಸವಾಗಿ ಪ್ರತಿಪಾದನ ಮಾಡಿ ಶ್ರೀ ಸಂದಿಯ ಅಗಮನದ ಬಗ್ಗೆ ಒಸವೈರರ ಒಗೆ ಮನರಂಜನಸಾಗಸಂತೆ ೬ ಘಂಟ ಪರ್ಯಂತರ ಸಪ್ತರ ವಿವೇಕ ಜೆಳೆಯುವ ಹಾಗ ಮತ್ತು ವೀರಶೈವರು ಕನ್ನಡನಾಡು ನಡಿನವರ ಕರ್ತವ್ಯ ಧರ್ಮದ ಒಗೆ ಒಳ್ಳೇ ಕಳಕಳಿಯಿಂದಿ ಹೇಳ ಜಯಘೋಷದೊಂದಿಗೆ ಮುಗಿಸಿದರು

ಎಸ್ ಗುರುಸೇವಾಸಕ್ತ

ಜಹೋನಷ್ಣಾನ ಸಪ್ತಾಹ (ಭಜನೆ) ಸಮಾಪ್ತಿ

ರುಕ್ಕಾಪುರ

ಸುರಪುರ ತಾಲೂಕು ರುಕ್ಕಾಪುರ ಕೊಟ್ಟೂರ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಬಸವಕಲ್ಯಾಣದ ಅಕ್ಷಸಾಗಮ್ಯನ ತೋಪಕಟ್ಟೆ ರತ್ನಸಿಂಹಾಸನಕ್ಕೆ ಕಾರಣಕರ್ತೃರಿಗಳಾದ ಬೀಜಕ್ಕಿಬ್ರಹ್ಮಶ್ರೀ ವೈದ್ಯ ಭೂಷಣ ವೀ॥ ಸ್ವ॥ ಬ್ರ॥ ಸದಾಶಿವವಿಶಾಚಾರ್ಯರ ಅಸು ಷ್ಠಾನವಪ್ರಯುಕ್ತ ಶ್ರಾಬಿಗಿ ೧೪ ಸೋಮವಾರ ಸಪ್ತಾಹ ಭಜನೆ ಸ್ವಾರಂಭವಾಗಿ ಬಾ॥ ಶು॥ ೬ ಸೋಮವಾರ ದಿನಸ ಎರಡೂ ಕಾರ್ಯಕ್ರಮಗಳು ಅಭೂತಪೂರ್ವ ವಾಗಿ ನೆರವೇರಿದವು ಅಸಂಖ್ಯಾತ ಜನರು ಸೇರಿದ್ದರು ಭೂರಿಗಾಸಾರಾಥನೆಯಾಗಿ ಪಲ್ಲಕ್ಕಿ ರತ್ನಸಿಂಹಾಸನಕ್ಕೆ ಉತ್ಸವ ಭಜನ ಮೇಳಾದಿಗಳನ್ನೆ ಅನೇಕ ವಾದ್ಯರಥಸದಿಂದ ಜರುಗಿತು. ನಂತರ ಸದರಿ ಶ್ರೀಗಳವರ ಧರ್ಮೋಪ ದೇಶವಾದಮೇಲೆ ವೇ॥ ಪಂ॥ ಲೇಖಸಶ್ರವೀಣ ಗುರುಸಿದ್ಧಶಾಸ್ತ್ರಿಗಳ ಭಾಷಣಾನಂತರ ಸಭಾ ಕಾರ್ಯವು ಮುಕ್ತಾಯವಾಯಿತು ರುಕ್ಕಾಪುರ ಗ್ರಾಮಸ್ಥರು ಈ ಕಾರ್ಯವನ್ನು ಬಹು ದಕ್ಷತೆಯಿಂದ ಜರುಗಿಸಿದರು ಅಲ್ಲದೆ ಶ್ರೀಮಂತ ಕೂಟ್ಟಪ್ಪ ಹೈಯಾಳ ವೇ॥ ವಿನಲಿಂಗಯ್ಯನವರು ಬಳ್ಳಿಗಿಮಡ ಇವರು ಹಗಲು ರಾತ್ರಿ ಎನ್ನದೆ ಶ್ರಮಪಟ್ಟು ಸೇವೆ ಸಲ್ಲಿಸಿದರು. ಈ ಕಾರ್ಯಕ್ಕೆ ಅಜುಬಾಜು ಗ್ರಾಮಗಳ ಅನೇಕ ಜನರು ಸೇರಿದ್ದರು ಮತ್ತು ನಂದೂರುದೇವರ ಹೈಯ್ಯಾಳ-ಯಾದಗಿರಿ-ಸಿರಿವಾಳ-ಹುಂಡೇಕಲ್ ಮೊದಲಾದ ಗ್ರಾಮಸ್ಥರು ನೆರೆದಿದ್ದರು. ಭಗವಂತನು ಸರ್ವರಿಗೆ ಮಂಗಲವನ್ನುಂಟುಮಾಡಲಿ.

ಬಿ. ಆರ್. ಪಾಟೀಲ ಬಿಜಾಸಪುರ

ಮಹಾಪೂಜಾ ಪುರಾಣಸಮಾಪ್ತಿ ಹಜ್ಜೊಳ್ಳಿ

ಸಿರುಗುಪ್ಪ ತಾಲೂಕು ಹಜ್ಜೊಳ್ಳಿ ಚರಂತ ಮಠದಲ್ಲಿ ಪ್ರಾರಂಭಿಸಿದ ಮಹಾಪೂಜಾ ಮತ್ತು ಶ್ರೀರೇಣುಕವಿಜಯ ಪುರಾಣವು ಎಮ್ಮಿಗನೂರು ಶ್ರೀಗಳವರ ಅಧ್ಯಕ್ಷತೆಯಲ್ಲಿ ಒಂದು ತಿಂಗಳು ಮೇಲ್ಪಟ್ಟು ನಡೆದು ಮುಕ್ತಾಯ ಸಮಯದಲ್ಲಿ ಅಂದರೆ ತಾ॥ ೧೪-೯-೫೬ ರಂದು ಶ್ರೀಗಳವರ ಪಾದಕ್ಕೆ ಶ್ರೀರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಆನ್ನ ಸಂತರ್ಪಣೆಯಾದನಂತರ ಮಹೋತ್ಸವವು ಹೊರಟಿತು ಬೀದಿ ಬೀದಿಗಳಲ್ಲಿ ಜಯಘೋಷ ಮಾಡುತ್ತ ಮಂಗಳ ಪಾಡುತ್ತ ಮರಕ್ಕೆ ತಲುಪಿತು ಶ್ರೀಗಳವರು ಸಮಸ್ತ ರೆಲ್ಲರಿಗೂ ಮಾನಾನಂದವಾಗುವಂತೆ ಶ್ರೀಜಗದ್ಗುರು ಮಹಾಜಾರ್ಯಭಗವತ್ಪಾದರ ಲೀಲೆಗಳನ್ನು ತಮ್ಮ ಅಮೃತವಾಣಿಯಿಂದ ಅಪ್ಪಣೆಕೊಡಿಸಿದರು ಸಮಸ್ತ ರೆಲ್ಲರೂ ಈ ಪೂಜ್ಯರು ದಯಮಾಡಿಸಿದ ಕಾರಣ ನಮ್ಮ ಗ್ರಾಮವೇ ಪವಿತ್ರವಾಯತೆಂದು ಕೊಂಡಾಡಿದರು ಸಭೆಯು ಮುಕ್ತಾಯವಾಯಿತು

ಕಾರ್ಯದರ್ಶಿ
ಕರಿವೃಷಭಸ್ವಾಮಿ ಜಿರಂತಿಮಠ ಹಜ್ಜೊಳ್ಳಿ.

ಸಂಚಾರಿಯ ಸರಸವಾಣಿ

ಸಂಘಸಂಸ್ಥೆಗಳವರು ನಡೆಸುತ್ತಿರುವ ಸಮಾರಂಭಗಳಲ್ಲಿ ಸಚಿವರೇ ಮೊದಲಾದ ಸಾಧಾಕರಿಗೆ ಹಾರ ತುರಾಯಿಗಳನ್ನರ್ಪಿಸುವ ಪದ್ಧತಿಯನ್ನು ನಿಲ್ಲಿಸಬೇಕೆಂದು ಮಾದ್ಯಾರ ಮಂತ್ರಿ ಭಕ್ತವತ್ಸಲಂರವರು ಹೇಳಿದರಂತೆ! ಪ್ರಜೆಗಳ ಪ್ರೀತಿಸೂಚಕವಾದ ಹಾರತುರಾಯಿಗಳನ್ನು ಮೋಸಕರಿಸುತ್ತಿರುವ ಇಂಥ ಮಾನ್ಯ ಮಂತ್ರಿಗಳಲ್ಲಿ ಪ್ರಜಾಸ್ತ್ರೇಮ ಎಷ್ಟರಮಟ್ಟಿಗಿದೆಯೋ ಬುದನ್ನು ಮಾಜೀಕರು ಊಹಿಸುತ್ತಿರಬಹುದಲ್ಲವೆ?

* * *

ಆದ್ವೈತ, ಹಾಗು ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತತತ್ವಗಳು ಒಂದೇ ಎಂದು ಪ್ರಜಾರಪಡಿಸುತ್ತಿರುವ ಮೈಸೂರಿನ ಆತ್ಮವಿಚಾರ ಪತ್ರಿಕಾಕರ್ತರು ವೀರಶೈವರ ಲಿಂಗಧಾರಣಾದಿಕ್ರಿಯೆಗಳನ್ನು ಅದ್ವೈತ (ಸ್ಮಾರ್ತ) ಮತೀಯರಿಗೆ ಸಂಬಂಧಿಸಿ ಬರೆದಲ್ಲಿ ಈ ಈ ಎರಡೂ ಮತಗಳ ತಾರತಮ್ಯವು ಅವರಿಗೆ ಮಧನ ರಿಕೆಯಾಗಬಹುದಲ್ಲವೆ ?

* * *

ಆತ್ಮಜ್ಞಾನವಿರಲಿಲ್ಲದ ಇವರು ದುಡ್ಡಿನ ದುರಾಸೆಯ ಹೊದರಿನಲ್ಲಿ ಆತ್ಮವಿಚಾರದ ಚಿತ್ರವನ್ನು ಕಟ್ಟುತ್ತಿರುವುದು ಹುಟ್ಟುಗುರುಡನೊಬ್ಬನು ತನ್ನ ಅವಿವೇಕತನದಿಂದ ಜಗತ್ತಿನ ಸೌಂದರ್ಯವನ್ನು ನೋಡುತ್ತೇನೆಂದು ಹೊರಟು ಆಳವಾದ ಹಾಳು ಬಾವಿಯಲ್ಲಿ ಬಿದ್ದು ಸಾಯುವಂತಾಗಿದೆಯೆಂದು ಪತ್ರಿಕಾವಾಚಕರು ಆಡಿಕೊಳ್ಳುತ್ತಿರುವುದು ನಿಜಕ್ಕೂ ಸುಳ್ಳಾಗಿರಬಹುದಲ್ಲವೆ ?

ಆತ್ಮವಿಚಾರ ಪತ್ರಿಕಾಕರ್ತರಾದ ಶ್ರೀ ನಾಗಣ್ಣನವರು ಸ್ವಾಮಿಯೆನಿಸಿಕೊಳ್ಳಲು ಜರತಾರೀಶಾಲು ಹೊದ್ದುಕೊಂಡಿರುವುದೂ, ಮೈತ್ರಿಯ ವ್ಯಕ್ತಿಯೆನಿಸಿಕೊಳ್ಳಲು ಜರಿಯ ಪೇಟಾ ಧರಿಸಿರುವುದೂ ಇವರ ಫೋಟೋಗಳಲ್ಲಿ ಎದ್ದು ಕಾಣುತ್ತಿದ್ದರೂ ಅದರಲ್ಲಿ ಬೂಟು ಹಾಕಿಕೊಂಡಿರುವುದನ್ನು ನೋಡಿದರೆ ಸಮಾಜದಲ್ಲಿ ಇವರ ಅಸಭ್ಯವರ್ತನೆಯನ್ನು ವ್ಯಕ್ತಗೊಳಿಸುತ್ತದೆಂದು ತಿಳಿಸುವ ಕರ್ತವ್ಯ ನಮಗಿಲ್ಲವೆ ?

ಧರ್ಮಸ್ಥಾಪನೆ ಮಾಡುವನೆಂದೂ, ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯುವನೆಂದೂ, ಮತೈಕ್ಯಾರಾಧನೆ ರಿಸುವನೆಂದೂ, ಪಾಂಡಿತ್ಯ ಸಂಪಾದಿಸುವುದೂ ಶಿವಂಶ ಸಂಭೂತರಿಗಿಯನಂತೆ, ಇವರನ್ನು ಸಮರ್ಥಾನುಸಾರ ಜೆಳೆಯುವ ಕೆಲಸವು ಮಾತ್ರ ಶ್ರೀಮಾನ್ ರಾಜಾಜಾ ರಾಜಶ್ರೀ ಅಪಜ್ಜಿ ಬೋಧಕ್ಷೇತ್ರ ನಾಗಣ್ಣನವರಿಗೆ ದೈವದತ್ತವಾಗಿ ಬಂದಿರುವುದು ಅವರ ಸುಕೃತವಿಶೇಷದ ಫಲವೆಂದು ಕಾಡಿನಜನತೆಯು ಹಾಡಿಹರಸುತ್ತಿರುವುದು ಕೇವಲ ಕುಹಕವೆಂದು ತಿಳಿಯಬಹುದಲ್ಲವೆ ?

Edited, Printed and Published by Bruhanmathadhiyakshe Sri Mahadevaiah at Sri Panchacharya Electric Press, Sayaji Rao Road, Mysore

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯ॥ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಪಂಚಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪ್ರಾಲಿವ್ಪುದೀರ್ಘೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ/೧೦ ಆ.

ಸಂಪುಟ ೩೦] ಸೋಮವಾರ ತಾ॥ ೮ ನೇ ಅಕ್ಟೋಬರ್ ೧೯೩೬ [ಸಂಚಿಕೆ ೨೧

ಪತ್ರವ್ಯವಹಾರ

[ಬಾಕ್ಸಿವಾರದು ಅಭಿಪ್ರಾಯ ಪಡುವ ಲೇಖನಗಳಿಗೆ ಶ್ರೀಕಾರ್ಯಾಲಯದಲ್ಲಿ ಜವಾಬ್ದಾರಿಯನ್ನು ವರ್ಯರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರೀರಂಗಾಪುರೀ ಜಗದ್ಗುರುಗಳಲ್ಲಿ ಸಮರ್ಪಿಸಿದ ವಿಜಯದಶಮೀ ಪಂಚಪದ್ಯ ರತ್ನಮಾಲಿಕೆ

(ಧಾಮಿನಿ)

ಶ್ರೀರಜತಪುರಿನಿಲಯ ನುಮಸುರ ।
ರಿಯಹೋದೃವ ಭರತ ರೇಣುಕ ।
ರಾಯಣೀತಲ ಕೊಲ್ಲಿಪಾಕಿಯ ಸೋಮನಾಪದನೊಳು ॥
ರಿ ಲಿಂಗೋದ್ಭವವಿರಂಜಿತ ।
ಊರಿಮಹಿಮ ಪರಂಪರಾಗತ ।
ೀರಗಂಗಾಧರ ಜಗದ್ಗುರು ಮುಕ್ತಿಮಂದಿರನೆ ॥೧॥

ವೀರಶೈವಾಚಾರಧರ್ಮದಿ ।
ೀರಯವಪ್ಪಾವರಣಪರ್ಯಸ್ಥಲ ।
ರ ಪಂಚಾಚಾರಮರ್ಮವನೆವರಿಪು ಭಕ್ತರ್ಗೆ ॥
ೋರಭವತಾಪಗಳ ಪೀಗುತ ।
ಸಾರಿಗೊಳ್ಳುವೆ ಮುಕ್ತಿರಾಜ್ಯವ ।
ೀರಗಂಗಾಧರ ಜಗದ್ಗುರು ಮುಕ್ತಿಮಂದಿರನೆ ॥೨॥

ವಿಜಯದಶಮಿಯು ಶಮಿಯ ಪೂಜೆಯು ।
ಜಯಲೋಕಕೆ ಕಾಂಚಿಸುಖವನು ।
ಜಿಸುವುದು ತವಚರಣ ಕರುಣಾದಿ ಭಕ್ತಸಮೂಹರ ॥
ಜಯಧ್ವಜ ಹಾರುವುದು ಕಕ್ಷಡ ।
ಎಮ್ಮುರಿಭವಮೆತಿಹುದು ಧನ್ಯವು ।
ಜಗನಂದಿತವೀರಗಂಗಾಧರ ಜಗದ್ಗುರುವೆ ॥೩॥

ರಾಜಯೋಗವನೆಂದಪೂರ್ಣರು ।
ಜಗದಿ ಮೈಸೂರು ಪ್ರಭುಗಳು ।
ರಾಜಂಜೀಶ್ವರಿಯ ಯೋಗದಲ್ಲಂರಸುಗುರುವರನೆ ॥
ೋಜಿಗದ ದುರ್ಮುಖಿಯವತ್ಸರ ।
ರಾಜಿಸುವುದಾಶ್ವಿಜ ಶುಕ್ಲದಿ ।
ರಾಜನೈಯವಭರತ ದಶಮಿಯು ವಿರಪೀಠಪೊಳು ॥೪॥

ಜಯತು ಜಂಗಮಲಿಂಗ ಗುರುವಿಗೆ ।
ಯತು ಪಾಡೋದಕ ಪ್ರಸಾದಕೆ ।
ಯತು ಭಸ್ಮತ್ರಿಪುಂಡ್ರಮಂತ್ರಶಿವಾಕ್ಷಿಗೆ ಜಯತು ॥
ಯತು ಭಕ್ತಮಹೇಶ ಶರಣಿಗೆ ।
ಯತು ಪ್ರಾಣಾಧ್ಯಸಾದಿ ವರ್ಯಗೆ ।
ಯತು ಸಕ್ಯಸಮಾಜಾಭ್ಯತಿಕ್ಷಗಳಿಗೆ ಜಯತು ॥೫॥

ಆಚಾರ್ಯ ಪದಪದ್ಮೋದರಪಕ್ಷ ಮರ
ನಾಯಕಪಟ್ಟ ಬಾಳಿಹಳ್ಳಿಮಠದ
ಶ್ರೀ ಸಿದ್ಧಾಂತ ಶಿಖಾಮಣಿ ಶಾಸ್ತ್ರೀ
ಶ್ರೀರೇಣುಚಾರ್ಯ ಜೇಷ್ಠಸ್ಥಾಪಕ, ಮೈಸೂರು.

ಶ್ರೀ ಗಣೇಶಮಹೋತ್ಸವ, ಮುದಗಲ್ಲು

ಪ್ರತಿವರುಷ ಪದ್ಧತಿಯಂತೆ ಈ ವರ್ಷವೂ ಇಲ್ಲಿಯ ವೀರಶೈವ ತರುಣರು ಶ್ರಾವಣಮಾಸದ ೩॥ ೧ ಮೊದಲ್ಗೊಂಡು ಶ್ರಾವಣಮಾಸ ಮುಗಿಯುವವರೆಗೂ ಒಳ್ಳೇ ಹುರುಪಿನಿಂದಲೂ ಸಿಕ್ಕಿನಿಂದಲೂ ಶಿವನಾಮ ಗುರು ನಾಮ ಶಕ್ತಿನಾಮಗಳಿಂದಲೂ ಕೂಡಿ ಸ್ತೋತ್ರಾವಳಿಗಳನ್ನು ಪಠಿಸುತ್ತ ಗ್ರಾಮದ ಎಲ್ಲ ದೇವಾಲಯಗಳಲ್ಲಿರುವ ಮೂರ್ತಿಗಳಿಗೆ ಪೂಜಾದಿಗಳನ್ನು ಮಾಡುತ್ತ ಒಂದು ತಿಂಗಳು ಮುಗಿದನಂತರ ಇದೇ ಭಾದ್ರಪದ ಶು॥ ೪ ಶನಿವಾರ ದಿವಸ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿ ನಾನಾತರದ ಅಲಂಕಾರಗಳಿಂದ ಸುಂದರವನ್ನು ರಚಿಸಿ ಶ್ರೀ ಗಣೇಶನನ್ನು ೧೧॥ ಘಂಟೆಯ ಶುಭಮುಹೂರ್ತದಲ್ಲಿ ಮುಹೂರ್ತ ಮಾಡಿ ಪಟ್ಟಣದ ವೇ॥ ಶ್ರೀ॥ ಸಿದ್ಧರಾಮಯ್ಯಸ್ವಾಮೀಜೀ ಗಂಗಾಧರಮಠ ಇವರ ವೈದಿಕದೊಡನೆ ಪಂಚಾಭಿಷೇಕ ಪೂಜಾದಿಗಳು ನಡೆದವು ಬಡಬಗ್ಗರಾದಿಯಾಗಿ ಎಲ್ಲ ಜನರಿಗೂ ಪ್ರಸಾದವನ್ನು ಕೊಡಲಾಯಿತು ನಂತರ ಪಂಜೆ ೬ ಘಂಟೆಗೆ ಶ್ರೀ ಗಣೇಶ ಉತ್ಸವವು ಭಜನಾ ಮೇಳದಿಂದಲೂ ಹಾಗೂ ಚೇಂಡಿನ ಮೇಳದಿಂದಲೂ ಹೊರಟು ಮುಖ್ಯಬೀದಿಗಳಲ್ಲಿ ಹಾಯ್ದು ಗಂಗಾಸ್ಥಲವನ್ನು ಸೇರಿ ಮಹಾಮಂಗಲದೊಡನೆ ಶ್ರೀಗಣೇಶನನ್ನು ಕಳುಹಿಸಲಾಯಿತು. ಕೂಡಿದ ಜನಸಮೂಹಕ್ಕೆ ಪ್ರಸಾದವನ್ನು ಹಂಚಿದನಂತರ ಕಾರ್ಯಕ್ರಮವು ಮುಕ್ತಾಯವಾಯಿತು

ಭಜನಾಮಂಡಳಿಯ ತರುಣರು

ಅನುಷ್ಠಾನ ವ ಶರಣಬಸವೇಶ್ವರ ಪುರಾಣ ಸಮಾಪ್ತಿ

ಗಜೇಂದ್ರಗಡದಲ್ಲಿ ಶ್ರೀ॥ ಪ॥ ಬ್ರ॥ ಪಟ್ಟಾಧ್ಯಕ್ಷ ಬಸವಲಿಂಗಶಿವಾಚಾರ್ಯಸ್ವಾಮಿಗಳವರು ಗಜೇಂದ್ರಗಡದ ತಮ್ಮ ಶಾಖಾಮಠರಾದ ಶ್ರೀ ಗುರ್ತ್ತದೇವಸ್ವಾಮಿ ಮಠದಲ್ಲಿ ಜಗತ್ಕಿನ ಶಾಂತಿಯ ಸಲುವಾಗಿ ಶಿವಮಹಾಯಜ್ಞ (ಅನುಷ್ಠಾನ) ವನ್ನು ಆಹಾರವಿಲ್ಲದೆ ತಾ॥ ೭-೯-೩೬ ನೇ ಮಂಗಳವಾರದಿಂದ ತಾ॥ ೧೬-೯-೩೬ ನೇ ರವಿವಾರದ ವರೆಗೆ ೪೧ ದಿವಸ ಪೂರ್ತಿ ಮಾಡಿ ಸೋಮವಾರ ತಾ॥ ೧೭-೯-೩೬ ನೇ ದಿವಸ ಕಲಬುರಗಿ ಶ್ರೀ ಶರಣಬಸವೇಶ್ವರ ಪುರಾಣವನ್ನು ಸಮಾಪ್ತಿಗೊಳಿಸಿ, ಸಹಸ್ರಾರು ಮಾಹೇಶ್ವರರಿಗೂ ಭಕ್ತರಿಗೂ ಅನ್ನಸಂತರ್ಪಣೆ ಮಾಡಿಸಿದರು. ಈ ಸುಸಮಯಕ್ಕೆ ಬ್ಯಾಡಗಿ ವೈಶ ಗುರ್ತ್ತದ ಮಲ್ಲಾರಿಪುರದ ಶ್ರೀ ಶಿವಮೂರ್ತಪ್ಪ ವ ಹುಚ್ಚೆಪ್ಪ ಸ್ವಾಮಿಗಳವರು ಸಹ ದಯಮಾಡಿಸಿ, ತಮ್ಮ ವೈಶ್ಯ ಶ್ರೀಕಾಲಪೂಜೆಯನ್ನು ಮಳವಳ್ಳಿಯ ಪೂರ್ತಿಗೊಳಿಸಿ, ಭಕ್ತಾದಿಗಳಿಗೆ ಆಶೀರ್ವದಿಸಿದರು. ॥ ಪ॥ ಬ್ರ॥ ಬಸವಲಿಂಗಶಿವಾಚಾರ್ಯ ಸ್ವಾಮಿಗಳವರು ಇವ್ವಿಯ ವರೆಗೆ ಐದು ವರ್ಷಗಳ ಲಾಗಾಯಿತು ತಮ್ಮ ಅನುಷ್ಠಾನವನ್ನು ವ ಕಲಬುರಗಿ "ಶ್ರೀ ಶರಣಬಸವೇಶ್ವರ" ಪುರಾಣವನ್ನು ಸಾಂಗವಾಡುತ್ತ ಬಂದಿರುತ್ತಾರೆ

ಬಿ ಎಸ್. ಪಾಟೀಲ

ಪಾದಪೂಜೆ ಹಾಗೂ ಪುರಾಣಮಹೋತ್ಸವ ತೇರದಾಳ

ತೇರದಾಳ ಹಿರೇಮಸಬ ಪಟ್ಟಾಧ್ಯಕ್ಷ ಶ್ರೀ ಪ॥ ಬ್ರ॥ ಗಂಗಾಧರಶಿವಾಚಾರ್ಯರು ನಡೆಯಿಸಿದ ಪುರಾಣಸಮಾಪ್ತಿಗೆ ತಾರೀಖು ೧೯-೯-೩೬ ನೇ ಬುಧವಾರ ಆಗಮಿಸಿದ ೭ ಮಂದಿ ಶ್ರೀ ಪ॥ ಬ್ರ॥ ಪಟ್ಟದಪ್ರಾಮಿಗಳವರನ್ನು ಮುಂಜಾನೆ ೯ ಘಂಟೆಗೆ ನೋಟಾರಗಾಡಿಯಲ್ಲಿ ಕುಳ್ಳಿರಿಸಿ ಹಿರೇಮಸಬದಿಂದ ಕರಡಿ, ಬ್ಯಾಂಡ, ಸನಾದಿ, ಕಾಳಿ-ಇವುಗಳ ಅಬ್ಬರ ಭಜನೆ, ಶ್ರೀಜಗದ್ಗುರು ಪಂಚಾಚಾರ್ಯರ ನಾಮಗಳ ಜಯಘೋಷಗಳಿಂದ ಮೆರವಣಿಗೆ ಪ್ರಾರಂಭವಾಗಿ ಕಲ್ಲಪ್ಪಮಠಕ್ಕೆ ೧೨ ಘಂಟೆಗೆ ತಲುಪಿತು ನಂತರ ಶ್ರೀಗಳವರ ಸ್ನಾನ, ಲಿಂಗಾರ್ಚನೆ ಮುಗಿದ ನಂತರ ಪಾದಪೂಜೆಯಾಗಿ ಪುರಾಣ ಸಮಾಪ್ತಿಯಾಗಿ ಗಣ ಸಂತೃಪ್ತಿಯಾಯಿತು.

ಸದ್ಭಕ್ತಮಂಡಳಿ

ಮೈಸೂರು ಕರ್ನಾಟಕದ ಮುಖ್ಯಮಂತ್ರಿಗಳ ಆಯ್ಕೆ

ಲೇ —ಧರ್ಮೋದಯ ಪಂಚಾಂಗಕರ್ತರು ಧಾರವಾಡ

ಶ್ರೀ ಎಸ್. ನಿಜಲಿಂಗಪ್ಪನವರೇ ಹೊಸ ಮೈಸೂರ ಕರ್ನಾಟಕದ ಮುಖ್ಯಮಂತ್ರಿಗಳಾಗುವರೆಂದು ಶ್ರೀ ಶಾ. ಶಕ ೧೮೬೮ ನೆಯ "ದುರ್ಮುಖಿನಾಮ" ಸಂ॥ರದ ಧಾರ್ಮೋದಯ ಪಂಚಾಂಗದ ೧೦೬ ನೇ ಪುಟದಲ್ಲಿ ಬರೆದು ಪ್ರಕಟಿಸಿದ್ದೇನೆ. ನನ್ನನ್ನು ವಿಚಾರಿಸಿರುವ ಕನ್ನಡ ಬಾಂಧವರೆಲ್ಲರೂ. ನನ್ನ ಪಂಚಾಂಗವನ್ನು ನೋಡಿಕೊಂಡರೆ ನನಗೆ ಪತ್ರಬರೆದು ಪ್ರಶ್ನೆ ಕೇಳುವ ಸನ್ನಿವೇಶವೇ ಉಳಿಯಲಿಲ್ಲೆಪ್ಪ.

ಸ್ವೀಕಾರ

ಧಾರವಾಡ ಜಿಲ್ಲಾ ಬೆಲವಂತರ ಹಿರೇಮಸಬದ ಗಂಗಯ್ಯನವರ ಧರ್ಮಪತ್ನಿ ಶ್ರೀಮತಿ ಇನ್ನಮ್ಮನವರು ತಾ॥ ೨೫-೯-೩೬ ನೇ ದಿವಸ ಶಿವಾಧೀನರಾದುದಕ್ಕೆ ಅವರ ಅಂತ್ಯವಿಧಿ ಸಮಯದಲ್ಲಿ ಪ್ರಭಾಪೋತಕೆಗಾಗಿ ಸಮರ್ಪಿಸಿದ 1 ರೂಪಾಯಿ ಶ್ರೀ ಸಂಗಯ್ಯನವರ ದ್ವಾರಾ ಕಛೇರಿಯುಕ್ತವಾಗಿದೆ.

ಈ ಮೇಲ್ಕಾಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ವಿಶೇಷ ಮಂಗಲವನ್ನು ಅನುಗ್ರಹಿಸಲು ಪ್ರಾರ್ಥಿಸುತ್ತೇವೆ.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ನವರಾತ್ರಿ ಮಹೋತ್ಸವ ನಿಮಿತ್ತವಾಗಿ ಮುಂದಿನ ವಾರದ (ತಾ|| ೧೫-೧೦-೩೬ ನೇ) ಪತ್ರಿಕೆಯು ಪ್ರಕಟವಾಗುವುದಿಲ್ಲ. ಮ್ಯಾ

ಪಂಚಾಚಾರ್ಯಪ್ರಭಾ

೧೯೩೬ ನೆಯ ಅಕ್ಟೋಬರ್ ತಾ|| ೧೭ನೆಯ ಸೋಮವಾರ

ಕನ್ನಡನಾಡಿನ ಹಿರಿಯ ಸಂಸ್ಕೃತಿ ದಸರಾಮಹೋತ್ಸವ

ಈಗ್ಗೆ ಬಹುಕಾಲದಹಿಂದೆ ಲೋಕಕಂಟಕರಾದ ಶುಂಭ-ನಿಶುಂಭ-ಮಹಿಷಾಸುರಾದಿ ರಾಕ್ಷಸರನ್ನು ಅತಿ ಭಯಂಕರವಾದ ಯುದ್ಧದಲ್ಲಿ ಸಂಹರಿಸಿದ ಶ್ರೀ ಚಾಮುಂಡೇಶ್ವರೀದೇವಿಯು ತನ್ನ ರಕ್ತಮಯವಾದ ಅಸ್ತ್ರಗಳನ್ನು ವಿಸರ್ಜಿಸಿದ ಆಶ್ವಿಜ ಶುದ್ಧ ನವಮಿ ತಿಥಿಯು ಮಹಾನವಮಿಯೆಂದೂ ಈ ದುಷ್ಟಶಿಸ್ತಹದ ವಿಜಯೋತ್ಸವದ ಮೂಲಕ ಮರುದಿವಸ ನಡೆದ ದೇವತಾ ಪೂಜೆಯು ವಿಜಯದಶಮಿ ಮಹೋತ್ಸವ ವೆಂದೂ ಪ್ರಸಿದ್ಧವಾಗಿರುವಂತೆ ಶ್ರೀ ಚಾಮುಂಡೇಶ್ವರೀ ದೇವಿಗೆ ಆವಾಸಸ್ಥಾನವಾಗಿದ್ದ ಹಾಗು ಈ ಕ್ಷೇತ್ರಗಿರ ರಕ್ತ ಸಿಂಹಾಸನದಿಂದ ಪರಶೇಭಿಸುತ್ತಿರುವ ಮೈಸೂರಿನ ಅರಮನೆಯಲ್ಲಿ ಈ ಹತ್ತು ದಿನಗಳ (ದಸರಾ) ಮಹೋತ್ಸವವು ವಿಶೇಷ ವೈಭವದಿಂದ ನಡೆಯುತ್ತಿರುವುದು ಈ ಕ್ಷೇತ್ರಗಿರ ಒಂದು ಹಿರಿಯ ಸಂಸ್ಕೃತಿಯೆಂದು ಹೇಳಬಹುದು ಪೂರ್ವಸಂಸ್ಕೃತಿಯನ್ನು ಮಾನ್ಯ ಮಾಡುತ್ತಿರುವ ಈಗಿನ ಪ್ರಜಾರಾಜ್ಯದಲ್ಲಿ ಈ ಮಹೋತ್ಸವವು ಈಗ ೯ ವರ್ಷಗಳಿಂದ ನಡೆದುಕೊಂಡು ಬಂದಂತೆ ಇನ್ನು ಮುಂದಾದರೂ ವಿಶೇಷ ವೈಭವದಿಂದ ನಡೆದು ನಾಡಹಬ್ಬ ಮೈಸೂರೆಂಬ ಹೆಸರಿಗೆ ಶಿಷ್ಟದರ್ಶನ ವಾಗಿರಿ!

ದ್ವಾಪರಯುಗದಲ್ಲಿ ರಾಜ್ಯವನ್ನು ಕಳೆದುಕೊಂಡು ಅನಾಥರಾದ ಪಾಂಡವರು ಅಜ್ಞಾತವಾಸಿಗಳಾಗುವ ಸಮಯದಲ್ಲಿ ಇದೇ ಮಹಾನವಮಿಯ ದಿವಸ ತಮ್ಮ ಶಸ್ತ್ರಾಸ್ತ್ರಗಳನ್ನು ಬನ್ನಿ ಮಹಾಕಾಳಿಯ ಸಾನ್ನಿಧ್ಯಕ್ಕೆ ಕೊಟ್ಟು ವಿಜಯದಶಮಿಯ ದಿವಸ ಪ್ರಜಾಮಂಡಲಿಗೆ ಯನ್ನು ಕರೆಯಿಸಿ ಇನ್ನು ಒಂದು ವರ್ಷದವರೆಗೆ ನನ್ನು ನಿಮ್ಮಗಳ ದರ್ಶನವಾಗದೆ ಇರುವುದರಿಂದ ಅಲ್ಲಿಯ ವರೆಗೆ ನಿಮ್ಮಲ್ಲಿದ್ದ ಪ್ರೇಮವು ಕುಂದದಿರಲೆಂದು ಹರಿ ಶಮೀಪತ್ರವನ್ನು ಕೊಟ್ಟು ಪ್ರಕಾರ ಈಗಲೂ ಕನ್ನಡ ನಾಡಿನ ಎಲ್ಲೆಡೆಯಲ್ಲೂ ವಿಜಯದಶಮಿ ದಿವಸ ಶಮಿ ಪತ್ರ ಸಮರ್ಪಣದ ಮೂಲಕ ಒಬ್ಬರನ್ನೊಬ್ಬರು ಕಟ್ಟಿ ಕೊಂಡು ಮುಂದಿನ ವರ್ಷದ ಪ್ರೇಮವನ್ನು ಬಯಸುವ ವದು ವಾಡಿಕೆಯಲ್ಲಿದೆ

ಹೀಗೆ ಪುರಾಣೋಕ್ತವಾಗಿಯೂ ಅನುಭವಯುಕ್ತ ವಾಗಿಯೂ ಕನ್ನಡನಾಡಿನಲ್ಲಿ ನಡೆಯುತ್ತ ಬಂದಿರುವ ಈ ಕಾರ್ಯವು ಕನ್ನಡಿಗರಿಗೆ ನಾಡಹಬ್ಬವಾಗಿ ಪರಗಣಿಸಲ್ಪ ಟ್ಟಿರುವುದು ಮೈಸೂರಿನ ಉತ್ಸವವಂತೂ ರಾಜ-ಮಹಾ ರಾಜರುಗಳನ್ನೂ ದೇಶ ವಿದೇಶೀಯರನ್ನೂ ದಂಗು ಗೊಳಿಸುತ್ತಿರುವುದು ಈಗ ಈ ಉತ್ಸವಕ್ಕೆ ಕಾರಣಕರ್ತ ರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರೂ ಇವರ ಪೂರ್ವಜರೂ ಈ ೧೦ ದಿವಸಗಳಲ್ಲಿ ಅರಮನೆಯೊಳಗೆ ದೇವಸ್ಥಾನಗಳೊಳಗೆ ನಡೆಯುತ್ತಿರುವ ಪೂಜೆ, ಹೋಮಾದಿಗಳು ಪ್ರಜೆಗಳ ಶ್ರೇಯಸುಖಕ ರವಾಗಿರುತ್ತವೆ ಆದುದರಿಂದಲೇ ಮೈಸೂರು ರಾಮ ರಾಜ್ಯವೆಂದು ಹೆಸರಾಗಿತ್ತು ಇತ್ತೀಚೆಗೆ ಪ್ರಜಾರಾಜ್ಯದ ಕಾನೂನುಗಳಿಗನುಸಾರವಾಗಿ ನಡೆಯುತ್ತ ಮಹಾಪ್ರಭು ಗಳ ಮಹಪ್ಪಸ್ಸು ಸಂಕುಚಿತವಾಗಿ ಮೊದಲಿನಂತೆ ವಿಶೇಷ ಪೂಜೆಗಳಿಗೆ ಗಮನ ಹರಿಸದಿದ್ದುದರಿಂದ ಈ ವರ್ಷ ಮೈಸೂರುನೀಲಿಯಲ್ಲಿ ಅಲ್ಲಲ್ಲಿ ಕ್ಷಾಮದ ಪ್ರವೇಶವಾಗ ಹತ್ತಿರುವುದು. ದೈವಭಕ್ತರೂ, ಧರ್ಮನಿರತರೂ ಆದ ಮಹಾಪ್ರಭುಗಳು ಹೀಗೆ ಮಹಪ್ಪಸ್ಸು ಸಂಕುಚಿತವಾದಾ ದಲ್ಲಿ ದೇಶಕ್ಕೆ ಕ್ಷೇಮವು ಲಭಿಸಲಾರದು ಆದರಲ್ಲಿಯೂ ಮುಂದಿನ ವರ್ಷ ದಸರಾಮಹೋತ್ಸವೇ ಇಲ್ಲವೆಂಬ ಅರ್ಥ ತೋರಿಸುವ ಪ್ರಕಟಣೆಗಳೆಂದ ಕನ್ನಡಿಗರ ಎದೆಗೆ ಬಾಣಹೊಡೆದಂತಾಗಿರುವುದು ಇದು ಏಕ್ಷಿಯವಾದಲ್ಲೇ ಆದರೆ ಬಹಳ ಕೋಚನೀಯವೇ ಸರಿ ?

ನೂತನ ರಾಜ್ಯಾಂಗದ ಪ್ರಕಾರ ಮೈಸೂರಿನ ಮಹಾ ಪ್ರಭುಗಳು ರಾಜರಾಗಿ ಇರಲಿ, ಗೌರ್ನರ್ ರಾಗಿ ಇರಲಿ ಈಗ ನಡೆಯುತ್ತಿರುವ ಉತ್ಸವಕ್ಕೆ ಯಾವರೀತಿ ಯಿಂದಲೂ ವಿಶಾಲ ಮೈಸೂರು ಸರಕಾರವು ಅಡ್ಡಿಯು ಸ್ಸುಂಟುಮಾಡಬಾರದು ಹಾಗೆ ಅಡ್ಡಿಬಂದಲ್ಲಿ ಕನ್ನಡಿಗರ ಒಂದು ಹಿರಿಯ ಸಂಸ್ಕೃತಿಯನ್ನೇ ಕತ್ತರಿಸಿದಂತಾಗು ವುದು ಆದುದರಿಂದ ಇನ್ನು ಮುಂದೆ ವಿಶಾಲವಾಗುವ ನೂತನ ಸರಕಾರವು ಈ ಸಂಸ್ಕೃತಿಗೆ ಇನ್ನೂ ಹೆಚ್ಚಾದ ಉತ್ತೇಜನವನ್ನೆಕೊಟ್ಟು ಕನ್ನಡನಾಡಿನ ಕೇಶಿ ಪರಂಪರೆಯಂತೆ ನಾಡುನವರೆಂದೂ ಮಹಾಪ್ರಭುಗಳು ಕನ್ನಡ ಜನತೆಯ ಶ್ರೇಯಸ್ಸಿಗಾಗಿ ತಮ್ಮ ಪಿತೃಪಿತಾಮಹಾದಿಗಳು ಮುಡಿ ದಂತೆ ಮುಡಿದು ಜನನೇತೆಯೇ ಜನಾರ್ದನನ ಸೇವೆ ಯೆಂದು ಭಾವಿಸಿ ಯದುಕುಲದ ಕೇಶಿಗೆ ಭಾಜನ ರಾಗಲೆಂದೂ ಶ್ರೀ ಚಾಮುಂಡೇಶ್ವರೀ ತಾಯಿಯ ಕೃಪೆ ಯಿಂದ ಇವರ ವಂಶವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದೂ, 'ಶತಾಯುರ್ವೈಪುರುಷಃ. ಎಂಬಂತೆ ಮಹಾಪ್ರಭುಗಳು ಆರೋಗ್ಯಭಾಗ್ಯಯುತರಾಗಿ ನೂರು ವರ್ಷಗಳ ಕಾಲ ಬಾಳಲೆಂದೂ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಸ್ಮರಿಸಿ ಶುಭಾಶಯಗಳನ್ನು ಕೋರುತ್ತೇವೆ

ಗಾಂಧಿ ಜಯಂತಿ

ಹಿಂದ ಆಳಿದ ಅಶೋಕ ಶಾಲಿವಾಹನ ವಿಕ್ರಮ ಮೊದಲಾದ ರಾಜರುಂತೆ ಗಾಂಧಿಯವರು ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಮಹಾಪುರುಷರು ಪ್ರಾಣಿಂಸೆಯೇ ಮೂಲವಾಗುಳ್ಳ ಯುದ್ಧದಿಂದ ರಾಜ್ಯವನ್ನು ಗಳಿಸಿ ಭರತಖಂಡವನ್ನು ವಿಶ್ವಶಾಂತಿ ಕತ್ಯದಿಂದ ಆಳಿ ಕೊನೆಗೆ ತಾನು ಮಾಡಿದ ಹಿಂಸೆಗೆ ಮನನೊಂದು ದಯಾಮಯ ಶಕ್ತನನ್ನೊಳಗೊಂಡ ಬೌದ್ಧಮತವನ್ನು ಸ್ವೀಕರಿಸಿದ ಅಶೋಕಚಕ್ರವರ್ತಿ ಗಿಂತ ನೂರುಪಾಲು ಮಿಗಿಲಾದವರು ಗಾಂಧಿಯವರು ಇವರು ಒಡೆವರ ನೋಲೆ ತೋರಿಸುತ್ತಿದ್ದ ಪ್ರೀತಿ ಪ್ರದಾರ್ಯಾದಿ ಗುಣಗಳು ಇವರನ್ನು ಮಾನವ ಹೃದಯ ದಲ್ಲಿ ಉಚ್ಚಸ್ಥಾನವಿರಿಸುವಂತೆ ಇವರಲ್ಲಿ ದೈತರ ಮೇಲಿನ ಪ್ರೇಮವು ಸೇಳಕೂಡದಷ್ಟಿತ್ತು ಅದಕ್ಕಾಗಿ ಇವರಿಗೆ ದೈತರ ಬಂಧು ಎಂದು ಕರೆಯುತ್ತಿದ್ದರು ಉಚ್ಚನೀಚ ಕೆಲಸಗಳನ್ನೂ, ಬಡವರು ಬಲ್ಲಿದರನ್ನೂ ಎನ.ಧಾರವಲ್ಲಿ ಕಾಣುತ್ತಿದ್ದರು ಸಾವಿರಾರು ವರ್ಷಗಳಿಂದ ಹೀನಸ್ಥಿತಿ ಯಲ್ಲಿ ನರಳುತ್ತಿದ್ದ ಹರಿಜನರನ್ನು ಕೈಹಿಡಿದು ಉದ್ಧರಿ ಸಿದರು ಗ್ರಾಮಕೈಗಾರಿಕೆಗಳನ್ನು ಹೆಚ್ಚಿಸಿ ಉದ್ಯೋಗ ಗಳ್ಳಿ ಅವಕಾಶಕಲ್ಪಿಸಿದರು ಸತ್ಯಾಗ್ರಹ ಸಮರವನ್ನು ಹೂಡಿ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಿದರು, ಜೈಲು ವಾಸವನ್ನು ಅನುಭವಿಸಿದರು ಎಂದೇನಾಹರರ ಎಂಬ ಮಂತ್ರವನ್ನು ಪಠಿಸುತ್ತ ಸ್ವರಾಜ್ಯ ಪಡೆದರು ರಕ್ತಪಾತ ವಿಲ್ಲದೆ ರಾಜ್ಯವನ್ನು ಗಳಿಸಿಕೊಟ್ಟ ಈ ಮಹಾತ್ಮನ ಉಪಕಾರವನ್ನು ಪ್ರತಿಯೊಬ್ಬ ಭಾರತೀಯನು ಶ್ರಿಕರಣ ಪೂರ್ವಕ ನೆನೆಯಬೇಕು ಭಾರತದ ಏಕ್ಯತೆ, ಬಡವರ ಕಲ್ಯಾಣ, ಹಳ್ಳಿಗರ ಉದ್ಧಾರ ಮೊದಲಾದ ಸಾರ್ವಜನಿಕ ಕೆಲಸಗಳಲ್ಲಿ ಇವರು ಹಾಕಿಕೊಟ್ಟಿರುವ ನೀತಿಮಾರ್ಗ ಗಳು ಇಹ ಪರಸಾಧಕಕ್ಕೆ ರಾಜಮಾರ್ಗದಂತಿವೆ ಇವರು ಪ್ರತಿನಿತ್ಯ ಮಾಡುತ್ತಿದ್ದ ದೇವರ ಭಜನೆಯು ಇವರಲ್ಲಿದ್ದ ದೈವಭಕ್ತಿಯನ್ನು ವ್ಯಕ್ತಗೊಳಿಸುತ್ತಿತ್ತು ವಿದ್ಯೆಯಲ್ಲಿಯೂ, ನೀತಿಯಲ್ಲಿಯೂ, ಆಚಾರದಲ್ಲಿಯೂ ಹಿಂದುಳಿದ ಹರಿಜನರನ್ನು ಮುಂದಕ್ಕೆ ತರಲು ಜಾತಿ ಮತಭೇದವನ್ನು ಬಿಡಿಸಿದು ಬೋಧಿಸಿದರೇ ಹೊರತು ಅವರೊಡನೆ ಕಠೋರಸಂಬಂಧ ಮಾಡದೇಕೆಂದು ಹೇಳಲಿಲ್ಲ ಭಾರತೀಯರೆಲ್ಲರೂ ಒಂದೇ ತೆರನಾದ ಸುಖ ಜೀವನದಲ್ಲಿ ಬಾಳಬೇಕೆಂಬುವದೇ ಇವರ ಹಿರಿಯಾಸೆ ಜಗತ್ತಿನಲ್ಲಿ ಶಾಂತಿಯಿರಬೇಕೆಂಬುವದೇ ಇವರ ವಿಶಾಲಭಾಷಣೆಯೇ ಮೂಲಕಾರಣವಾಗಿತ್ತು. ಇಂಥ ಇನ್ನೂ ಎಷ್ಟೋ ಪವಿತ್ರ ಉದ್ಧೇಶಗಳಿಗೆ ಗೊಂ ಇವರ ಭೌತಿಕ ಶರೀರವು ಭೂಮಿಗೆ ಒಂದು ದಿವ್ಯ ಪವಿತ್ರವೆಂದೇ ಭಾವಿಸಬೇಕಾಗಿರುತ್ತದೆ ಆ ಪವಿ ದಿನವೆಂದರೆ, ಇದೇ ಅಕ್ಟೋಬರ ೨ ನೇ ತಾರೀಖು ವಾಸ್ತವಿಕವಾಗಿ ಇವರು ಹುಟ್ಟಿದ ದಿನವನ್ನು ನಮ್ಮ ಭಾರತ ಸಂಸ್ಥಾನಿಯಂತೆ ಮಾಸ ತಿಥಿಗಳಲ್ಲಿ ಸಂಕಲ್ಪಿಸಿ ನಿರ್ಣಯಿಸಿದ್ದರೆ ಇನ್ನೂ ಚಿರಸ್ಥಾಯಿಗಿತ್ತಲ್ಲವೆ ? ಈ ಮಹಾ ಶಕ್ತನ ಹುಟ್ಟು ದಿನವು ಭಾರತೀಯರಿಗೆ ಪವಿತ್ರ ದಿನವಾ ಗಿರುವುದರಿಂದ ಇದನ್ನು ಸ್ಮರಣ ಆಚರಿಸಿದ್ದುದು ರಾಷ್ಟ್ರ ನಾಯಕರಿಗೆ ಸಂತೋಷವೇ ಸರಿ ! ಭಾರತಮಾತೆಯ ಇಂಥಅನೇಕ ಸಪುತ್ರರನ್ನು ಪಡೆದು ಪ್ರಕಾಶಿಸಲಿ ಸುದಿನವು ಎಲ್ಲರಿಗೂ ಸದ್ಬುದ್ಧಿಯನ್ನು ಕೊಟ್ಟು ಸುಃ ಶಾಂತಿಯನ್ನು ಬೀರಲಿ ಅವರಿಂದ ಪೋಷಿತವಾ ಸ್ವತಂತ್ರ ಭಾರತದ ರಾಜ್ಯಸೂತ್ರಗಳನ್ನು ನಡೆಸುತ್ತಿರುವ ಕಾಂಗ್ರೆಸ್ಸು ಸತ್ಯ ಶಾಂತಿಗಳ ನೆಲೆಯಾಗಿ ಧರ್ಮರಾ ಬೀಡಾಗಿ ಅವರ ಅತಿರ್ವಾದನೆಯ ಹೊಂದಿ ಬಾಳಲಿ ಜಗತ್ತಿನ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಹೊಂದಲಿ

ಸ್ತ್ರೀಯರ ಸೌಭಾಗ್ಯ

ಪತಿಯೇ ಪರಬೈವವೆಂದು ನಂಬಿಕೊಂಡಿರು ಭಾರತೀಯ ನಾರಿಯಮಣಿಯರಿಗೆ ವಿವಾಹಕಸಮಯದಲ್ಲಿ ಪತಿಯ ಸ್ವರೂಪವು ಅವರ ಮನದಲ್ಲಿ ಸದಾ ಜಾಗ್ರ ವಾಗಿರುವಂತೆ ತಾಳಿಯನ್ನು ಕಟ್ಟುವ ಪದ್ಧತಿಯು ಬಹ ಪ್ರಾಚೀನ ಕಾಲದಿಂದ ನಡೆದುಬಂದಿರುತ್ತದೆ ಇದಕ್ಕೆ ಮಾಂಗಲ್ಯವೆಂಬ ಹೆಸರು ಇದುವೇ ಸ್ತ್ರೀಯರ ಸೌಭಾ ಗ್ಯವೂ ಮುತ್ತೈದೆಯರ ಲಕ್ಷಣವೂ ಆಗಿರುತ್ತದೆ ಇದನ್ನು ಕಠಮಣಿಯೊಂದಿಗೆ ಸೇರಿಸಿ ಕೊರೆಗೋ ಹಾಕಿಕೊಳ್ಳುವ ಪದ್ಧತಿಯಂತೂ ಕೆಲವರು ಬಳ ಕಿರುಮಣಿಯನ್ನೇ ಮಾಂಗಲಸೂಚಕವೆಂದು ಅವನ್ನೇ ಹಾಕಿಕೊಳ್ಳುತ್ತಾರೆ

ಈ ಸೌಭಾಗ್ಯದ ಗುರುತಿಂಗಿ ಕಾತ್ಯೀರದ ಸ್ತ್ರೀಯರ ಕೊರಳಲ್ಲಿ ರೇಕಿಮೆದಾರವನ್ನು ಕಟ್ಟಿಕೊಂಡು ಕೆವಿಯಲ್ಲಿ ಬಂಗಾರದ ಬೆಂಡೋಲೆಗಳನ್ನು ಧರಿಸುವರು ಗುಜರಾ ಥೀಯರು ವಿವಾಹದ ಕಾಲಕ್ಕೆ ಪ್ರತಿಯೊಂದು ಅವಯ ವದ ತಂಬಾ ಆಭರಣಗಳನ್ನು ಹಾಕಿಕೊಳ್ಳುತ್ತಾರೆಲ್ಲರ ನುಂದಲೆಯಲ್ಲಿ ಜೂಡಾಮಣಿ ಎಂಬ ಭೂಷಣವನ್ನು ಧರಿಸುತ್ತಾರೆ ಇದುವೇ ಮಾಂಗಲ್ಯದ ಲಕ್ಷಣವೆಂ ಅವರು ಭಾವಿಸಿದ್ದಾರೆ ಉತ್ತರ ಭಾರತದ ಪ್ರೀಯರು ಮೂಗಿನಲ್ಲಿ ಮುತ್ತಿನ ಮುಕುರವನ್ನೂ ಕಾಲಲ್ಲಿ ಸರಪ (ಚೈನು) ಯನ್ನು ಹಾಕಿಕೊಳ್ಳುತ್ತಾರೆ ಅವರಿಗೆ ಇದು ಸಂಪಕ್ಕು ಬಂಗಾಲಿಯರು ಮದುವೆಯ ಕಾಲಕ್ಕೆ ಸ್ತ್ರೀಗೆ ವರಿಸಿಂದಲೇ ಕುಂಕುಮ ಹಚ್ಚಿಸುತ್ತಾ ಮತ್ತು ಕನ್ಯೆಯ ಕೈಗೆ ಒಂದು ಕಬ್ಬಿಣದ ಬಳೆ ಹಾ ತ್ತಾರೆ ಇದುವೇ ಅವರ ಶೋಭನದ ಚಿಹ್ನೆ ಮ ರಾಸಿಗಳು ಮೂಗಿನ ಎರಡೂ ಮಗ್ಗಲು ಚಿನ್ನ ಮೂಗುಬೊಟ್ಟು ಹಾಕಿಕೆಯಂತು ಒಂದು ವಿಶಿಷ್ಟ ತಾಳಿಯನ್ನು ಕರೇಮಣಿಯಲ್ಲಿ ಸೇರಿಸಿ ಅರಿಸಿ ಮಿತ್ತಿನವಾಗಿ ಕೊರೆಯಿಸಿ ಹಾಕಿಕೊಳ್ಳುತ್ತಾರೆ ಮುಂ ಮರು ಬಳೆ ಹೆಚ್ಚಾಗಿ ಧರಿಸುವದೇ ಮಂಗಲವೆಂ ತಿಳಿಯುತ್ತಾರೆ ಶ್ರೈಷ್ಟಿಯನ್ನರು ಶುಭದಿವಸದಲ್ಲಿ ಸ ಯಿಂದ ಕೊಡಲ್ಪಟ್ಟ ಹೊಸ [illegible]ಗುರವನ್ನು ಧರಿ ಸ್ತಾರೆ ಮತ್ತು ಅಂಗಿ ಬದಲಾಯಿಸಿ ಸೀರೆ ಉಡುತ್ತಾ ಇದೇ ಅವರ ಸೌಭಾಗ್ಯದ ಕುರುಹು

ನಾನಾ ಪ್ರಾಂತಗಳಲ್ಲಿಯೂ ನಾನಾ ದೇಶಗಳಲ್ಲಿಯ ಹೀಗೆ ಪತಿಸೌಭಾಗ್ಯದ ಲಕ್ಷಣಗಳು ಬೇರೆ ಬೇ ಯಾಗಿದ್ದರೂ ಪತಿಕ್ಷೇಮವೆಲ್ಲಿ ಸ್ತ್ರೀಯರಿಗೇ ಎಲ್ಲೆಡೆಯ ಪ್ರಾಧಾನ್ಯವು ಕೊಡಲ್ಪಟ್ಟಿದೆ ಇವರಿಂದ ಪಡೆಯಲ್ಪ ಆದುದರಿಂದ ಸ್ತ್ರೀಯರೆಲ್ಲರೂ ತಮ್ಮ ಮಂಗಲಭಾಗ್ಯ ಆಧಾರಸಾದಿ ಪತಿದೇವನಮ್ಮು ಧ್ಯಾನಿಸುತ್ತು, ಸೌ ಮಾಡುತ್ತ ಸದಾ ಅವನ ನೆರೆಳಂತೆಂದು ಸತ್ಕತಿಯಿಂ ಹೊಂದುವದು ಸ್ತ್ರೀಯಸ್ಯರ ವೀರಶೈವ ಸ್ತ್ರೀಯರಂತೆ ತಮ್ಮ ಪತಿದೇವಕ ಸೇವೆಯಿಲ್ಲದೆ ಇತ್ಯಲೋಕಗಳ ಶ್ರಮಪಡಲ್ಕೂ ಭಸ್ಮ-ರುದ್ರಾಕ್ಷಧಾರಣವಲ್ಲೂ ಶೈಕೊಂ

ಗುರುಸೇವಾನಿರತರಾಗಿ ತಮ್ಮಮಠಪಥಗಳನ್ನು ಗುರು-ಲಿಂಗ-ಜಂಗಮರ ಸೇವೆಗೂ ಪತಿಸೇವೆಗೂ ಅರ್ಪಿಸಿ ಇಹಪೋಷ ವ್ಯಾಪಾರಗಳಿಂದ ದೂರವಾಗುತ್ತ ಸದಾ ಪರಶಿವನ ಚಿಂತೆಯಲ್ಲಿಯೇ ಕಾಲಳೆಯರು ಸದ್ಗತಿಯನ್ನು ಹೊಂದಬೇಕಾಗಿರುವದು ಇದಮ್ಮ ಸರ್ವರೂ ತಿಳಿದು ಅರಿಂತೆ ಅಚರಿಸಿ ಧನ್ಯತ್ಯರಾಗಲಿ

ಶ್ರೀ ಮಾರುಳೆರಾಜೇಂದ್ರ ಮಹಾಸ್ವಾಮಿಗಳ ಕೈಲಾಸಗಮನ

ಚಿತ್ರದುರ್ಗದ ಬೃಹತ್ಪೀಠಾಧ್ಯಕ್ಷ ಶ್ರೀಮನ್ನಿರಂಜನ ಶ್ರೀ ಜಯದೇವ ಮುರುಳೆರಾಜೇಂದ್ರ ಮಹಾಸ್ವಾಮಿಗಳು ಇದೇ ಅಕ್ಟೋಬರ ೨ ನೇ ತಾರೀಖು ಮಂಗಳವಾರ ಮಂಡದಲ್ಲಿ ದೇಗಿಸಾಜಾವ ೫ ಘಂಟೆಗೆ ಕೈಲಾಸವಾಸಿಗಳಾದರು ಆ ದಿವಸ ಮಹಾಸ್ವಾಮಿಗಳವರ ಶರೀರವನ್ನು ನಗರದಲ್ಲಿ ಮೆರವಣಿಗೆ ಮಾಡಲಾಯಿತು ಸಹಸ್ರಾರು ಜಪರು ಶ್ರೀಗಳವರ ಪಾರ್ಥಿವ ಶರೀರಕ್ಕೆ ಅಂತ್ಯಪ್ರಣಾಮಗಳನ್ನು ಸಲ್ಲಿಸಿದರು ಮರುದಿನ ಶ್ರೀಗಳವರ ಶರೀರವನ್ನು ಪಾನಂಡಿಗೆಗೆ ಸಾಗಿಸಿ ಅಲ್ಲಿ ಸಕಲ ರಾಜಮರ್ಯಾದೆಗಳೊಡನೆ ಸಮಾಧಿಮಾಡಲಾಯಿತು ಸಮಾಧಿಯಾಗುವ ವೇಳೆಯಲ್ಲಿ ವೈಮಾನಿಕರು ಪುಷ್ಪವೃಷ್ಟಿಯನ್ನು ಸುರಿಸಿದರು ಸಮಾಧಿಯಾಗುವ ಮುಂಚೆ ಬಾರಿ ೭೨ ತೋಪುಗಳನ್ನು ಹಾರಿಸಿ ಗೌರವವನ್ನು ಸಲ್ಲಿಸಿದರು

ಶ್ರೀಗಳವಾಸಿಗಳಾದ ಮಹಾಸ್ವಾಮಿಗಳವರು ೧೯೪೦ ರಲ್ಲಿ ಶ್ರೀಮಠದ ಉತ್ತರಾಧಿಕಾರವನ್ನು ಶ್ರೀಮನ್ಮಹಾರಾಜ ನಿರಂಜನ ಶ್ರೀ ಜಯಪ್ರಭವ(ಮುರುಳೆರಾಜೇಂದ್ರ ಮಹಾಸ್ವಾಮಿಯವರಿಗೆ ವಹಿಸಿಕೊಟ್ಟಿದ್ದಾರೆ

ಅತ್ಮವಿಚಾರಪತ್ರಿಕಾಸಂಪಾದಕರಿಗೆ ಹಂಚಿವಿಂತಶಿಸ್ಯನ ಮೊಲಿಕಾಸನಮರ್ಪಣೆ

ಮೈಸೂರಿನ ಅತ್ಮವಿಚಾರ ಪತ್ರಿಕಾಸಂಪಾದಕರಾದ ಶ್ರೀ ಎಂ ಎಲ್ ನಾಗಣ್ಣನವರು ತಮ್ಮ ೭೨ ವರ್ಷಗಳ ಕಾಲಾವಧಿಯಲ್ಲಿ ದೊರಕಿಸಿದ ಅತ್ಮವಿದ್ಯಾಪ್ರಭಾವವನ್ನು ತಮ್ಮ ಪತ್ರಿಕೆಯ ಮೂಲಕ ಆರು ವರ್ಷಗಳಿಂದ ವೀರ ಶೈವ ಸಮಾಜದಲ್ಲಿ ಹರಡಿಸುವರ ಫಲವಾಗಿ ನಾನಾ ಮೂಲೆಗಳಿಂದ ಬರುತ್ತಿರುವ ಟೀಕಾತ್ಮಕ ಲೇಖನಗಳನ್ನು ನೋಡಿ ಈ ಕೆಳಕಂಡ ೩೫ ಪ್ರಶ್ನಮಾಲಿಕೆಯನ್ನು ಅವರಿಗೆ ಒಪ್ಪಿಸಲಿಯಸುತ್ತೇನೆ ಅದ್ಯೆಷ್ಟರೆಯರೂ, ಅಹಂಬ್ರಹ್ಮಿಗಳೂ, ತತ್ವಜ್ಞಾನಿಗಳೂ ಆದ ಅವರು ಇದನ್ನು ಪ್ರೀತಿಯಿಂದ ಸ್ವೀಕರಿಸಿ ಉತ್ತರಿಸಲಿ

ಪ್ರಶ್ನೆಗಳು

(೧) ಮಹಶ್ಯೆಯರೇ? ನೀವು ಪ್ರಕಟಿಸುತ್ತಿರುವ ಅತ್ಮವಿಚಾರಪತ್ರಿಕೆಯ ಗುರಿಯೇನು? ಅತ್ಮವಿಚಾರದ ಗುರಿ ಇಟ್ಟುಕೊಂಡಿದ್ದರೆ ಸಂಸಾರದ ವಿಷಯಗುಗಳಿಗೆ ಗಮನವಕೆಕೆ?

(೨) ಅತ್ಮವಿಚಾರವೆಂಬುವದು ವೇದ ಸಾರವೋ ಅಥವಾ ವೇದಾಂತಸಾರವೋ?

(೩) ಈ ನಿಮ್ಮ ಅತ್ಮವಿಚಾರವು ಇಡೀ ಮಾನವ ಜನಾಂಗಕ್ಕೆ ಸಂಬಂಧಿಸಿರುವುದೋ ಅಥವಾ ವೀರಶೈವ ಜನಾಂಗಕ್ಕೆ ಸಂಬಂಧಿಸಿರುವುದೋ?

(೪) ಇಡೀ ಮಾನವವರ್ಗಕ್ಕೇ ಸಂಬಂಧಿಸಿದ್ದರೆ ಶ್ರೀರಂಗಮೃತ್ಯಪ್ಪರಮಹಂಸರಿಂತೆ ಸ್ವಾಮಿ ವಿವೇಕಾನಂದರಿಂತೆ ಸಮತಾಭಾವನೆಯಿಂದ ಅತ್ಮವಿಚಾರ ಒರೆಯುವ ಬದಲು ಒಂದು ಸದ್ಗಾಜದವರನ್ನು ಹೀಯಾಳಿಸಿ ಒರೆಯುತ್ತಿರುವುದು ವಿವೇಕಯುತವೇ ಹೇಗೆ?

(೫) ವೀರಶೈವರಾದವರಾಗಿ ಬರೆಯುತ್ತಿದ್ದರೆ ಆ ಮತದ ಯಾವ ಗ್ರಂಥವನ್ನು ಆಧಾರವಾಗಿಟ್ಟುಕೊಂಡಿದ್ದೀರಿ?

(೬) ನೀವು ಅಲ್ಲಲ್ಲಿ ಆಧಾರವಾಗಿಟ್ಟುಕೊಂಡಿರುವ ಸಿದ್ಧಾಂತಶಿಖಾಮಣಿ ಗ್ರಂಥವು ವೇದಸಾರವೊ ವೇದಾಂತ ಸಾರವೋ?

(೭) ವೇದಸಾರವೆಂದು ಹೇಳಿದ ಪಕ್ಷದಲ್ಲಿ ನಿಮ್ಮ ಅತ್ಮವಿಚಾರದ ಗತಿಯೇನು? ವೇದಾಂತಸಾರವೆಂದು ಹೇಳಿದಪಕ್ಷದಲ್ಲಿ ವೀರಶೈವ ಧಾಮ್ಯಕಾರ ಸಿದ್ಧಾಂತ ಮತ್ತು ವೀರಶೈವಾಗಮೋಕ್ತ ಆಚರಣೆಗಳನ್ನು ಹೇಗೆ ಸಮಜ್ಞಸಯಿಸುವಿರಿ?

(೮) "ಬ್ರಹ್ಮ ಸತ್ಯಂ ಜಗನ್ಮಿಥ್ಯೆ" ಎಂದು[ಹೇಳುವ ಶ್ರೀಮತ ನಿಮ್ಮ ಅತ್ಮವಿಚಾರವು ಪತ್ರಿಕಾರೂಪವನ್ನು ಧರಿಸಿ ಜಗತ್ಪತ್ಯೆ ಸಂಚರಿಸುತ್ತಿರುವುದು ಸತ್ಯವೊ ಮಿಥ್ಯವೋ? ಸತ್ಯವಾದರೆ ನಿಮ್ಮ ಮೇಲ್ಕಂಡ ಸಿದ್ಧಾಂತದ ಗತಿಯೇಷ್ಟು? ಮಿಥ್ಯವಾದರೆ ನಿಮ್ಮ ಪತ್ರಿಕಾವ್ಯಾಪಾರದ ಗತಿಯೇಷ್ಟು?

(೯) ನೀವು ವೀರಶೈವರೇ? ಹಾಗಿದ್ದರೆ ಯಾವ ಗುಂಪಿಗೆ ಸೇರಿದವರು?

(೧೦) ಮೊದಲಿಂದ ಐಂದ ನಿಮ್ಮ ವಂಶಗುರು ಗಳು ಯಾರು? ನಿಮ್ಮ ಗೋತ್ರ[ಸೂತ್ರಗಳ್ಯಾವುವು?

(೧೧) ನಿಮಗೆ ಚಕ್ಕಂದಿಪಕ್ಷಿ ಪಡೆದ ಲಿಂಗಧಾರಣ ದೀಕ್ಷೆಯು ಯಾರಿಂದ ಆಯಿತು ಸ್ವೀಕರಿಸಿದ್ದು?

(೧೨) ನಿಮ್ಮ ೨೦ ನೇ ವಯಸ್ಸಿನಲ್ಲಿ ಮುಂತ್ರೀಪಡೆ ದೇಶಮಾಡಿದ ಶ್ರೀ ಚಿಕ್ಕವೀರದೇಶಿಕೇಂದ್ರಸ್ವಾಮಿಗಳ ಗೋತ್ರ[ಸೂತ್ರಗಳ್ಯಾವುವು, ಮುಂದೆ ಇವರಿಂದ ತತ್ತ್ವೋಪದೇಶವು ನಿಮ್ಮ ಎಷ್ಟನೇ ವರ್ಷದಲ್ಲಿ ಆಯಿತು?

(೧೩) ನಿಮಗೆ ಚಿಕ್ಕಂದಿನಲ್ಲಿ ಲಿಂಗಧಾರಣ ದೀಕ್ಷೆಯೂ ೨೦ ವರ್ಷ ಆದ ಮೇಲೆ ಮುಂತ್ರೋಪದೇಶವೂ ನಡೆದುದು ಯಾವ ಧರ್ಮಪದ್ಧತಿಯು ಇದು ವೀರಶೈವಪದ್ಧತಿಯೆಂದರೆ ಯಾವ ಗ್ರಂಥದಲ್ಲಿ ಉಕ್ತವಾಗಿರುವುದು,

(೧೪) ಸಿದ್ಧಾಂತಶಿಖಾಮಣಿಯ ೬ ನೇ ಪರಿಚ್ಛೇದದ ೧೪ ೧೯, ೨೦ ನೇ ಪದ್ಯಗಳಲ್ಲಿ ಮುಂತ್ರೋಪದೇಶ ಶ್ರವಮವೂ ೨೧, ೨೨, ೨೩, ೨೪ ನೇ ಪದ್ಯಗಳಲ್ಲಿ ಲಿಂಗ ಧಾರಣಕ್ರಮವೂ ಏಕಕಾಲದಲ್ಲಿ ನಡೆಯುವಂತೆ ವಿಧಿಸಿರುವಾಗ, ನಿಮಗೆ ೩೦ ವರ್ಷಗಳ ಅಂತರವಾಗಿರುವುದು ನಿಮ್ಮ ಕಪ್ಪೊ ಅಥವಾ ಸಿದ್ಧಾಂತಶಿಖಾಮಣಿಯ[ಪ್ಪೊ?] ವಿಕಲಪಡಿಸಿರಿ

(೧೫) ನೀವು ಮನಸಾ ಒಪ್ಪಿಕೊಂಡಿರುವ ಸಿದ್ಧಾಂತ ಶಿಖಾಮಣಿಯರೀತ್ಯಾ ಲಿಂಗಧಾರಣಕ್ಕೆಮುಂಚೆ ಮುಂತ್ರೋಪದೇಶವೂ ನಿಮಗೆ ಅನ್ವಯಿಸದೆ ಐಂದಿರುವುದರಿಂದ ನೀವು ಧರಿಸಿರುವ ಲಿಂಗವು ನೀವು ಹೇಳುತ್ತಿರುವಂತೆ ಪರಮಿಟ್ಟಿನ ಲಿಂಗವಾಗಿರಬಹುದೆಂದು ವಾಚಕರು ಪಹುವ ಅಭಿಪ್ರಾಯಕ್ಕೆ ಸಮಾಧಾನಕೊಡಿರಿ

(೧೬) ಪರಮಪವಿತ್ರವಾದ ವೀರಶೈವಮತವು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾಗಿ ಅನಾದಿಕಾಲದಿಂದ ನಡೆದುಬಂದಿರುವದೆಂದು ನೀವೇ ಬರೆಯುತ್ತೀರಿ, ಆಲ್ಲದೆ ಅದೇ ಮತಕ್ಕೆ ಗಂಡು ಹೆಣ್ಣಿನ ಜೋಡಿಗಳಾಗಿ ಕಲ್ಪಿಸಿದ ಒಂದು ಪಂಗಡವೆಂದು ಹೇಳುತ್ತೀರಿ, ಹೀಗೆ ಭಿನ್ನ ಭಿನ್ನವಾಗಿ ಹೇಳುತ್ತಿರುವ ನಿಮ್ಮಲ್ಲಿ ವೀರಶೈವತ್ವವೇ ಇಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ, ಇದಕ್ಕೆ ನಿಮ್ಮ ಸಮಾಧಾನವೇನು?

(೧೭) ಸಿದ್ಧಾಂತಶಿಖಾಮಣಿಯು ವೀರಶೈವರಿಗೆ ಪವಿತ್ರಗ್ರಂಥವೆಂದು ಒಪ್ಪುತ್ತೀರಿ ಆದರೆ ಆದರಲ್ಲಿ ಉಕ್ತ ಗಳಾದ ಆಪ್ಯಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಅವಾರ್ಥದಲ್ಲಿ ವೈಯುಕ್ತೀರಿ ಇದಮ್ಮ ನೋಡಿದರೆ ಇದು ನಿಮ್ಮ ಸ್ವಂತ ಜ್ಞಾನದ ವಿಷಯವಾಗಿರದೆ ನೀವು ಯಾರೋ ಧರ್ಮದ್ರೋಹಿಗಳ ಕೈವಾಡದಲ್ಲಿ ಸಿಕ್ಕಂತೆ ಭಾಸವಾಗುತ್ತದೆ, ಇದು ನಿಜವೇ?

(೧೮) ನೀವು ಚಿಕ್ಕಂದಿನಲ್ಲಿ ಅದ್ವೈತ ಸಂಗದಲ್ಲಿಯೇ ಬೆಳೆದು ಐಂದುದರಿಂದ ಕಾಮಾಲೆರೋಗದವಳಿಗೆ ಭೂಮಿ ಯೆಲ್ಲಾ ಹಳದಿಯಾಗಿ ಕಾಣುವಂತೆ ನಿಮಗೆ ವೀರಶೈವ ಮತವು (ಶಕ್ತಿವಿಶಿಷ್ಟಾದ್ವೈತವು) ಅದ್ವೈತವಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ ಎಂದು ಸಮಾಜವು ಅಭಿಪ್ರಾಯ ಪಡುತ್ತದೆ, ಇದು ನಿಜವೇ?

(೧೯) ಕರ್ಮಜ್ಞಾನಸೋಪಧಕಗಳಾದ ರೇಣುಕಗೀತೆ (ಸಿದ್ಧಾಂತಶಿಖಾಮಣಿ) ಭಗವದ್ಗೀತೆಗಳು ಜಗತ್ತಿಗೆ ಮಾಹ್ಯಗಳಾಗಿ ಮೆರೆಯುತ್ತಿರುವಾಗ ಕರ್ಮರಹಿತವಾದ ನಿಮ್ಮ ಅತ್ಮವಿಚಾರಗತಿಯು ಪ್ರಪಂಚಕ್ಕೇ ವಿರೋಧ ವೆಂದು ವಾಚಕರ ಅಭಿಪ್ರಾಯವಾಗಿದೆ ಇದಕ್ಕೆ ಸಮಾಧಾನ ಕೊಡಿ?

(೨೦) ನಿಮಗೆ ತತ್ತ್ವೋಪದೇಶ ದೊರೆತ ಬೆಂಗಳೂರಿನ ಶಿವಶಾಸ್ತ್ರಿಯವರು ಸ್ವಗತವೆಂದು ಹೆಸರಾಗಿತ್ತು. ಅದುದರಿಂದಲೇ ನಿಮ್ಮ ತತ್ತ್ವಜ್ಞಾನವು ಅತ್ಯು ದೆಲೆಯುಳ್ಳದ್ದಾಗಿದೆ ಇದು ನಿಮಗೆ ಎಲ್ಲಿ ಹೇಗೆ ದೊರೆಯುತು ವಿವರಿಸಿರಿ?

(೨೧) ಈ ತತ್ತ್ವೋಪದೇಶಮಾಡಿದ ಗುರುಗಳ ಮಟ ಪರಿಚಾರಕ್ಯಾಗಿ ದಾಸಿ, ಮತಧೇವರಿಲ್ಲದೆ ಮುನ್ನೂಲ್ಲು ಗಳಗೋಚ್ಯರ ಪತ್ರಿಕೆ ಪ್ರಚಲಿಸುತ್ತೇನೆಂದು ಪ್ರಚಾರ ಮಾಡಿ ಒಂದೇಒಂದಾದ ವೀರಶೈವಮತಪತ್ರಿಕೆಯನ್ನು ಹಳಿಯು ತ್ತಿದ್ದೀರಿ, ಇದರಲ್ಲಿ ನಿಮ್ಮ ಹಾಗು ನಿಮ್ಮ ಗುರುಗಳ ಉದ್ದೇಶವೇನು?

(೨೨) ಈ ನಿಮ್ಮ ಅತ್ಮಜ್ಞಾನ ತತ್ತ್ವೋಪದೇಶವನ್ನು ಇಷ್ಟಸ್ಥೇ ಫಿಲ್ಲಿಸಿ ಬೇರಿಧಿಕಾರಿಗಳಿಗೂ, ಭಂಗಿಸೇವರುವ ವರಿಗೂ, ಬಾವಾಜೈರಾಗಿಗಳಿಗೂ ಉಪದೇಶಮಾಡಿ ನಿಮ್ಮ ಅಜ್ಞಾತ್ಮಜ್ಞಾನವನ್ನು ಮುಂದುವರಿಸಿರಿಂದು ಜನರು ಅಪೇಕ್ಷಿಸುತ್ತಾರೆ ಅವರಿಗೆ ಸಮಾಧಾನ ಕೊಡಿರಿ.

(೨೩) ವೀರಶೈವನುಷ್ಠಮವನ್ನೂ ಗುರು ಲಿಂಗ-ಜಂಗಮ ಮಾಡಿ ಅಜ್ಞಾನರಾಣಗಳನ್ನೂ ಹುಚ್ಚಿಗಳಾದಿಯಾಗಿ ಸಕಲರೂ ಕೊಂಡಾಡುತ್ತಿರುವಾಗ ಇದು ಧರಣಿಮಂಡಲದಲ್ಲಿ ಪ್ರಸಿದ್ಧವಾಗಿರುವಾಗ ವೀರಶೈವಮತಕ್ಕೆ ಹಂಗಡ ವೆಂದೂ ಗುರು ಕಟ್ಟಳೆ ಪರ್ಮಟ್ಟುದಾರರೆಂದೂ ಲಿಂಗ ಕಟ್ಟುವ್ಕೆ ಗುರುತು ಎಂದೂ ಅಸಾರ್ಥಗಳನ್ನು ಕಲ್ಪಿಸಿ ಬರೆದಿರುವುದು ನಿಮ್ಮ ಪರಬ್ರಹ್ಮದ ಆತ್ಮಭವದ ಫಲವೋ? ಅರಿಶಾಲದ ನಿಮ್ಮವೇದಾಂತಕ್ಕೆ ಕೊಟ್ಟ ಹುಚ್ಚು ಪ್ರಶ್ನೆಗ ಆತೀವಾದ ಫಲವೋ? ಉತ್ತರಿಸಿರಿ

(೨೪) ವೀರಶೈವರು ಮಠಾಚಾರಿಗಳಾದ ಅತ್ಮಮತೀ ಯರೊಡನೆ ಸಹಭೋಜನ ಮಾಡುತ್ತಾರೆಂದು ಬರೆದಿರು ವಿರಿ? ಜಾತಿ ಮತಾಭಿಮಾನದಿಂದ ದೂರಾದ ವೇದಾಂತ ದಲ್ಲಿ ಅತ್ಮಮತಗಳನ್ನು ಹೆಕ್ಕುಬಾರದೆಂದು ಉತ್ತಮ ಗಿರುವಾಗ ಆ ವೇದಾಂತದ ಭಯವಿಲ್ಲದೆ ಸರಕಾರದ ಭಯವಿಲ್ಲದೆ ಎರಡನೇ ಮತೆಗಳಿಗೆ ದುರಾಚಾರಿಗಳೆಂದು ಉಪಯೋಗಿಸಿರುವುದು ನ್ಯಾಯವೇ ಹೇಗೆ?

(೨೫) ಅನೇಕ ವೀರಶೈವ ಮಠಾಧಿಪತಿಗಳು ಧನ ಸಂಗ್ರಹಕ್ಕಾಗಿ ರಾಜಕೀಯದ ಸ್ವಾರ್ಥಸಾಧನೆಗಳಾಗಿ ದುರಾಚಾರಿಗಳಾದ ಅತ್ಮಮತೀಯರಿಗೆ ಬಲಾತ್ಕಾರದಿಂದ ಲಿಂಗಧಾರಣೆಮಾಡಿಸಿದ್ದಾರೆ ಎಂದು ಬರೆದಿರುವಿ ಅಂಥ ಮಠಾಧಿಪತಿಗಳು ಯಾರೆಂಬುದನ್ನೂ ಪ್ರತ್ಯೇಕವಾಗಿ ಸೂಚಿಸದೆ ಎಲ್ಲಾ ಮಠಾಧಿಪತಿಗಳಿಗೆ ಅನ್ವಯಿಸುವಂತೆ ಬರೆದು ಮತಧರ್ಮವಿಚಾರದಲ್ಲಿ ಕ್ರಾಂತಿಯನ್ನು ಹುಟ್ಟಿಸಿದ ಅಪಾದನೆಗೆ ನೀವು ಅರ್ಹರಲ್ಲವೇ ಹೇಗೆ?

ನೀವು ಬರೆಯುತ್ತಿರುವ ಪ್ರತಿಯೊಂದು ವೇದಾಂತ ವಿಚಾರದಲ್ಲೂ ಪಾವು ಹಗ್ಗದ ದೃಷ್ಟಾಂತ ಕೊಡುತ್ತಿರುವು ದನ್ನು ನೋಡಿದರೆ ಪಾವಿನ ಕೆಸರಿನಲ್ಲಿರುವ ನಿಮ್ಮ ನಾವಾಸಕ್ತಿಯವು ಜಗತ್ಪಿಸಲ್ಲಿ ಬೆಳಗಲೆಂಬುದೇ ಆಗಿರ ಬಹುದು, ನಾಗಪರ್ಯಂಕಶಾಯಿಯಾದ ನಾರಾಯಣ ನಿಗೂ ನಾಗಭೂಷಣನಾದ ಶಂಕರನಿಗೂ ನಿಮ್ಮ ಭಯ ವಿರುವಾಗ ಮಾಮವರಲ್ಲಿ ನಿಮ್ಮ ಭಯ ಎಷ್ಟಿರಬೇಕೆಂಬು ದನ್ನು ಪೇರೆ ಹೇಳಬೇಕಾಗಿಲ್ಲ ಅದಕ್ಕಾಗಿಯೇ ಎಲ್ಲ ಪಂಡಿತರೂ ಸ್ವಾಮಿಗಳೂ ನಿಮ್ಮ ಅರ್ಧಟಿಕ್ಕೆ ಪ್ರತಿವಾದಿ ಸದೇ ಮೌನತಾಳೆರುವರು ಕೈಲಾಸದ ಮೇಲೆ ಹಾವಳಿ ನಡೆಸಿದ ಭಸ್ಮಾಸುರನಂತೆ ವೀರಶೈವ ಸಾಮ್ರಾಜ್ಯದ ಮೇಲೆ ನಿಮ್ಮ ಹಾವಳಿ ನಡೆದಿರುವದು, ಈ ಹಾವಳಿಯು ಬೇಗ ಶಾಂತವಾಗಿ ಧರ್ಮವು ಸ್ಥಿಮಿತಗೊಳ್ಳಲೆಂದು ಪರ ಶಿವನನ್ನು ಪ್ರಾರ್ಥಿಸುತ್ತೇನೆ

ನೀಲ್ಕಂಠ ಎಲ್ಲ ಪ್ರಶ್ನೆಗಳಿಗೆ ತಮ್ಮಿಂದ ಸಮಾಧಾನ ದೊರೆತು ಇವತ್ತೆಯಲ್ಲಿರುವ ಸಂಶಯ ಪೂರಾರೀತಿಂದು ನಿರೀಕ್ಷಿಸುತ್ತಿರುವ,

ಚಂದ್ರಶೇಖರಸ್ವಾಮಿ, ಕುಪ್ಪಗಲ

ಮರಾಧೀಶರ ಅಧಿವೇಶನ ಮುಂದೆ

ಇದೇ ಅಕ್ಟೋಬರ್ ತಾ॥ ೧೭, ೧೮ ರಲ್ಲಿ ಕಂದವಾಡಿಗಯಲ್ಲಿ ನಡೆಯುವೇಕಾಗಿರುವ ವೀರಶೈವ ಮಹಾಧೀಶರ ಅಧಿವೇಶನವು ಅಲ್ಲಿಯ ವಿಶೇಷ ಮಳೆಯಿಂದ ಸಾಗಿ ಸಂಪರ್ಕಗಳು ಏಂತುಹೋದ ಮೂಲಳೆ ಅಧಿವೇಶನ ವನ್ನು ಪೇರಿಗೆಗೆ ಮುಂದುವರಿಸಲಾಗಿದೆ

ಸ್ವಾಗತಸಮಿತಿ ಕಾರ್ಯದರ್ಶಿ, ಕಂದವಾಡಿ.

ಅಶ್ವತ್ಥಸ್ತವಃ

ಶಾ॥ ಶ್ರೀ ಸೂಗೂರುಮರಾಧಿಪೋಜನಿಪುರಾ ನಾಲ್ವಾರಗ್ರಾಮೆತಿಖ್ಯಾ । ಬಭ್ಯಾರ್ಯಾದಿಪುರೇಸ್ವಧೀತ್ಯ ಮಹತೀಃ ಸಾಹಿತ್ಯವಿದ್ಯಾಂ ಪುರಾಮ್ ॥ ತಾತೀಂ ಪ್ರಾಪ್ಯ ಚಕಾರ ಶಾಸ್ತ್ರಸರಣೆಯಂ ಶ್ರದ್ಧ್ಯಯಾಧೀಮಣಿ । ಸ್ವಸ್ಯೈ ಶ್ರೀಜಗದೀಶಶಾಸ್ತ್ರಿ ಗುರವೇ ಯಚ್ಚಾಮಿಬಾಷ್ಪಾಂಜಲಿಮ್ ॥೧॥

ಶಾ॥ ಯಸ್ಸಾಹಿತ್ಯಸುಧಾನಿಧೇಃ ಶುವಿಮಲೋರಾ ಕೇಂದುರಾಸೀತ್ಸದಾ । ಯಸ್ತರ್ಕಾದಿಮಹಾರ್ಣವಶಾಸ್ತ್ರವಿಷಯಾನ್ ಸಂವೇದ ನಿಸ್ಸಂಶಯಮ್ ॥ ಗ್ರಂಥಾನ್ ಧರ್ಮವಿಬೋಧಕಾನ್ ಪರತರಾನ್ ಸಂಶೋಧಯಾಮಾಸಯ। ಸ್ವಸ್ಯೈ ಶ್ರೀಜಗದೀಶಶಾಸ್ತ್ರಿ ಗುರವೇ ಯಚ್ಚಾಮಿ ಬಾಷ್ಪಾಂಜಲಿಮ್ ॥೨॥

ಶಾ॥ ಸಾನಾಂದೇಶ ಸಮಾಗತಾ ಗುರುವರಾ ಯಸ್ಯಾ ದ್ಯುರೋಳೇಧರೆ । ವಿದ್ಯಾಂ ಹೃದ್ಯತಮಾಂತಧಾಶುಕವಿಶಾಂ ಧರ್ಮಾಂ ಪರಂ ವೈದಿಕಮ್ ॥ ಕೀರ್ತಿಂ ಪ್ರಾಪಮಹಾತ್ಮನಾಂಚ ಚರಿತಾನ್ಯಾಲಿಖ್ಯಯೋಭಕ್ತಿತಃ । ತಸ್ಯೈ ಶ್ರೀಜಗದೀಶಶಾಸ್ತ್ರಿ ಗುರವೇ ಯಚ್ಚಾಮಿಬಾಷ್ಪಾಂ ಜಲಿಮ್ ॥೩॥

ಶಾ॥ ಆಸೀತ್ಸೌನ್ನಲಪತ್ನಿನೆ ಗುರುಕುಲೇ ಯೋ ಧ್ಯಾಪಕಃ ಸಂತತಮ್ । ಪ್ರೀತ್ಯಾಪಾಲಯತಶ್ಚ ತಸ್ಯ ನಿಯತಂ ಪುತ್ರಾವಿವಸಾದರಮ್ ॥ ಬಕ್ತ್ಯಾಯ ಪರಯಾ ಶಿವಾರ್ಚನರಯೋ ಮೋಕ್ಷಾರ್ಥಸಂಸಿದ್ಧಯೇ । ತಸ್ಯೈ ಶ್ರೀಜಗದೀಶಶಾಸ್ತ್ರಿ ಗುರವೇ ಯಚ್ಚಾಮಿಬಾಷ್ಪಾಂ ಜಲಿಮ್ ॥೪॥

ಅನುಷ್ಟುಪ್ ॥ ಗುರವೇ ಜಗದೀಶಾಯ ಮುಕ್ತೆ ಸಂಪತ್ತ್ಯಕಾರ್ತೇ ಶಾಸ್ತ್ರತಂ ಸುಖಿನಂಧಾನಂ ಕರೋತು ಪರಮೇಶ್ವರಃ ॥

ಸಮರ್ಪಕಃ
ರಾವಲಬಿಡಿಕೆ ಬೃಹನ್ಮಲ್ಲೀಯ
ಸದಾಶಿವಾಶಾಸ್ತ್ರಿಗಳಿ, ಕಾವ್ಯಶೇದ ಂ

ಮೋಕ್ಷಸಭೆ ಶ್ರೀಕ್ಷೇತ್ರ ಕಾಶೀ

ತಾ॥ ೬-೧೦-೩೬ ರಂದು ಶಿವಾಧೀನರಾದ ಜ್ಞಾನ ವೃದ್ಧರೂ, ವಯೋವೃದ್ಧರೂ ವೀರಶೈವ ಸಮಾಜೋದ್ಧಾರಕರೂ ಆದ ಕುಲಪತಿ ಪಂ॥ ಶ್ರೀ ಜಗದೀಶ ಶಾಸ್ತ್ರಿಗಳವರ ಆತ್ಮಶಾಂತಿ ಪ್ರೀತ್ಯರ್ಥ ಪ್ರಾರ್ಥನಾ ಸಭೆಯು ತಾ॥ ೫-೧೦-೩೬ ರಂದು ವೀರಶೈವ ವಿದ್ವತ್ಸಂಘದಲ್ಲಿ ಪಂ॥ ರಾಜೇಶ್ವರಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡದು ಪಂಡಿತರ ಬಗ್ಗೆ ಸಂಘದ ಸದಸ್ಯರಲ್ಲರೂ ಶ್ರದ್ಧಾಂಜಲಿಯನ್ನು ಅರ್ಪಿಸಿದಂತರ ಅಧ್ಯಕ್ಷರ ಭಾಷಣವಾಗಿ ಬಹುಮತದಿಂದ ಕೆಳಗೆ ಕಾಣಿಸಿದ ರಠಾವು ಪಾಸಾಯಿತು

ರಠಾವು —ಸಾಹಿತ್ಯರತ್ನ, ಕುಲಪತಿ ಶಿವಾದ್ವೈತ ವಿದ್ಯಾವಿಭೂಷಣ, ಆಸ್ಥಾನಪಂಡಿತ, ಕವಿಕಂಠೀರವ, ಇತ್ಯಾದಿ ಬಿರುದಾಂಕಿತರಾದ ಪಂ॥ ಶ್ರೀಜಗದೀಶ ಶಾಸ್ತ್ರಿಗಳು ವೀರಶೈವ ಸಮಾಜದುದ್ಧಾರಕ್ಕಾಗಿ ಜಗ, ಸಂಸ್ಕೃತ ಸಾಹಿತ್ಯದ ಪ್ರಚಾರಕ್ಕಾಗಿ, ತಮ್ಮ ಸಮಗ್ರ ಜೀವನವನ್ನೇ ಮೀಸಲಾಗಿಟ್ಟು, ವೀರಶೈವ ಸಮಾಜದಲ್ಲಿಯ ಸಾವಿರಾರು ಜನ ವಿದ್ಯಾರ್ಥಿಗಳನ್ನು ಸಂಸ್ಕೃತ ಪಂಡಿತರನ್ನಾಗಿ ಮಾಡಿದ್ದೆ ವೀರಶೈವ ಸಮಾಜದೇಳಿಗಾಗಿ ತ್ರಿವಿಸಿದ್ದು, ವೀರಶೈವ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂದಾದ್ದಾಗಿದೆ ಶ್ರೀ ಪಂಡಿತರ ಶಿವೈಕ್ಯದಿಂದ ಸಂಸ್ಕೃತ ಸಾಹಿತ್ಯದಲ್ಲಯು ವೀರಶೈವ ದಿಗ್ವಿಜಯ ಪಂಡಿತರ ಅಭಾವವಾಗಿದಿಯಲ್ಲದು, ವೀರಶೈವ ಸಮಾಜಕ್ಕೆ ಅಪಾರವಾದ ಹಾನಿಯಾಗಿದೆ

ಶ್ರೀ ಪಂಡಿತರ ಆತ್ಮಕ್ಕೆ ಪರಶಿವನು ಶಾಂತಿಯನ್ನೀಯಲಿ ಎಂದು ಈ ಸಭೆಯು ಪ್ರಾರ್ಥಿಸುತ್ತಲಿದೆ

ಕಾರ್ಯದರ್ಶಿ
ನಾಗನಾಥಕರ್ಮಾ

ಮೈಸೂರಿನಲ್ಲಿ ದಸರಾ ಉತ್ಸವ ಆರಂಭ

ಹತ್ತು ದಿನಗಳ ವೈಭವಯುತ ದಸರಾ ಸಮಾರಂಭಗಳು ಇಂದು ನೇ ತಾರೀಖಿನಿಂದ ಇಲ್ಲಿನ ಅರಮನೆಯಲ್ಲಿ ಆರಂಭಗೊಂಡವು ರಾಜಪ್ರಮುಖರು ಮಂಗಳ ಸ್ನಾನಾನಂತರ ರಾಜಮನೆತನದ ಗಣ್ಯರೆ ಮತ್ತು ದೇವತೆ ಚಾಮುಂಡಾಂಬೆಯ ಸನ್ನಿಧಾನವನ್ನು ಸಾಂಗೋಪಾಂಗವಾಗಿ ಮುಗಿಸಿ ಸಾಂಪ್ರದಾಯಿಕ ಹಿಂದೂ ರಾಜರು ಉಡುಪು ಧರಿಸಿದ್ದ ರಾಜಪ್ರತಿನಿಧಿ ದರ್ಬಾರ್ ಅಂಗಳಕ್ಕೆ ಆಗಮಿಸಿದರು ಅಲ್ಲಿ ನವರಾತ್ರಿಗಳಿಗೂ ಮತ್ತು ಸಿಂಹಾಸನಕ್ಕೂ ಪೂಜೆ ಸಲ್ಲಿಸಿ ಸಿಂಹಾಸನಾರೋಹಣ ಮಾಡಿದರು. ಅರಮನೆ ತೋಪುಹಾರೆಯಲ್ಲಿ ೨೧ ಕುಶಾಲ ತೋಪುಗಳು ನಿನಾದಗೈದವು. ಪಟ್ಟದಾನೆ ಅಂಗಳಕ್ಕೆ ಮೆರವಣಿಗೆಯಲ್ಲಿ ಬಂದು ರಾಜಪ್ರಮುಖರಿಗೆ ನಮಸ್ಕರಿಸಿತು

ಸುಮಾರು ೫೦೦ ಮಂದಿ ದರ್ಬಾರಿಗಳು ಸಭೆಗೆ ಆಗಮಿಸಿದ್ದರು. ಸಂಸ್ಥಾನದ ಸಚಿವರುಗಳು, ಹೈಕೋರ್ಟ್ ನ್ಯಾಯಾಧೀಶರುಗಳು, ಶಾಸನ ಸಭಾ ಅಧ್ಯಕ್ಷರುಗಳು, ನಾನಾ ಇಲಾಖಾ ಮುಖ್ಯಾಧಿಕಾರಿಗಳೂ ಪ್ರಮುಖರೂ ಆಹ್ವಾನಿತರಾಗಿದ್ದರು ಇವರು ರಾಜ ಪ್ರಮುಖರಿಗೆ ನಜರ್ ಒಪ್ಪಿಸಿದರು ಸಿಂಹಾಸನದಿಂದ ಕೆಳಕ್ಕಿಳಿಯುವ ಮುನ್ನ ರಾಜಪ್ರಮುಖರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರಿಗೆ ಹಾರ ಪತ್ತರು

ರಾಜಮನೆತನದ ಹೆಂಗಸರು ರಾಜಪ್ರಮುಖರಿಗೆ ನಜರ್ ಒಪ್ಪಿಸುವ ಜನಾನಾ ದರ್ಬಾರ್ ಸಹ ನಡೆಯಿತು

ಒಂದು ಗಂಟೆಕಾಲ ನಡೆದ ಈ ನೈಭವಯುತ ದರ್ಬಾರನ್ನು ಸಹಸ್ರಾರು ಮಂದಿ ಅರಮನೆ ಮುಂದಿನ ಮೈದಾನದಿಂದ ವೀಕ್ಷಿಸಿ ಆನಂದಿಸಿದರು

ಲಂಚನಿರೋಧದ ಬಗ್ಗೆ ಪಂಜಾಬ ಹೈಕೋರ್ಟ್ ಜಸ್ಟೀಸರ ಹೊಸಕ್ರಮ

ರಾಷ್ಟ್ರದ ಪ್ರಕಟಿಯೊಬ್ಬ ನೌಕರನ ಆರ್ಥಿಕಸ್ಥಿತಿಯನ್ನು ಹತ್ತು ಅಥವಾ ಹದಿನೈದು ವರ್ಷಕ್ಕೊಮ್ಮೆ ಪರಿಶೀಲಿಸಬೇಕು. ಆತನು ಅಪ್ರಮಾಣಿಕನೆಂದು ಕಂಡುಬಂದರೆ ಕೆಲಸದಿಂದ ತೆಗೆದುಹಾಕಬೇಕು

ಎಲ್ಲ ಸರಕಾರೀ ನೌಕರರು ತಮ್ಮ ಸ್ವತ್ತು ಪಿತ್ರಾರ್ಜಿತವಿರಲಿ ಸ್ವಾರ್ಜಿತವಾಗಿರಲಿ ಆ ಬಗ್ಗೆ ಪ್ರತಿವರುಷ ಪೇಳಿಕೆ ಕೊಡಬೇಕು ಅಕಸ್ಮಾತ್ ಯಾವನೊಬ್ಬನ ಆದಾಯದಲ್ಲಿ ಒಮ್ಮೆಲೇ ಜೆಟ್ಟಿಳವಾದರೆ ಅವನು ಸರಕಾರಕ್ಕೆ ಕಾರಣ ಕೊಡಬೇಕು ಈ ಬಗ್ಗೆ ಸ್ವಸ್ಥ ಹಾಗು ಪೂರ್ಣವಾದ ವಿವರಗಳನ್ನು ತಿಳಿಸದೆಯೋದಲ್ಲಿ ಮನ್ನಣಾ ನಾಮಕ್ಕೆ ಪಾತ್ರರಾಗುವುದು ಎಂಬ ಬಗ್ಗೆ ಪಂಜಾಬ ಹೈಕೋರ್ಟ್ ಜಸ್ಟೀಸ್ ಜಿ ಡಿ ಖೋಸ್ಲಾರವರು ಈ ಲಂಚನಿರೋಧಕ್ರಮವನ್ನು ಬಳಕೆಯಲ್ಲಿ ತಂದಿದ್ದಾರೆ

ಮನೋಹರವಾದ ಫೋಟೋಗ್ರಾಫುಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಎಂಭತ್ತು ಅಡ್ಡಿ ತಲೆಲೆಗಳೆಂದ ಕೂಡಿದ ಫೋಟೋ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ(ಸಾನಾವಿಧದುದ್ದ ಗಳಿಂದ ಮುದ್ರಿತವಮದು.)ಸೈಜು ೧೪×೧೦ ಬೆಲೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೊ (ಚಿಕ್ಕಸೈಜು)	೦—೦—೨
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಪೀಠಾಧಿಪತಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೧—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ರೂ೪	೦—೩—೦
" " " ಚಿಕ್ಕ ಸೈಜು ಬೆಲೆ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೨—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಪಂಕರಾಜಾಚಾರ್ಯರಿಗೆ ಚಂದ್ರಪಟ್ಟಿಕೇಲ್ಕ್ಷರಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಘ್ನೇಷ್ವರ ಸ್ವಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಶಾಕೀ ಜಗದ್ಗುರು ವೀರಭದ್ರಶಿವಾಚಾರ್ಯರುಮಹಾಸ್ವಾಮಿಗಳವರ ಫೋಟೋ (ನಾನಾವಿಧದುದ್ದ)	೦—೪—೦
ಶ್ರೀಶಾಶೀಜಗದ್ಗುರುಗಳಿಗೆ ಶ್ರೀವಂಶಾಪುರೀ ಜಗದ್ಗುರುಗಳು ತಿರೀಟಧಾರಣಮಾಡುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಸಿಂಹಾಸನಾಧಿಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೬
ಶ್ರೀಮದ್ರೇಣುಕಪೀಠ ಶಿಷ್ಟಾಧಿಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೬
ಶ್ರೀಮದುಜ್ಜಯಿನೀ ಸಿಂಹಾಸನಾಧಿಶ್ವರ ಸದ್ಧರ್ಮಪ್ರಭೆ ಶ್ರೀ ಶಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀಶಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತಮಾದುದು) ಚಿಕ್ಕಸೈಜು ಗಳ್ಳೆ	೦—೩—೦
ಪಂಡಿತ ಶ್ರೀಶಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತಮಾದುದು) ದೊಡ್ಡಸೈಜು ಗಳ್ಳೆ	೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸದ್ಧರ್ಮಿಯಶ್ರೀ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ...	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠವಲ್ಲಿ ಸ್ಥಾಪಿಸಲ್ಪಟ್ಟಿರುವ ವಿಲಾಸಾನಗಳು ...	೨—೪—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರಿಂದ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಿಭಾಷೆಯಲ್ಲಿದ್ದಿತು ಅದೆಷ್ಟೊ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯು ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಶಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತಾಪಾತ್ರರಾಗಿದ್ದಾರೆ. ಮೂರುನೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೋಹಕವಾದ ಮನೋಹರ ಭಾವಚಿತ್ರಗಳು ಹೊಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರಿ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ರ॥ ಮಹಾದೇವಯ್ಯನವರಿಂದ ಮುದ್ರಿಸಲ್ಪಟ್ಟಿರುತ್ತಾನಾವಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರು ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. ೨-೪-೦

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

Edited, Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysor

REGISTERED No. M. 2266 (ಶ್ರೀಗುರುಸ್ವಾಮಿ ಪಂಚಾಚಾರ್ಯಾಯ ಪ್ರಸೀದಂತು) REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಶೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಡಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಪಕರ್ । ಪಂಚಾಚಾರ್ಯಜಗದ್ಗುರೂತ್ತಮರನರ್ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏಕ ಪ್ರತಿಯ ಬೆಲೆ ೩ ರೂ.೧೦ ಆ.

ಸಂಪುಟ ೩೦] ಸೋಮವಾರ ತಾ॥ ೨೨ ನೇ ಅಕ್ಟೋಬರ್ ೧೯೩೬ [ಸಂಚಿಕೆ ೨೩

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಕಾರ್ಯದರ್ಶಿ ಜವಾಬ್ದಾರರಲ್ಲ ಎಂಬ ವಿಷಯವನ್ನು ದರೂ ಲಕ್ಷ್ಯವಲ್ಲಿಡಕೋರ್ಪ್ಪು —ಸಂ]

ಸಾದಪೂಜಾಮಹೋತ್ಸವ ಕೊಂಕನಹಳ್ಳಿ

ಶ್ರೀಮತ್ಪಂಚಾಲವಾಹಪರಶ್ರ ೧೦೭೮ ದುರ್ಮುಖಿ ಮ ಸಂವತ್ಸರದ ಮಿ॥ ಭಾದ್ರಪದ ಬಹುಳ ೯ ನೇವಾರ ದಿವಸ ಶ್ರೀ॥ ಷ॥ ಬ್ರ॥ ಶಾಶೀಕೇಶ್ವರ ಯೋಗಿಶಿವಾಚಾರ್ಯರು ಬೃಹನ್ಮಠ ಸಂಸ್ಥಾನ ಳಬೆಡ ಇವರು ಶ್ರೀ ಭೀಮಂಬಾ ಮೂಲಿಪಾಟೀಲ ॥ ಶೇಡಮ್ ಮುಕ್ಕಾವ, ಕೊಂಕನಹಳ್ಳಿ ಇವರ ೃಹಕ್ಕೆ ಅಶ್ಯಂತ ವಿಜೃಂಭಣೆಯಿಂದ ದಯಮಾಡಿಸಿ ದಿವಸ ಪೂಜೆಯನ್ನು ನಡಿಸಿದರು ಪ್ರತಿದಿನ ರುದ್ರಾಭಿಷೇಕ ಶ್ರೀ ರೇಣುಕಭಗವತ್ಕಾವಾಚಾರ್ಯರ ಸ್ವೀತ್ಯರ ಬಿಲ್ವಾರ್ಚನೆ ನಡೆದುದಲ್ಲದೆ ಕೊನೆಯ ! ಶ್ರೀ ವಿಶ್ವೇಶ್ವರ ಮಹೋತ್ಸವವು ನಡೆದು ಾರರು ಮಂದಿ ಗಣ್ಯಸಂತರ್ಪಣೆ ಸಾಯಂಕಾಲದ ಗೆ ನಡಿದು ರಾತ್ರಿ ೧೧ ಗಂಟೆಯಿಂದ ಇಂಪಾದ ಸೆ ಅಚಾರ್ಯರ ಜಯಜಯಕಾರಗಳೊಂದಿಗೆ ಾಕ್ಯಾಯಗೊಂಡಿತು ಮರುದಿವಸ ಸ್ವಾಮಿಗಳು ಶ್ವರ ಇಷ್ಟಾರ್ಥ ಪೂರ್ತಿಯಿಕೊಂಡು ಭಗವತ್ಕಾರ್ಯ ೀರ್ವಾದ ಪೆದಾಶಾ ಇರಲೆಂದು ಅಶೀರ್ವಾದ ಮಾಡಿ ್ಯ ಸಂಸ್ಥಾನ ಮಳಬೇಡಕ್ಕೆ ವಿಜಯಂಗೈಸಿದರು

ಗುರುಭಕ್ತ

ಪುರಾಣ ಪ್ರವಚನ ಸಮಾಪ್ತಿ ಮಹೋತ್ಸವ ಯಡಗೋಡ

ಧಾರವಾಡ ಜಿಲ್ಲಾ ಹಿರೇಕೇರೂರ ತಾಲೂಕ ಡಗೋಡ ಗ್ರಾಮದ ಗುರುಸೇವಾಧುರಂಧರ ಮಾನ್ ವೀರಪ್ಪ ವೀರಪ್ಪ ಬಣಕಾರ ಇವರ ಗೃಹ ಲ್ಲಿ ಏಸಿಕ ಅಮುಷ್ಮಿಕ ಸುಖ ಸೈಶ್ವರ್ಯಸ ಸಿದ್ಧ್ಯರ್ಥ ಗಿ ವೀರಶೈವ ಮಹಾಮತಾಚಾರ್ಯವರ್ಯ ಶ್ರೀ ದ್ಯರು ರೇಣುಕಾಚಾರ್ಯ ಭಗವತ್ಪಾದರವರ ಂಚಾಕ್ಷರ್ಯವಚನವು ಇದೇ ಭಾದ್ರಪದ ಶುಕ್ಲ ಚತುರ್ಥಿ ॥ ೮-೯-೧೯೩೬ ನೇ ಶನಿವಾರ ನೊದಲ್ಗೊಂಡು ರವಾಡ ಜಿಲ್ಲಾ ಸುಣಕಲ್ ಬಿದರಿ ಮರಾಧ್ಯಕ್ಷರಾದ ಾಸ್ತ್ರೈತವೇದಾಂತ ವಿದ್ವಾನ್ ವೇ॥ ಶ್ರೀ ಎಸ್ ್ ಗಂಗಾಧರಶಾಸ್ತ್ರಿಗಳು ಸಾಹಿತ್ಯಾಚಾರ್ಯ ಅವರ ಂಡಿತ್ಯಪೂರಿತವಾದ ಛಾನ ವಕ್ತೃತ್ವದಲ್ಲಿ ವೈಶಾ ೃತಾದಿ ಸರ್ವದರ್ಶನ ವಿಶೇಷಪೂರ್ವಕ ಅವಿಚ್ಛಿನ್ನ ಾದಿ ನಿರವೇರುತ್ತ ಬಂದು ಇದೇ ಭಾದ್ರಪದ ಬಿ ತ.ದಿಂತೆ ತಾ॥ ೩-೧೦-೩೬ ನೇ ಶುಕ್ರವಾರ ಸಮಾಪ್ತ ಿಶಿಷ್ಟವ್ಹದೆ ಶಮಂಗವಾಗಿ ಮಾಹೇಶ್ವರಾರಾಧನೆ ಶ್ರೀ ಪುಣ್ಯಪುರೋತ್ಸವ ಸಾಯಂಕಾಲಕ್ಕೆ ಕೇರ್ತನಾಲಂ ಕಾರ ವೇ॥ ಬ್ರ॥ ಶ್ರೀ ಕೊಟ್ಟೂರೇಶ್ವರಶಾಸ್ತ್ರಿಗಳು ಹಿರೇ ಮರ ಡಿ ಎಲ್ ಬಿ ಮೆಂಬರ್ ಧಾರವಾಡ ಅವರ ನವರಭರಿತ ಕೇರ್ತನೆಗಳು ನಡೆದು ವೆಂಕರ ಮಹಾ ಮಂಗಳಾರತಿ ಪ್ರಸಾದವಿನಿಯೋಗ ಇತ್ಯಾದಿ ಕಾರ್ಯ ಕಲಾಪಗಳನ್ನು ವಿಜೃಂಭಿಸಲಾಯಿತು ಈ ಶುಭ ಸಮಾರಂಭದಲ್ಲಿ ಸರ್ವ ಸದ್ಭಕ್ತರು ಭಾಗವಹಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾದರೆಂದು ತಿಳಿಸುವ,

ಯಡಗೋಡ ನಾಗರಿಕರು

ಶ್ರೀ ಮಹಾಗಣಾಧಿಪತಿ ವಿಸರ್ಜನಾಮಹೋತ್ಸವ ಸಾರೆಕೊಪ್ಪ

ಶಾರೀಕ ೧೯-೯-೩೬ ನೇ ದಿವಸ ಕುಪಗಡ್ಡಿ ಹೋಬಳಿ ಸಾರೆಕೊಪ್ಪದ ಗವರ್ಮೆಂಟ್ ಸ್ಕಾಧಮಿಕ ಶಾಲಾವಲ್ಲಿ ಮಹಾಗಣಪತಿ ವಿಸರ್ಜನಾಮಹೋತ್ಸವ ಕಾರ್ಯಕ್ಕೆ ವಿದ್ಯಾಭ್ಯಾಸದ ಇಲಾಖಾ ಆ॥ ಇನ್‌ಸ್ಪೆಕ್ಟರ್ ಸಾಹೇಬರಾದ ಎಂ ಮುರಿಗೇಪ್ಪರ್ಯಯವರು ಬಿ ಎಸ್ ಸಿ, ಬಿ ಟಿ, ಇವರು ದಯಮಾಡಿಸಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದನಂತರ ಶಾಲಾ ಹೆಡ್ಮಾಸ್ಟರ್ ಎಚ್ ಜಿ ಬಸವಕಟ್ಟಿಯವರು ಸ್ವಾಗತ ಭಾಷಣವನ್ನು ಮಾಡಿ ಪೂಮಾಲೆಯನ್ನ ಪಿಸಿದರು ಶಾಲಾ ಬಾಲಕಿಯ ರಿಂದ ದೇವತಾಪ್ರಾರ್ಥನೆಯಾಯಿತು ಅಧ್ಯಕ್ಷರಿಂದ ಸದರಿ ಗ್ರಾಮದ ಭಜನಾ ಸಂಘದ ಪರವಾಗಿಯೂ ಸಮಾಜಸೇವಾ ಪರವಾಗಿಯೂ ಕೆಲಸಮಾಡುತ್ತಿರುವ ಶ್ರೀ ಬಡಿಹಳ್ಳಿ ಹಾನು ಶ್ರೀ ಗುತ್ತೆಪ್ಪ ಇವರಿಗೆ ಬೆಳ್ಳಿ ಮೆಡ್ಡಲ್‌ಗಳು ಕೊಡಲ್ಪಟ್ಟವು ವೆಂಕರ ಅಧ್ಯಕ್ಷ ರವರು ಮಹಾವಿದ್ವಾಗಣಪತಿಯ ವಿಚಾರವಾಗಿ ಪ್ರೇಮಾ ದರನಾದ ಭಾಷಣವನ್ನು ಮಾಡಿದಮೇಲೆ ಮಹಾಗಣ ಪತಿಯಪ್ಪ ಪಾಲಕಿಯಲ್ಲಿ ಮೂರ್ತಗೊಳಿಸಿ ಉತ್ಸವ ದೊಡನೆ ಕೋಟಿದ ಕೆರೆಗೆ ಹೋಗಿ ಜಯಜಯಕಾರ ದೊಡನೆ ವಿಸರ್ಜನಾಕಾರ್ಯವನ್ನು ಪೂರ್ಣಗೊಳಿಸ ಲಾಯಿತು

ಕೆ ಎಮ್ ಶಿವಾನಂದಯ್ಯ

ನಿಜ್ಞಾಪನೆ

ಚಿತ್ರಮಟ್ಟೂರಿ ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀ ಗುರುದೇವ ಶಿವಾಚಾರ್ಯಸ್ವಾಮಿಗಳು ಆಯುನೇದಾ ಚಾರ್ಯ ಇವರು ನವಿಲಗುಂದರಲ್ಲಿ ಸ್ಥಾಪಿಸಿದ ಆಯು ರ್ವೇದ ಪವಾಪಾನೆಯ ಕಟ್ಟಡದ ೩ನೆಯ ವಾರ್ಷಿ ಕೋತ್ಸವವು ದಿನಾಂಕ ೬-೧೧-೩೬ ನೇ ಮಂಗಳವಾರ ದಿಂದ ದಿನಾಂಕ ೯-೧೧-೩೬ ನೆಯ ಶುಕ್ರವಾರದ ವರೆಗೂ ಜರಗುವದು. ಈ ಉತ್ಸವಕ್ಕೆ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರ ಮಹಿನಾಕಶಿವಾಚಾರ್ಯ ಸ್ವಾಮಿಗಳವರೂ ಇತ್ಯಾ ದಿಗೆ ಅನೇಕ ಭಾಗದ ಸ್ವಾಮಿಗಳವರೂ ಪಂಡಿತರೂ ಆಗಮಿಸುವರು ಉತ್ಸವದ ಪ್ರಾರಂಭದ ದಿನಾಂಕದಿಂದ ಮುಗಿಯುವ ದಿನಾಂಕದ ವರೆಗೂ ಉಚಿತವಾಗಿ ಚಿಕಿತ್ಸೆಯು ಮಾಡಲ್ಪಡುವುದು ಹಾಗು ಪ್ರತಿದಿಪ ಸಾಯಂಕಾಲಕ್ಕೆ ಪಂ॥ ಶ್ರೀ ಬಸವಲಿಂಗದೇವರು ಸಂಗೀತಜ್ಞರ ಹಿರೇಮಠ ನವಲಗುಂದ ಇವರ ಪ್ರವಚನವೂ ಹಾಗು ಹಾಸ್ಯಸಟುಗಳ ಪ್ರಹಸನವು ಜರುಗುವದು

ದಿನಾಂಕ ೯-೧೧-೩೬ ನೇ ಶುಕ್ರವಾರ (ಕಾ ಶು॥ ೭) ದಿವಸ ಬಡ ಜನರ ವಿವಾಹ ಕಾರ್ಯವನ್ನು ಧರ್ಮಾರ್ಥ ವಾಗಿ ಮಾಡಿಕೊಡಬೇಕೆಂದು ಸದರಿ ಶ್ರೀಗಳವರು ಸಂಕಲ್ಪ ಮಾಡಿಕೊಂಡಿದ್ದಾರೆ ಆದ್ದರಿಂದ ವೀರಶೈವ ಬಾಂಧವರು ತಮ್ಮ ತಮ್ಮ ವದು-ವರರಿಗೆ ಕೊಡುವ ಹಾಗು ತೆಗೆದುಕೊಳ್ಳುವ ವ್ಯವಹಾರವನ್ನು ತಮ್ಮಲ್ಲಿಯೇ ನುಡಿಸಿಕೊಂಡು ಕೇವಲ ಲಗ್ನದ ಕಾರ್ಯಕ್ಕಾಗಿ ಒರಬೇಕು ಉಭಯ ಪಕ್ಷದವರಿಗೂ ಉಚಿತ ವ್ಯವಸ್ಥೆ ಮಾಡಲಾಗಿದೆ

ವ್ಯವಸ್ಥಾಪಕ, ಆಯುರ್ವೇದ ದವಾಪಾನೆ ನವಲಗುಂದ

ಶ್ರೀ ವಿಶ್ವೇಶ್ವರ ವಾಚನಾಲಯ ಉದ್ಘಾಟನ ಹ್ಯಾರಂಭೋತ್ಸವ ಹಚ್ಚೊಳ್ಳಿ

ಸಿರುಗುಪ್ಪ ತಾಲೂಕ ಹಚ್ಚೊಳ್ಳಿ ತರುಣ ಧೈರ ಸಂಘದವರು ಶ್ರೀಮದ್ವಿದ್ಯಾನಗರ ಹಂಪಿ ಸಾವಿರದೇವರು ಎಮ್ಮಿಗನೂರು ಶ್ರೀಗುರು ಮಕ್ತಾಂತಿಮಠದ ಪಟ್ಟಾ ಧ್ಯಕ್ಷ ಶ್ರೀ॥ ಷ॥ ಬ್ರ॥ ಅವಿಕಲಾಧಿ, ಪ್ರವಚನಪಟು ಶ್ರೀ ಗುರುಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸೇವೃಹಸ್ತದಲ್ಲಿ ತಾರೀಖು ೮-೯-೩೬ ನೇ ದಿವಸ ಮೇಲ್ಕಂಡ ವಾಚನಾಲಯದ ಉದ್ಘಾಟನೆ ಮಾಡಿದರು ಶ್ರೀಗಳವರಿಗೆ ಸನ್ಮಾನಪತ್ರಿಕೆಯನ್ನು ಆರ್ಪಿಸಿದರು ಶ್ರೀಗಳವರು ಧರ್ಮ, ವಿದ್ಯಾ, ಶಾಂತಿ, ಧೈರ್ಯರಿ ಈ ವಿಷಯಗಳ ಮೇಲೆ ಸಮಸ್ತ ಶಿಷ್ಯಮಂಡಳಿಗೆ ಮಹಾ ನಂದವಾಗುವಂತೆ ಅಪ್ಪಣೆಕೊಡಿಸಿ ತಮ್ಮ ಉಪಸಂಹಾರ ಭಾಷಣವನ್ನು ಮುಗಿಸಿದನಂತರ ಜಯಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ತರುಣ ಧೈರಸಂಘ ಹಚ್ಚೊಳ್ಳಿ

ಚಿತ್ರದುರ್ಗಮಹಾಸ್ವಾಮಿಗಳವರ ನಿಧನವು ಸಮಾಜಕ್ಕೆ ಹಾನಿ

ಮಹಾಸ್ವಾಮಿಗಳವರು ಶಿವಾಧೀನರಾದ ಸುದ್ದಿ ಯನ್ನು ಕೇಳಿ ನನಗೆ ಬಹು ದುಃಖವಾಯಿತು ಕಳ್ಳ ಡಿಗರ ಸರ್ವತೋಮುಖ ಏಳ್ಗೆಗಾಗಿ ವೀರಶೈವಸಮಾಜ, ಧರ್ಮಗಳ ಪುನರುಜ್ಜೀವನಕ್ಕಾಗಿ ತಮ್ಮ ಪ್ರಭಾವ ಪೂರ್ಣವಾದ ಪಾಂಡಿತ್ಯಗಳನ್ನೆಲ್ಲ ಮೀಸಲಾಗಿಟ್ಟು ೫೦ ವರ್ಷಗಳ ಕಾಲ ನಿರಂತರವಾಗಿ ಜನತಾಕಲ್ಯಾಣಾರ್ಥ ತಮ್ಮ ಛೇವಾದ ಬೆದಾರ್ಯವನ್ನೇ ಧಾರೆಯರೆದ ಮಹಾಪುರುಷ ರಾದ್ದರಿಂದ ಸಮಾಜಕ್ಕೆ ದೊಡ್ಡ ಅಘಾತವೇ ಆಯಿತು.

ಶ್ರೀಕುಷ್ಟಗಿ ವಿಜಯೇಶ ಸ್ವಾಮಿಗಳವರು.

ಪಂಚಾಚಾರ್ಯಪ್ರಭಾ

೧೯೫೬ ನೇ ಅಕ್ಟೋಬರ್ ತಾ॥ ೨೨ ನೆಯ ಸೋಮವಾರ

ವಿಶಾಲ ಮೈಸೂರಿನ ನೂತನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು

ವಿಶಾಲ ಮೈಸೂರು (ಕರ್ನಾಟಕ) ದೇಶಕ್ಕೆ ಹೊಂದಿಕೊಂಡಿರುವ ೧೯ ಜಿಲ್ಲೆಗಳ ಕನ್ನಡಿಗರ ಪ್ರೇಮಪಾತ್ರರಾದ ಶ್ರೀ ಎಸ್ ನಿಜಲಿಂಗಪ್ಪನವರು ಸರ್ವಾನುಮತದಿಂದ ಮುಖ್ಯಮಂತ್ರಿಗಳಾಗಿ ನಿನ್ನೆ ಚುನಾಯಿತರಾಗಿರುವುದು ಕನ್ನಡಿಗರಿಗೆ ಅಸಾಧ್ಯ ಆನಂದವನ್ನುಂಟುಮಾಡಿರುವುದೆಂದು ಬೇರೆ ಹೇಳಬೇಕಾಗಿಲ್ಲ ಇದಕ್ಕೆ ಅವರಲ್ಲಿರುವ ವಿನಯ ಶಾಂತಿ ತ್ಯಾಗ ಸೇವಾಬುದ್ಧಿಗಳೇ ಕಾರಣವೆನ್ನಬಹುದು

ಇವರು ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿ ಕಾಂಗ್ರೆಸ್ಸಿನ ಕೆಲಸಗಳನ್ನು ನಿರ್ವಹಿಸುತ್ತಿದ್ದರೂ ಇತರರಂತೆ ಅಧಿಕಾರ ಲೋಲುಪರಾಗಲಿಲ್ಲ ಆ ಬಗ್ಗೆ ಎಲೆಕ್ಷನ್ನಿಗೆ ನಿಲ್ಲಬೇಕೆಂಬ ಭಾವನೆಯೂ ಇರಲಿಲ್ಲ ಇಂಥ ನಿಸ್ಪಾರ್ಥಬುದ್ಧಿಯೇ ಇಂದು ಇವರನ್ನು ಮುಖ್ಯಮಂತ್ರಿಯ ಪದವಿಗೆ ಕೈಹಿಡಿದು ಕರೆದೊಯ್ಯಿತು ಕರ್ನಾಟಕ ರಾಜ್ಯಸ್ಥಾಪನೆಗಾಗಿ ಹೋರಾಡಿದ ಇವರ ಪ್ರಯತ್ನವು ಇಂದು ಸಿದ್ಧಿಯಾಯಿತು ಕ್ರಿ ಶ ೧೩೩೬ ರಲ್ಲಿ ವಿಜಯನಗರ ರಾಜ್ಯವನ್ನು ಸ್ಥಾಪಿಸಿ ಹೆಸರಾದ ಹರಿಹರವಂಶೆ ಕ್ರಿ ಶ ೧೯೫೬ ರಲ್ಲಿ ಕರ್ನಾಟಕ ರಾಜ್ಯವನ್ನು ಸ್ಥಾಪಿಸಿದ ಕೀರ್ತಿಯು ನಿಜಲಿಂಗಪ್ಪನವರ ಪಾಲಿಗೆ ಕಾದುಕೊಂಡಿತ್ತು ಕರ್ನಾಟಕ ರಚನೆಗಾಗಿ ಯಾವ ಮಹಾತ್ಮನ ಶರೀರ ಸವೆದಿದ್ದಿತೋ ಆ ವ ಹಾತ್ಮನಿಗೆ ಕನ್ನಡ ತಾಯಿಯ ದರ್ಶನವಾಯಿತು, ಅವರ ಆತ್ಮವು ತೃಪ್ತಿಗೊಂಡಿತು

ಕರ್ನಾಟಕದ ಹಿರಿಯ ಮುಖಂಡರೆಲ್ಲಾ ಒಂದಾನೊಂದು ಸಮಯದಲ್ಲಿ ಅಧಿಕಾರಲಾಲಸೆಯಿಂದ ಕರ್ನಾಟಕ ಏಕೀಕರಣವನ್ನು ಗಾಳಿಗೆ ಹಾರಿಸಿ ಈ ಬಗ್ಗೆ ಉಸಿರೆತ್ತುವುದು ಒಂದು ಸಿಂಹಸ್ವಪ್ನ ವೆಂದು ಬೆದರಿಸಿದಾಗ ಆ ಎಲ್ಲ ಕೋಪತಾಪಗಳಿಗೆದೆಗೊಟ್ಟು ಏಕೀಕರಣದ ವಾತಾವರಣವನ್ನು ಹದಗೊಳಿಸುತ್ತ ನಾಗಿ ಕೊಂಡು ಬಂದು ಸಿದ್ಧಿಯನ್ನು ಪಡೆದ ಈ ಶ್ರೀಯುತರೇ ಧನ್ಯರು ಭಾರತದಲ್ಲಿ ಗಾಂಧಿಯವರ ಹೆಸರೂ ಕರ್ನಾಟಕದಲ್ಲಿ ನಿಜಲಿಂಗಪ್ಪನವರ ಹೆಸರೂ ಮೂಲೆ ಮೂಲೆಗೆ ನ್ಯಾಪಿಸಿರಬೇಕಾದರೆ ಅವರವರ ಸದ್ಗುಣಗಳೇ ಕಾರಣವಾಗಿವೆ ಸರ್ವ ಕನ್ನಡಿಗರ ಆತ್ಮಬಂಧುವೇ ತಾನಾಗಿ ಮುಡಿದ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿ ಆರಿಸಿ ಬಂದುದರಲ್ಲಿ ಆಶ್ಚರ್ಯವೇನಿಲ್ಲ

ಅಖಂಡ ಕರ್ನಾಟಕದ ಪ್ರಶ್ನೆಯನ್ನು ಎತ್ತಿದವರೂ ಆದಕ್ಕಾಗಿ ದುಡಿದವರೂ ಆದ ಇವರು ಮುಖ್ಯಮಂತ್ರಿಗಳಾಗಿರುವಾಗ ಕರ್ನಾಟಕದ ಆಗುಹೋಗುಗಳನ್ನೂ ಮುಂದಿನ ವಿಚಾರಗಳನ್ನೂ ಅವರಿಗೆ ಹೇಳಬೇಕಾದುದಿಲ್ಲ ಆದರೆ ಇವರನ್ನು ಆರಿಸುವಾಗ ಎಲ್ಲರೂ ಎಷ್ಟು ಪ್ರೇಮದಿಂದ ತೋರಿಬಂದರೋ ಆದರಂತೆ ಮುಂದೆಯೂ ಇವರ ಆಲೋಚನೆಗಳಿಗೆ ಸಹಕಾರಿಗಳಾಗಿ ಸರ್ವರೂ ನಡೆದುಕೊಂಡು ಭಾರತದಲ್ಲಿ ಕನ್ನಡತನಕ್ಕಿನ ಕೀರ್ತಿ ಬೆಳಗುವಂತೆ ಆಶಿಸುವೆಲ್ಲರೂ ಹೆಮ್ಮೆಯಿಂದ ಹೇಳಬಹುದಾಗಿದೆ

ಪ್ರಾಂತಸಮನ್ವಾಣಕಾರ್ಯದಲ್ಲಿಯೂ ಮುಖ್ಯಮಂತ್ರಿಗಳ ಆಯ್ಕೆಯಲ್ಲಿಯೂ ಮುಖ್ಯ ನಾಯಕರ ಒಮ್ಮತ ದೊರೆತಿದ್ದಕ್ಕೆ ಭಾರತದಲ್ಲಿ ಕನ್ನಡತಾಯಿಗೆ ಪ್ರಥಮಸ್ಥಾನ ವೆಂದು ಬೇರೆ ಹೇಳಬೇಕಾಗಿಲ್ಲ ಈ ಶಾಂತಿಸೈರಣೆಗಳು ನವಂಬರ್ ೧ ನೇ ತಾರೀಖಿನಿಂದ ಫಲಿಯುವ ವಿಶಾಲ ಮೈಸೂರಿನ ಆಡಳಿತದಲ್ಲಿ ವಿಶಾಲವಾಗುವಂತೆಯೂ ಜನತೆಯಲ್ಲಿ ಒಕ್ಕಟ್ಟು ಬೆಳೆಯುವಂತೆಯೂ ಶ್ರೀ ಚಾಮುಂಡೇಶ್ವರೀ ತಾಯಿಯು ಕೃಪೆಯುಂಟಾಗಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸಿ ವಿಶಾಲ ಮೈಸೂರಿನ ಎಲ್ಲ ನಾಯಕರಿಗೆ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇವೆ

ಜಯತು ಕನ್ನಡದೇವಪುತ್ರಗೆ ।
ಜಯತು ಕನ್ನಡ ಶಿಲ್ಪಿವರ್ಯಗೆ ।
ಜಯತು ಶಾಂತಿಯಮೂರ್ತಿ ನಿಜಲಿಂಗಪ್ಪನುಹಿಮುನಿಗೆ॥
ಜಯತು ಗಾಂಧಿಯ ತತ್ವಬೀಜಗೆ ।
ಜಯತು ಸಮರಸ ಸೌಖ್ಯದಾತಗೆ ।
ಜಯತು ಮೈಸೂರ್ಮುಖ್ಯಮಂತ್ರಿಗೆ ಜಯತು
ಮಂಗಲವು ॥

ಮುಂಬೈ ಮುಖ್ಯಮಂತ್ರಿ ಆಗಿ ಶ್ರೀ ವೈ. ಬಿ ಚವ್ಹಾಣರ ಆಯ್ಕೆ

ನಲವತ್ತೈರಡು ವರ್ಷ ವಯಸ್ಸಿನ ಮರಾಠಾಪ್ರಾಂತ್ಯದ ಮುಖಂಡ ಶ್ರೀ ಯಶವಂತರಾವ್ ಬಳವಂತರಾವ್ ಚವ್ಹಾಣರು ನೂತನ ದ್ವಿಭಾಷಾ ಮುಂಬಯಿ ರಾಜ್ಯ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಜುಲಾಯಿ ೨೪ ರಾದರು ಪ್ರಕೃತ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಶಾಯರು ರಾಜೀನಾಮೆಯಿಂದ ಹಿಂತೆಗೆದುಕೊಂಡ ಮೇಲೆ ನಡೆದ ರಹಸ್ಯ ಮತದಾನದಲ್ಲಿ ಶ್ರೀಚವ್ಹಾಣರಿಗೆ ೨೩೩ ಮತಗಳೂ ಅವರ ಪ್ರತಿಸ್ಪರ್ಧಿ ಶ್ರೀ ಬಿ ಎಸ್ ಹೀರೇ ಅವರಿಗೆ ೧೧೧ ಮತಗಳೂ ಬಂದು ಶ್ರೀ ಚವ್ಹಾಣರು ಆಯ್ಕೆಯಾದರು

ಮೈಸೂರಿನ ಗೌರ್ನರಾಗಿ ರಾಜಪ್ರಮುಖರು

ಮೈಸೂರಿನ ರಂಜಪ್ರಮುಖರಾದ ಮಹಾರಾಜ ಶ್ರೀ ಜಯ ಚಾಮರಾಜ ಒಡೆಯರ್ ಬಹದ್ದೂರ್‌ರವರು ನೂತನ ಮೈಸೂರು ರಾಜ್ಯದ ಗೌರ್ನರಾಗಿ ನೇಮಿಸಲಾಗಿದೆಯೆಂದು ರಾಷ್ಟ್ರಪತಿ ಭವನದಿಂದ ಹೊರಬಿದ್ದ ಪತ್ರಿಕಾ ಪ್ರಕಟಣೆಯೊಂದು ತಿಳಿಸುತ್ತದೆ

ಹೈದರಾಬಾದಿನಲ್ಲಿ ನ್ಯೂಸ್ ಪ್ರಿಂಟ್ ಕಾರ್ಖಾನೆ ಸ್ಥಾಪನೆ

ಹೈದರಾಬಾದಿನಲ್ಲಿ ಮುದ್ರಣ ಕಾಗದ (ನ್ಯೂಸ್ ಪ್ರಿಂಟ್) ತಯಾರಿಕೆಗೆ ಕಾರ್ಖಾನೆಯೊಂದನ್ನು ನಿರ್ಮಿಸುವ ಕಾರ್ಯವನ್ನು ರಾಷ್ಟ್ರೀಯ ಕೈಗಾರಿಕಾಭಿವೃದ್ಧಿ ಕಾರ್ಪೋರೇಷನ್‌ಗೆ ನಿರ್ವಹಿಸಲು ಭಾರತ ಸರ್ಕಾರ ನಿರ್ಧರಿಸಿದೆ

ಪಾಸಗಿ ವಲಯದಲ್ಲಿ ಈ ಉದ್ಯಮ ಸ್ಥಾಪಿಸಲ್ಪಡುವುದು

ಈ ಕಾರ್ಖಾನೆಯು ವಾರ್ಷಿಕ ಕಾಗದ ತಯಾರಿಸಲು ಕಬ್ಬಿನ ಸಿಪ್ಪೆಯನ್ನು ಬಳಸುವುದು

ಈ ಕಾರ್ಖಾನೆ ಸ್ಥಾಪನೆ ಯೋಜನೆಗೆ ರಾಷ್ಟ್ರೀಯ ಕೈಗಾರಿಕಾಭಿವೃದ್ಧಿ ಕಾರ್ಪೊರೇಷನ್ನು ಕೆಲವು ವಿದೇಶಗಳ ತಾಂತ್ರಿಕ ನೆರವು ಪಡೆಯುವ ಸಂಭವವೂ ಇದೆ ಕಬ್ಬಿನ ಸಿಪ್ಪೆಯನ್ನು ಈಗಾಗಲೇ ಬರೆಯುವ ಕಾಗದದ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ

ಮುಂಬೈಯ ಕನ್ನಡ ಶಾಸಕರಿಗೆ ಬೀಳ್ಕೊಡಿಗೆ

ಹೊಸ ಮೈಸೂರಿಗೆ ಬರಲಿರುವ ಮುಂಬೈ ಶಾಸನ ಸಭೆ ಸದಸ್ಯರು ಮತ್ತು ಅಧಿಕಾರಿಗಳಿಗೆ ಮುಂಬೈ ಕ್ಕಾಟಕ ಸಂಘದವರು ಬೀಳ್ಕೊಡಿಗೆ ಸಮಾರಂಭವನ್ನು ಏರ್ಪಡಿಸಿದರು ಮುಂಬೈ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಕೆ ಪಾಟೀಲ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಮುಂಬೈ ರಾಜ್ಯದ ಕನ್ನಡ ಜಿಲ್ಲೆಗಳು ಮೈಸೂರಿನಲ್ಲಿ ವಿಲೀನಗೊಂಡರೂ ೧೦ ಲಕ್ಷ ಮಂದಿ ಕನ್ನಡಿಗರು ಹೊಸ ಮುಂಬೈರಾಜ್ಯದಲ್ಲಿ ಉಳಿಯುವರು ಎಂದು ಚಿಕ್ಕ ಭಾಷಣದಂತಿರುವ ಮುಂಬೈ ನಗರದಲ್ಲಿ ಒಂದು ನಿರ್ದಿಷ್ಟ ಸಂಗಡದವರು ಮಾತನಾಡುವ ಭಾಷೆಯೇ ಮುಖ್ಯವಲ್ಲ ಯಾರ ಹಿತಕ್ಕೂ ಧಕ್ಕೆ ಬರುವುದಿಲ್ಲ ಎಂದು ಶ್ರೀ ಪಾಟೀಲ್‌ರವರು ಹೇಳಿದರು

ಕೆ ಪಿ ಸಿ ಸಿ ಅಧ್ಯಕ್ಷ ಶ್ರೀ ಸಿ ಜಿ ಅಂಬಲಿ ಮತ್ತು ಮುಂಬೈ ಸಚಿವ ಶ್ರೀ ಮಲ್ಲವಗೌಡ ಪಾಟೀಲ್‌ರವರು ಸಮಾರಂಭದಲ್ಲಿ ಭಾಷಣಮಾಡಿದರು

ಚಾಮರಾಜನಗರ-ಸತ್ಯಮಂಗಲ ರೈಲು ಮಾರ್ಗ ನಿರ್ಮಾಣ

ಚಾಮರಾಜನಗರ ಸತ್ಯಮಂಗಲ ರೈಲ್ವೆ ಮಾರ್ಗ ನಿರ್ಮಾಣದ ಕಾರ್ಯವನ್ನು ಮುಂದಿನ ಆರ್ಥಿಕ ಸಾಲಿನಲ್ಲಿ ಆರಂಭಿಸಲಾಗುವುದೆಂದೂ, ಈ ವರ್ಷದ ಒಳಗೆ ಈ ಮಾರ್ಗದ ಸರ್ವೆಯನ್ನು ಪೂರ್ಣಗೊಳಿಸಲೇಬೇಕೆಂಬುದಾಗಿ ದಕ್ಷಿಣ ವಿಭಾಗದ ರೈಲ್ವೆ ಆಡಳಿತವರ್ಗಕ್ಕೆ ಸೂಚಿಸಲಾಗಿದೆಯೆಂದೂ ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್ ಬಹದೂರ್ ಶಾಸ್ತ್ರಿಯವರು ಮೈಸೂರು ನಗರಸಭೆಯವರೇರ್ಪಡಿಸಿದ ಪೌರಸನ್ಮಾನ ಸಮಾರಂಭದಲ್ಲಿ ಭಾಷಣಮಾಡುತ್ತ ತಿಳಿಸಿದರು

ಅಜ್ಞಾನದ ಅಪ್ಪೆಹಾಸವೂ ನೈಯಕ್ತಿಕ ದ್ವೇಷವೂ

ಒಂದು ಊರಿನಲ್ಲಿ ಪ್ರಸಿದ್ಧ ದೇವಸ್ಥಾನವಿತ್ತು ಅಲ್ಲಿ ಸೂರಯ್ಯ ಎಂಬ ಬ್ರಾಹ್ಮಣ ಪಾರುಪತ್ತೆಗಾರಿಕೆಯಿದ್ದನು. ಅವನು ದೇವರಿಗಾಗಿ ಜಪಗಳಿಂದ ಬರುವ ಧಾನ್ಯ ಹಾಲು-ತುಪ್ಪ-ಮೊಸರು-ಹಣ್ಣು-ಕಾಯಿ ಮೇಲಾಗಿ ಗೋಚಾರದ ಕಾಣುಗಳಿಂದ ಬಹಳ ಸುಖವಾಗಿದ್ದನು ಇವಕ್ಕ ಮನೆಯ ಹಕ್ಕದಲ್ಲಿದ್ದ ಜಂದ್ಯಯ್ಯನೆಂಬ ಬ್ರಾಹ್ಮಣ ಳ ಎಂಬಾತನಿಷ್ಟು ಅಷ್ಟೇ ಅಲ್ಲ ಅವಪಾಗೆ ಸಂಸ್ಕೃತದ ಗಂಧವೇ ಇರಲಿಲ್ಲ ಅದರೂ ವಿಧಿ-ವಿಧಾನಗಳಲ್ಲಿ ಶಾಸ್ತ್ರಗಳಲ್ಲಿ ತನ್ನ ಮುಂದೆ ಯಾರೂ ಇಲ್ಲೆಂದು ಜಂಭಕೊಚ್ಚಿ ಕೊಳ್ಳುತ್ತಿದ್ದನು ನೆರೆಯ ಸೂರಯ್ಯಬ್ರಾಹ್ಮಣನು ದಿನೇ ದಿನೇ ಮುಂಬರಿಯುತ್ತಿರುವುದು ಇವನಿಗೆ ಸಹನೆಯಾಗದೆ ದೇವಸ್ಥಾನದ ಮೇಲಧಿಕಾರಿಗಳಿಗೆ ದೂರು ಹೇಳಿ ತಾನೇ ಪಾರುಪತ್ತೆಗಾರನಾದನು ಒಂದುದಿವಸ ದೇವಸ್ಥಾನದಲ್ಲಿ ವಿಶೇಷಪೂಜೆಯಿಂದ ಮಂಗಳಾರತಿ ನಡೆಯಿತು ಅವಾಗ್ಗೆ ದೊಡ್ಡ ದೊಡ್ಡ ಪಂಡಿತರು ಸೇರಿದ್ದರು ಅಲ್ಲಿಯ ಪುರೋಹಿತರು " ತದ್ವಿಷ್ಣೋಃ ಪರಮಂ ಪದಂ ಸದಾಪಶ್ಯಂತಿ ಸೂರಯಃ " ಎಂಬ ಮಂತ್ರ ಹೇಳುತ್ತಿದ್ದರು ಅವನ್ನು ಕೇಳಿ ಜಂದ್ರಯ್ಯನಿಗೆ ಕೋಪ ಬಂತು ಅವನು ಮಂತ್ರಾಕ್ಷರಿಗಳ ಅರ್ಥ ಫ್ರಮ್ಮ ಮಂತ್ರವೆಷ್ಟು ಫಿಲ್ಲಿಸಿರಿ, ಈಗ ಪಾರುಪತ್ತೆ ನೋಡುತ್ತಿರುವನರು ಯಾರು ಎಂದು ತಿಳಿದುಬರಿಸಿ, ಸೂರಯ್ಯನೆಲ್ಲಾ ನಾನು, ಆದ್ದರಿಂದ ಸೂರಯ್ಯ ಎಂಬುದನ್ನು ಜಂದ್ರಯ್ಯ ಎಂದು ತಿದ್ದಿ ಇನ್ನೊಮ್ಮೆ ಮಂತ್ರ ಹೇಳಿರಿ ಎಂದನು ಆ ಮಾತಿಷ್ಟು ಕೇಳಿ ಎಲ್ಲ ಬ್ರಾಹ್ಮಣರು ಕೆಕ್ಕರು ಅವರ ಲ್ಲೊಬ್ಬರು ಆಯ್ಯಾ ಪಾರುಪತ್ತೆಗಾರರೇ! ಈಗ ಹೇಳುತ್ತಿರುವ ಮಂತ್ರವು ಪಾರುಪತ್ತೆಗಿಂತ ಸೇಲಿನದಲ್ಲ ದೇವರ ಮೆಲಿನ ಮಂತ್ರ ಅದಕ್ಕೂ ನಿಮಗೂ ಯಾವ ಸಂಬಂಧವೂ ಇಲ್ಲ ಸೂರಯಃ ಎಂಬುದನ್ನು ಸೂರಯ್ಯನಿಗೆ ಸಂಬಂಧವೆಂದು ತಿಳಿದುಕೊಂಡಿದ್ದೀರಿ ಇದು ನಿಮಗೆ ಸಂಸ್ಕೃತದ ಜ್ಞಾನವೇ ಇಲ್ಲವೆಂಬುದನ್ನು ಪ್ರತ್ಯಕ್ಷ ತೋರಿಸುತ್ತದೆ ಆದ್ದರಿಂದ ನೀವು ಇಲ್ಲಿ ಇರಲಿಕ್ಕೆ ಯೋಗ್ಯರಲ್ಲ ಎಂದು ಹೇಳಿ ಮೇಲಧಿಕಾರಿಗಳಿಗೆ ಸೂಚಿಸಿದರು ಕೂಡಲೆ ಆವರು ಜಂದ್ರಯ್ಯನನ್ನು ಕೆಲಸದಿಂದ ದೂರಮಾಡಿದರು ಜಂದ್ರಯ್ಯನು ತನ್ನ ಅವಿವೇಕತನಕ್ಕೆ ಪಶ್ಚಾತ್ತಾಪಪಟ್ಟು ಸಾಯುವವರೆಗೆ ಕಷ್ಟದಿಂದಲೇ ಕಾಲಕಳೆದುಬೇತಾಯಿತು ಆರ್ಥಾತ್ ಈ ಕಥೆಯ ಉದ್ದೇಶವೇನೆಂದರೆ—

ಸಜ್ಜ ಮೈಸೂರಿನಲ್ಲಿ ಸಂಸ್ಕೃತಪಂಡಿತರಾಗಿ ಮಹಾರಾಜರಿಂದ ಸನ್ಮಾನಿತರಾಗಿ ಬೆಂಗಳೂರಿನ ಶ್ರೀಮಾಮಾಣಿಕ್ಯಾಂಬ್ರ) ಸಂಸ್ಕೃತ ಕಾಲೇಜಿನಲ್ಲಿ ವೀರಶೈವ (ಕಶ್ಚಿವಿಶಿಷ್ಟಾದ್ವೈತ) ಸಿದ್ಧಾಂತದ ಅಧ್ಯಾಪಕರಾಗಿರುವ ಶ್ರೀ ಪಂಡಿತರತ್ನ ನಿಸಿ ಗುರುಶಾಂತಶಾಸ್ತ್ರಿಗಳವರು ದೊಡ್ಡ ನೇತಪತೆಯೊಂದಿಗೆ ಸುಖವಾಗಿ ಬಾಳುತ್ತಿರುವುದು ಇವರ ಹಕ್ಕದ ಮನೆಯಲ್ಲಿರುವ ಶ್ರೀ ಎಂ ಎಲ್ ನಾಗಣ್ಣ ಪ್ರವರಿಗೆ ಸಹನೆಯಾಗದೆಹೋಯಿತೋ ಏನೋ? ಎಂಂಂತೆ ಆವರು ಶ್ರೀ ಶಾಸ್ತ್ರಿಗಳವರ ಅವಹೇಳನವನ್ನು ತಮ್ಮ ಪತ್ರಿಕೆಯದ್ವಾರಾ ಪ್ರಕಟಿಸಾಡಿಪತ್ರಿದ್ದಾರೆ

ನಾನು ಈ ವಳಗಾಗಿ ಮೈಸೂರಿಗೆ ಹೋದಾಗ್ಗೆ ನಾಗಣ್ಣನವರ ಹಾಗು ಶಾಸ್ತ್ರಿಗಳವರ ಮನೆಗಳಿಗೆ ಹೋಗಿ ವಿಚಾರಮಾಡಿದ್ದರಲ್ಲಿ ಮನೆ ಳಟ್ಟುವ ಸಲುವಾಗಿ ನಡೆದ ಆವರ ವಾದವಿವಾದಗಳಿಗೆ ವಿರೋಧವಾಗಿ ಬೆಳೆದು ಕೊನೆಗೆ ಸಮಾಜವನ್ನೇ ಅಲ್ಲೋಲಕಲ್ಲೋಲಮಾಡಲು ನಿಂತಿದೆ ಯೆಂದು ಸ್ಪಷ್ಟವಾಯಿತು. ' ದುಷ್ಟೇ ದೊಡ್ಡಪ್ಪ ಎಂದು ಹೇಳುತ್ತಿರುವ ನಾಗಣ್ಣ ಪ್ರವರ ಮನೆಯ ಅಕ್ಕಪಕ್ಕದಲ್ಲಿ ಯಾರೂ ಮುಂತಾಗುವಂತಿಲ್ಲ ಒಂದುವೇಳೆ ಮುಂದಾದರೆ ಯಾವೆರೀತಿಯಲ್ಲಿ ಆವರನ್ನು ಮುರಿಯಲು ನಾಗಣ್ಣನವರು ಅನೇಕ ಮಾರ್ಗಗಳನ್ನು ಹಲ್ಲಿಸಬಲ್ಲರೆಂಬುದು ಅಲ್ಲಿಯ ಜನರಿಂದ ತಿಳಿಯಬಂತು ಅಂದಂತೆ ಇವರು ತಮ್ಮ ಅಕ್ಕಿಾಬರ ತಿಂಗಳ ಆಕ್ಕವಿಚಾರ ಪತ್ರಿಕೆಯಲ್ಲಿ ತಮ್ಮ ಮುದ್ರಿತ ಹೆಚ್ಚಳವನ್ನೂ ಆದರ ಮುಂದೆ ಶ್ರೀ ಶಾಸ್ತ್ರಿಗಳವರ ಸರಸ್ವತಿ ಸ್ವಸ್ಥತೆಯು ಫಿಡಿಯಲಾರದೆಯೂ ಸಹ ಕಾರಣದೊಂದಿಗೆ ಸ್ವಸ್ಥತೆಯನ್ನಿದ್ದಾರೆ ಇವಪ್ಪು ತೋಚಿತ್ತಿರಲಿಕ್ಕೆ ಇವರಿಲ್ಲಿ ಹುಟ್ಟಿದ ಭಕ್ತಿಯನ್ನು ಇಷ್ಟೇ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ ದಾಗಿದೆ ಈ ಮಠವು ಪಕ್ಕದ ಮನೆಯ ಶಾಸ್ತ್ರಿಗಳ ಸ್ವಲ್ಪದಿ ಇಡಿ ವೀರಶೈವ ಸಮಾಜವನ್ನೇ ಎದುರಿಸಿ ನಿಂತಿದೆ " ಸದಾಚಾರಕ್ಕೆ ಸ್ಥಳವಿಲ್ಲ, ಅನಾಚಾರಕ್ಕೆ ಮೇರೆಯಿಲ್ಲ " ಎಂಬಂತೆ ಇವರ ಅನಾಚಾರವು ಉಗ್ರವಾಗಿ ಅಧಿಕಾರಿಗಳಮ್ಮೂ ಸಹ ತಲಮಳಗೊಳಿಸುತ್ತಿರುವುದು

ಗುರುಶಾಂತಶಾಸ್ತ್ರಿಗಳವೆರಿದ್ದ ವೈಯಕ್ತಿಕ ದ್ವೇಷದಿಂದ ಆವರನ್ನು ಸಂಸ್ಕೃತ ಶಾಲೆಗಷ್ಟೆ ಅಧ್ಯಾಪಕ ಜಾಗೆಯಿಂದ ಕಡಿಮೆ ಮಾಡಲಿಕ್ಕೂ ಪಂಡಿತ ಪದವಿಯನ್ನು ಅವಮಾನಪಡಿಸುವುದಕ್ಕೂ ಬೇಕಾಗುವ ಎಲ್ಲ ಅಸ್ತ್ರಗಳನ್ನು ತೆರೆಮರೆಯಲ್ಲಿರುವ ಅನ್ಯಮತ ಸಂತತಿಯಿಂದ ದುಡ್ಡುಕೊಟ್ಟು ಸಂಗ್ರಹಿಸಿಕೊಂಡು ಈ ತರದ ಮಾಯಾ ಆಟವನ್ನು ಹೂಡಿದ್ದಾರೆ ಇವರು ಹುಟ್ಟಿದಂದಿನಿಂದ ಇಂಥ ಅಪದ್ಧ ಕೆಲಸದಲ್ಲಿಯೇ ಕೈಹಾಕುತ್ತ, ಅಪಜಯ ಹೊಂದುತ್ತ ನೈಸೂರಿನ ಜನತೆಯ ಹಾಸ್ಯಕ್ಕೆ ಪಾತ್ರರಾಗಿದ್ದರೂ ಸಾಲದ್ದಕ್ಕೆ ಇಡೀ ಕರ್ನಾಟಕದ ವೀರಶೈವರ ಏಂದೆಗೆ ಗುರಿಯಾಗುವ ಹವ್ಯಾಸಕ್ಕೆ ಬಂದಿದ್ದಾರೆ ಮಾತಾಸೆಮಾತಾಗಲು ಇವರ ಹತ್ತಿರ ಸುಳಿಯುವದೇ ಇಲ್ಲ ಆದ್ದರಿಂದ ಸ್ವಾಮಿಗಳೂ ವಿದ್ಯಾವಂತರೂ ಇವರ ಯಾವ ಮಾತಿಗೂ ಉತ್ತರ ಕೊಡದೆ ಮೌನ ವಾಗಿದ್ದಾರೆ. ಇವರ ಕೂಡ ಮಾತನಾಡುವುದಾಗಲಿ ಚರ್ಚೆಸುವುದಾಗಲಿ ಕೊಚ್ಚೆಯಮೇಲೆ ಕಲ್ಲು ಚೆಲ್ಲಿದಂತೆ ಯೆಂದು ಸಮಾಜವೆಲ್ಲಾ ಭಾವಿಸಿರುವುದು ಅದಕ್ಕಾಗಿಯೇ ಯಾರೂ ವಾದಮಾಡದೆ ಸುಮ್ಮನಿರುವರು ಮೈಸೂರು ವೀಕದ ವಿದ್ಯಾಧಿಕಾರಿಗಳು ಈ ನೈಯಕ್ತಿಕ ದ್ವೇಷದಿಂದ ಕೂಡಿದ ನಾಗಣ್ಣನವರ ಸಮಾಜ ಘಾತುಕ ವಿಚಾರದತ್ತ ಗಮನಕೊಡದೆ ಇದರ ಪೂರ್ವಾಪರರಹಸ್ಯವನ್ನು ಕಂಡುಹಿಡಿಯಲು ಪ್ರಯತ್ನಿಸದೇಕು ಒಂದುವೇಳೆ ಅವರ ಆತುರಕ್ಕೊಳಪಟ್ಟು ನಿರ್ಧಾರವೂ ಆಡಳಿರು ಹೊರಡಿಸಿದಲ್ಲಿ ದೊಡ್ಡ ಅನ್ಯಾಯವಾದೀತೆಂಬುದನ್ನು ಹೇಳಬೇಕಾದುದಿಲ್ಲ ವಿಶಾಲಮತಿಗಳಾದ ಅಧಿಕಾರಿಗಳಿಂದ ಅಂಥ ಪ್ರಮೇಯವು ವದಗದೆಂದು ನಂಬಿದ್ದೇನೆ

ಶಂಕರಶರ್ಮಾ, ಸೊಲ್ಲಾಪುರ

ವೀರಶೈವ ಸಿದ್ಧಾಂತದ ಬಗ್ಗೆ ಅಕ್ಕವಿಚಾರ ಪತ್ರಿಕಾಕರ್ತರಿಗೆ ಎಚ್ಚರಿಕೆ

ಶ್ರೀಮದ್ವೀರಶೈವ " ಕಶ್ಚಿವಿಶಿಷ್ಟಾದ್ವೈತ ' ಮತ ವನ್ನು ಶ್ರಿಭುವನ ಶ್ರೀಜಗದ್ಗುರು ರೇಣುಕಾದಿ ಪಂಚ ಮಹಾಶಿವಾಚಾರ್ಯ ಭಗವತ್ಪಾದರವರು ಸಂಸ್ಥಾಪಿಸಿರುವುದು ಸುಪ್ರಸಿದ್ಧವಷ್ಟೆ ಶ್ರೀ ಜಗದಾಚಾರ್ಯರು ಜಗದಾದಿಯಿಂದಲೂ ಇಂದಿನವರೆಗೂ ನಿರಂತರವಾಗಿ ತಮ್ಮ ಸಾಂಪ್ರದಾಯಿಕ ಜ್ಯೋತಿ ಇಲ್ಲದಂತೆ ಶ್ರೀಮದಾಚಾರ್ಯರ ವಂಶಪಾರಂಪರ್ಯವಾಗಿ ಧರ್ಮ, ದೀಕ್ಷಾ, ಶಿಕ್ಷಾ, ರಕ್ಷಣೆಗಳನ್ನು ನೆರವೇರಿಸುತ್ತ ಬಂದಿರುವರು

ವೇದಾಗಮ ಸಾಹಿತ್ಯದಿಂದ ನಿರೂಪಿತವಾಗಿ ಬಂದಿರುವ ಸನಾತನ ವೈದಿಕಮತಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತವೆಂಬ ನಾಲ್ಕು ಮತಗಳನ್ನು ಆರಾಯುಮ ಮತಸ್ಥಾಪಕರು ಸಂಸ್ಥಾಪಿಸಿ ಈ ಮತಗಳ ಪರವಾಗಿ ವೇದಭಾಷ್ಯಗಳಷ್ಟು ಒರೆದಿರುವರು ಕಶ್ಚಿವಿಶಿಷ್ಟಾದ್ವೈತ ಪರವಾಗಿ ವೀರಶೈವ ಭಾಷ್ಯ ಗಳನ್ನು ಶ್ರೀಜಗದ್ಗುರು ಪಂಚಮಹಾಶಿವಾಚಾರ್ಯ ಭಗವತ್ಪಾದರು ಬರೆದಿರುವರು ತದನಂತರ ಅನೇಕ ಪೂರ್ವಾಚಾರ್ಯರು ಸಹ ಪಾರಂಪರ್ಯವಾಗಿ ಭಾಷ್ಯ ಗಳನ್ನು ಮತಾಚಾರಪರಿಯಮ ಗ್ರಂಥಗಳನ್ನು ಬರೆದು ಸಶಸ್ತಾವಧಿ ಗ್ರಂಥಗಳನ್ನು ಪ್ರಸಿದ್ಧಿಸಿ ಜಿಜಿಂಪ್ರತ್ಯ ಬಂದಿರುತ್ತಾರೆ ಅದರಂತೆಯೆ ಮೈಸೂರು ಪಂಚಾಚಾರ್ಯಪ್ರಭಾ ವಾರಪತ್ರಿಕೆ ಮತ್ತು ಶ್ರೀಕಾಶೀನಾಥ ಗ್ರಂಥಮಾಲೆಯಲ್ಲಿ ಸಂಸ್ಥಾಪಿಸಿದ ಕೈ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ೫೦ ರಮೇಲ್ಪಟ್ಟು ಧರ್ಮ ಗ್ರಂಥಗಳನ್ನು ಹಾಗೂ ವಾರಪತ್ರಿಕೆಯಲ್ಲಿ ಮತಪ್ರತ್ಯೇಯಗಳನ್ನು ಹಂತಿಪ ಪಾಮರರಿಗೂ ತಿಳಿಯುವಂತೆ ಸಾಮಾನ್ಯವಾಗಿ ಶ್ರಜಾರ ಮಾಡುತ್ತ ಬಂದಿರುವುದು ಸನಾತನ ವೈದಿಕಮತೀಯರಿಗೆ ಒಂದು " ಹೆಮ್ಮೆಯ " ಗೌರವವು ಆಗಿರುವದು ಶಾಸ್ತ್ರಬಲ್ಲ ಪಂಡಿತರು ಆವರ ವಿಷಯಸಂಗ್ರಹದ ಸಮಗ್ರ ಚರಿತ್ರೆಯನ್ನು ನೋಡಿದರೆ ತಿಳಿಯುವದು ಸದರಿ ಕೈ|| ಪಂ|| ಶ್ರೀಕಾಶೀನಾಥ ಶಾಸ್ತ್ರಿಗಳವರ ಭಾಷಣದರ ಇಂಗ್ಲಿಷ " ವೀರಶೈವರೆಷ್ಟ " ವೆಂಬ ಗ್ರಂಥವನ್ನು ಅಲ್ಲಾಹಾಬಾದ, ಬನಾರಸ, ಮದರಾಸು, ಮುಂಬಯಿ ಜಜ್ಜರು ಮಾನ್ಯಮಾಡಿರುವುರು ಅವರ ಜಜ್ಜಮೆಂಟಿನಿಂದ ತಿಳಿಯುವುದು

ತಿಾವಿಶಿಷ್ಟಾದ್ವೈತಮಂಜರಿ ಗ್ರಂಥವು ಮೂರು ಮತಪ ಸಿದ್ಧಾಂತವೆಮ್ಮು ಭೋಧಿಸುತ್ತದೆ ಕೊನೆಯಲ್ಲಿ " ವೀರಶೈವ ಸಿದ್ಧಾಂತ "ವನ್ನು ಶಾಸ್ತ್ರಾಧಾರಸಹಿತವಾಗಿ ನಿರ್ಣಸಿದೆ ಉಭಯವಿಧ ಶಕ್ತಿಗಳಿಂದ ಯುಕ್ತವಾದ ಜೀವ ಮತ್ತು ಶಿವ ಇವರ ಅದ್ವೈತವೇ (ಸಾಮರಸ್ಯವೇ) " ಶಕ್ತಿವಿಶಿಷ್ಟಾದ್ವೈತದ ರಹಸ್ಯ " ಇದೇ " ತಿವಾದ್ವೈತಮಂಜರಿ " ಇದು ಶ್ರೀಕಾಶೀನಾಥಶಾಸ್ತ್ರಿಗಳವರ ಸಂಪೂರ್ಣವಾಗಿ ಶ್ರಿತಪಾದಿಕವಾಗಿರುವುದು

ಮುಖ್ಯವಾಗಿ ವೀರಶೈವ ಮತವು ವಿಶಿಷ್ಟಾದ್ವೈತ ದ್ವೈತಾದ್ವೈತಕ ಪರವಾಗಿಯೇ ಇದ್ದು ಇವರ ನೈತಿಕತ್ವ ವೆನ್ನು ತಿವಾನುಭವಿಗಳವರ ಗುರುಮುಖದಿಂದಲೇ ತಿಳಿಯಬೇಕು

ಮೇಲಿನ ನಾಲ್ಕು ಮತಸ್ಥಾಪನಾಚಾರ್ಯರವರು ನಾಲ್ಕು ಸಿದ್ಧಾಂತಗಳನ್ನು ಸ್ಥಾಪಿಸಿರುವರು ಜಗತ್ ಪ್ರಸಿದ್ಧವಷ್ಟೆ ಎಲ್ಲ ಮತಗಳ ಗುರಿಯು ಒಂದೆಯಾದರೂ ಮತಸಿದ್ಧಾಂತಗಳು ಸ್ವಲ್ಪ ಭಿನ್ನ ಗಳಾಗಿವೆಯಲ್ಲದೆ ದ್ವೈತ, ಅದ್ವೈತ ವಿಶಿಷ್ಟಾದ್ವೈತದ ಮುಖ್ಯ ಲಕ್ಷಣಗಳೆಲ್ಲವೂ ಶಕ್ತಿವಿಶಿಷ್ಟಾದ್ವೈತದಲ್ಲಿರುತ್ತವೆ ಈ ವಿಷಯದ ಒಗ್ಗೆ ಕೈ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ತಮ್ಮ ಭಾಷಣದ " ವೀರಶೈವರೆಷ್ಟ " ನೆಂಬ ಗ್ರಂಥದಲ್ಲಿ ಪುಟ ೪೧ ರಿಂದ ೬೨ ರವರೆಗೆ ಸ್ಪಷ್ಟವಾಗಿ ವಿವರಿಸಿದ್ದಾರೆ ಪು ೬೨ ರಲ್ಲಿ ಶ್ರೀ ಶ್ರೀಂಗೇರಿಮಠದ ಆಪ್ರೈತ ಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಏಳಿಗೆ ಅಪ್ಪಣೆ ಮಾಡಿರುವರು ನೋಡಿ

" ಆದಿತ್ಯ ಮಂಬಿಕಾಂ, ವಿಷ್ಣುಂ, ಗಣನಾಥಂ, ಮಹೇಶ್ವರಂ ' ಈ ಸಂಚಿದೈವತೆಗಳನ್ನು ಒಂಜೇ ಭಾವನೆಯಿಂದ ಪೂಜಿಸಬೇಕೆಂದು. ಮತ್ತು ಶ್ರಿಂಗೇರಿ ಏರಿದಲ್ಲಿ ಶ್ರೀ ಚಂದ್ರಮೌಳೀಶ್ವರ ತಿವಲಿಂಗವು ಹಾಗೂ ಶ್ರೀ ಶಾರದಾಂಬೆಯು ಮುಖ್ಯ ದೈವವಾಗಿ ಪೂಜೆಗೊಳ್ಳುತ್ತಿರುವದನ್ನು ಶ್ರೀಮಾನ್ ನಾಗಣ್ಣನವರು ಅರಿಯಲಿ ಶಕ್ತಿಯು ಮಾಯೆಯು ಮಿಥ್ಯವಾಗಿದ್ದರೆ ಸತ್ಯವೆಂದು ಪೂಜಿಸುವ ಪದ್ಧತಿ ಏಕೆ ಎಂಬುದಕ್ಕೆ ಶ್ರೀ ನಾಗಣ್ಣನವರೇ ಉತ್ತರ ಕೊಡಲಿ ಮತ್ತು ವಾಸಿಷ್ಠಮಹರ್ಷಿಯು ಶ್ರೀ ರಾಮಚಂದ್ರನ ಸಭೆಯಲ್ಲಿ ಕುಳತು ಶ್ರೀ ಶಕ್ತಿಗೆ, ಮಾಯೆ ವಿನೈಯೆಂದು ನಿರ್ಣಯ ವೆನ್ನು ಹೇಳಿದಾಗ್ಗೆ ವಸಿಷ್ಠರಿಗೆ ಯೋಗದಲ್ಲಿಯೇ ಸಂಸಾರ ಸಂಬಂಧವಾಗಿದ್ದ ಮಕ್ಕಳುಗಳೊಂದಿಗೆ ಯೋಗ ಪತ್ನಿಯು ಬರಲು ಯೋಗವಿದ್ಯೆಯಿಂದೆಶ್ಯಕ್ತಿ ವಸಿಷ್ಠರು ಶ್ರೀಶಕ್ತಿಗೆ ತಪ್ಪು ತಪ್ಪು ಎಂದು ಸ್ವಮಾ ಕೇಳಿಕೊಂಡು ಶ್ರೀತಿವಶಕ್ತಿಯು ಸತ್ಯವೆಂದು ಶರಣಾಗತರಾಗುವದಷ್ಟು ಶ್ರೀ ದೇವೀಭಾಗವತವನ್ನು ನೋಡಿ ಶ್ರೀಮಾ ನಾಗಣ್ಣ ಪ್ರವರು ತಿಳಿಯಲಿ ಮತ್ತು ನಾಗಣ್ಣನವರು ತಮ್ಮ ಪೂಜಾ ಗೃಹದಲ್ಲಿ ಶ್ರೀ ಶಕ್ತಿಯಂತ ಆಕಾರ ಪೂಜಿಸುತ್ತಿಪ್ಪ ಅಂತರಂಗದಲ್ಲಿ ಶಕ್ತಿಯನ್ನು ಆರಾಧಿಸಿ ಬಹಿರಂಗದಲ್ಲಿ ಪತ್ನಿಕೆಯ ಮುಖಾಂತರ ಶಕ್ತಿಯೇ ಮಿಥ್ಯವೆಂದು ಅಕ್ಕವಂಚಕರಾಗಿ ಅಕ್ಕ ವಿಚಾರ ಪತ್ರಿಕೆಯಲ್ಲಿ ಮನಬಂದಂತೆ ಸಂತಿತರನ್ನು ಬೈದು ಅವಹೇಳನಕ್ಕೆ ಗುರಿಯಾಗಿರುವರು ಮತ್ತು ಶಾಸ್ತ್ರವಂಚಕರಾಗಿ ಓದುಗರ ಭಕ್ತಿಯಾಕ್ಕ ಮತವನ್ನು ಅಕಾಂತತೆಗೆ ಗುರಿಮಾಡಿರುವರು ಮುದ್ರಾಶಾಂತ ಶ್ರತೆಯ ದುರುಪಯೋಗವನ್ನು ಮಾಡಿಕೊಂಡಿರುವರು ಈ ಒಗ್ಗೆ ಸಂಘವಾದ ತಿಳುವಳಿಕೆಯನ್ನು ಶ್ರೀಮಾನ್ ನಾಗಣ್ಣನವರು ತಮ್ಮ ಗೃಹದಲ್ಲಿ ಪೂಜಿಸುತ್ತಿರುವ ಶ್ರೀ ತಿವಕಶ್ತಿಯನ್ನು ಹಾಗೂ ಶ್ರೀಂಗೇರಿ ಶಾರದಾಪೀಠ ಯನ್ನು ಪೂಜಿಸಿ ಆರಾಧಿಸಿ ಅವರ ಕೃಪೆಗೆ ಪಾತ್ರರಾಗಿ ತಿಳಿಯಹೇಕ್ಕಯ್ತು

(ಮುಂದುವರಿಯುವುದು.)

ಆರ್ ಎಚ್ ವೀರಭದ್ರಯ್ಯಸ್ವಾಮಿ
ಮುಕ್ತಿಮಂದಿರ

ಈಶ್ವರೇಚ್ಛೆ

ಆರಕ್ಕೆಯೊಳಗಿಲ್ಲ ವಾರಕಜ್ಜಲದೊಳಲ್ಲಾ
ಮೀರುವದು ಈಶ್ವರೇಚ್ಛೆ ಯದೆಂದಿಗೂ ॥
ಶೂರಭೂಪಾಲರೂ ಧೀರಮುನಿವರ್ಯರೂ
ಘೋರಕಷ್ಟವನ್ನುಂಡುದೀಶ್ವರೇಚ್ಛೆ ॥೧॥

ಬಡವಒಬ್ಬದನಕಜ್ಜಿ ಒಬ್ಬದವು ಬಡವನಕಜ್ಜಿ ।
ಸುಡುಗಾಡು ಆರಮನೆಯ ಹಾಣವಹುದು ॥
ಬೆಡಗಿನವರವನಿ ಜಾಣದಿ ಸುಖಾಡೆ ಆಗುವುದು ।
ಮಡಿವು ನಲವಾಗುವದು ಈಶ್ವರೇಚ್ಛೆ ॥೨॥

ಮನುಜನಾನಾಗಲೂ ಉನ್ನತಿಯ ಒಯಸುವನು ।
ಘನಕಾರ್ಯಗಳಮಾಡಲೆತ್ನಿಸುವನು ॥
ಮನದಿಚ್ಛೆಪೂರ್ತಿಸಬೇಕೆಂದು ಬಳಲುವನು ।
ಕೊನೆಗದಕೆ ಫಲಮಪ್ಪದೀಶ್ವರೇಚ್ಛೆ ॥೩॥

ದೇವಾಂತಸಂಭವರು ಶೂರರಾವಾಂಡವರು
ದೇವಾವತಾರಿಯಾ ರಾಮಚಂದ್ರ ॥
ಜೀವಪರಮಾತ್ಮತತ್ವಾನುಭವಿಯಾಕೃಷ್ಣ
ರವಪರಿಬಳಲಿದರು ಈಶ್ವರೇಚ್ಛ ॥೪॥

ನರರಿದನು ಅರಿದರಿದು ಮರೆದುವ ರುಳಾಗುವರು
ಸುರಮುನಿಗಳಾದರೂ ಒಳಲ ತಿಹರು ।
ಬರುವ ಸುಖದುಃಖವನು ಮಲ್ಲಿಕಾರ್ಜುನಸ್ತುತ
ವರವೆಂದು ಸೇವಿಪುದು ಈಶ್ವರೇಚ್ಛೆ ॥೫॥

(ಶ್ರೀ ವರಕವಿ ವಾಗೀಶ್ವರ ಕೃಪಾಪೇಕ್ಷಿ)

ಸ್ವೀಕಾರ

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲೂಕ ಹೊಳಗುಂದಿ ಗ್ರಾಮದಲ್ಲಿರುವ ವೈನಷ್ಟ ಶ್ರೀ ರುದ್ರಪ್ಪನವರ ಮಗಳು ಹೊಟ್ಟವ್ವ ಎಂಬ ಕನ್ಯಾಮಣಿಯಷ್ಟು ಇದೇ ತಾಲೂಕು ಹೊಳಲು ಗ್ರಾಮದ ಅಕ್ಕಸಾಲಿ ಶ್ರೀ ವಿರೂಪಾಕ್ಷಾಚಾರಿಯವರ ಸುಪುತ್ರ ಮೃತ್ಯುಂಜಯಾಚಾರ್ಯ ಎಸ್ ಎಲ್ ಸಿ ದೇವಗೊಂತ್ಕಳಲ್ಲ ಇವರಿಗೆ ಕೊಟ್ಟು ನಿಶ್ಚಯಕಾರ್ಯವನ್ನು ತಾ॥ ೬-೧೦-೫೬ನೇ ಸೋಮವಾರ ದಿವಸ ನೆರವೇರಿಸಿದ ಸಮಯದಲ್ಲಿ ಗ್ರಾಮದ ಪ್ರಮುಖ ವ್ಯಕ್ತಿಗಳಿಂದ ಕೂಡಿದ ಆ ಸಭೆಯವರು ಶ್ರೀ ಟಿ ಹುಚ್ಚಣ್ಣನವರ ಪ್ರೌಢಕ್ಲಾಹದ ನೇರೆಗೆ ಪ್ರಭಾಪ್ರೌಢಕ್ಲಾಗಿ ನಧು ವರರಿಂದ ತೆಗೆಯಿಸಿದ 2 ರೂಪಾಯಿಗಳು ಶ್ರೀ ಕರಣಂ ಹೇಮಣ್ಣನವರ ದ್ವಾರಾ ತಲ್ಪರಿಶ್ರವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಕೊಟ್ಟೂರು ಹರಿಹರ ರೈಲ್ವೆ ಕಾರ್ಯ ಮುಳೆಗಾಲದನಂತರ

ಒಳ್ಳಾರಿ ಜಿಲ್ಲಾ ಕಾರ್ಪೆಸ್ ಅಭ್ಯರ್ಥಿ ಶ್ರೀ ಟೇಕೂರು ಸುಬ್ರಹ್ಮಣ್ಯಂರವರು ಪತ್ರಿಕಾ ವರದಿಗಾರರೊಂದಿಗೆ ಮಾತನಾಡುತ್ತಾ 'ಹರಪನಹಳ್ಳಿ ನಾಗಾವಾಗಿ ಕೊಟ್ಟೂರು ಹರಿಹರ ರೈಲ್ವೆ ಮಾರ್ಗ ನಿಶ್ಚಯಿಸಿ ರೈಲ್ವೆ ಸಂಚಾರ ವ್ಯವಸ್ಥೆಯಾ ಒದಗಿಸಲು ಅನೇಕ ಸಾರಿ ಬೇಡಿಕೆ ಸಲ್ಲಿಸಿ ಪತ್ರ ವ್ಯವಹಾರ ಮಾಡಿದುದರ ಪರಿಣಾಮವಾಗಿ ಕೆಲವು ದಿನಗಳ ಹಿಂದೆ ಕೇಂದ್ರ ಸರಕಾರದ ರೈಲ್ವೆ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳು ತಮಗೆ ಪತ್ರವನ್ನು ಬರೆದು ಆದರಲ್ಲಿ ಕೊಟ್ಟೂರು-ಹರಿಹರ ರೈಲ್ವೆ ಮಾರ್ಗ ಸರ್ವೇಕೆಲಸವನ್ನು ಈ ವರ್ಷದ ಮಳೆಗಾಲದನಂತರ ಕೈಗೊಂಡು ಮಾರ್ಗವನ್ನು ಬೇಗ ಹಾಕುವಂತೆ ಶ್ರಮ ಕೈಗೊಳ್ಳುವುದಾಗಿ ಆಶ್ವಾಸನೆಕೊಟ್ಟಿದ್ದಾರೆಂದೂ ಮತ್ತು ದಕ್ಷಿಣ ರೈಲ್ವೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಷಯದಲ್ಲಿ ಆಗಲೇ ಸರ್ವೇ ಕೆಲಸ ಮಳೆಗಾಲದ ನಂತರ ಪ್ರಾರಂಭಿಸಲು ರೈಲ್ವೆ ಮಂತ್ರಿ ಶಾಪಿಯು ಸೂಚನೆ ಗಳನ್ನಿತ್ತಿರಿಯೆಂದೂ ತಿಳಿಸುವರೆಂದು ತಿಳಿಯ ಪಡಿಸಿದರು

ಶ್ರೀ ಮಾರುತಿ

ಎಲೆಕ್ಟ್ರಿಕಲ್ ವರ್ಕ್ಸ್

F. 18 ಆರ್ಮುಗಂಮೊದಲಿಯಾರ್ ಬೀದಿ
ಕಲಾಸಿಪಾಳ್ಯಂ ಬೆಂಗಳೂರು 2

ಪ್ರೊಪ್ರೈಟರ್ —ಸಿ. ಮುನಿಸ್ವಾಮಿ

ನಮ್ಮಲ್ಲಿ ಎಲ್ಲ ಮಾದರಿಯ ವಿದ್ಯುಚ್ಛಕ್ತಿ ಮೋಟಾರುಗಳ ರಿಪೇರಿ ಕೆಲಸವು ಉತ್ತಮ ರೀತಿಯಲ್ಲಿ ಮಾಡಲ್ಪಡುತ್ತದೆ ಮತ್ತು ಈಗಿನ ವ್ಯವಸ್ಥೆಪ್ರಕಾರ ೫೫ ಸೈಕ್ಲಿಲ್ಲಿನ ಮೋಟರುಗಳನ್ನು ೫೦ ಸೈಕಲ್ಲುಗಳಿಗೆ ಮೊದಲಿನ ವೇಗ ಮತ್ತು ಹಾರ್ಸ್‌ಪವರ್ (ಅಶ್ವಶಕ್ತಿ) ಇರುವಂತೆ ಬಹಳ ಸಮರ್ಪಕವಾಗಿ ಪರಿವರ್ತನೆ (ರೀವೈಂಡಿಂಗ್) ಮಾಡಿ ಕೊಡಲಾಗುತ್ತದೆ ಈವರೆಗೆ ನೂರಾರು ಮೋಟರುಗಳು ನಮ್ಮಿಂದ ಪರಿವರ್ತಿಸಲ್ಪಟ್ಟು ಸಮರ್ಪಕವಾಗಿ ಕೆಲಸ ಕೊಡುತ್ತಿವೆ ರೀವೈಂಡಿಂಗ್ ಕೆಲಸವನ್ನು ನಾವು ದಕ್ಷತೆಯಿಂದ ನಿರ್ವಹಿಸುತ್ತೇವೆ ಹೆಚ್ಚಿನ ವಿವರಗಳಿಗೆ ಮೇಲ್ಕಂಡ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ

ಸರ್ವೋತ್ತಮ ಸಂಸ್ಕೃತ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	....	೧ ಆಣೆ
ಸತ್ಯಾಸಾಸ್ತ್ರಮಮಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)		೧ ಆಣೆ
ಪಂಚಮಿಂಚಕಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	...	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆ		೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)		೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)		೨ ಆಣೆ
ಶ್ರೀರುದ್ರಮುನಿಕಾಚಾರ್ಯಶತಕ	....	೨ ಆಣೆ
ತಿನಶಕ್ತಿವಿಲಾಸ	....	೨ ಆಣೆ
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ		೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	....	೩ ಆಣೆ
ಸಂಕ್ಷಿಪ್ತ ತಿವಪೂಜಾವಿಧಿ (೧೧ನೆಯ ಆವೃತ್ತಿ)		೩ ಆಣೆ
ಖಸವಾದಿಪಿಜತತ್ವದರ್ಪಣ (೫ನೆಯ ಆವೃತ್ತಿ)		೩ ಆಣೆ
ಪಂಚಾಚಾರ್ಯಪ್ರಕಾಶ	....	೩ ಆಣೆ
ಪಂಚಾಚಾರ ಪ್ರಕಾಶಿಕಾ		೩ ಆಣೆ
ಶ್ರೀಗುರುತತ್ವಪದಗಳು (೩ನೆಯ ಆವೃತ್ತಿ)	....	೩ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	...	೪ ಆಣೆ
ವೀರಶೈವಾಚಾರಾವಳಿ (೪ನೆಯ ಆವೃತ್ತಿ)	...	೪ ಆಣೆ
ಲಿಂಗಧಾರಣವಿಧಿ	...	೪ ಆಣೆ
ಗರ್ಭಾಧಾನವಿಧಿ		೪ ಆಣೆ
ನಾಮಕರಣವಿಧಿ (೪ನೆಯ ಆವೃತ್ತಿ)	...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	...	೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ		೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	....	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ	..	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೩ನೆಯ ಆವೃತ್ತಿ)	....	೬ ಆಣೆ
ಸತ್ಯಾಸಾಸ್ತ್ರಮಮಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬ ಆಣೆ
ಸಿದ್ಧಾಂತ ತಿಖಾಮಣಿ (ಮೂಲಮಾತ್ರ ಚತುರ್ಥಖಂ.)	...	೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ)	....	೮ ಆಣೆ
ವೀರಶೈವಮಹಾತ್ಮರು	.....	೮ ಆಣೆ
ಖಸವಧ್ಯಾಂತದಿನಾಳರ (೩ನೆಯ ಆವೃತ್ತಿ)	....	೮ ಆಣೆ
ಆಗಮಪರಿಜ್ಞಾನ	...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲುಗು)		೮ ಆಣೆ
ಶ್ರೀಜಗದ್ಗುರು ತಿವಾನಂದವಿಜಯ	...	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ		೮ ಆಣೆ
ಕನ್ನಡ ನ್ಯಾಯಶತಕಮ್		೮ ಆಣೆ
ಮಕುಟಾಗಮಃ		೮ ಆಣೆ
ಕಾರಣಾಗಮಃ	...	೧೩ ಆಣೆ
ಸೂಕ್ಷ್ಮಾಗಮಃ		೧೩ ಆಣೆ
ಚಂದ್ರಜ್ಞಾನಾಗಮ		೧ ರೂ
ಸಿದ್ಧಾಂತಸಾರಾವಳಿ (ಶ್ರೀಲೋಚನತಿವಾಚಾರ್ಯಕೃತ)		೧೩ ಆಣೆ
ತಿಖಾಸೂತ್ರ ಸಿದ್ಧಾಂತದರ್ಪಣ	...	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನ್ಯಾಚೀನತ್ವ		೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)		೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	....	೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧ ರೂ
ವೀರಮಾಹೇಶ್ವರಚಂದ್ರಿಕೆ	....	೧ ರೂ
ವೈದಿಕತಿವಪೂಜಾವಿಧಿ (ವೈದಿಕಸ್ತರಯುಕ್ತವಾದುದು ೩ನೆಯ ಆವೃತ್ತಿ)		೧೫ ರೂ
ಶ್ರೀಕರಭಾಷ್ಯಂ (೨ ನೆಯ ಆವೃತ್ತಿ)	...	೧೫ ರೂ
ತಿಪ್ಪರ ಮನೆಗೆ ರಜಿಸ್ಟರ್ ಬುಕ್	...	೧೫ ರೂ
ರೇಣುಕವಿಜಯ ಮಹಾವುರಾಣ (ಸಚಿತ್ರ ಭಾಮಾಪರಿಷದ್ದಲಿ)	...	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿಂದುವು)		೨ ರೂ.
ಸಿದ್ಧಾಂತತಿಖಾಮಣಿ (ಕನ್ನಡ ಟೀಕಾಸಹಿತ)	...	೩॥ ರೂ
A brief life-sketch of Pandit Sri Kashinatha Shastriji (*English*)		4 As,
The Philosophical Aspect of Viraasaivism (*English*)		8 As
Speeches by Pandit Shri Kashinatha Shastriji (*English*)		12 As
ವೀರತೋಶ್ವರ (ಮರಾಠಿ)		೫ ೧-೮-೦
ಸಂಕ್ಷಿಪ್ತಶಿವಾರ್ಚನಕಾರಿಕಾ (ಸಂಸ್ಕೃತ) ...		೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brahmanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಭವನಿಶಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು ನಾಗನೂರು ಬೃಹನ್ಮಠಾಧ್ಯಕ್ಷರಾದ ವೇದ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಜ್ಜಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೨೯ ನೇ ಅಕ್ಟೋಬರ್ ೧೯೫೬ [ಸಂಚಿಕೆ ೨೪

ಪತ್ರವ್ಯವಹಾರ

[ಚಾಪ್ತಿದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕೆಂದು. —ಸಂ]

ದಸರಾಮಹೋತ್ಸವ

ಶಮೀಪೂಜಾ ಮಹಾಕಾರ್ಯವು ಪ್ರತಿವರ್ಷ ಪದ್ಧತಿಯಂತೆ ಇದೇ ದರ್ಮಾಬಿನಾಮ ಸಂವತ್ಸರ ಆಶ್ವಿಜ ಶು. ೧೦ (ತಾ- ೧೪-೧೦-೧೯೫೬) ರವಿವಾರ ಮಧ್ಯಾಹ್ನ ೨ ಘೆಂಟೆಗೆ ಒಕ್ಕಲಗೇರಿ ಶ್ರೀರಾಜೋಟೆ ವೀರಭದ್ರದೇವಸ್ಥಾನದಿಂದ ಶ್ರೀ ಷ॥ ಬ್ರ॥ ಮಂಗಳೂರ ಅರಳೇಲ್ಮಠದ ಪಟ್ಟಾಧ್ಯಕ್ಷರ ಮತ್ತು ಚಿಕ್ಕಮಣ್ಣೂರ ಪಟ್ಟಾಧ್ಯಕ್ಷರ ನೇತೃತ್ವದಲ್ಲಿ ಶ್ರೀಂಗರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನು ಮುಹೂರ್ತ ಗೊಳಿಸಿ ಸಕಲ ವಾದ್ಯ ವೈಭವದೊಡನೆ ಉತ್ಸವವು ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಶ್ರೀಮಾ ಬಸಪ್ಪನವರು ಅಬ್ಬೇಗೇರಿ ಇವರ ಆಯಲ್ ಮಿಲ್ಲಿನಲ್ಲಿ ಇರತಕ್ಕ ಬನ್ನಿಮಹಾಂಕಾಳಿ ವೃಕ್ಷಕ್ಕೆ ತಲ್ಪಿ ಹೋಡತೋಪಚಾರಗಳಿಂದ ಪೂಜಿಸಿ, ಶಮೀಪೂಜಾ ಮತ್ತು ವಿಶಡಣ ಮಂಗಲ ಸಮಾರಂಭಗಳನ್ನು ನೆರವೇರಿಸಲಾಯಿತು

ಸೆಕ್ರೆಟರಿ,
ಶ್ರೀ ಜ ಪಂಚಾಚಾರ್ಯ ಸೇವಾ ಸಂಘ,
ಗದಗ-ಬೆಟಗೇರಿ

ಆಯುರ್ವೇದಪರೀಕ್ಷೆಗಳ ಬಗ್ಗೆ ಸೂಚನೆ

ನಿಖಿಲಭಾರತ ಆಯುರ್ವೇದ ವಿದ್ಯಾಪೀಠದಲ್ಲಿ ಭಿಷಕ್-ವಿಶಾರದ-ಆಚಾರ್ಯ ಪರೀಕ್ಷೆಗಳು ನಡೆಯುವವು ಇದಕ್ಕಾಗಿ ವಿಧೇರಿಸಲ್ಪಟ್ಟ ಪರೀಕ್ಷಾ ಕೇಂದ್ರಗಳು ಕರ್ನಾಟಕದಲ್ಲಿ ೫-೬ ಮಾತ್ರ. ಇದ್ದು ಪರೀಕ್ಷೆಯು ತಾ॥ ೨೫-೬-೫೭ ಕ್ಕೆ ನಡೆಯುವದು ಆದ್ದರಿಂದ ಕರ್ನಾಟಕದೊಳಗಿನ ಆಯುರ್ವೇದ ವಿದ್ಯಾರ್ಥಿಗಳು ತಮಗೆ ಸಮೀಪವಾಗುವ ಕೇಂದ್ರಕ್ಕೆ ನವೆಂಬರ ೧೫ ನೇ ತಾರೀಖಿನೊಳಗಾಗಿ ಫೀ ಕಳಿಸಿಕೊಡ ತಕ್ಕದ್ದು. ಈ ಅವಧಿ ತಪ್ಪಿದರೆ ಲೇಟ ಫೀ ಕೊಡ ಬೇಕಾಗುವದು ಕಾರಣ ಎಲ್ಲರೂ ಈ ಬಗ್ಗೆ ಗಮನಿಸ ಬೇಕಾಗಿ ಸೂಚನೆ.

ಪ್ರಾಧ್ಯಾಪಕ
ಆಯುರ್ವೇದತೀರ್ಥ ಡಾ॥ ಜ. ವಿ. ಪುರಾಣಿಕ
ಶ್ರೀ ಸಕ್ಕೇಶ್ವರ ಆಯುರ್ವೇದ ಪಾಠಶಾಲಾ,
ವಿಜಾಪುರ.

ದೇವಿಪುರಾಣಸಮಾಪ್ತಿ, ಶಿವಗಂಗಾ

ಕರ್ನಾಟಕದೇಶದಲ್ಲಿ ಸುಪ್ರಸಿದ್ಧ ಕ್ಷೇತ್ರವೆನಿಸಿದ ಶ್ರೀಮದ್ದಕ್ಷಿಣಕಾಶಿಕಬ್ಬಿಗೆರಿ ಮಹಾಕ್ಷೇತ್ರ ಶಿವಗಂಗಾ ಮೇಲಣಗವಿ ವೀರಸಿಂಹಾಸನ ಸಂಸ್ಥಾನಮಠದಲ್ಲಿ ನವರಾತ್ರಾರಂಭ (ತಾ॥ 5-10 56) ರಿಂದ ಸ್ವಪ್ರತಿಷ್ಠೆಯು ಬೆಳಿಗ್ಗೆ ೯ ಘೆಂಟೆಯಿಂದ ೧೧ ಘೆಂಟೆಯವರೆಗೆ ಸಿದ್ಧಾಂತಶಿಖಾಮಣಿ ಪಾರಾಯಣವೂ ಮತ್ತು ಸಾಯಂಕಾಲ ೪ ಘೆಂಟೆಯಿಂದ ೧೧ ಘೆಂಟೆಯವರೆಗೆ ಷೋಡಸ ಮಂತ್ರಾಧಿಪತಿಗಳಾದ ಪೂಜ್ಯ ಶ್ರೀ ಶ್ರೀ ವಿಶ್ವಾರಾಧ್ಯ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ದೇವಿಪುರಿಣಾಪ್ತವಚನವೂ ತಾ॥ 13-10-56ರ ನವಿಗೆ ನಡೆದು ಪುರಾಣಸಮಾಪ್ತಿಯಾಯಿತು ಪ್ರತಿ ನಿತ್ಯವೂ ಸೇರುರಿಯವ ಭಕ್ತಮಂಡಳಿಯವರಿಗೆ ಪ್ರಸಾದ ವಿನಿಯೋಗವು ನಡೆಯುತ್ತಲಿತ್ತು ಎಂದು ತಿಳಿಸುವ,

ಶಾಂತಪ್ಪ ಕಂಬಾಳಿ.

ನಾಡಹಬ್ಬಮಹೋತ್ಸವ, ಯಾತ್ರಿನಹಬ್ಬ

ಕೊಪ್ಪಳ ತಾ॥ ಎಕ್ಕಿನಹಬ್ಬ ಶ್ರೀ ಶಿವೈಕ್ಯ ಮಹಾವೈರಾಗ್ಯಮೂರ್ತಿ " ಬಸವತಿವಯೋಗಿ "ಗಳ ಮರದಲ್ಲಿ ನಾಡಹಬ್ಬವೂ ಮುಬ್ಬಾಂಗವಾಗಿ ಶ್ರೀಮತಾ ದೇವಿಯ ಪುರಾಣವು ಪ್ರತಿವರ್ಷ ಪದ್ಧತಿಯಂತೆ ಇದೇ ಆಶ್ವಿಜ ಶು॥ ಪ್ರತಿಪದೆಯಿಂದ ವಿಜಯದಶಮಿಯ ವರೆಗೆ ಭಾಗ್ಯನಗರ ಹಿರೇಮಠಾಧ್ಯಕ್ಷ ವೇ॥ ಶ್ರೀ ಶ್ರೀ ವಿಶ್ವಯ್ಯಶಾಸ್ತ್ರಿಗಳು, ಶಿವಾನುಭವಿ ಶ್ರೀ ಅಜ್ಜಪ್ಪನವರು ಹುರಕಡ್ಲಿ ಇವರುಗಳಿಂದ ಸುಶ್ರಾವ್ಯವಾಗಿಯೂ ಸುಗಮವಾಗಿಯೂ ಜರುಗಿದ ವಿಷಯವು ಅತ್ಯಾನಂದ ದಾಯಕವಾಗಿದೆ ಶ್ರೀಮರದಲ್ಲಿ ಪ್ರತಿದಿನವೂ ಪಾಸೋಪವು ನಡದೇ ಇರುತ್ತಿದೆ ಹತ್ತುದಿವಸ ಗಳಕಾಲ ಮೃಷ್ಟಾನ್ನದಿಂದ ಗಣಾರಾಧನೆ ಭೂರಿ ದಕ್ಷಿಣಾದಿಗಳು ನಡೆದವು ಶ್ರೀಮರದ ಕಾರ್ಯಗಳನ್ನೆಲ್ಲ ಶ್ರೀ ಸಿದ್ಧಲಿಂಗಸೌಡ್ರು, ಶ್ರೀ ಫಕೀರಗೌಡ್ರು, ಶ್ರೀ ಓಜನಹಳ್ಳಿ ರುದ್ರಗೌಡರು ಮುಂತಾದ ಭಕ್ತಮಂಡಳಿಯು ಬಹಳ ಶ್ರದ್ಧೆಯಿಂದ ನೆರವೇರಿಸಿ ಕೀರ್ತಿಕಾಯರಾಗಿದ್ದಾರೆ ಶ್ರೀ ಪರಶಿವಸ್ವಾಮಿಯು ಶ್ರೀಜಗದ್ಗುರು ವಿಶ್ವಾರಾಧ್ಯನು ಸರ್ವರಿಗೂ ಕಲ್ಯಾಣವನ್ನು ಉಂಟುಮಾಡಲಿ!

ಅಡಿವೆಯ್ಯ, ಮೈನಳ್ಳಿ

ಪಾದಪೂಜಾಮಹೋತ್ಸವ, ಟೆಂಗಳಿ

ವೀರಶೈವಮಹಾಸ್ಥಾನಾಚಾರ್ಯ ಶ್ರೀಜಗದ್ಗುರು ರೇಣುಕಾಚಾರ್ಯರ ಕೃಪಾಪೋಷಿತರಾದ ಶ್ರೀ॥ ಷ॥ ಬ್ರ॥ ಚರಪಟ್ಟಾಧ್ಯಕ್ಷ ಕಾರ್ತಿಕೇಶ್ವರ ಶಿವಾಚಾರ್ಯರು ಬೃಹನ್ಮಠ ಸಂ॥ ಮಲಪೇಡ ಇವರ ನೇತೃತ್ವದಲ್ಲಿ ಶ್ರೀಯುತ ವೀರಭದ್ರಪ್ಪಾ ಮಲ್ಲೇಶಪ್ಪಾ ಪಟ್ಟೇದ ಮು॥ ಟೆಂಗಳಿ, ತಾ॥ ಚಿತಾಪುರ, ಜಿ॥ ಗುಲಬರ್ಗಾ ಇವರ ಸ್ವಗೃಹದಲ್ಲಿ ಆಶ್ವಿಜ ಶು॥ ೧ ದಿಂದ ಮಹಾಸ್ವಾಮಿ ದೀಕ್ಷಿತ ಮಡಿವಾಳಪ್ಪನವರ ಕಡೆಯಿಂದ ಶ್ರೀ ಮಹಾತಾಯಿ ದೇವಿಪುರಾಣ ಹಾಗು ರುದ್ರಾಭಿಷೇಕ ಅತ್ಯಂತ ವಿಜೃಂಭಣೆಯಿಂದ ೧೦-೧೧ ದಿನಸಗಳ ವರೆಗೂ ನಡೆದು ನೂರಾರು ಮಂದಿ ಗಣಸಂತರ್ಪಣೆಯಿಂದ ಶ್ರೀ ಶೀಲಕಂಠಯ್ಯ ಮತಪತ್ರಿ ಸುಲೆ ಪೇಟೆ ಇವರ ಗಾನ ಭಜನಾದಿಗಳಿಂದ ಆಚಾರ್ಯರ ಜಯಜಯಕಾರಗಳೊಂದಿಗೆ ಮುಕ್ತಾಯಗೊಂಡಿತು

ಓರ್ವ ಪ್ರತ್ಯಕ್ಷದರ್ಶಿ.

ದಸರಾಮಹೋತ್ಸವ, ಮುದಗಲ್ಲ

ಕನ್ನಡನಾಡಿನಲ್ಲಿ ಹೆಮ್ಮೆಯಿಂದ ತಲ್ಲ ನಾಮವನ್ನು ಬೀರಿ ಎಲ್ಲರಿಗೂ ಇರುಳು ಚಂದಿರನಂತೆ ತಂಪಿನ ಹರುಷವನ್ನು ಕೊಟ್ಟ ವಿಜಯದಶಮಿ ದಿವಸ ವಾರ್ಷಿಕ ಪದ್ಧತಿಯಂತೆ ಇದೇ ಆಶ್ವಿಜ ಶು॥ ೧೦ (14-10-56) ಭಾನುವಾರ ಜಿಲ್ಲಾ ರಾಯಚೂರು, ತಾ॥ ಲಿಂಗಸೂಗೂರ ಪೈಕಿ ಕಸಬಾ ಮುದಗಲ್ಲ ಹಟ್ಟಿಚಾಡ ಹಳೇ ಪೇಟೆಯ ಶ್ರೀವೀರಭದ್ರೇಶ್ವರ ದೇವಾಲಯದಲ್ಲಿ ಸಾರ್ವಜನಿಕರು ಕೂಡಿ ಬೇಂಡಿನ ಮೇಳದಿಂದಲೂ ವೀರಶೈವ ಕಾರುಣರ ಭಜನೆಯ ಮೇಳದಿಂದಲೂ ಕೂಡಿ ಶಿಸ್ತಿನಿಂದಲೂ ಒಳ್ಳೆಟ್ಟಿನಿಂದಲೂ ಹೊರಟು ಶಮಿವೃಕ್ಷಕ್ಕೆ ಹೋಗಲಾಯಿತು ಅನಂತರ ಪಟ್ಟಣದ ಪಂ॥ ಶ್ರೀ ಸಿದ್ಧರಾಮಯ್ಯಸ್ವಾಮೀಜಿ ಇವರ ವೈದಿಕದೊಡನೆ ಶಮಿವೃಕ್ಷಕ್ಕೆ ಪೂಜಾದಿಗಳು ನಡೆದು ಮಹಾಮಂಗಳಾರತಿ ಆದನಂತರ ಪ್ರಸಾದವನ್ನು ತೆಗೆದುಕೊಂಡು ಮರಳಿ ಮಹೋತ್ಸವದೊಡನೆ ಶ್ರೀ ರಾಮಲಿಂಗೇಶ್ವರ ಪ್ರಗೆ ಶಮಿಪತ್ರೆ ಸಮರ್ಪಣಾಮಾಡಿ ತಿರುಗಿ ಉತ್ಸವದೊಡನೆ ಶ್ರೀ ವೀರಭದ್ರೇಶ್ವರಸ್ವಾಮಿಗೂ ಶಮಿ ಸಮರ್ಪಣಾಮಾಡಿ ಮಂಗಲ ಜಯ ಜಯಕಾರದೊಡನೆ ಅಂದಿನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸ ಲಾಯಿತು

ವೀರಭದ್ರಪ್ಪ, ಕೋರಿಕಿಟ್ರ.

ದಿ॥ ಬಸವನಾಳರು ತೆರಣರ ಬಾಳು ಬಾಳಿನರು

ಮೈಸೂರಿನ ರಾಜಪ್ರಮುಖರು ಇದೇ ದಿನಾಂಕ ೨೬ ರಿಂದು ಧಾರವಾಡದಲ್ಲಿ ಬಸವನಾಳರ ಪ್ರತಿಮೆಯ ಅನಾವರಣವನ್ನು ನೆರವೇರಿಸುತ್ತ—'ಅನ್ನಡ ನಾಡು ನುಡಿಯ ಸೇವೆಯಲ್ಲಿಯೇ ಬಸವನಾಳರು ತಮ್ಮ ಜೀವಮಾನವನ್ನು ಗಂಧದಂತೆ ತೇಯ್ದರು ಅವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ಕನ್ನಡ ಸಾಹಿತ್ಯಕ್ಕೆ ಅಚ್ಚುಳಿಯದ ಕಾರ್ಯವನ್ನು ಮಾಡಿದ ಲಿಂಗೈಕ್ಯ ಪೈಲ್ವಿಸರ ಶಿವಲಿಂಗಪ್ಪ ಬಸವನಾಳರು ಚಿರಸ್ಮರಣೀಯರು' ಎಂದು ಹೇಳಿದರು.

ಪಂಚಾಚಾರ್ಯ್ಯಪ್ರಭಾ

೧೯೩೬ ನೇ ಅಕ್ಟೋಬರ್ ತಾ॥ ೧೯ ನೆಯ ಸೋಮವಾರ

ವಿಶಾಲ ಮೈಸೂರು ದೇಶ

ಭಾಷಾವಾರ ಪ್ರಾಂತರಚನೆಯ ಪ್ರಕಾರ ಕನ್ನಡ ಬಾಷೆಗಾಗಿ ಕರ್ನಾಟಕ ಪ್ರಾಂತರಚನೆಯಾಗಬೇಕಾಗಿದ್ದಂತೆ ಈಗ ಉದಯವಾದ ಕನ್ನಡನಾಡ ಇದೇ ನವಂಬರ ೧೯ನೇ ತಾರೀಖಿನದಿವಸ ಆದು ಕೇಂದ್ರದ ಅಡಿಶದ ಮೇರೆಗೆ "ವಿಶಾಲ ಮೈಸೂರು ದೇಶ" ಎಂಬ ನಾಮಕರಣವನ್ನು ಹೊಂದಿ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರ ನೇತೃತ್ವದಲ್ಲಿ ಘೋಷಿಸಲ್ಪಡುವದು ಎಂದಿನಿಂದ ಬೆಂಗಳೂರು ನಗರವು ಕನ್ನಡಿಗರ ರಾಜಧಾನಿಯಾಗಿಯೂ, ಶ್ರೀಮನ್ಮಹಾರಾಜರವರು ಗವರ್ನರರಾಗಿಯೂ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿಯೂ ಕಾರ್ಯಾಧಿಕಾರವನ್ನು ಸ್ವೀಕರಿಸುವದು ಕನ್ನಡಿಗರ ಬಹುದಿನದ ಬೇಡಿಕೆಯು ಪೂರ್ತಿಸಿ ಎಲ್ಲರೂ ಒಂದಾಗಿ ಒಂದೇ ಆದರ್ಶತೆಯಿಲ್ಲಿ ಸೇರುವ ಈ ದಿನವು ಅಪೂರ್ವ ಆನಂದವನ್ನುಂಟುಮಾಡುವ ಸುದಿನವೆಂದೂ ನಾಡಹಬ್ಬವೆಂದೂ ಹೇಳಿದರಲಾರೆವು.

ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ೧೫ನೆಯ ಗಸ್ಟ್ ೧೫ನೇ ತಾರೀಖು ರಾಷ್ಟ್ರಕ್ಕೆ ಹೇಗೆ ಪವಿತ್ರದಿನವಾಗಿರುವುದೋ ಹಾಗೆ ಈ ನವಂಬರ ೧೯ನೇ ತಾರೀಖು ಅಂದರೆ ಆಶ್ವೀಜ ಬಹುಳ ಚತುರ್ದಶಿಯ ಕನ್ನಡ ನಾಡಿನ ಸಂಘಟನೆಯ ಪವಿತ್ರದಿನವಾಗಿರುವದು ಇಷ್ಟೇ ಅಲ್ಲ ಕನ್ನಡಿಗರ ಎರೆಕ್ಷತ್ರದಂತಿರುವ ಶ್ರೀಮನ್ಮಹಾರಾಜರವರು ಗವರ್ನರರಾಗಿಯೂ ಕನ್ನಡಿಗರಿಗಾಗಿ ದೇಜವನ್ನೇ ಸವಿಸಿ ಕಷಸ್ಸನ್ನಾಚರಿಸಿದ ಕರ್ಮಯೋಗಿ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿಯೂ ಕಾಂಗ್ರೆಸ್ ಸಂಸ್ಥೆಯಲ್ಲಿ ದೆರ ಕಲ್ಯಾಣಕ್ಕಾಗಿ ನಿಜವಾದ ಸ್ಪರ್ಧೆಯಿಲ್ಲದೆ ಶ್ರೀಮಂತಪ್ಪನವರು ಎಂ ಪಿ ಸಿ ಅಧ್ಯಕ್ಷರಾಗಿಯೂ ಮುಂದುವರಿಯುವ ಈ ದಿನವು ಕನ್ನಡಿಗರ ಬಾಗ್ಯೋದಯದ ದಿನವೆಂದು ಬಾವಿಸಬಹುದು ಇಂಥ ಶುಭ ದಿನದಲ್ಲಿ ಸರ್ವ ಕನ್ನಡಿಗರು ಪವಿತ್ರ ಮನಸ್ಸಿನಿಂದ ತಮ್ಮ ಗೃಹಗಳಲ್ಲಿ ನುರನುಂದಿರಗಳ್ಳ ದೀವತರಾರಾಧನೆಯನ್ನು ಮಾಡಿ ಕನ್ನಡನಾಡಿಗೂ, ನಡಿನ ನಾಯಕರಿಗೂ ಕಲ್ಯಾಣವನ್ನು ಕೋರುವುದು ಸೂಕ್ತವಾಗಿರುವುದು, ಮತ್ತು ಈ ಹಿಂದ ನಾನಾ ಆಳಿಕೆತಯಲ್ಲು ಸಿಕ್ಕು ಕಷ್ಟಪಟ್ಟು ಎಚ್ಚಾಗಿ ಕನ್ನಡಿಗರ ಚದುರನ್ನೆಯು ಮುಂದೆ ಎಂದೂ ಬರದಿರಲೆಂದು ದೇವರನ್ನು ಪ್ರಾರ್ಥಿಸುವದು ಸಾನ ಧರ್ಮಗಳನ್ನು ಮಾಡುವ್ಯವು ಎಲ್ಲರ ಸರ್ವಾಗಮವೂ ಐಕ್ಯತ್ಯವೂ ಅನ್ಯೋನ್ಯ ಪ್ರೀತಿ ವಿಶ್ವಾಸಗಳೂ ಹೆಚ್ಚುವಂತೆ ಹೋಗಿ ಸನ ನಾಡಿಗಳಲ್ಲಿ ಸ್ಪರ್ಧಿಸುವದು. ಈ ಎಲ್ಲ ಕಾರ್ಯಗಳಿಂದ ಕನ್ನಡತಾಯಿಯು ತೃಪ್ತಿಗೊಂಡು ಪುಣ್ಯನಿರ್ವಾಹವನ್ನು ನೀಡುವುದರಲ್ಲಿ ಸಂದೇಹವಿಲ್ಲ.

ಮೈಸೂರು ಪ್ರಾಂತದ ಕನ್ನಡಿಗರು ಶ್ರೀಮನ್ಮಹಾರಾಜರವರ ನರಳಿನಲ್ಲಿ ಬೆಳೆದು ಹಜ್ಜೆ ಕಷ್ಟಕಾರ್ಪಣ್ಯಗಳನ್ನು ಕಾಣದು ಇಷ್ಟೇಕೆ ಇವರ ಸುತ್ತಲೂ ಗಡಿಯಿಲ್ಲದ್ದ ಹೈದ್ರಾಬಾದ, ಮುಂಬೈ ಮದ್ರಾಸ, ಕೂರ್ಗ ಪ್ರಾಂತಗಳಿಗೆ ಸೇರಿದ್ದ ಕನ್ನಡಿಗರಿಂದ ಇವರ ರಕ್ಷಣೆಯಾಯಿತೆಂಬುದನ್ನೂ ಸಹ ತಿಳಿಯದವರು ಈ ಗಡಿನಾಡ ಕನ್ನಡಿಗರ ಕಷ್ಟವನ್ನು ನೋಡಿಯೇ ಮನಸೊಂಬ ಶ್ರೀ ನಿಜಲಿಂಗಪ್ಪನವರು ಕನ್ನಡನಾಡು ಐಕ್ಯಗೊಳ್ಳುವವರೆಗೆ ೧ ಜಕ್ಷಣವನ್ನೂ ನೀರವ ಗಿ ಭಾಗವಹಿಸುವದಿಲ್ಲವೆಂದು ಶಪಥಮಾಡಿ ತಮ್ಮಾಗಿ ಹೋರಾಡಿ ಇಚ್ಛಿತ ಕಾರ್ಯವನ್ನು ಸಾಧಿಸಿದರು ಆ ಮನೋನಿರ್ನಾರವೇ ಎಲ್ಲ ಕನ್ನಡಿಗರ ಪ್ರೇಮವನ್ನು ಇವರಲ್ಲಗೆ ಸಳೆಯುತು ಅಧಿಕಾರವನ್ನು ನೀಡಿತು ಕನ್ನಡನಾಡಿಗೆ ಚಿನ್ನದಂತಿದ್ದ ಇವರ ಮಂತ್ರತ್ವವೂ ರತ್ನದಂತಿದ್ದ ಮಹಾರಾಜರವರ ಗವರ್ನರಗಿರಿಯೂ ಕರ್ನಾಟಕದ ಕೀರ್ತಿ ಸೌಧಕ್ಕೆ ಕಲಶಪ್ರಾಯವಾಗಿರುವವು ಈ ಉಭಯ ಮಹಿಮರುಗಳ ಕೃಪಾಕಟಾಕ್ಷಕ್ಕೆ ಸೇರಿದ ಕನ್ನಡನಾಡು ಉನ್ನತಿಯನ್ನು ಹೊಂದಿ ವಿಜಯನಗರದ ವೈಭವವನ್ನು ಮರೆಯಿಸದಿರಲಾರದೆಂಬುದರಲ್ಲಿ ಸಂಶಯವಿಲ್ಲ

ಒಂಭತ್ತು ಜಿಲ್ಲೆಗಳಿಂದ ಕೂಡಿದ ಮೈಸೂರು ಪ್ರಾಂತದ ಎಷ್ಟೋ ಕಾಂಗ್ರೆಸ್ ನಾಯಕರು ೧೯ ಜಿಲ್ಲೆಗಳಿಂದ ಕೂಡಿ ವಿಸ್ತಾರವಾಗಿಸ್ತಿರುವ ಕನ್ನಡ ನಾಡನ್ನು ಕಟ್ಟುವುದರಲ್ಲಿ ಸಹಕಾರವನ್ನು ನೀಡದೆ ಅಡ್ಡಿಯನ್ನುಂಟುಮಾಡಿದೂರ ಪುಟಕ್ಕೆ ಹಾಕಿದ ಬಂಗಾರದಂತೆ ಕನ್ನಡನಾಡಿನ ಐಕ್ಯತೆಯು ದ್ವಿಗುಣಿತ ವಾಯಿತು ಸಿಂದೆಯವರಿದ್ದರೆ ವಸ್ತುವಿನ ಅಂದವು ಹೆಚ್ಚುವಂತೆ ಇವರಿಂದ ಕನ್ನಡನಾಡಿನ ಶೋಭೆಯೂ ಹೆಚ್ಚಿಕು ಆದುದರಿಂದ ಪ್ರಾಂತೋದಯವಾಗುವ ಈ ಶುಭದಿನದಲ್ಲಿ ನಾಡಿನ ಕ್ಷೇತ್ರಿಗೆ ಕಾರಣರಾದ ಇವರು ಗಳಿಗೆಲ್ಲಾ ಮೊದಲನೇ ತಾಂಬೂಲವನ್ನು ಕೊಟ್ಟು ಧನ್ಯವಾದಗಳನ್ನರ್ಪಿಸುವುದು ನ್ಯಾಯಕರ ಆದ್ಯ ಕರ್ತವ್ಯವಾಗಿರುವುದಲ್ಲದೆ ಇನ್ನು ಮುಂದೆ ಅವರು ತಮ್ಮ ಮಾರ್ಗದರ್ಶನಗಳನ್ನು ದೂರೀಕರಿಸಿ ಹೋರಗನ್ನ ಡಿಗರ ಸಂಸರ್ಗದಿಂದ ಸತ್ಯ ಶಾಂತಿ ದಯೆ ಧರ್ಮ ಗಳಿಂದ ನಡೆದುಕೊಳ್ಳುವಂತೆ ಕೋರುವುದು

ನೂತನ ಸ್ವಾಂತದ ಮುಖ್ಯಾಧಿಕಾರಿಗಳ ಜುನಾ ವಣಿಯಲ್ಲಿ ಹತ್ತು ಜಿಲ್ಲೆಯ ಹೊರಗನ್ನಡಿಗರೂ ಸೇರಿ ಸರ್ವಾನುಮತದಿಂದ ಮೂಲ ಮೈಸೂರಿನ ನಾಯಕರೇ ಮುಖ್ಯಾಧಿಕಾರ ಎಂಬಿಸಿಕೊಟ್ಟು ವಿಶಾಲ ವೈಸೂರಿನ ಆಡಳಿತ ಕರ್ನಾಟಕದ ಪೆನರೆಯನ್ನು ಕೊಡಾಡಿರುವ ಇದೇ ಸಮಯವಲ್ಲಿ ಆ ಹೊರಗನ್ನಡಿಗರ ಅಭಿಪ್ರಾಯವನ್ನು ಕನ್ನಡ ನಾಡಿನ ಹಿರಿಯ ಕರ್ನಾಟಕವೆಂದು ಸಾರುವುದಕ್ಕೆ ವೈ ಸೂರಿನ ನಾಯಕರೂ ಒಪ್ಪುವುದು ಯೋಗ್ಯವೂ ಸಮಯೋಚಿತವೂ ಆಗಿರುವುದು ಇದು ಪ್ರಾಂತೋದಯದ ದಿನದ ರಾಷ್ಟ್ರಧ್ವಜವನ್ನು ನೆರವೇರಿದ್ದಾದರೆ ಕನ್ನಡ ನಾಡಿನ ಐಕ್ಯತೆಗೂ ವೈಬವಕ್ಕೂ ಮೇರೆಯಿಲ್ಲದಂತಾಗುವುದು

ನೂರಾರು ವರ್ಷಗಳಿಂದ ಒಡೆದುಹೋಗಿದ್ದ ಕನ್ನಡನಾಡು ಒಂದುಗೂಡಲು ೩ವರನರಲ್ಲಿ ಅನೇಕ ಮಾನ ಘೋಷಣೆಗಳು ನಡದು ಾಲವರಿಗೆ ಬೆಸರ ಹುಟ್ಟಿರಬಹುದು ಕೋಸವು ನೀಡಿರಬಹುದು ಅದರ ಈ ಪ್ರಾಂತೋದಯದ ಮಂಗಲ ಸಮಯದಲ್ಲಿ ಆನಬ್ಬರೂ ತಿ ಕೋಪ ತಾಪಗಳನ್ನ ಏಕೀಕರಣ ಯಜ್ಞವಲ್ಲಿ ದಹನಮಾಡಿ ವಿಶಾಲ ನಾಡಿನ ಸ್ಥಾಪನೆಯತ್ತ ಗಮನವ ಪರಿಶುದ್ಧ ಶ್ರಯಸ್ಸ್ಸವು

ನವಂಬರ್ ೧೯ನೇ ತಾರಿಖು ತ್ರಿಳಾ ಬಹುಳ ಚತುರ್ದಶಿ ದಿವಸಂಗಿದೆ ಈ ದಿನವು ಬಂಗಡಲ್ಲಲ್ಲಿ ದೀಪ ಬೆಳಗುವ ಹಬ್ಬವೆಂದು ಪ್ರಸಿದ್ಧವಾಗಿರುವದು ಅಲ್ಲದೆ ನರಕಾಸುರನೆಂಬ ರಕ್ಕಸನ ವಧೆಯಾಗಿ ಜಗತ್ತಿಗೆ ನ್ಮ ಮವಾಗಿದ್ದ ದಿನವೂ ಇದೇ ಆಗಿರುತ್ತದೆ ಇಂಥ ಪವಿತ್ರ ದಿನದಲ್ಲಿ ಸ್ಥಾಪಿತವಾದ ಕನ್ನಡ ಪ್ರಾಂತವು ದೀಪ ಬೆಳಗಿದಂತ ಬೆಳಗುವುದರಲ್ಲಿ ಯಾವ ಅಶ್ಚರ್ಯವೂ ಇಲ್ಲ ಈ ದೀಪ ಬೆಳಗುವ ಹೆಬ್ಬದ ದಿವಸ ಆಳಿಯನು ತತ್ತಿಯ ಮನೆಗೆ ಹೊಂ ನಾಲ್ಕು ದಿನ ಸುಖಭೋಜನಗಳನ್ನು ಮಾಡಿ ವರದಕ್ಷಿ ಸಹಿತ ಹಿಂದಿರುಗುವ ಸದ್ದಕಿಯೂ ಇದೆ ಆ ಪ್ರಕಾರ ಆ ದಿವಸ ೩೧ಮಿಸಿದ ಹೊರಗನ್ನಡಿಗರಿಗೆ ಮೈಸೂರು ನಾಯಕರು ಅನ್ನೋನ್ಯ ಪ್ರೀತಿಯ ದಕ್ಷಿಣೆಯನ್ನಿತ್ತು ಬೀಳ್ಕೊಡಲಿ

ಪ್ರಾಂತೋದಯದ ಈ ಶುಭ ಸಮಯದಲ್ಲಿ ಸರಮಾಕ್ಷನ ದಯೆಯಿಂದ ಇನ್ನು ಮುಂದೆ ನಾಡು ಒಂದಾಗಿರುವುದರ ಜೊತೆಗೆ ಎಲ್ಲ ಕನ್ನಡಿಗರ ಮನವೂ ಒಂದಾಗಲಿ, ನೂತನ ದೇರವು ನ್ಲೇಷದಿಂದ ಬಾಳಲಿ, ಜನರು ಧರ್ಮಶಿರತರಾಗಲಿ, ಗುರುಗಳೂ ಮಠಾಧಿಕಾರಿಗಳೂ ತಮ್ಮ ಕರ್ತವ್ಯನನ್ನರಿತು ಜಾಗರೂಕರಾಗಿ ಯನ್ನು ವಹಿಸಲಿ, ಮಳೆ-ಬೆಳೆಗಳು ಹೆಚ್ಚಿ ದೇಶವು ಸನ್ಪದ್ಧಿಯನ್ನು ಹೊಂದಲಿ, ಭಾವಿ ಕನ್ನಡ ಕುಲ ಪುತ್ರರು ವಿದ್ಯಾಸಂಪನ್ನರಾಗಿ-ದೇಶಾಭಿಮಾನಿಗಳಾಗಿ ವೀರಧೀರ್ಮಿಗಳಾಗಿ ಬಾಳಲಿ ಈ ಸಮಯವನ್ನು ಒದಗಿಸಿಕೊಟ್ಟ ಭಾರತ ಸರ್ಕಾರವು ಭಾರತ ಮಾತೆಯ ಕೃಪೆಯಿಂದ ಬಿಡಿಕಾಲ ಬಾಳಿ ಬೆಳಗಲೆಂದು ಹಾರೈಸಿ ವಿಶಾಲ ಮೈಸೂರಿನ ಉದಯೋತ್ಸವಕ್ಕೆ ನಮ್ಮ ಸಂಪೂರ್ಣ ಸಹಕಾರ-ಪ್ರೀತಿಗಳನ್ನು ನೀಡಿ ಪೂಮಾಲೆಯನ್ನರ್ಪಿಸಿ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇವೆ

ಜಯತು ಜಯತು ವರಕನ್ನಡನಾಡಿಗೆ।
ಜಯತು ಶಾಂತಿಯ ಭಾರತಮಾತೆಗೆ।
ಜಯತು ರಾಷ್ಟ್ರದ ಸಲೆ ಗುರುವರ್ಗಕೆ।
ಜಯತು ಜಯತು ಶುಭಮಂಗಲವು ॥೧॥

ಜಯತು ಕ್ಷಾಂತಿಯ ಗಾಂಧಿಮಹಾತ್ಮಗೆ।
ಜಯತು ರಾಷ್ಟ್ರಾಧ್ಯಕ್ಷ ಪ್ರಸಾದಗೆ।
ಜಯತು ರಾಷ್ಟ್ರದ ನೆಹರು ಮಂತ್ರಿಗೆ।
ಜಯತು ಜಯತು ಶುಭಮಂಗಲವು ॥೨॥

ಕನ್ನಡನಾಡಿನ ನನ್ನೆಯ ಗವರ್ನರ।
ನನ್ನುತ ಜಯಚಾಮೇಂದ್ರರಿಗೆ।
ಉನ್ನತಮಂತ್ರಿ ನಿಜಲಿಂಗಪ್ಪಗೆ।
ನನ್ನೆಯ ಜಯ ಶುಭಮಂಗಲವು ॥೩॥

ವರ್ತಮಾನ ಸಂಗ್ರಹ

ವಿಶಾಲ ಮೈಸೂರು ರಾಜ್ಯೋದಯ ಸಮಾರಂಭದ ಕಾರ್ಯಕ್ರಮ

ಬೆಂಗಳೂರಿನಲ್ಲಿ ನವಂಬರ್ ೧೯ ರಂದು ಉದ್ಯಾಟಿಸಲ್ಪಡುವ ನವ ಮೈಸೂರು ರಾಜ್ಯದ ಸಮಾರಂಭ ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆಯೊಳಗೆ ನಡೆಯುವುದು

ತಿರುವನಂತಪುರದಲ್ಲಿ ಕೇರಳರಾಜ್ಯದ ಉದ್ಘಾಟನೆಯನ್ನು ಮುಗಿಸಿಕೊಂಡು 'ರಾಷ್ಟ್ರಾಧ್ಯಕ್ಷರು ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನ ೧೫ ೩೦ ಕ್ಕೆ ಬರುವರು ಗೌರ್ನರ್ ಸುತ್ತು ರಾಜ್ಯದ ಮುಖ್ಯಮಂತ್ರಿಗಳು ಸ್ವಾಗತಿಸುವರು

ಸಮಾರಂಭದಲ್ಲಿ ಪ್ರಾರ್ಥನಾನಂತರ ಗೌರ್ನರ್‌ರು ಸ್ವಾಗತಭಾಷಣ ಮಾಡುವರು ತರುವಾಯ ನೇಗಿತ ಕಾರ್ಯಕ್ರಮ, ರಾಷ್ಟ್ರಾಧ್ಯಕ್ಷರ ಪ್ರಾರಂಭ ಭಾಷಣ, ಕೊನೆಯಲ್ಲಿ ಮುಖ್ಯಮಂತ್ರಿಗಳಿಂದ ವಂದನಾರ್ಪಣೆ ಸಲ್ಲಿಸಲ್ಪಾವುದು

ಬೆಳಿಗ್ಗೆ ೯ ೧೦ ಕ್ಕೆ ನಡೆಯಬೇಕೆಂದು ಈ ಹಿಂಗಾಮಿಯಾಗಿ ಗೊತ್ತುಮಾಡಿದವು, ಮಂತ್ರಿ ಮಂಡಲದ ಪ್ರಮಾಣವಚನ ಸ್ವೀಕಾರದ ಸಮಯಕ್ಕೆ ಸರಿಯಾಗಿ ಈ ಸಮಾರಂಭಗಳು ನಡೆಯುವುವು ಇದೇರೀತಿ ರಾಜ್ಯದ ೧೯ ಜಿಲ್ಲೆಗಳ ಎಲ್ಲ ಕೇಂದ್ರ ಗಳಲ್ಲೂ ಸಮಾರಂಭಗಳು ನಡೆಯುತ್ತವೆ

ನೂತನ ರಾಜ್ಯದ ಉದಯದ ಸಂಕೇತವಾಗಿ ನವಂಬರ್ ೨ ರಂದು ಸಾರ್ವತ್ರಿಕ ರಜಾಕೊಡಲಾಗಿದೆ

ನವ ಮೈಸೂರು ಸಂಪುಟದಲ್ಲಿ ೧೨ ಸಚಿವರು ?

ನವ ಮೈಸೂರಿನ ಮಂತ್ರಿಮಂಡಲದ ರಚನೆ ಬಗ್ಗೆ ಶ್ರೀ ಎಸ್ ನಿಜಲಿಂಗಪ್ಪನವರು ಮತ್ತು ಎಂ ಪಿ ಸಿ ಅಧ್ಯಕ್ಷ ಶ್ರೀ ವೆಂಕಟಪ್ಪನವರು ತಾಂಗ್ರೆಸ್ ಪಾರ್ಲಿಮೇಂ ೨ ಬೋರ್ಡಿನವರೊಡನೆ ಹೆಚ್ಚಿಲಿಯಲ್ಲಿ ತಮ ಮಾತುಕತೆಯನ್ನು ಮುಕ್ತಾಯಗೊಳಿಸಿ ಅನಂತರ ಮೈಸೂರು ಸಂಪುಟದಲ್ಲಿ ೧೦-೧೨ ಮಂದಿ ಸದಸ್ಯರಿರುತ್ತಾರೆಂದು ಶ್ರೀ ಎಸ್ ನಿಜಲಿಂಗಪ್ಪನವರು ಪಿ ಟಿ ಐ ಗೆ ತಿಳಿಸಿದರು

ರಾಷ್ಟ್ರೀಯ ಪಂಚಾಂಗ

ಭಾರತ ಸರ್ಕಾರದ ಅಧಿಕೃತ ಕಾರ್ಯಗಳಿಗಾಗಿ ಈಗ ಅನುಸರಿಸಲಾಗುತ್ತಿರುವ ಗ್ರೆಗೋರಿಯನ್ ಪಂಚಾಂಗದ ಜತೆಗೆ ಶಾಲಿವಾಹನಶಕೆಯಂತೆ ಭಾರತೀಯ ಪಂಚಾಂಗವನ್ನೂ ೧೯೫೬ ರ ಮಾರ್ಚ ೨೨ ರಿಂದ ಚೈತ್ರ ಪ್ರಥಮ, ಶಾಲಿವಾಹನಶಕೆ ೧೮೭೮ ಅಧಿಕೃತಕಾರ್ಯಗಳಿಗಾಗಿ ಅಮಸಂಸಲು ಭಾರತ ಸರ್ಕಾರವು ನಿರ್ಧರಿಸಿದೆ.

ಭಾರತಕ್ಕೆಲ್ಲಾ ಒಂದೇ ರೀತಿಯ ರಾಷ್ಟ್ರೀಯ ಸಂಚಾಂಗವೊಂದನ್ನು ಸಲಹೆಮಾಡಲು ೧೯೩೨ ರಲ್ಲಿ ನಿಯಮಿಸಲಾಗಿದ್ದ ಸಮಿತಿಯು ೧೯೩೬ರಲ್ಲಿ ಇತ್ತ ಕೆಗಳನ್ನು ಕೇಂದ್ರ ಸರ್ಕಾರವು ಪರ್ಯಾಲೋಚಿಸಿ, ನಿರ್ಧಾರವನ್ನು ಮಾಡಿರುವುದಾಗಿ ಗೃಹಸಚಿವ ಹಿಯು ಪ್ರಕಟಿಸಿದೆ

ರಾಲಿವಾಹನ ಶಕೆ ೧೮೫೭ರ ಚೈತ್ರ ಶುಕ್ಲಪ್ರತಿಪದಮಿಂದ ಭಾರತ ಸರ್ಕಾರದ ಗೆಜೆಟ್ ಅಖಿಲಭಾರತ ರೇಡಿಯೋ ಕೇಂದ್ರಗಳು, ಮತ್ತು ಇತರ ವಿಭಾಗಗಳು ಗೈಗೋರಿಯನ್ ಕ್ಯಾಲೆಂಡರಿನ ಜತೆಗೆ ರಾಷ್ಟ್ರೀಯ ಸಂಚಾಂಗದ ತಾರೀಖನ್ನೂ ಪ್ರಕಟಿಸುವುವು

ಇದರಿಂದ ಸರ್ಕಾರಿ ರಜಾ ದಿನಗಳಲ್ಲಿ ವ್ಯತ್ಯಾಸ ಕಾಣೂ ಆಗುವುದಿಲ್ಲವೆಂದೂ, ಪಂಚಾಂಗದ ಸಮಿತಿಯು ಸೂಚಿಸಿರುವ ತಾರೀಖುಗಳನ್ನು ಆದಷ್ಟು ಮಟ್ಟಿಗೆ ಅನುಸರಿಸಲಾಗುವುದೆಂದೂ, ಸರ್ಕಾರವು ಪ್ರಕಟಿಸಿದೆ

ಹೊಸ ಸಂಚಾಂಗದಂತೆ ಅಧಿಕ ದಿನಗಳ ವರ್ಷದಲ್ಲಿ ೩೬೬ ದಿನಗಳೂ, ಸಾಮಾನ್ಯ ವರ್ಷಗಳಲ್ಲಿ ೩೬೫ ದಿನಗಳೂ ಇರುವುವು, ಚೈತ್ರಮಾಸದಲ್ಲಿ ೩೦ ದಿನಗಳು ಅಧಿಕದಿನಗಳ ವರ್ಷದಲ್ಲಿ ೩೧ ದಿನ), ವೈಶಾಖದಲ್ಲಿ ೩೧ ದಿನ ಜ್ಯೇಷ್ಠದಲ್ಲಿ ೩೦ ದಿನ, ಆಷಾಢದಲ್ಲಿ ೩೧ ದಿನ ಶ್ರಾವಣದಲ್ಲಿ ೩೧ ದಿನ, ಭಾದ್ರಪದದಲ್ಲಿ ೩೦ ದಿನ ಆಶ್ವಯುಜದಲ್ಲಿ ೩೦ ದಿನ, ಕಾರ್ತಿಕದಲ್ಲಿ ೩೦ ದಿನ, ಮಾರ್ಗಶಿರದಲ್ಲಿ ೩೦ ದಿನ, ಪುಷ್ಯದಲ್ಲಿ ೩೦ ದಿನ. ಮಾಘದಲ್ಲಿ ೩೦ ದಿನ ಮತ್ತು ಫಾಲ್ಗುಣದಲ್ಲಿ ೩೦ ದಿನ ಇರುವಂತೆ ನಿಗದಿಮಾಡಲಾಗಿದೆ

ಮಲ್ಯರ ಕೈಚಳಕ ನಡೆಯಲಿಲ್ಲ

ಮಲ್ಯರಿಲ್ಲದ ಚುನಾವಣೆ ಇಲ್ಲ ಎಂಬ ಮಾತನ್ನು ಬೆಂಗಳೂರಿನಲ್ಲಿ ನೇರಿದ ಕನ್ನಡ ಶಾಸನಸಭಾ ಸಮಿತಿಯ ಸಭೆ ಸುಳ್ಳು ಮಾಡಿದೆ ಅಂಬಲಿಯವರ ಜುನಾಸಿಯು ಕಾಲಕ್ಕೆ ಮಾಡಿದ ತೈಜಸಕವನ್ನು ಶ್ರೀಪಾದಾಸ ಮಲ್ಯರು ಈ ಸಲ ಮಾಡಲು ಸಾಧ್ಯವಾಗಿಲ್ಲ ಮಲ್ಯರು ಫಿಜಿಲಿಂಗ್ಸ್ಟನ್‌ರವರನ್ನು ಸೋಲಿಸಲು ರುವ ಸಾಧ್ಯಾಸಾಧ್ಯತೆಗಳನ್ನು ಸೂಕ್ಷ್ಮವಾಗಿ ಂಡೀಲಿಸಿ (ಕೊನೆಗೆ ಬೆಂಗಳೂರಿನಿಂದ ನಿರಾಶರಾಗಿ ಹೊರಟುಹೋದರು

ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನದ ಬಗ್ಗೆ ಶ್ರೀನಿವಾಸಮಲ್ಯ ಕಂಠಿ ತಾಗೂ ಕೆಸ್ಟ್ಯುನವರ ನಡುವೆ ಮಾತುಕತೆಗಳು ನಡೆದವೆಂದು ಉತ್ತರ ಕರ್ನಾಟಕದ ಒಂದು ಪತ್ರಿಕೆಯಲ್ಲಿ ಪ್ರಸ್ತಾಪವಾಗಿತ್ತು. ಈ ಮಾತುಕತೆಗಳಲ್ಲಿ ಭಾಗವಹಿಸಿದವರು ಶ್ರೀನಿವಾಸ ಮಲ್ಯರಾಗಿರದೆ ಅವರ ಸೋದರ ಡಾ॥ ಮಲ್ಯರಾಗಿದ್ದಾರೆ ಯಾಕೆಂದರೆ ಶ್ರೀನಿವಾಸಮಲ್ಯರು ಬೆಂಗಳೂರಿನಲ್ಲಿ ಇದ್ದಿರಲೇ ಇಲ್ಲ

ರಾಜ್ಯೋದಯದ ದಿನವನ್ನು ನಾನು ಸಂಭ್ರಮದಿಂದ ಆಚರಿಸಲಾರೆ

ಗೋವಿಂದ ಪೈಯವರ ಪತ್ರ

ನವಂಬರ ತಿಂಗಳ ೧ ನೆಯ ತಾರೀಕಿನಂದು ನಾಡಿನಲ್ಲಿ ಅನ್ಯಾಯವು ಎಂದೆಲೆ ಶ್ರೀ ಹನುಮಂತರಾಯರು 'ಮಹಾನಾಯಕರು' ಹುಟ್ಟಿಬಿದ್ದೆ ಅಂತು ಹುಡಾದರೆ ಆ 'ಕನ್ನಡದ ನಿಘಿ ಪ್ರದೇಶಗಳನ್ನು ಒಳಗೊಂಡು ಏಕಭಾಷಾ ಪ್ರಾಂತವನ್ನು 'ಕರ್ನಾಟಕ' ಎಂಬ ಮಂಗಳಕರವಾದ ಹೆಸರು ಸಮಂಗಳವಾಗಿ ತ್ತಿಯೆ ಕುಂಕುಮವೆ ಜೊತ್ತಿನಂತೆ ಉಚಿತವಲ್ಲದೆ, ಪ್ರಾಂತವು ಯಾವುದೇ ಒಂದು ಅವಯವವ ಹೆಸರಿಂದ ಕರೆಯಲ್ಪಡುವುದಾದರೆ ಹೆಸರಿಡುವುದಾದರೆ ಅಖಿಲ್ಯ ಎಂದು ಪುತ್ತೂರಿನ 'ಕನ್ನಡಿಗ' ತ್ರಿಕೆಗೆ ರಾಷ್ಟ್ರಕವಿ ಗೋವಿಂದಪೈ ಬರೆದಿದ್ದಾರೆಲ್ಲಾ ಅವಯವಗಳಲ್ಲಿ ಕೂಡಿಕೆಯಿಂದ ರಚಿಸಲ್ಪಟ್ಟ ಸ್ತುವನ್ನು ಶರೀರ ಎನ್ನಲೇಕಲ್ಲದೆ ಅವರ ಒಂದೊಂದು ಂಗವಾದ ಕೈ ಕಾಲು ಹೊಟ್ಟೆ ಮೊದಲಾದವುಗಳಲ್ಲ ಾವುದೆ ಒಂದು ಹೆಸರನ್ನಲ್ಲಾ ಮಾತ್ರ ಹೆಸರು ಕೊಡುವು ಾದರೆ ? ಅಥವಾ ಕೊಟ್ಟರೆ ಅದು ಛಲದ, ಮೌಢ್ಯದ ಾಕಾಸ್ಪೆಯಲ್ಲದೆ ಬೇರೆ ಅಲ್ಲ. ನನಗೆ ಅಂಥಾದ್ದರಲ್ಲಿ ಅಭಿಮಾನವಿಲ್ಲ. ಅದಾಗಿ ನವಂಬರ ೧ ನೆಯ ತಾರೀಕನ್ನು ಗೌರವಿಸಕ್ಕ ಯಾವ ವಿಷಯದಲ್ಲೂ ಭಾಗಿಯಾಗುವುದಕ್ಕೆ ನನ್ನ ಮನಸ್ಸು ಒಲ್ಲದು ಮನಸಾಕ್ಷಿ ಒಪ್ಪದು"

"ಕನ್ನಡ ರಾಜ್ಯೋದಯ ದಿನದಲ್ಲೇನೋ ಜರಗಲಿಕ್ಕಿರುವ ಆ ಒಳಚೇತಗಳ ಪುನರ್ರಚನೆಯ (State Re Organisation) ದಿನವೆಂದಾದರೆ ಆ ಮರ್ದಿನವನ್ನು ಹಬ್ಬವಾಗಿ ಆಚರಿಸುವ ಉದ್ಯಮವದ್ದಿ ಎಂದು ಕೇರಳಕ್ಕೆ ಹೋಗುತ್ತಿರುವ ಕಾಸರಗೋಡಿನ ಲ್ಲಿರುವ ನಾನು ಸರ್ವಥಾ ಭಾಗಿಯಾಗಲಾರೆ ಎಂದೂ ಪೈ ಬರೆದಿದ್ದಾರೆ (ಪ್ರಜಮಂಚ)

ಶ್ರೀ ಹಾನಗಲ್ಲು ಕುಮಾರಸ್ವಾಮಿಗಳವರ ಸಂಕಲ್ಪ ಭಂಗವೇ ?

ಮತಾಧೀಶ್ವರರು ಸುಧೀಜರೂ, ಗುಣಾಢ್ಯರೂ, ಶಿವಯೋಗಿ ಧುರಂಧರರೂ ಆದರೆ, ಸಮಾಜ ಮತ್ತು ಧರ್ಮಗಳ ರಕ್ಷಣೆ ಸಯಾಗಿ ಅಗುವುದೆಂದು ಮನಗೊಂಡಿದ್ದ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರು ಮಠಾಧಿಕಾರಿಗಳಾಗಕಕ್ಕೆ ಬಟುಗಳ ಬ್ರಹ್ಮಚರ್ಯ ಪಾಲನೆಗೆ, ಶಿವಯೋಗ ಸಾಧನೆಗೆ, ಶಾಸ್ತ್ರಜ್ಞಾನ ಸಂಪಾದನೆಗೆ, ಯಾವ ಕೊರತೆಯೂ, ಅನಾನುಕೂಲವೂ ಇಲ್ಲದ ಒಂದು ಸಂಸ್ಥೆಯು ಚೇಲಿಂದು ಈ ಬಗ್ಗೆ ತಮ್ಮ ಅಮೌಲ್ಯ ನಿರ್ವಾರಗಳನ್ನು ಸಮಾಜದ ಮುಂದೆ ಇಟ್ಟು ಹಿಂದಿನ ಇಲಕಲ್ಲ ಶ್ರೀ ಮಹಾಂತ ಶಿವಯೋಗಿಗಳವರ ಹಿಂದಿನ ಶ್ರೀ ಹಾಳಕೇರಿ ಸ್ವಾಮಿಗಳವರ ಶ್ರೀ ವೈರಾಗ್ಯದ ಮಲ್ಲಣಾರ್ಯರ ಹಾಗು ಶ್ರೀ ಸಿರಸಂಗಿ ದೇಸಾಯರ ವಾರದ ನುಲ್ಲಪ್ಪನವರ ದೇವಿಹೊಸೂರ ರಟ್ಟರೇ ಮೊದಲಾದವರ ಬೆಂಬಲ ಸಹಕಾರಗಳೊಡನೆ ಶಿವಯೋಗ ಮಂದಿರವನ್ನು ಸ್ಥಾಪಿಸಿದರು ವೀರಶೈವ ಸಿದ್ಧಾಂತ ಪ್ರಚಾರಕ್ಕೆ ಮತ್ತು ವೀರಶೈವ ಸಂಸ್ಕೃತಿಯ ಪುನರುದ್ಧಾರಕ್ಕೆ ವಿದ್ಯಾವಂತರಾದ ನಿಸ್ಪೃಹರಾದ ಮಠಾಧೀಶ್ವರರೇ ಸಮರ್ಥರಾದ ಸಂಘಟಕರೆಂದೂ ಉತ್ತಮ ಸಾಮಾಜಿಕ ಕಾರ್ಯಕರ್ತರಾದ ಈ ಮಠರಾಡಿಸಿರುವ ನಿರ್ಮಾಣಕ್ಕಾಗಿಯೇ ತಿ ಯೋಗ ಮಂದಿರದ ತತ್ವತ್ವವೆಂದೂ ತಮ್ಮ ಜೀವಮಾನ ವನ್ನೆಲ್ಲಾ ಅದಕ್ಕಾಗಿಯೆ ತ್ಯಜಿಸಿ ತಮ್ಮ ಜ್ಞಾನ ತಪಸ್ಸನ್ನು ದಾರೆಯೆರೆದು ಸಂಸ್ಥೆಯನ್ನು ಆಟ್ಟಿ ಬಳಸಿದರು

ವಿಜಾಪುರ ಜಿಲ್ಲೆ ಬಾದಾಮಿಗೆ ಸಮೀಪದ ಮಲಕ್ರಾಬ ನದಿಯ ದಡವಲ್ಲಿ ಗಿರಿವನಗಳಿಂದಾವೃತ್ತ ವಾದ ಬನದಲ್ಲಿ ಕ್ಷಾತ್ರಕ್ಕೆ ಪೂರ್ವದಲ್ಲಿ ಮಹಾ ಕೂಡಲೆಶ್ವರಿಕ್ಕೆ ದ್ವಾಪದಲ್ಲಿ ಸಿದ್ಧರ ಕೊಳ್ಳಕ್ಕು ಕಲ್ಪಿಸಿ ದಲ್ಲಿ ತರುಲತೆಗಳಿಂದ ಸುಶೋಭಿತವಾದ ಅಧ್ಯಾತ್ಮಿಕ ಮತ್ತು ಪೌರಾಣಿಕ ಹಿನ್ನೆಲೆಯುಳ್ಳ ಸುರಮ್ಯ ನಿರ್ಮಲ ಶಾಂತವಾತಾವರಣವನ್ನಾಗುಳ್ಳ ಪವಿತ್ರ ಭೂಮಿಯಲ್ಲಿ ಯೋಗವಿದ್ಯಾಮಂದಿರವಾಗಿದ್ದ ಈ ಗುರುಕುಲವು ಜನ್ಮತಾಳಿದಂದಿನಿಂದ ಯೋಗ್ಯನಾದ ಸ್ವಾಮಿಗಳನ್ನು ತರಬೇತುಗೊಳಿಸುತ್ತ ಬಂದಿದ ಮತ್ತು ವೀರಶೈವರ ಒಂದು ಹೆಮ್ಮೆಯ ಸಂಸ್ಥೆಯಾಗಿದೆ ಎಂಬುದೂ ಮಂದಿರವು ವೀರಶೈವ ತದ್ಯಾತ್ಮವಿದ್ಯಾಪೀಠವಾಗಿ ವೀರಶೈವ ಮೆರ್ವಸಂಸ್ಕೃತಿಗಳ ಪ್ರಸಾರಕೇಂದ್ರವಾಗಿ ವೀರಶೈವ ತತ್ವಾನುಸಂಧಾನ ಸಂಸ್ಥೆಯಾಗಿ ಐಷಿಷ್ಯ ಶ್ರಮವಂತೆ ಒಂದು ಆದರ್ಶ ವಿದ್ಯಾಪೀಠವಾಗಿ ಬೇಕೆಂಬುದು ಶ್ರೀ ಹಾನಗಲ್ಲ ಸ್ವಾಮಿಗಳವರ ಮತ್ತು ಸಮಾಜದ ಮುಖ್ಯ ವ್ಯೇಯವಾಗಿದ್ದಿತು ಅವರೆ ಶಿವಯೋಗ ಮಂದಿರ ಸಂಸ್ಥೆಯ ಈಗಿನ ಸಂಚಾಲಕರು (ಟ್ರಸ್ಟಿಗಳು) ಈ ಮಂದಿರದ ಚರಸೊತ್ತಿನಲ್ಲಿ ೨ ಲಕ್ಷ ರೂಪಾಯಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಟ್ಟು ಶಿವಯೋಗ ಮಂದಿರವನ್ನು ಸರ್ವಧರ್ಮ ಸಮನ್ವಯಾರಿತ್ಯಾ ಅಧ್ಯಾತ್ಮ ವಿದ್ಯಾಪೀಠವಾಗಿ ಮಾರ್ಪಡಿಸುವ ಹವಣಿಕೆಯಲ್ಲಿ ಇದ್ದಾರೆಂದು ಕೇಳಿ ಬರುತ್ತಿದೆ ಈ ಸಂಸ್ಥೆಯ ಧ್ಯೇಯಗಳನ್ನು ಮೆಚ್ಚಿ ಉದಯುಕ್ತಕೆಯನ್ನು ಮನಗೊಂಡು ಸಮಾಜ ಹಾಗು ಧರ್ಮಗಳ ಪುನರುಜ್ಜೀವನೆಗಾಗಿ ಹಾರ್ದೆಸಿದ ವೀರ ಶೈವ ಸಮಾಜವು ಈ ಸಂಸ್ಥೆಗೆ ಹತ್ತಾರು ಲಕ್ಷ ರೂಪಾಯಿಗಳ ನಿಧಿಯನ್ನು ಕೊಟ್ಟಿತು. ಹಾಗೆ ಈ ಸಂಸ್ಥೆಯ ಟ್ರಸ್ಟಿಗಳು ಅದರ ಧ್ಯೇಯಾನುಗುಣವಾಗಿ ನಡೆಸಿಕೊಂಡು ಹೋಗದೆ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ ಸರ್ವಧರ್ಮಗಳ ಅಧ್ಯಾತ್ಮ ವಿದ್ಯಾಪೀಠವನ್ನು ಮಾಡುವರು ಉಚಿತವೇ? ವೀರಶೈವ ಧರ್ಮ ಸಂಸ್ಕೃತಿಗಳ ರಕ್ಷಣೆಗೆ ನುತ್ತು ಶಿವಾನುಭವ ಪ್ರಸಾರಕ್ಕೆ ಇಂಥ ಇನ್ನೂ ಅನೇಕ ಶಿವಯೋಗಮಂದಿರಗಳು ಬೇಕಾಗಿರುವಾಗ ಇದ್ದ ಒಂದು ಶಿವಯೋಗಮಂದಿರ ವನ್ನು ಮುಚ್ಚುವ ಈ ವಿಚಾರದಿಂದ ಸಮಾಜಕ್ಕೆ ದೊಡ್ಡ ಅಘಾತವೇ ಆಗಿದೆ. ನಿಸ್ಪೃಹರಿಂದೂ ಕುಶಲ ಕಾರ್ಯ ಕರ್ತರೆಂದೂ ಸಮಾಜದ ಕಣ್ಮಣಿಗಳೆಂದೂ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಸಮರ್ಥರಿದ್ದಾರೆಂದೂ ಈ ಸಂಚಾಲಕರನ್ನು ನಂಬಿ ಸಮಾಜವು ಶಿವಯೋಗಮಂದಿರ ಸಂಸ್ಥೆಗಾಗಿ ತನ್ನ ತನು ಮನ ಧನಗಳನ್ನು ಸಲ್ಲಿಸಿತು ಆ ಸಂಸ್ಥೆಯನ್ನೆತ್ತಿ ಸ್ಥಾಪಿಸಿದವರು, ಪೋಷಿಸಿದವರು, ಅಭಿಮಾನಿಗಳಿಗೆ ಅಭಿಪ್ರಾಯವನ್ನು ಗಮನಿಸದೆ ಅಧ್ಯಾತ್ಮವಿದ್ಯಾಪೀಠವಾಗಿ ಮಾರ್ಪಡಿಸಬೇಕೆಂಬ ಉದ್ದೇಶ ಅವರಿಗೆ ಸಲ್ಲದು ಇದು ಶ್ರೀ ಹಾನಗಲ್ಲ ಸ್ವಾಮಿಗಳವರ ಆದರ್ಶವಲ್ಲ ಸಮಾಜವೂ ಇದನ್ನು ಬಯಸುತ್ತಿಲ್ಲ ಶ್ರೀ ಹಾನಗಲ್ಲ ಸ್ವಾಮಿಗಳವರ ಶಿವಯೋಗಮಂದಿರದ ಅಭಿವೃದ್ಧಿಗಾಗಿ ಸಮಾಜವು ನಿಧಿಯನ್ನು ಕೊಟ್ಟಿದೆಯೇ ಹೊರತು ಅಧ್ಯಾತ್ಮವಿದ್ಯಾಪೀಠಕ್ಕಾಗಿ ಕೊಟ್ಟಿಲ್ಲ ಈಗಿದ್ದ ಒಂದು ಸುಸಜ್ಜಿತ ಸಂಸ್ಥೆ, ಸಂಸ್ಥೆಯನ್ನು ನಡೆಸಲು ಸಾಕಷ್ಟು ಹಣ, ನಡೆಸುವವರಿಗೆ ಸಮಾಜದ ಸಹಕಾರಗಳಲಾಗ ತಂ ಸಂಸ್ಥೆಯನ್ನು ಮಾರ್ಪಡಿಸಿ ಅಧ್ಯಾತ್ಮವಿದ್ಯಾಪೀಠವಾಗಿ ಮಾಡುವ ಅವಶ್ಯಕತೆಯಾದರೂ ಏನು ?

ವೈರಾಗ್ಯಮೂರ್ತಿಗಳಿರೂ, ಪರಮಜ್ಞಾನಿಗಳೂ ತಮ್ಮ ಆಯುಷ್ಯವನ್ನೆಲ್ಲಾ ಸಮಾಜದ ಹಿತಚಿಂತನೆಗಾಗಿ ಶ್ರಮಿಸಿದವರೂ ನೂರಿದರ್ಶಗಳೂ ಆದ ಶ್ರೀ ಹಾನಗಲ್ಲು ಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ಸ್ಥಾಪಿಯಿಸಿ ಅವರ ಮಾರ್ಗದರ್ಶನದಲ್ಲಿ ಬೆಳೆದುದು ಈಗಿನ ಸಂಚಾಲಕರಿಗೆ ಶಿವಯೋಗಮಂದಿರದ ವಿಷಯದಲ್ಲಿ ಅವರ ಭಾವನೆ ವಿಚಾರ ಮನೋಗತವೇನಿತ್ತು, ಅವರ ಧ್ಯೇಯವೇನಿತ್ತು, ಆ ಸಂಸ್ಥೆಯನ್ನು ಹೇಗೆ ನಡೆಸ ಬೇಕೆಂದು ಸಂಕಲ್ಪಿಸಿದ್ದರು, ಈ ಪ್ರತಿಯೊಂದು ಗಿತ್ತಿದೆ ಈ ಸಂಸ್ಥೆಯ ಧರ್ಮದರ್ಶನಗಳನ್ನು ನಿಷ್ಠಾವಂತ ಸಮಾಜದ ಹಿತಚಿಂತಕರೆಂದೂ ಪರಮಧರ್ಮ ಮೂರ್ತಿಗಳೆಂದೂ ಸಮಾಜವು ಭಾವಿಸಿರುತ್ತದೆ ಹೀಗಿರುವಾಗ ಶ್ರೀ ಹಾನಗಲ್ಲು ಸ್ವಾಮಿಗಳವರ ಆದರ್ಶ ವನ್ನು ಒಬ್ಬರೂ ಉಲ್ಲಿಸಲಿಲ್ಲ ಅವರ ಸಂಕಲ್ಪ ಭಂಗ ಮಾಡಿದರು ಅನ್ನುವ ಮಾತಿಗೆ ದೊರೆಯನ್ನು ಹೊರು ವುದು ಉಚಿತವಲ್ಲ

ಶಿವಯೋಗಮಂದಿರಕ್ಕೆ ಅನೇಕ ಶಾಖಾಮಂದಿರಗಳಿವೆ ದ್ದರೂ ಆವುಗಳಲ್ಲಿ ಒಂದನ್ನಾದರೂ ಶಿವಯೋಗಿ ಮಂದಿರದಂತೆ ಸಂಸ್ಥಿಯಿನವು ಕಳೆದ ೫೦ ವರ್ಷಗಳಲ್ಲಿ ಶಕ್ತಯಾಗಲಿಲ್ಲ ಅಂತಹದಲ್ಲಿ ಇದೊಂದು ಸಂಸ್ಥೆಯನ್ನು ಈ ರೀತಿ ಸರ್ಪಾಡಿಸುವುದು ಸರಿಯಲ್ಲ. ಈ ಸಂಸ್ಥೆಯು ಸಮಾಜಕ್ಕೆ ಉಳಿಯಲೇಬೇಕು ಸಮಾಜವು ಇದನ್ನು ಅಧ್ಯಾತ್ಮವಿದ್ಯಾಪೀಠವಾಗಿ ಮಾರ್ಪಡಲು ಒಪ್ಪಲಾರದು ಈ ದಿವ್ಯಾನುಭವನ್ನು ಧರ್ಮದರ್ಶಿಗಳು (ಟ್ರಸ್ಟಿಗಳು) ಬೆಟ್ಟುಬಿಡಬೇಕೆಂದು ಕಳಕಳಿಯಿಂದ ವಿನಂತಿಸುತ್ತೇವೆ

ಶಿವಯೋಗಮಂದಿರದ ಅಭಿಮಾನಿ.

ಬಚ್ಚೆಟ್ಟೆದ್ದು ಗೆದ್ದಲಿಗೆ

ಚಿತ್ರದುರ್ಗದ ಕಲ್ಯಾಣಿ ಸ್ಟೋರ್ಸ್ ಮಾಲೀಕರಾದ ಶ್ರೀ ಸುಬ್ಬರಾಯಶೆಟ್ಟಿ ಯೆಂಬುವರು ಗಳಿಟ್ಟೆದ್ದ ಸುಮಾರು ಎಳವತ್ತು ಸಹಸ್ರ ರೂಪಾಯಿಗಳ ನೋಟು ಗಳಿಗೆ ಗೆದ್ದಲು ಹಿಡಿದ ಪ್ರಸಂಗ ವರದಿಯಾಗಿದೆ ಶ್ರೀ ಶೆಟ್ಟಿರು ಕಬ್ಬಿಣದ ಪೆಟ್ಟಿಗೆಯೊಂದರಲ್ಲಿ ಆ ನೋಟು ಗಳನ್ನು ಇಟ್ಟಿದ್ದರೆಂದೂ, ಯಾತ್ರೆಗೋ ಮೂಲೆಯಲ್ಲಿ ರಂಧ್ರವೊಂದು ಬಿದ್ದು, ಆ ರಂಧ್ರದ ಮೂಲಕ ಮತ್ತು ಪೆಟ್ಟಿಗೆ ಸೀಳು ಹರಿದು, ಗೆದ್ದಲು ಹುಳುಗಳು ನೋಟು ಗಳನ್ನು ತಿನ್ನಲು ಕಾರಣವಾಗಿರಬಹುದೆಂದು ತೀರ್ಮಾನಿಸಿದೆ.

ಆತ್ಮವಿಚಾರಪತ್ರಿಕಾ ಸಮಾಚಾರನೇನು.

ಆತ್ಮವಿಚಾರ ಪತ್ರಿಕಾ ಸಂಪಾದಕರಾದ ಶ್ರೀಮಾನ್ ಎಂ. ಎಲ್. ನಾಗೇಶ್ವರರು ಧನಾರ್ಜನಾ ನೈಪುಣ್ಯ ಕಲಾಕೌಶಲರು. ಇವರು ತಮ್ಮ ಮೊದಲನೆ ವಯಸ್ಸಿನಲ್ಲಿ ಆಸ್ಪತ್ರೆಯಲ್ಲಿ ಕಾಂಪೌಂಡರಾಗಿದ್ದು ಬರುತ್ತಿದ್ದ ಪಗಾರ ಆಲ್ಪವಾದ್ದರಿಂದ ಆ ನೌಕರಿಯನ್ನು ತ್ಯಜಿಸಿ ಇನ್ಷೂರೆನ್ಸ್ ಕಂಪನಿಯೊಂದನ್ನು ತೆರೆದು ತನ್ಮೂಲಕ ಲಕ್ಷಾಂತರ ಧನವನ್ನು ಸಂಗ್ರಹಿಸಿ ಪಾಲಿಸಿದಾರರಿಗೆ ಪರಲೋಕದ ಬ್ಯಾಂಕಿನ್ನು ತೋರಿಸಿ ತಾವು ಕಂಪನಿಯ ಜವಾಬ್ದಾರಿಯನ್ನು ಹೊರದೆ ಕಂಪನಿಯ ಆಸ್ತಿಯನ್ನು ತಮ್ಮ ಶ್ರೀಮತಿಯವರ ಪಾಲಿಗೆ ವಹಿಸಿ, ತಾವು ನಿರಂಜನ ಪ್ರಣವ ಸ್ವರೂಪಿಗಳಾದರು. ಆಗ ಪಾಲಿಸಿದಾರರು ಇವರನ್ನು ಕೋರ್ಟಿಗೆಳೆದಾಗ ಇವರಲ್ಲಿ ನಿರಂಜನ ಸ್ವರೂಪ ಕಂಡದ್ದರಿಂದ ತಾವು ತಮ್ಮ ದಡ್ಡತನಕ್ಕೆ ಪಶ್ಚಾತ್ತಾಪಪಟ್ಟುಕೊಂಡರು ಆ ಸಮಯ ದಲ್ಲಿ ಶ್ರೀಮಾನರಿಗೆ ತಪಸ್ಸಿದ್ಧಿಗಾಗಿ ಎರ್ಪಟ್ಟದ್ದ ದಿವ್ಯ ಋಷ್ಯಾಶ್ರಮವಾಸ ದೊರೆತು ಕೆಲಕಾಲ ವಿಶ್ರಾಂತಿ ಸುಖವನ್ನನುಭವಿಸಿದರು ತದನಂತರ ಆ ಸಮಯ ಸನ್ಯಾಸವನ್ನು ತ್ಯಜಿಸಿ ಮತ್ತೊಂದು ಕಂಪನಿಯನ್ನು ಸಮುದ್ರದ ಧಡದಲ್ಲಿ ತೆಗೆದು ಪಾಲಸಿದಾರರನ್ನು ಬಂಗಾಳಾ ಸಮುದ್ರಯಾತ್ರೆಗಾಗಿ ಕಳುಹಿಸಿದರು ಇಲ್ಲಿಗೆ ಇವರಿಗೆ ಬಾಲ್ಯ, ಯೌನ್ವನ ಪ್ರೌಢಾವಸ್ಥೆಗಳು ಕಳೆದವು. ಈಗ ವೃದ್ಧಾಪ್ಯದಲ್ಲಿಯೂ ಸಹ ತಮ್ಮ ಬುದ್ಧಿ ಚತುರತೆಯ ಪ್ರೌಢಿಮೆಯಿಂದ, ಆತ್ಮವಿಚಾರ ಪತ್ರಿಕೆಯನ್ನು ಸೃಷ್ಟಿಸಿ ತನ್ಮೂಲಕ ವೀರಶೈವ ಸಂಸ್ಥಾ ನಾರ್ಥೀಶ್ವರರಿಂದಲೂ ಮಾನ್ಯಶ್ರೀಮಂತರಿಂದಲೂ ಆತ್ಮ ವಿಚಾರ ಪತ್ರಿಕೆಯ ಬೆಳವಣಿಗೆಗಾಗಿಯೂ ಮತ್ತು ಆತ್ಮವಿಚಾರಮಂದಿರಕ್ಕಾಗಿಯೂ, ಮತ್ತು ಪ್ರೆಸ್ಸಿಗಾಗಿಯೂ ಹಣಬೇಕೆಂದು ವೀರಶೈವ ಸಮಾಜದವರಿಂದ ಲಕ್ಷಗಟ್ಟಲೆ ಧನವನ್ನು ವಸೂಲಿಮಾಡಿ ಪ್ರೆಸ್ಸನ್ನು ತಂದು ಕೆಲವು ದಿನಗಳಲ್ಲೆ ಪ್ರೆಸ್ಸನ್ನು ಮೈಸೂರಿನ ಶ್ರೀ ಚನ್ನಪ್ಪ ಎಂಬವರಿಗೆ ಮಾರಿ ಗಳಿಸಿದ ಸಾರ್ವಜನಿಕ ಹಣದಿಂದ ಶ್ರೀಮತಿಯವರ ಹೆಸರಿಗೆ ಮನೆ ಹಿಡಿದರು. ಸಾರ್ವಜನಿಕ ಹಣದ ಸ್ವಂತ ವಿನಿಮಯ ವನ್ನು ಮಾಡಿಕೊಳ್ಳಲು ಅನುಕೂಲಿಸುವಂತೆ ವೀರಶೈವ ರಲ್ಲಿಯೇ ಒಂದು ವಿಧವಾದ ಕ್ರಾಂತಿಯನ್ನೆಬ್ಬಿಸಿ ಸ್ವಕಾರ್ಯ ಸಾಧನೆಗಾಗಿ ಹೊರಟ ಆತ್ಮವಿಚಾರ ಪತ್ರಿಕೆಯಲ್ಲಿ ವೀರಶೈವಧರ್ಮವನ್ನೂ, ವೀರಶೈವ ಧರ್ಮವನ್ನೂ, ಮತ್ತು ವೀರಶೈವ ಕಂಡಿತರನ್ನೂ ಅಲ್ಲದೆ ವೀರಶೈವ ಜಗದ್ಗುರುಪೀಠಗಳಿಗಳವರನ್ನೂ ಸಹ, ಗುರುಪರಿಗಾರೆಂಬ ಭಯ ಭಕ್ತಿರಹಿತ ಬರವಣಿಗೆಯಿಂದ ಸಾಮಾನ್ಯವಾಗಿ ಬರೆಯಹತ್ತಿದರು. ಈ ವಿಚಾರವು ಆತ್ಮವಿಚಾರಪತ್ರಿಕೆ ಯನ್ನೋದುವ ಪ್ರತಿಯೊಬ್ಬರಿಗೂ ತಿಳಿದ ವಿಷಯವೇ ಆಗಿದೆ. ಇಷ್ಟಕ್ಕೆ ಇವರ ಮನಸ್ಸು ತೃಪ್ತಿಯಾಗದೆ ಸಂಸ್ಕೃತ ಕಾಲೇಜುಗಳಲ್ಲಿ ಓದುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಾಗಿ ಇಟ್ಟಿರುವ ಶ್ರೀಕರ ಭಾಷ್ಯ, ಶಿವಾಧ್ವೈತಮಂಜರಿ ಮುಂತಾದ ಪುಸ್ತಕಗಳನ್ನು ತೆಗೆಯಬೇಕೆಂದೂ ಅದರ ಜಾಗದಲ್ಲಿ ಶಂಕರಾದ್ವೈತ ಕ್ಕೆ ಸಂಬಂಧಿಸಿದ ಪುಸ್ತಕಗಳನ್ನಿಡಬೇಕೆಂದೂ ಸರ್ಕಾರ ದಲ್ಲಿಯೂ ಸಹ ತಮ್ಮ ಪ್ರಭಾವವನ್ನು ಬೀರಿ ಪರಮ ತೀಯ ಪಂಡಿತರಲ್ಲಿ, ವೀರಶೈವ ತತ್ವವಿಚಾರವಾಗಿ ತಾತ್ಪಾರ್ಯಭಾನ ಮೂಡುವಂತೆ ಮಾಡಿರುವುದು ಸಾಚಿಕ ವೈದಿಕ್ಕೆ ಗೊತ್ತಾದ ವಿಷಯವು ಅಗಿದೆ, ಶ್ರೀಮಾನ್ ನಾಗೇಶ್ವರರು ಇತ್ತೀಚೆಗೆ ಲಾಟರಿಮೂಲಕ ಅಗಾಧ ಸಂಪತ್ತನ್ನು ಗಳಿಸಿರುತ್ತಾರೆ ಈ ನಗದು ಹಣವೆಲ್ಲಾ ಚರಸ್ಥಿರ ಆಸ್ತಿಗಳೆಲ್ಲಾ ಸಾರ್ವಜನಿಕ ಸೊತ್ತಾದ್ದರಿಂದ ಶ್ರೀಮಾನ್ ನಾಗೇಶ್ವರರು ಆತ್ಮವಿಚಾರಮಂದಿರ ಮತ್ತು ಸಂಬಧಪಟ್ಟ ಚರಸ್ಥಿರ ಆಸ್ತಿಗಳಿಗೆ ಟ್ರಸ್ಟ್ ಕಮಿಟಿಯನ್ನು ಏರ್ಪಡಿಸಿ ಕಮಿಟಿಯ ವಶಕ್ಕೆ ಲೆಕ್ಕ ಪತ್ರಗಳ ಸುಲಲಿತ ವಹಿಸಿಕೊಡಬೇಕು ಇಲ್ಲವಾದರೆ ಸಮಾಜವಾದರೂ ಎಚ್ಚೆತ್ತು ಈ ಸಾರ್ವಜನಿಕಸ್ವತ್ತನ್ನು ಸ್ವಂತ ಉಪಯೋಗಕ್ಕೆ ಬಳಸದಂತೆ ಆತ್ಮವಿಚಾರ ಪತ್ರಿಕಾಮಂದಿರದ ಸಮಾಚಾರವೇನು ಎಂಬುದನ್ನು ಕೂಡಲೆ ಗಮನಕ್ಕೆ ತೆಗೆದುಕೊಳ್ಳುವರೆಂದು ಭಾವಿಸಿ ಲಾಗಿದೆ

ಮೈಸೂರು ನಗರವಾಸಿ.

ಸಂಚಾರಿಯ ಸರಸವಾಣಿ

ಕೇಂದ್ರದ ಗೃಹಮಂತ್ರಿಗಳಾದ ಶ್ರೀ ಪಂತರ ಜನ್ಮ ಭೂಮಿ ಸಂಯುಕ್ತಪ್ರಾಂತದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ಸು ಇತ್ತೀಚೆಗೆ ಯಾವ ಉಪಚುನಾವಣೆ ಯಲ್ಲಿಯೂ ಜಯ ದೊರಕಿಸಲ್ಲವೆಂಬ ಭಯದಿಂದ ಪಂತರು ೧೯೩೬ ನೇ ಫೆಬ್ರುವರಿಯಲ್ಲಿ ನಡೆಯಬೇಕಾ ಗಿದ್ದ ಮಹಾಚುನಾವಣೆಯನ್ನು ೧೯೩೫ ನೇ ಫೆಬ್ರುವರಿಗೆ ಮುಂದುವರಿಸಬೇಕೆಂದು ಶ್ರೀ ನೆಹರೂರವರೊಡನೆ ವಾದ ನಡೆಸಿರುವರಂತೆ ಜಯಾಪಜಯಗಳನ್ನು ಲೆಕ್ಕಿಸದೆ ಸತ್ಯದ ತಳಹದಿಯಮೇಲೆ ರಾಜ್ಯ ಕಟ್ಟಿಸ್ತಿರುವ ನೆಹರೂರವರ ವ್ಯಕ್ತಿತ್ವದಲ್ಲಿ ಹಂತರ ಪಾಡೇನೆಂಬುದು ಪ್ರಜಾವಗ್ಗದಲ್ಲಿ ಬಲವಾದ ಟೀಕೆಯಂತೆ?

* * *

ಹಳೇ ಮೈಸೂರಿನ ರಾಜಪ್ರಭುತ್ವದಲ್ಲಿ ವಿಕಪಕ್ಷೀಯ ನಾಗಿ ಹೆಸರುಗಳಿಸಿದ ಶ್ರೀ ವಿಶ್ವೇಶ್ವರಯ್ಯನವರಂಥ ತಲೆನಡುಗಿ ನ ಮುಖಂಡರಿಂದ ಉಪದೇಶಪಡೆದ ಈಗಿನ ಮುಖ್ಯಾಧಿಕಾರಿಯವರು ಪ್ರಜಾಪ್ರಭುತ್ವದಲ್ಲಿ ಅನೇಕಪಕ್ಷಗಳ ಪರವಾಗಿದ್ದ ವಿಶಾಲ ಮೈಸೂರಿನ ವಿಶಾಲ ದೃಷ್ಟಿಯನ್ನು, ಸಂಕುಚಿತಗೊಳಿಸಲು ಹವಣಿಸುತ್ತಿರುವುದು ಕನ್ನಡಿಗರ ದುರ್ದೈವವಲ್ಲವೆ?

* * *

ದೊಡ್ಡ ದೊಡ್ಡ ಸ್ವಾಮಿಗಳು ದುಡ್ಡು ಕೊಟ್ಟು ಸಾಕಿದ ಆತ್ಮವಿಚಾರವೆಂಬ ಆರಾಣಿಯು ಈಚೆಗಿನ ಮನೆಯೊಳಿನಿತ ಕರಿಣಿ ಯಾಗಿದೆಯೆಂದು ಎಷ್ಟೋ ಜನರು ಲಡಿಕೊಳ್ಳುತ್ತಿರುವುದು ಕೇವಲಕುಹಕವೆಂದು ಹೇಳಬಹುದಲ್ಲವೆ?

* * *

ಕಳ್ಳತನ ಮಾಡುವವರ ಕೈಗ್ಗಳನ್ನು ಕತ್ತರಿಸಿಹಾಕ ಬೇಕೆಂಬ ಪೂರ್ವಿಕರ ಸಿದ್ಧಾಂತವನ್ನೊಂದ ಕಳ್ಳನು ಸಾಯುವವರೆಗೆ ಕತ್ತಗಳನ್ನು ಅನುಭವಿಸಬೇಕಾಗು ತ್ತಿತ್ತು. ಆದರೆ ಈಗಿನ ಕಾಯದೆಯಲ್ಲಿ ಕಳ್ಳನು ಜೈಲಿನಲ್ಲಿದ್ದುಕೊಂಡು ಮೂರುಹೊತ್ತು ಊಟ ಹಿಂಡಿ ಸೇವಿಸುತ್ತ ಡಾಕ್ಟರ ಚಿಕಿತ್ಸೆಯಿಂದನೆ ಸುಖವಾಗಿ ವಿಶ್ರಾಂತಿಗೈದು ಚೇತನಿಸುತ್ತಿರುವನು ಅದಕ್ಕಾಗಿಯೇ ಎಷ್ಟೋ ಜನರು ಜೈಲಿಗೆ ಹೋಗಲಿಕ್ಕೆ ಸಿದ್ಧರಾಗಿರುವರು ಇಂಥ ಕಳ್ಳರಿಗಾಗುವ ಶಿಕ್ಷೆ ಇವರ ಹೆಂಡರು ಮಕ್ಕಳಿಗೆ ಬಂದಿರುತ್ತದೆ ಇದಕ್ಕನ್ನುಬೇಕು ಕಲಿಯ ಪ್ರಾಬಲ್ಯ.

* * *

ವಿಶಾಲ ಮೈಸೂರಿನ ಮುಖ್ಯ ಮಂತ್ರಿಗಳ ನೇಮಕ ದಲ್ಲಿ ವಿಶೇಷ ತಿಕ್ಕಾಟ ಬಂದಿರುವುದು ಸರಿಯಷ್ಟೇ. ಹಾಗಾದರೆ ಈಗ ನಿಶ್ಚಿತವಾದ ಪ್ರಕಾರ ನಾಲ್ಕು ಭಾಗ ಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಮಂತ್ರಿಮಂಡಲ ವೆನ್ನು ರಚಿಸಿದ್ದಾದರೆ ಈ ತೊಂದರೆಯು ತೀಕ್ಷ್ಣದಲ್ಲಿಯೆ ಪರಿಹಾರವಾಗಬಹುದಲ್ಲವೆ?

* * *

ನೂತನ ಪ್ರಾಂತೋದಯದ ಸುಸಮಯದಲ್ಲಿ ಒರಿ ಸ್ಸಾದ ಮುಖ್ಯಮಂತ್ರಿ ಶ್ರೀ ಜೌಧರಿಯವರು ತಮ್ಮ ಮಂತ್ರಿತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರಂತೆ. ಇವರು ತಮ್ಮ ಅಧಿಕಾರಗಿರಿಯಲ್ಲಿ ಖಜಾನೆಸೇವೆಯನ್ನು ಚೆನ್ನಾಗಿ ನಿರಾಡಿ ಬೇಕಾದಷ್ಟು ದುಡ್ಡು ಗಳಿಸಿರಬಹು ದಲ್ಲವೆ? ಇದು ಈಗಿನ ಮಂತ್ರಿಗಳ ಜಾಣ್ಮೆಯ ಕುರು ಹಾಗಿದೆ ಇವರೆಲ್ಲರು ತಮಗಿರುವ ಆಟೋಸವರಿಲ್ ಮೂಲಕ ಎಲ್ಲರನ್ನೂ ಬೆದರಿಸಿ ದುಡ್ಡು ಗಳಿಸುವದು ನಂತರ ರಾಜೀನಾಮೆ ಮೂಲಕ ಗುದ್ದು ಸೇರುವದು. ಇದೇ ಮಂತ್ರಿಗಳ ನಿಜವಾದ ಧನಸೇವೆಯಲ್ಲವೆ?

* * *

ಮಹಾರಾಷ್ಟ್ರ-ಗುಜರಾತ ಪ್ರಾಂತಗಳ ಜನತಾ ಪ್ರೇಮವನ್ನೊ ಮುಂಬೈ ಪ್ರಾಂತದ ಕಾಂಗ್ರೆಸ್ಸಿನ ಬಹುಮತವನ್ನು ಪಡೆಯದೆ ಇದ್ದ ಶ್ರೀ ಮುರಾರ್ಜಿ ದೇಸಾಯರಿಗೆ ಕೇಂದ್ರದಲ್ಲಿ ಸ್ಥಳಕೊಟ್ಟು ಕೂಡಲೆ ಅಡ್ಡರ ಹೊರಡಿಸುವುದು ಕಾಂಗ್ರೆಸ್ ಸರ್ಕಾರದ ವಿಶೇಷ ಅಭಿಮಾನವನ್ನು ಸೃಷ್ಟಪಡಿಸುತ್ತಿರುವು ದಲ್ಲವೆ?

* * *

ದ್ವಿಭಾಷಾ ಮುಂಬೈ ಪ್ರಾಂತದ ಮುಖ್ಯಮಂತ್ರಿಸ್ಥಾ ಗುಜರಾತೀಯರಿಗೆ ಸಕ್ಕರೆಯ ಕಛ್ಚೆಯಂತೆ ಮುರಾರ್ಜಿದೇಸಾಯರನ್ನು ಕೈಬಿಟ್ಟು ಹೋದುದ ಅವರ ವಿಧಿವಿಲಾಸವೊ ಅಥವಾ ಕಾಂಗ್ರೆಸ್ಸಿನ ಪ್ರೇಮವಿಲಾಸವೊ ಎಂದು ಕೆಲವರು ಆಶ್ಚರ್ಯಪಡುವರಂತೆ? ಬಾಗಾದ ಭಾಷಾವಾರ ರೀತಿಯಲ್ಲಿ ಮಹಾರಾಷ್ಟ್ರ-ಗುಜರಾ ಪ್ರಾಂತಗಳು ಬೇರೆ ಬೇರೆ ಆದಮೇಲೂ ಮುರಾರ್ಜಿ ದೇಸಾಯರ ನಾಯಕತ್ವದ ಶ್ರೀ ಚವ್ಹಾಣರಿಗೆ ಸದ್ಯ ಮುಖ್ಯಮಂತ್ರಿತ್ವ ದೊರೆತಿರುವ ಗುಟ್ಟೂಗಿರಬಹುದಲ್ಲವೆ

* * *

ಇಂಗ್ಲೆಂಡ್ ದೇಶದ ಮುಖ್ಯಮಂತ್ರಿಯೊಬ್ಬ ಆ ಸೊತ್ತಿಗೆಯ ಬಗ್ಗೆ ಹೇಳುತ್ತಿದ್ದ ಮಾತು ಈಗ ಸತ್ಯವಾ ಪರಿಣಮಿಸುತ್ತಿದೆ. "ಕೊನೆಗೆ ಉಳಿಯುವ ರಾಜರೆಂದ ಇಂಗ್ಲೆಂಡಿನ ರಾಜ, ಹಾಗೂ ಇಪ್ಪೀಟಿನ ರಾಜ ಇವ ಬ್ಬರೇ" ಹತ್ತು ವರ್ಷಗಳ ಹಿಂದಿನ ಭಾರತದಲ್ಲಿ ಆರ ನೂರಕ್ಕಿಂತಲೂ ಹೆಚ್ಚು ರಾಜರಿದ್ದರು. ಇಷ್ಟು ಒಂ ರಡು ದಿನ ಗತಿಸಿದರೆ ಭಾರತದಲ್ಲಿ ದೀಪ ಹಚ್ಚಿ ಹುಡು ದರೂ ರಾಜರು ದೊರೆಯುವುದಿಲ್ಲ. ಆದರೆ ಮಾಜಿ ರಾಜರಿಗೆ ಮಾತ್ರ ಕೊರತೆ ಇಲ್ಲ

* * *

ಹಿಂದೊಮ್ಮೆ ರಜವಿಯ ಸಹಾಯದಿಂದ ಭಾರತ ಸ ಕಾರವನ್ನೇ ಬೆದರಿಸಿದ ನಿಜಾಮರು ಈಗ ನಗ್ಣರ ಪದವಿಯನ್ನೂ ನಿರಾಕರಿಸಿದ್ದಾರೆ. ಸ್ವಯೀ ಬಂಧಾ ಕವಿತೆಗಳನ್ನು ಬರೆದು ಒತ್ತಾಯದಿಂದ ಪ್ರಕಟಿಸಿಕೊಳ್ಳು ವಂತೆ ಮಾಡುತ್ತಿದ್ದ ನಿಜಾಮರಿಗೆ ಈಗ ಸಾಕಷ್ಟು ವಿಶ್ರಾಂತಿ ಕಾಲ ದೊರೆತಿದೆ. ಅವರಿಗೆ ಎಷ್ಟುಬೇಕೋ ಅಷ್ಟು ಕವಿತೆಗಳನ್ನು ಹೊಸೆಯಲಿ. ಆದರೆ ಅವರ ಕವಿತೆ ಗಳಿಗೆ ಇನ್ನೆಂದೂ ಹಿಂದಿನ ಬೇಡಿಕೆ ಬರಲಾರದು.

ಶೈ|| ಶ್ರೀ ಮುರಘರಾಜೇಂದ್ರ ಮಹಾಸ್ವಾಮಿಗಳವರ ಆತ್ಮಕ್ಕೆ ಭಾಷ್ಪಾಂಜಲಿ ಸಮರ್ಪಣೆ

ಲೇ.—ಶ್ರೀ ಸಿದ್ಧಾಂತ ಶಾಯಿಕನಹಟ್ಟಿ ತಿಪ್ಪೇರುದ್ರಶಾಸ್ತ್ರಿ

ವೀರಶೈವಮತಾಬ್ಧಿ ಚಂದ್ರನೆ ।
ಸಾರಹಟ್ಟಿಸ್ಥಲಯೋಗಿವರ್ಯನೆ ।
ಭೂರಿ ಆತ್ಮಾವರಣ ಸಂಜಾತಾರದೇಶಿಕನೆ ॥
ಜಾರುಚಿತ್ತರದುರ್ಗನಿಲಯನೆ ।
ಧೀರ ನಿಗಮಾಗಮ ಸುವಿದ್ಯನೆ ।
ಪಾರಮಾರ್ಥಜ್ಞಾನಮಂದಿರ ಮುರಘರಾಜೇಂದ್ರ ॥೧॥
ನಿರಘನಿರುಪಮಪುಣ್ಯಮುರ್ತನೆ ।
ಪರಮಮಹಿಮಾಸ್ಥಿತ ತಪೋನಿಧಿ ।
ಸುರಭಿಚಂತಾಮಣಿಗಣೋಪಮ ಕಲಿಯಕಲ್ಪತರು ॥
ಚಿರನಿರಂಜನಸ್ವರೂಪ ಜಯದೇವ ।
ವಿರತಿವಿಖ್ಯಾತಿಯಲಿ ವಿಹರಿಪ ।
ವರಬುಭೋದಯವಿಜಯ ವಿದ್ಯಾನಂದ ವಿಭುವರ್ಯ ॥೨॥
ಅನ್ನದಾನದೆ ವಿದ್ಯೆದಾನದ ।
ಉನ್ನತದ ಮಹಿಮೆಯನುಬೋಧಿಸಿ ।
ಕುನ್ನಿಮಾನವರನ್ನು ಉದ್ಧರಿಸುತಲಿ ನೀಮೆರೆದೆ ॥
ಸನ್ನುತಾಮಳಜ್ಞಾನಮಂದಿರ ।
ಉನ್ನತೋನ್ನತ ಧನದಿ ನಿಮಿಸಿ ।
ಚೆನ್ನಸ್ವರ್ಣಾಕ್ಷರದಿರಚಿಸಿತು ನಿನ್ನ ಚಾರಿತ್ರ್ಯ ॥೩॥
ಕಾಶಿ ಮೊದಲಾದವಿಲಪ್ರಾಂತ್ಯದ ।
ದೇಶಪ್ರಮುಖ್ಯಲದಿ ವಿದ್ಯೆನಿ ।
ವಾಸಮಂದಿರಗಳನು ಸ್ಥಾಪಿಸಿದಂಥಸನ್ಯಾಸ್ಯ ॥
ಲೇಸುಲೇಸೆಂದೆನಿಪ ಕೀರ್ತಿವಿ ।
ಲಾಸದಿಂದಲಿ ಜಯನಿರಂಜನ ।
ದೇಶಿಕೇಂದ್ರನು ನೀನೆ ಭುವನದಿ ಪ್ರಭುವೆ ಜಯ ।
ಜಯತು ॥೪॥
ಅಗಲಿ ಪೋದೆಯ ಹಾ ಶಿವಾಂಶನೆ ।
ಜಗದ ಭರ್ತರ ದುಃಖಳೆವೆನೆ ।
ಹಗರಿರುಳು ಮುಳಗಿಳ್ಳತಿಹರೆ ನಿನ್ನಧ್ಯಾನದಲಿ ॥
ಉಗುನುವಾಗಿಹರಾಜ್ಯ ಕನ್ನಡ ।
ಸುಗಮವಾರ್ತೆಯ ಶಿವನಿಗರ್ಪಿಸಿ ।
ನಗುತಲಾರ್ಚೆಯುವೆನೆ ಕರ್ನಾಟಕದ ಗಣವರ್ಯ ॥೫॥

Edited, Printed and Published by Brahanmathadhiyakshu Sri Mahadevaiah at Sri Panchacharya Electric Press, Sayaji Rao Road, Mysore

EGISTERED No. M. 2266 ॥ ಶ್ರೀಚಾಮುಂಡಿ ಪಂಚಾಂಗಾಯಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಂಗಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಶೀಶಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು — ಹಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಂತೇಶಾಖ್ಯಶಾಸ್ತ್ರಿಗಳವರು.

ಚಿಗಳ ಚಂದಾ ೩ ರೂ.] ಸಂಪಾದಕರು — ಹಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ.೧೦ ಆ.

ಂಪುಟ ೩೦] ಸೋಮವಾರ ತಾ॥ ೫ ನೇ ನವೆಂಬರ್ ೧೯೫೬ [ಸಂಚಿಕೆ ೨೫

ಕನ್ನಡನಾಡಿನ ಉದಯ

ಉದಯವಾಯಿತು ನಮ್ಮ ಚಲುವ ಕನ್ನಡನಾಡು।
ನಮ್ಮೆಲ್ಲರ ಬೆಲೆಯಾಗಿ ಬದುಕಿ ಬಾಳಿದ ನಾಡು ॥ಪ॥

ಒಂದುಗೂಡಿತು ಇಂದು ಹರಿದು ಹಂಚಿದ ನಾಡು ।
ಅಂದು ಇಂದಿಗೆ ತನ್ನ ಛಲವ ನಡಿಸಿದ ನಾಡು ॥
ಹಿಂದೊಮ್ಮೆ ಅದುಭುತದ ಜಯವತೋರಿದ ನಾಡು ।
ಕಂದುಗೊರಲನ ಕೃಪೆಯ ಜವದಿಪಡೆದಿಹನಾಡು ॥೧॥

ಕನ್ನಡದ ದೇವಿಗೆ ಜೆಮ್ಮೆಯ ಹಿರಿನಾಡು ।
ನನ್ನೆಯ ಬಾಲಳಕಿರಿಗೊಲ್ಮೆಯ ಕರಿನಾಡು ॥
ಹೊನ್ನಿ ನಂದದಿ ಸೊಗದಬೆಳಕಬೆಳೆಯುವ ನಾಡು ।
ಪನ್ನೆಂಗಕಯಸನಿಗೆ ಪ್ರೀತತೋರಿದ ನಾಡು ॥೨॥

ಕಾವೇರಿ ಕೃಷ್ಣೆಯಂ ಸುತ್ತುಗಟ್ಟಿಹನಾಡು ।
ದೇವದಾಸವರಿಗಾದಿಕಾರನಾಡು ॥
ಸಾವಧಾನದಿ ಬೆಡಗತೋರುವಮಲೆನಾಡು ।
ಧಾವಪೆಗೆ ಹೆಸರಾಂತ ತುಂಗಭದ್ರೆಯನಾಡು ॥೩॥

ವೀರರುದಿಸಿದನಾಡು ಮೀರಿಬೆಳೆಗಿದನಾಡು ।
ಸಾರಿಮಚ ಕಿತ್ತೂರು ಹನ್ನಮ್ಮನಾನಾಡು ॥
ಮಾರಮಚ ಬೆಳವಡಿ ಮಲ್ಲಮ್ಮನಾನಾಡು ।
ಭೂರಿದಿವಿಜರ ತುಳಿದ ತಾಯಿ ಖಾನುಂದಿಯನಾಡು ॥೪॥

ವಳ್ಳಲಿಗನುಳ್ಳಿಂ ಮಿಕ್ಕಮುಂಬಿಹನಾಡು ।
ಕಳ್ಳಅಳಿಯಂ ಬೆಳೆವ ಜಾಳೆ ತೆಂಗಿನ ನಾಡು ॥
ಸೊಳ್ಳಾಗಿ ಬೆಳೆದಿರ್ಪ ಬತ್ತಗೋದಿಯ ನಾಡು ।
ಅಳ್ಳರವಿ ಅಳಿದ ಯದು ಅರಸರ ನಾಡು ॥೫॥

ಪಡುವಣದಿ ರೇಣುಳಸ ವರವಪಡೆದಿಹ ನಾಡು ।
ಮೂಡಣದಿ ಶ್ರೀ ಗಿರಿಯಮಲ್ಲೇಶನ ನಾಡು ॥
ಗಡಿಮಧ್ಯದುಜ್ಜಯಿನಿ ಮರುಲಸಿದ್ಧನಾಡು ।
ಬಡಗಣದಿಳ್ಕೆಬೆಡದ ವಿಶ್ವನಾಥನನಾಡು ॥೬॥

ಪಂಚಳಲಕದಿ ಮೆರೆವ ಏಳೋರಾಮನ ನಾಡು ।
ಪಂಚಾಚಾರ್ಯಪ್ರಭೆಯಿಂದಿಸಿ ಬೆಳೆದಿಹನಾಡು ॥
ಪಂಚಾಚಾರ್ಯಪ್ರಭೆಯು ಶಾಶಿಶಾಶಕ ನಾಡು ।
ಪಂಚಾಚಾರ್ಯರ ಕೃಪೆಯ ಪಡೆದಿಹನಾಡು ॥೭॥

—ಸಂ.

ಕನ್ನಡನಾಡಿನ ಪರಿಚಯ

ಬೊಳ್ಳ ಜಿಲ್ಲೆ	—ಬಿಜಾಪುರ	೬೫೩೨೮ ಜ ಮೈ.
ಚಿಕ್ಕ ಜಿಲ್ಲೆ	—ಕೊಡಗು	೧೫೪೬ ೦ ಚ. ಮೈ.
ಹೆಚ್ಚು ಜನಸಂಖ್ಯೆ	—ಬೆಂಗಳೂರು	೨೧,೨೨,೦೬೧
ಕಡಿಮೆ ಜನಸಂಖ್ಯೆ	—ಕೊಡಗು	೨,೨೯,೪೦೫
ಹೆಚ್ಚು ಜನಸಾಂದ್ರತೆ	—ಬೆಂಗಳೂರು	ಚ. ಮೈ. ಗೆ ೬೯೦
ಕಡಿಮೆ ,,	—ಕೊಡಗು ,,	೧೪೫
ಹೆಚ್ಚು ಗ್ರಾಮಗಳಿರುವ ಜಿಲ್ಲೆ	—ಕೋಲಾರ	೨೭೨೮
ಕಡಿಮೆ ಗ್ರಾಮಗಳಿರುವ ಜಿಲ್ಲೆ	—ಕೊಡಗು	೪೯೭
ಹೆಚ್ಚು ಪಟ್ಟಣಗಳಿರುವ ಜಿಲ್ಲೆ	—ಬೆಳಗಾಂ	೩೬
ಕಡಿಮೆ ಪಟ್ಟಣಗಳಿರುವ ಜಿಲ್ಲೆ	—ಕೊಡಗು	೨
ಹೆಚ್ಚು ಕನ್ನಡ ಮಾತನಾಡುವವರು ಇರುವ ಜಿಲ್ಲೆ	—ಮೈಸೂರು	೬೩೮,೪೩೮ (ಸೇ. ೯೩.೨)
ಕಡಿಮೆ ,,	—ಕೋಲಾರ	೩೩೮,೭೦೪ (ಸೇ. ೨೨.೧)
ಹೆಚ್ಚು ಸ್ವಂತ ಭೇಸಾಯಗಾರರು ಇರುವ ಜಿಲ್ಲೆ	—ಬೆಂಗಳೂರು	೮೧೧,೩೫೪
ಕಡಿಮೆ ,,	—ಕೊಡಗು	೭೭,೫೭೭
ಹೆಚ್ಚು ಗೇಣಿದಾರರಿರುವ ಜಿಲ್ಲೆ	—ಮಂಗಳೂರು	೪೯೦,೫೭೧
ಕಡಿಮೆ ಗೇಣಿದಾರರಿರುವ ಜಿಲ್ಲೆ	—ಹಾಸಪ	೧೪೪೪೭
ಹೆಚ್ಚು ಅಕ್ಷರಸ್ಥರಿರುವ ಜಿಲ್ಲೆ	—ಬೆಂಗಳೂರು	೫,೫೮,೯೭೮
ಪುರುಷ ಅಕ್ಷರಸ್ಥರಿರುವ ಜಿಲ್ಲೆ	—ಬೆಂಗಳೂರು	೩,೯೯,೭೮೫
ಸ್ತ್ರೀ ಅಕ್ಷರಸ್ಥರಿರುವ ಜಿಲ್ಲೆ	—ಬೆಂಗಳೂರು	೧,೫೯,೧೯೩
ಶೇಕಡ ಹೆಚ್ಚು ಅಕ್ಷರಸ್ಥರು	—ಕೊಡಗು	(ಸೇ. ೨೭.೨)
ಶೇಕಡ ಕಡಿಮೆ ಅಕ್ಷರಸ್ಥರು	—ಬೀದರ್	(ಸೇ. ೭.೪)
ಹೆಚ್ಚು ಪ್ರಾಥಮಿಕ ಶಾಲೆಗಳಿರುವ ಜಿಲ್ಲೆ	—ಬೆಂಗಳೂರು	೧೭೨೦
ನಾಣ್ಯ ಶಾಲೆಗಳು ,,	—ಬೆಂಗಳೂರು	೩೫
ಹೆಚ್ಚು ಮಳೆಬೀಳುವುದು	—ಕಾರ್ಕಳ ತಾಲ್ಲೂಕು	೧೧೫.೯೬ ಅಂ.
ಕಡಿಮೆ ಮಳೆಬೀಳುವುದು	—ಚಳ್ಳಕೆರೆ ತಾಲ್ಲೂಕು	೧೭.೯೯ ಅಂ.
ಹೆಚ್ಚು ಅರಣ್ಯವಿರುವ ಜಿಲ್ಲೆ	—ಉತ್ತರ ಕನ್ನಡ	೧೬,೩೦,೦೦೦ ಎಕರೆ
ಕಡಿಮೆ ಅರಣ್ಯವಿರುವ ಜಿಲ್ಲೆ	—ಮಂಡ್ಯ	೫೨,೨೬೧ ಎಕರೆ
ಹೆಚ್ಚು ಬಂಜರುಭೂಮಿ	—ಉತ್ತರ ಕನ್ನಡ	೩,೬೫,೦೦೦ ಎಕರೆ
ಕಡಿಮೆ ಬಂಜರುಭೂಮಿ	—ತಿಪಟೂರ	೩೩,೨೧೫ ಎಕರೆ
ದೊಡ್ಡ ಹುಲ್ಲುಗಾವಲಿರುವ ಜಿಲ್ಲೆ	—ತಿವಮೊಗ್ಗ	೫,೮೪,೪೨೧ ಎಕರೆ
ಚಿಕ್ಕ ಹುಲ್ಲುಗಾವಲಿರುವ ಜಿಲ್ಲೆ	—ಬಳ್ಳಾರಿ	೧೭,೫೦೦ ಎಕರೆ
ಹೆಚ್ಚು ವ್ಯವಸಾಯವಾಗುವ ಭೂಮಿ ಇರುವ ಜಿಲ್ಲೆ	—ಬಿಜಾಪುರ	೩೪,೬೮,೧೦೦೦ ಎಕರೆ
ಕಡಿಮೆ ,,	—ಕೊಡಗು	೧,೯೩,೦೧೪ ಎಕರೆ
ಹೆಚ್ಚು ನೀರಾವರಿ ವ್ಯವಸಾಯ ಪದೆವ ಜಿಲ್ಲೆ	—ತಿವಮೊಗ್ಗ	೧,೯೬,೧೧೫ ಎಕರೆ
ಕಡಿಮೆ ,,	—ದಕ್ಷಿಣ ಕನ್ನಡ	೨,೬೪೯ ಎಕರೆ
ಹೆಚ್ಚು ದ್ವಿದಳಧಾನ್ಯ ಬೆಳೆವ ಜಿಲ್ಲೆ	—ರಾಯಚೂರು	೧೦,೩೪,೧೭೪ ಎಕರೆ
ಕಡಿಮೆ ದ್ವಿದಳಧಾನ್ಯ ಬೆಳೆವ ಜಿಲ್ಲೆ	—ಕೊಡಗು	೨೦ ಎಕರೆ
ಹೆಚ್ಚು ಕಬ್ಬು ಬೆಳೆವ ಜಿಲ್ಲೆ	—ಬೆಳಗಾಂ	೨೩,೬೫೧ ಎಕರೆ
ಕಡಿಮೆ ಕಬ್ಬು ಬೆಳೆವ ಜಿಲ್ಲೆ	—ಕೊಡಗು	೫೩ ಎಕರೆ
ಹೆಚ್ಚು ಎಣ್ಣೆಬೀಜ ಬೆಳೆವ ಜಿಲ್ಲೆ	—ಬಿಜಾಪುರ	೪,೭೪,೫೭೨ ಎಕರೆ
ಹೆಚ್ಚು ಕಾಫಿ	—ಚಿಕ್ಕಮಗಳೂರು	೭೮,೩೭೮ ಎಕರೆ

ಪಂಚಾಚಾರ್ಯಪ್ರಭಾ

೧೯೫೬ ನೇ ನವೆಂಬರ್ ಶಾ।। ೫ ನೆಯ ಸೋಮವಾರ

ಹಾರೈಕೆ

ಕನ್ನಡಭಾಷೆಯೇ ತಾಯಿಯಾಗಿರುವ ಕನ್ನಡನಾಡು ಆಡಲ್ಲಿ ಒಂದಾಗಿ ಒಂದೇ ರೂಪದಿ ನಿಂತ ದಿನವೇ ಶುಭದಿನ ಆ ದಿನದಲ್ಲಿ ಆ ತಾಯಿಯ ದರ್ಶನಾಶೀರ್ವಾದ ಪಡೆದ ಕನ್ನಡಿಗರೇ ಧನ್ಯರು ಇಷ್ಟೇ ಅಲ್ಲ ಕನ್ನಡ ತಾಯಿಯೇ ಮೂರ್ತಿಮಚ್ಚಾಗಿದ್ದ ಕರ್ನಾಟಕರತ್ನ ಸಂಸಾರಸಾಗರೈಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರು ರಾಜ್ಯಪಾಲ(ಗವರ್ನರ್)ರಾಗಿರುವುದೂ ಸಖ್ಯಸಂಬಂಧ ಬಡವರಬಂಧು ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿ ಗಳಾಗಿರುವುದೂ ಕನ್ನಡನಾಡಿಗೆ ಪರಮಸಂತೋಷ ವಲ್ಲದೆ ನಾಡಿನ ಕೇರ್ತಿಗೂ ಬೆಳವಣಿಗೆಗೂ ಅಡಿಗಲ್ಲೆಂದು ಹೇಳಿದರೆ ಅತಿಶಯೋಕ್ತಿಯಲ್ಲ ಇದಕ್ಕೆ ತಕ್ಕಂತೆ ದೇಶಕ್ಕೇನು ರಾಷ್ಟ್ರಕ್ಕೇನು ಮಂತ್ರಿಮಂಡಲದ ರಚನೆಯಾಗಿರುವುದೂ ಸಹ ಹರ್ಷದಾಯಕವೇ ಸರಿ! ಇದೇ ನವಂಬರ್ ೧ ರಿಂದ ಹೊಸ ರೂಪುಗೊಂಡ ಭಾರತವು ಭಾಷಾವಾರು ರೀತಿಯಲ್ಲಿ ೧೪ ವಿಭಾಗಗಳಾಗಿ ಹೊಂದಿ ಗವರ್ನರರ ಆಡಳಿತೆಯಲ್ಲಿ ಮುಂದುವರಿಯು ತ್ತಿರುವುದು ಸರಿಯಷ್ಟೇ ಅದರಲ್ಲಿ ಕನ್ನಡನಾಡಿನ ಹೊರತಾಗಿ ಉಳಿದ ಎಲ್ಲಾ ಭಾಗಗಳಲ್ಲಿ ಬೇರೆ ನಾಡಿನ ಗವರ್ನರರು ಬಂದಿದ್ದಾರೆ ಆದರೆ ಈ ನಾಡಿನಲ್ಲಿ ನಮ್ಮ ಬರೇ ಆದ ಗವರ ರಿ ಆಡಳಿತೆ ನಡೆಯುತ್ತಿರುವುದು ನಾಡಿನ ಒಂದು ಸುಯೋಗವೆಂದೇ ಹೇಳಬಹುದು ಮತ್ತು ವಯೋವೃದ್ಧರೂ ಶಾಂತಿಪ್ರಿಯರೂ ರಾಷ್ಟ್ರಾಧಿಪತ್ಯರೂ ಆದ ಶ್ರೀ ರಾಜೇ ದ್ರಪ್ರಸಾದರಿಂದ ಕನ್ನಡನಾಡಿನ ಉದಾಟನೆಯಾಗಿದ್ದೊಂದು ವಿಶೇಷ ಶುಭ ಚಿಹ್ನೆಯಾಗಿರುವುದು ಇದಕ್ಕೆ ಶುಭ ಸನ್ನಿವೇಶದಿಂದ ಸಾರಂಭಸಲ್ಪಟ್ಟ ಈ ನಂಡ ಭಾರತದ ೧೪ ನಾಡುಗಳಲ್ಲಿ ಅದ್ಭೂರಿಯಿಂದ ಬೆಳಗುವುದೆಲ್ಲ ಲಿಕ್ಕೆ ಯಾವ ಅಭ್ಯಂತರವೂ ಇಲ್ಲ

ಕನ್ನಡನಾಡಿಗೆ ಈಗ ನೇಮಕಗಾರ ಹನ್ನೆರಡು ಜನರಿವೆ ಂತ್ರಿಮಂಡಲವು ಸಮರ್ಪಕವೂ ಸಹಕಾರಯ ತವೂ ಸುಖಕರವೂ ಆಗುವುದು ಆದರೆ ಇನ್ನೆರಡು ಸ್ಥಾನಗಳನ್ನೂ ಹೆಚ್ಚಿಸಿದಲ್ಲಿ ಚತುರ್ದಶ ಸ್ಥಾನಗಳಾಗುವುದರಿಂದ ಆ ಸಂಪ್ರಟವು ನಾಡಿಗ ಶ್ರೇಯಸ್ಕರವಾಗಿ ಬಾರದು ಪ್ರಯುಕ್ತ ಸುದಿನದಲ್ಲಿ ರಚಿತವಾದ ದ್ವಾದಶ ಮಂತ್ರಿಮಂಡಲವೇ ಶ್ರೇಯಸ್ಕರವೆಂದು ಸೂಚಿಸ ಲಯಸುತ್ತೇವೆ

ಈ ನೊದಲೇ ವಿದ್ಯುದ್ದೀಪಗಳಿಂದಲಂಕೃತವಾಗಿ ಜಗತ್ತನ್ನೇ ನೋಡಿಗೊಳಿಸುತ್ತಿದ್ದ ಮೈಸೂರು ನಾಡು ದೀಪ ಬೆಳಗುವ ಹಬ್ಬದ ದಿನದಂದು ವಿಶಾಲಾಕಾರವನ್ನು ಹೊಂದಿರುವುದರಿಂದ ಈ ವಿಶಾಲ ಕನ್ನಡನಾಡು ಸೂರ್ಯ ನಂತೆ ಪ್ರಕಾಶಕೊಂದುವುದರಲ್ಲಿ ತಿಲ ಮಾತ್ರ ವೂ ಸಂಶಯವಿಲ್ಲ

ನೆಯನಮನೋಹರವೂ ಉನ್ನತ ಸಂಸ್ಕೃತಿಪೂರ್ಣವೂ ಆದ ವಿಶಾಲ ಮೈಸೂರು ದೇಶದ ದಕ್ಷಿಣಭಾಗವು ಶ್ರೀ ಚಾಮುಂಡೇಶ್ವರೀದೇವಿಯ ಆಶೀರ್ವಾದದಿಂದಲೂ ಮಧ್ಯಭಾಗವು ಶ್ರೀ ಬಪ್ಪಶಂಕರಿ ಹಾಗು ಹಂಪೆಯ ವಿರೂಪಾಕ್ಷನ ವರಪ್ರಸಾದದಿಂದಲೂ, ಉತ್ತರಭಾಗವು ಶ್ರೀ ಕಲ್ಯಾಣದ ಶಿವಶರಣರ ಕೃಪಾವಿಶೇಷದಿಂದಲೂ, ಪಶ್ಚಿಮಭಾಗವು ಗೋಕರ್ಣದ ಮಹಾಬಲೇಶ್ವರ ಉಳವಿ ಚನ್ನಬಸವೇಶ್ವರರ ಅನುಗ್ರಹದಿಂದಲೂ, ಸಕಲ ಭಾಗವು ನೂತನವಾಗಿ ಅಧಿಕಾರವಹಿಸಿದ ರಾಜ್ಯಪಾಲರ ಅಚಲ ಪ್ರೀತಿಯಿಂದಲೂ ದಕ್ಷ ಮಂತ್ರಿಮಂಡಲದ ಬುದ್ಧಿಬಲ ದಿಂದಲೂ, ಭಕ್ತಿಯುತರಾದ ಜನತೆಯಿಂದಲೂ, ಶ್ರೀಯೋಭಿವೃದ್ಧಿಗಳನ್ನು ಹೊಂದಿ ಶ್ರೀಜಗದ್ಗುರು ಹಂಚಾಚಾರ್ಯಗಳಾಗುವುದರ ಶಿವತತ್ವ ಸುಧೆಯನ್ನು ಸವಿದು ಆಪಾರಮರ ಕೇರ್ತಿಗೆ ಕಾರಣಳಾದ ಕನ್ನಡ ತಾಯಿಯು ಆಶೀರ್ವಾದವನ್ನು ಹೊಂದಲಿ

ಜೈ ಕರ್ನಾಟಕ

ವಿಶಾಲ ಮೈಸೂರಿನ ಗೌರ್ನರ ಹಾಗು ಸಚಿವರುಗಳ ಪ್ರಮಾಣವಚನ ಸ್ವೀಕಾರ

ಬೆಂಗಳೂರು ಅರಮನೆಯಲ್ಲಿ ಗಂಭೀರ ಸಮಾರಂಭ

ವಿಶಾಲ ಮೈಸೂರು ಉದಯವಾದ ಕೆಲವು ಗಂಟೆ ಗಳಲ್ಲಿ ಗೌರ್ನರರು ಪ್ರಮಾಣವಚನ ಸ್ವೀಕರಿಸಿದರಲ್ಲದೆ, ೫೪ ವರ್ಷದ ಕರ್ನಾಟಕದ ಹಿರಿಯ ರಾಜಕಾರಣಿ ಶ್ರೀ ಎಸ್ ನಿಜಲಿಂಗಪ್ಪನವರ ಮುಖ್ಯಮಂತ್ರಿತ್ವದಲ್ಲಿ ೧೬ ನುಂದ ಸಚಿವರುಳ್ಳ ಮಂತ್ರಿ ಮಂಡಲವೂ ಪ್ರಮಾಣ ವಚನವನ್ನು ಸ್ವೀಕರಿಸಿತು

ಕರ್ನಾಟಕರಾಜ್ಯದ ಪ್ರಸ್ತಪಧಮ ಮಂತ್ರಿ ಮಂಡಲದ ಸಚವರುಗಳವರು

ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪ
ಶ್ರೀ ಕಡಿದಾಳ್ ಮಂಜಪ್ಪ
,, ಏ ಬಿ ಶೆಟ್ಟಿ
ಮಲ್ಲಪಗೌಡ ಪಾಟೀಲ್
, ಸಿ ಎಂ ಪೂಣಚ್ಚ
ಎಚ್ ಎಸ್ ರುದ್ರಪ್ಪ
ಜಗನ್ನಾಥರಾವ್ ಜೋಶಿ
ಟಿ ನುರಿಯಪ್ಪ
ಎಂ ಪಿ ರಾಮರಾವ್
, ಆರ್ ಚೆನ್ನಿಗರಾಮಯ್ಯ
ಏ ಭೀಮಪ್ಪನಾಯಕ್
ಎಚ್ ಕೆ ವೀರಣ್ಣಗೌಡ

ಈ ಮಂತ್ರಿಮಂಡಲಕ್ಕೆ ಸದ್ಯದಲ್ಲೇ ಇನ್ನೂ ಇಬ್ಬರು ಸದಸ್ಯರುಗಳನ್ನು ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿ ದರು ಅಲ್ಲಿಗೆ ವಿಶಾಲ ಮೈಸೂರಿನಲ್ಲಿ ೧೪ ಮಂದಿಯ ನ್ನೊಳಗೊಂಡ ಮಂತ್ರಿಮಂಡಲವಿರುವುದು

ಪ್ರಮಾಣವಚನ ಸ್ವೀಕಾರ ಸಮಾರಂಭ

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ತಮ್ಮ ಸಹೋದ್ಯೋಗಿಗಳೊಡನೆ ಜೆಳಿಗೆ ೯-೩೦ಕ್ಕೆ ರೆಸಿಡೆನ್ಸಿ ಯಿಂದ ಅರಮನೆಗೆ ತೆರಳಿದರು

ರೆಸಿಡೆನ್ಸಿ ಬಹುವ ಮುನ್ನ ತಮ್ಮ ಮಂತ್ರಿಮಂಡಲದ ಪಟ್ಟಿಯನ್ನು ಆಲ್ಲಿ ನೆರೆದಿದ್ದ ಪತ್ರಿಕಾಪ್ರತಿನಿಧಿಗಳಿಗೆ ತಿಳಿ ಸಿದರು

ಅರಮನೆಯಲ್ಲಿ ಸರಳ ಹಾಗೂ ಗಂಭೀರವಾದ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಿತು

ರಾಷ್ಟ್ರಾಧ್ಯಕ್ಷರು ಗೌರ್ನರ್ ಅವರನ್ನು ನೇಮಿಸಿ ಹೊರ ಡಿಸಿರುವ ಆಜ್ಞೆಯನ್ನು ಮುಖ್ಯ ಕಾರ್ಯದರ್ಶಿ ಶ್ರೀ ಪಿ ವಿ ಆರ್ ರಾವ್ ಅವರು ಓದಿದರು

ಅನಂತರ ವಿಶಾಲಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡಿರುವ ಶ್ರೀ ಆರ್ ವೆಂಕಟರಾಮಯ್ಯನವರು ಗೌರ್ನರ್ ಆದ ಮಹಾರಾಜರಿಗೆ ಪ್ರಮಾಣವಚನವನ್ನು ಓದಿದರು

ರಾಷ್ಟ್ರಗೀತೆಯಾದ ನಂತರ ಗೌರ್ನರ್ ಆವರಿಗೆ ಗೌರವ ರಕ್ಷೆ ನೀಡಲಾಯಿತು

ಅನಂತರ ಗೌರ್ನರ್ ಅವರ ಮುಂದೆ ಮುಖ್ಯ ಮಂತ್ರಿ ಗಳೂ, ಮತ್ತಿತರ ಸಚಿವರುಗಳೂ ಪ್ರಮಾಣ ವಚನ ಸ್ವೀಕರಿಸಿದರು ಮುಖ್ಯ ನ್ಯಾಯಾಧೀಶರು ಗೌರ್ನರ್ ಮುಂದೆ ಪ್ರಮಾಣ ವಚನ ಸ್ವೀಕಾರಮಾಡಿದರು

ನೂತನ ಮಂತ್ರಿಮಂಡಲ

ಸದ್ಯದಲ್ಲೇ ೧೪ ಸದಸ್ಯರನ್ನೊಳಗೊಳ್ಳುವ ನೂತನ ಮಂತ್ರಿಮಂಡಲದಲ್ಲಿ ಇನ್ನೆಯ ಸೈಸೂರು ಸಂಸ್ಥಾನದ ಸಂವುಟದಲ್ಲಿದ್ದ ಸಚಿವರುಗಳ ಪೈಕಿ ಮುಖ್ಯಮಂತ್ರಿಗ ಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ಒಬ್ಬರು ಮಾತ್ರ ಇದ್ದಾರೆ

ವಿಶಾಲ ಮೈಸೂರಿಗೆಸೇರಿದ ಮುಂಬಯಿ, ಮದರಾಸ್ ಮತ್ತು ಕೊಡಗು ಕನ್ನಡ ಪ್ರದೇಶದ ಆಯಾ ಸಂಸ್ಥಾನ ಗಳಲ್ಲಿ ಕ್ರಮವಾಗಿ ಸಚಿವರುಗಳಾಗಿದ್ದ ಶ್ರೀ ಮಲ್ಲಪಗೌಡ ಪಾಟೀಲ್, ಶ್ರೀ ಏ ಬಿ ಶೆಟ್ಟಿ ಮತ್ತು ಶ್ರೀ ಸಿ ಎಂ. ಪೂಣಚ್ಚ ಅವರುಗಳು ಮಂತ್ರಿಮಂಡಲದಲ್ಲಿದ್ದಾರೆ ಇವ ರಲ್ಲಿ ಶ್ರೀ ಪೂಣಚ್ಚ ಅವರು ಕೊಡಗಿನ ಮುಖ್ಯಸಂಸ್ಥಾ ನಗಳಾಗಿದ್ದರು

ಮೈಸೂರು ಸಂಸ್ಥಾನದ ಪ್ರಪ್ರಥಮ ಕಾಂಗ್ರೆಸ್ ಸಚಿವ ಸಂವುಟದಲ್ಲಿದ್ದಿದ್ದ ಶ್ರೀಗಣಪತಿ ಅರ್ ಜೆಸ್ಸಿಗ ರಾಮಯ್ಯ ಮತ್ತು ಟಿ ಮರಿಯಪ್ಪರವರು ಮತ್ತೆ ಸಚಿವ ರಾಗಿದ್ದಾರೆ

ಮೈಸೂರು ವಿಧಾನಸಭೆಯ ಅಧ್ಯಕ್ಷರಾದ ಶ್ರೀ ಹೆಜ್ ಎಸ್ ರುದ್ರಪ್ಪನವರು ಸಂಪುಟಕ್ಕೆ ಸೇರಿದ್ದಾರೆ

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ, ಹಿರಿಯ ಕಾಂಗ್ರೆಸ್ಸಿಗರೂ ಆದ ಶ್ರೀ ಎಚ್ ಕೆ ವೀರಣ್ಣಗೌಡರು ಮಂತ್ರಿಗಳಾಗಿದ್ದಾರೆ

ಪಾರ್ಲಿಮೆಂಟಿನ ಮಾಜಿ ಸದಸ್ಯರೂ, ಎಂ ಪಿ ಸಿ ಸಿ ಯ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ ಎಂ ವಿ ರಾಮರಾವ್ ಮತ್ತು ಹೊತಿಗೆ ಹಿರಿಯ ಕಾಂಗ್ರೆಸ್ಸಿಗ ರಾದ ಶ್ರೀ ಏ ಭೀಮಪ್ಪನಾಯಕರೂ ಸಚಿವ ಸಂವುಟ ದಲ್ಲಿದ್ದಾರೆ

ಹಿಂದೆ ಸೈದರಾಬಾದಿನಲ್ಲಿ ಎರಡು ವರ್ಷಕಾಲ ಸಚಿವ ರಾಗಿದ್ದ ಪ್ರಸಿದ್ಧ ಆಡ್ಯೋಕೇಟರಾದ ಯಾದಗಿರಿಯ ಶ್ರೀ ಜಗನ್ನಾಥರಾವ್ ಜೋಶರ್ಯವರೂ ಸಚಿವರುಗಳಲ್ಲಿ ಒಬ್ಬರು

ಕನ್ನಡದ ರಾಜ್ಯಕ್ಕೆ ರಾಷ್ಟ್ರಾಧ್ಯಕ್ಷರ ನುಂಗಳಾತೀರ್ನಾದ

ರಾಷ್ಟ್ರಾಧ್ಯಕ್ಷ ಡಾ।। ರಾಜೇಂದ್ರಪ್ರಸಾದರು ನವೆಂಬರ ೧೧ ರ ಮಧ್ಯಾಹ್ನ ಶುಭಮುಹೂರ್ತದಲ್ಲಿ ಕರ್ನಾಟಕ ರಾಜ್ಯದ ಆರಂಭೋತ್ಸವವನ್ನು ನೆರವೇರಿಸಿದರು ಒಂದೆ ಗೂಡಿರುವ ಜನತೆಗೆ ಕಲ್ಯಾಣವಾಗಲಿ ' ಎಂದು ಮಂಗಳ ಆಶೀರ್ವಾದ ಮಾಡಿದರು

ರಾಷ್ಟ್ರಾಧ್ಯಕ್ಷರು ಭಾಷಣ ಮುಗಿಸಿ ತಮ್ಮ ಮುಂದಿದ್ದ ಸ್ವಿಚ್ಚನ್ನು ಒತ್ತಿದಾಗ ನಿಯಾನ್‌ದೀಪದ ಕರ್ನಾಟಕದ ಮತ್ತು ಭೂಪಟವೊಂದು ಕಣ್ಣೋಕಶಲಾರಂಭವಾಗಿ, ನೆರೆದಿದ್ದ ೨೦ ಸಾವಿರ ಜನಸ್ತೋಮ ದಿವ್ಯದರ್ಶನ ಕಂಡು ಸಂತೋಷದಿಂದ ಕರತಾಡನ ಮಾಡಿದರು

ರಾಷ್ಟ್ರಾಧ್ಯಕ್ಷರು ತಮ್ಮ ೨೦ ನಿಮಿಷಗಳ ಭಾಷಣದಲ್ಲಿ ಇಂದು ಉದಯವಾದ ಸಂಸ್ಥಾನಗಳು ಮತ್ತು ಹಿಂದೆ ಇದ್ದ ಸಂಸ್ಥಾನಗಳು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಹಾಗೂ ಎಲ್ಲ ವಿಧದಲ್ಲೂ ಅಭೇದ್ಯ ವಾದ ಸಂಬಂಧದೊಡನೆ ಒಂದಾಗಿರುವ ಭಾರತದ ಇರು ವಿಕೆಗೆ ಅವಕಾಶವಾಯಿತೆಂದು ಹೇಳುವಂತಾಗಲಿ'ಎಂದು ಹಾರೈಸಿದರು

ಪೋರ್ಚ್‌ಪೋಲಿಯೋ ಹಂಚಿಕೆ

ಶ್ರೀ ಎಸ್ ನಿಜಲಿಂಗಪ್ಪ ಯೋಜನೆ, ಸಾಮಾನ್ಯ ಆಡಳಿತ ಸಿವಿಲ್ ಸಪ್ಲೈಸ್ ಲಂಚ ನಿರೋಧಕಾಧಿಕಾರ, ಪಬ್ಲಿಕ್ ಸರ್ವಿಸ್ ಕಮಿಷನ್, ಕೆ ಜಿ ಎಫ್ ರಾಷ್ಟ್ರೀಕರಣ ಶ್ರೀ ಕಡಿದಾಳ್ ಮಂಜಪ್ಪ ವಿದ್ಯಾ ಇಲಾಖೆ ಶ್ರೀ ಎ ಬಿ ಶೆಟ್ಟಿ ಸಾರ್ವಜನಿಕ ಆರೋಗ್ಯ ಇಲಾಖೆ ಶ್ರೀ ಮಲ್ಲಪಗೌಡಪಾಟೀಲ್ ರೆವಿನ್ಯೂ ಶ್ರೀ ಸಿ ಎಂ ಪೂಣಚ್ಚ ಕೈಗಾರಿಕೆ ಮತ್ತು ವಾಣಿಜ್ಯ ಶ್ರೀ ಎಚ್ ಎಸ್ ರುದ್ರಪ್ಪ ವೈದ್ಯಕೀಯ, ಅರಣ್ಯ ಮತ್ತು ಮೀನು ಅಭಿವೃದ್ಧಿ ಶ್ರೀ ಜಗನ್ನಾಥರಾವ್ ಜೋಶ್ಯಿ ಅಬ್ಕಾರಿ, ಜಾನಪದೋಧ್ಧಾರ, ಗೃಹಕೈಗಾರಿಕೆ ಶ್ರೀ ಎಂ ವಿ ರಾಮರಾವ್ ಒಳಾಡಳಿತ ಶಾಖೆ, ಲಾ, ವಿಧಾನಮಂಡಲ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಶ್ರೀ ಟಿ ಮರಿಯಪ್ಪ ಹಣಕಾಸು ಶ್ರೀ ಆರ್ ಚೆನ್ನಿಗರಾಮಯ್ಯ ಸ್ಥಳೀಯ ಸಂಸ್ಥೆಗಳು ಶ್ರೀ ಭೀಮಪ್ಪನಾಯಕ್ ಸಹಕಾರ ಶ್ರೀ ಎಚ್ ಕೆ. ವೀರಣ್ಣಗೌಡ ಮರಾಮತ್ ಶಾಖೆ

ಬ್ರಿಟನ್ ಮತ್ತು ಫ್ರಾನ್ಸ್‌ಗಳು ಈಜಿಪ್ಟಿನಮೇಲೆ ನಡೆಸುತ್ತಿರುವ ಪಾಶವಿಕ ಕ್ರೂರ ಆಕ್ರಮಣದ ಕೃತ್ಯಗಳು ಎಂದು ವಿದಿತವಾಗಿದೆ. ವಿಶ್ವ ಮತ್ತು ಅಫ್ರೋಏಷ್ಯಗಳ ಸ್ವತಂತ್ರ ರಾಷ್ಟ್ರಗಳು ಇವನ್ನು ಸಹಿಸುವುದಿಲ್ಲ—ಎಂದು ಪ್ರಧಾನಿ ನೆಹರೂರವರು ಹೈದರಾಬಾದಿಗೆ ಆಗಮಿಸಿದ ಕೂಡಲೆ ಕಾಸನ ಸಭೆಯ ಕಾಂಗ್ರೆಸ್ ಸದಸ್ಯರು ಮತ್ತು ಇತರ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಷಣ ಮಾಡುತ್ತ ತಿಳಿಸಿದರು

ಕಾರ್ತಿಕ ದೀಪೋತ್ಸವ

ಪ್ರತಿವರ್ಷ ಪದ್ಧತಿಯಂತೆ ಇಷ್ಟೇ ಕಾರ್ತಿಕ ಶುದ್ಧ ಪ್ರತಿಪದ ಶಕ್ತಿಮಂ ದಿವಸ ಒಣ್ಣ ಸುಣ್ಣಗಳಂದೆ ಗು ರಂಭಾಸ್ತಂಭಗಳಂದ ಅಲಂಕೃತವಾದ ಕೈೈ ಸಂ। ಶ್ರೀಶಾಶೀಧರಾಸ್ಥಾಶ್ರಮಗಳವರ ಗದ್ದಿಗೆಯ ದಿವ್ಯ ಮಂಟಪದ ಎದ ಲಿಂಗಮೂರ್ತಿಗೆ ನೇದಪಾರಕರಿಂದ ಯದಾವಶ್ರಾಗಿ ಪೂಜೆಯು ನಡೆಯುಲ್ಬಟ್ಟ ಮಂಗಳಾರತಿಯಾಗುತ್ತಲೇ ತ್ರಿಕ ಮಾಸದ ದೀಪಾರಾಧನೆಯು ಪ್ರಾರಂಭವಾಯಿತು ಪೂಜೆಗೆ ಅಗಮಿಸಿದ ಅನೇಕ ನಾಗರಿಕರಿಂದಲೂ ೨೪ ವಿದ್ಯಾರ್ಥಿವೃಂದದಿಂದಲೂ ಜಯಜಯಕಾರವಾಗಿ ಫಲತಾಂಬೂಲ ಪ್ರಸಾದವಿನಿಯೋಗದನಂತರ ಆ ದಿನದ ಜೆಯು ಸವಾಪ್ತಿಗೊಂಡಿತು ಈ ಕ್ರಮವು ಈ ಮಾಸಾಂತ್ಯದವರೆಗೆ ನಡೆದು ಮುಕ್ತಾಯಗೊಳ್ಳುವುದು. ಈ ನೆಯಲ್ಲಿ ಭಾಗವಹಿಸುವವರು ಅವಶ್ಯವಾಗಿ ತಮ್ಮ ಭಕ್ತಿಯನ್ನು ಸಲ್ಲಿಸಿ ಅವರ ಅಶೀರ್ವಾದಕ್ಕೆ ಪಾತ್ರರಾಗಲೆಂದು ಡುವ,

ಓರ್ವ ಗುರುಕ ಲಾಭಾಸಿ

ಪತ್ರವ್ಯವಹಾರ

[ಬಾಹ್ಯೋದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಸಂಪಾದಕರು ಜವಾಬ್ದಾರರಲ್ಲ ಎಂಬ ವಿಷಯವನ್ನು ಓದುಗರೂ ಲಕ್ಷ್ಯದಲ್ಲಿಡಬೇಕಾಗಿ ವಿನಂತಿ —ಸಂ.]

ವೀರಶೈವ ಸಿದ್ಧಾಂತದ ಬಗ್ಗೆ ಆತ್ಮವಿಚಾರ ಪತ್ರಿಕಾಕರ್ತರಿಗೆ ಎಚ್ಚರಿಕೆ

(ಹಿಂದಿನಿಂದ ಮುಂದುವರಿದುದು.)

ಶ್ರೀ ನಾಗಣ್ಣನವರೇ ಶಕ್ತಿಯುತರಾದ ದೇವತೆಗಳ ಧಾರಗಳು ಇಂತೆ ನೋಡಿ —' ಉಮಾ ಯಂ ಪರಮೇಶ್ವರಂ ಪ್ರಭುಂ, ಶ್ರೀ ಲಕ್ಷ್ಮೀ ರಾಯಣ, ಸರಸ್ವತೀಪ್ರಭ್ಯ, ಈ ಪ್ರಕಾರವಾಗಿ ಮೂರ್ತಿಗಳೇ ಶಕ್ತಿಯುತರಾಗಿರುವ ವಿಷಯವು ಶ್ರಪ್ರಸಿದ್ಧವಷೆ ಶ್ರೀಜಗದ್ಗುರು ಪಂಚಾಚಾರ್ಯರು ಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ ಶಿವ (ಪರಬ್ರಹ್ಮ)ನು ಶಕ್ತಿವಿಶಿಷ್ಟನಾಗಿರುವನೆಂದು ಭೇದಾಭೇದವನ್ನು ಒಪ್ಪಿರುವರು ಮತ್ತು ಪ್ರತ್ಯಕ್ಷ ಅನುಮಾನ ಆಗಮಪ್ರಮಾಣಗಳನ್ನು ಅಂಗೀಕರಿಸಿರುವರು ಜಗತ್ ಸತ್ಯತ್ವವನ್ನು ಒಪ್ಪಿರುವರು ಇವರಿಂದಲೇ ಜಗತ್ ನಿರ್ಮಾಣವೆಂದೂ ಶಿವನ ಅಂಶೀಭೂತರೇ ಜೀವರೆಂದೂ, ಶಿವನೇ ದೇವತಾಸಾರ್ವಭೌಮನು ಪರಮಾದೇವನೆಂದೂ ಶಿವ ಶಕ್ತಿಯರ ಅವಿನಾಭಾವ ಸಂಬಂಧದಿಂದ ಶಿವಲಿಂಗನೆಂದೂ ಭಕ್ತಿಯಿಂದ ಸೇವಿಸುವುದಕ್ಕೆ ಶ್ರೀ ಶಿವ-ಶಕ್ತಿಯರು ಪ್ರಸನ್ನರಾಗುವರೆಂದೂ ಅರಿರುವರು

ಸ್ಥೂಲ ಸೂಕ್ಷ್ಮ ಕಾರಣ ಶರೀರಕ್ಕೆ ಸಂಬಂಧವಾದ ಇಷ್ಟಲಿಂಗವನ್ನು ' ಪ್ರಾಣಲಿಂಗವೆ ದು ತ್ರಿಕಾಲ ದಲ್ಲಿಯೂ ಪೂಜಿಸುತ್ತ ಜನನಾರಭ್ಯ ಮರಣದವರೆಗೂ ಶರೀರದ ಮೇಲೆ ಧರಿಸಬೇಕೆಂದೂ ಧರ್ಮಸಂಸ್ಥಾರ ಧರ್ಮಾಚರಣೆಯಿಂದಲೇ ಜನನ ಮರಣ ರೂಪಸಂಸಾರ ದಿಂದ ಬಿಡುಗಡೆಯಾಗಿ ಮೋಕ್ಷವನ್ನು ಪಡೆಯುವರೆಂದೂ ಹೇಳಿ ತಮ್ಮ ತಮ್ಮ ಜಾತಿಗಳಿಗನುಗುಣವಾಗಿ ' ಲಿಂಗಧಾರಣ ಭಸ್ಮಧಾರಣ, ರುದ್ರಾಕ್ಷಿಧಾರಣ'ದೇ ಮೊದಲಾದ ಆಪ್ಪಾವರಣಯುಕ್ತರಾಗಿ ವರ್ಣಾಶ್ರಮಧರ್ಮಗಳಂತೆ ವರ್ತಿಸುವವನ್ನೂ ಪಂಚಾಚಾರನಿಷ್ಠರಾಗಿ ಷಟ್ಸ್ಥಲ ಶಿವಲಿಂಗಾನುಸಂಧಾನದ ರಹಸ್ಯವನ್ನೂ ಶ್ರೀಗುರುಮುಖದಿಂದ ತಿಳಿದಾಚರಿಸುವ ವ್ಯವಸ್ಥೆಯನ್ನು ಮಾಡಿ ಈ ಮೆತ್ಕೆ ವೀರಶೈವ ವೆಂಬ ನಾಮಕರಣವನ್ನು ನೂಡಿರುವರು ವಸ್ತು ಶಿವಾಗಮಗಳನ್ನೇ ಆಧಾರವಾಗಿ ಟ್ಟಿರುವರು ಈ ಸಂಪ್ರದಾಯಕ್ಕನುಸಾರವಾಗಿ ಆಚಾರ್ಯ ನೆಗವನ್ನು ವರ್ಗದಿಸಿರುವರು ಈ ವರ್ಗದವರು ಗುರು ವರ್ಗವೆಂದೂ ವೀರಮಾಹೇಶ್ವರ ಜಂಗಮರೆಂದೂ ಮತ್ತು ವೀರಶೈವ ಲಿಂಗೀ ಬ್ರಾಹ್ಮಣರೆಂದೂ ಹೆಸ್ಸು ಜಂಗಮ ಗೋತ್ರಸ್ವಾಮಿಗಳೆಂದೂ ಪ್ರಸಿದ್ಧರಾಗಿರುವರು ಈ ವಂಶೀಯರು ನಿರ್ಮಲಾಂತಃಕರಣರೂ ಜೀವಾತ್ಮ ಪರಮಾತ್ಮರ ಯಥಾರ್ಥಸ್ವರೂಪವನ್ನು ತಿಳಿದವರೂ, ವಿಷಯಬ್ರಮದಿಂದ ವಿಮುಕ್ತರಾದವರೂ ಶಿವಾದ್ವೈತಸಿದ್ಧಾಂತ ಪ್ರರೂಪವನ್ನು ತಿಳಿದವರೂ ನಾನಾವಿಧ ಸಂಶಯಗಳಂ ದುಷ್ಪ್ರಜ್ಞವಾದ ವಿಭ್ರಮಗಳನ್ನು ದೂರಮಾಡುವವರೂ ಸಮಸ್ತ ತಂತ್ರಗಳ ಪ್ರಯೋಜನವನ್ನು ಬಲ್ಲವರೂ ಶಿವ ಧರ್ಮಪ್ರಿಷ್ಠರೂ ವಂಶಪರಂಪರೆಯಿಂದ ಪ್ರಾಪ್ತವಾದ ಆಚಾರಧರ್ಮಗಳುಳ್ಳವರೂ ಕುತ್ಸಿತಾಚಾರಿಗಳಿಂದ ದೂರರಾದವರೂ ಶಿವ ಲಿಂಗಧಾರಣದಿಂದ ಯುಕ್ತರೂ ಲಿಂಗಾಂಗ ಸಾಮರಸ್ಯರೂಪ ಶಿವಜೀವೈಕ್ಯ ಸ್ವರೂಪವನ್ನು ತಿಳಿದವರೂ ಆಗಿ ಶಿವಾದ್ವೈತದಲ್ಲಿ ಪ್ರತಿಷ್ಠಿರಿರುವರು ಈ ಗುರುಮನೆತನದವರೇ ಆಚಾರ್ಯಪೀಠಕ್ಕೆ ಸ್ವಾಮಿಗಳ ಗುತ್ತ ಬರುವ ಪದ್ಧತಿಯನ್ನು ನಿಯಮಿಸಿರುವರು

ಮನುಷ್ಯನು ಪೂಜಾದಿಗಳಲ್ಲಿ ಅಧಿಕಾರಿಯಾದಮೇಲೆ ಅವನಿಗೆ ಷಡಧ್ವಶುದ್ಧಿಸಂಸ್ಕಾರ ' ವನ್ನು ಮಾಡಬೇಕೆಂದೂ ಯಾವುದು ಜ್ಞಾನವನ್ನು ಅನುಗ್ರಹಿಸುವುದೋ ಯಾವುದು ಪಾಶಬಂಧವನ್ನು ಲಯಗೊಳಿಸುವುದೋ ಆ ಸಂಸ್ಕಾರವೇ " ದೀಕ್ಷಾಸಂಸ್ಕಾರ " ವೆಂದು ಹೇಳಿ ಕೊಳ್ಳುವುದೆಂದು ಶಿವದೀಕ್ಷೆಯ ಮಹತ್ವವನ್ನು ಹೇಳಿರುವರು ಶೂದ್ರರಿಗೂ, ಅಂತ್ಯಜರಿಗೂ, ಪತಿತರಿಗೂ, ಹಾಗೂ ಸಂಕರಜಾತಿಯವರಿಗೂ ಷಡಧ್ವಸಂಸ್ಕಾರ " ವನ್ನು ಮಾಡಬಾರದೆಂದೂ ಅವರು ಪರಶಿವನಲ್ಲಿ ಅಚಾಧಾರಣವಾದ ಭಕ್ತಿಯುಳ್ಳವ್ವಿದ್ದೇ ಆದರೆ ಅವರಿಗೆ ಪಾದೋದಕಾದಿಗಳನ್ನು ಕೊಟ್ಟು ಅನುಗ್ರಹಿಸಬೇಕೆಂದೂ ವೀರಶೈವದ್ವಿಜರಿಗುತ್ಕರ್ಷವಾಗಿರುವ ಷಡಧ್ವಶುದ್ಧಿಸಂಸ್ಕಾರದ ಪಾವಿತ್ರ್ಯವನ್ನು ತೋರ್ಪಡಿಸಿದ್ದಾರೆ ಇದು ವೀರಶೈವ ಅತ್ಯತತ್ಪವಾಗಿದೆ ಸುಮ್ಮಸುಮ್ಮನೇ ಬಾಯಿಲೆ ಬ್ರಹ್ಮನಿಷ್ಠರೆಂದು, ಶ್ರೋತ್ರಿಯಬ್ರಹ್ಮನಿಷ್ಠರೆಂದು, ಅತ್ಮ ವಿಚಾರಿಗಳೆಂದು ಬಡಬಡಿಸಿದರೆ ನಾಟಕದ ನಾರದನಂತಾಗುವುದು ವೀರಶೈವರಲ್ಲಿ ಗುರುಪಟ್ಟಾಧಿಕಾರವನ್ನು ಪಡೆದವನು ಧರ್ಮಾಧಿಕಾರಿಯಾಗುವನು ಇಂಥವನು ಸಹಜವಾಗಿ ಮೊರೆಯುವನಲ್ಲಿ. ಒಹು ಸೇವೆಯನ್ನು ಮಾಡಿದೇವರ ಕೃಪೆಗೆ ಪಾತ್ರರಿಂದನಿರಿಗೆಮಾತ್ರ ಮೊರೆಯುವನು ಕೆಂಪಂಗಿ, ಭಸ್ಮ, ರುದ್ರಾಕ್ಷಿಗಳನ್ನು ಧರಿಸಿ ತಾವಿದ್ದ ಲ್ಲಿಯೇ, ಅಕಸ್ಮಾತ್ತೋ ಕಾರ್ಯ ಕಾರಣ ಸಂಬಂಧದಿಂದಲೋ, ಬ್ರಹ್ಮನನ್ನು ತಿಳಿದವನೇ ಗುರುವು ಎಂದು ನಿರ್ಮಂತ ಬಾದರಾಯಣಸಂಬಂಧ ವೇಷಿಸುವ ಪಾತ್ರಗಳೇ ವಿಶೇಷ ಆದರೆ ಕೇವಲ ಧರ್ಮತತ್ವಗಳಾಗಿ ಮುಡಿದು ಸಾನಂದಮಹರ್ನಿಯಂತೆ ಪತಿತರನ್ನು ಶಿವ ಭಕ್ತರನ್ನಾಗಿ ಮಾಡುವ ಮಹಾತ್ಮರು ಮೊರೆಯುವರು ವಿರಳ ಶ್ರೀಗುರುವಿನ, ಶಿವ ಪ್ರಸಾದವನ್ನು ಶಿವಭಕ್ತ ರಿಸ್ಯರು ಸ್ವೀಕರಿಸಿ ಮನಸ್ಸಿನಿಂದ ಅಪ್ಪಶುದ್ಧಿಯನ್ನು ಪಡೆಯುವರು—ಲಿಂಗಧಾರೀ ಶಕ್ತಿವಿಶಿಷ್ಟಾದ್ವೈತಕ್ಕೆಯ್ಕೂ, ಮತ್ತು ವೇದಾಂತ ಅದ್ವೈತಕ್ಕೂ ವಿಶೇಷ ತಾರತಮ್ಯವಿದೆ ? ಎಂಬಂಶವನ್ನು ವೀರಶೈವ ಮತಾಜಾರ್ಯ ಭಗವತ್ಪಾದರಿಂದ ತಿಳಿದಾಚರಿಸುವುದು ಸೂಕ್ತವಾಗುವುದು

ಸಶೇಷ

ವೀರಭದ್ರಯ್ಯಸ್ವಾಮಿ, ಮುಕ್ತೇಮಂದಿರ

ನವರಾತ್ರಿಪೂಜಾ ಕಾರ್ಯಕ್ರಮ ರುಕ್ಕಾಪುರ

ಸುರಪುರ ತಾ। ರುಕ್ಕಾಪುರದ ಸಿದ್ಧಲಿಂಗೇಶ್ವರ ದೇವಾಲಯದಲ್ಲಿ ಗುಲಬರ್ಗಾ ಜಿಲ್ಲಾ ನಂದೂರ ಬಸವ ಕಲ್ಯಾಣದ ಅಳ್ಳನಗಮ್ಮನ ತೋಪಳಚ್ಚಿ ರಕ್ಷ ಸಿಂಹಾಸನಕ್ಕೆ ಕಾರ್ಯಕರ್ತೃಗಳಾದ ಕಟ್ಟಿಮನಿ ಹಿರೇಮಠದ ಪಜ್ಯಾಧ್ಯಕ್ಷ ವೈದ್ಯಭೂಷಣ ಶ್ರೀ ಸದಾಶಿವ ಮಹಾಸ್ವಾಮಿಗಳ ಶುಭ ನೇ ಅನುಷ್ಠಾನ ಮಹೋತ್ಸವವು ಒಳ್ಳೇ ವಿಜೃಂಭಣೆಯಿಂದ ಜರುಗಿತು ವಿಜಯದಶಮಿ ದಿವಸ ಮುಂಜಾನೆ ಅನುಷ್ಠಾನ ಮಂಗಲವಾದಪ ತರ ಸರ್ವರು ಶ್ರೀಗಳನ್ನು ಶಮೀವೃಕ್ಷಕ್ಕೆ ದಯಮಾಡಿಸಿಕೊಂಡು ನೇದೋಕ್ತ ಪೂಜಾದಿಗಳನ್ನು ನೆರವೇರಿಸಿ ಮಹಾ ಮಂಗಳಾರತಿ ಆದನಂತರ ಸರ್ವರು ಸ್ವಾಮಿಗಳಿಗೆ ಶಮೀ ಆರ್ಪಿಸಿದರು ತದೆಗಳವರು ಈ ಮಹೋತ್ಸವ ವಿಷಯವಾಗಿ ಪ್ರಾಚೀನ ಕಾಲದಿಂದ ಬಂದ ರಾಜಮಹಾರಾಜರು ನಾಡಹಬ್ಬವ ಬ್ಗೆ ಸರಿಯಾಗಿ ಉತ್ಸವೀಶಮಾಡಿದರು ಜಯಜಯಕಾರ ದೊಡನೆ ಸಭೆ ಮುಕ್ತಾಯವಾಯಿತು ಈ ಕಾರ್ಯವನ್ನು ಶ್ರೀಮಂತ ಕೊಪ್ಪಳ್ಳ ರುಕ್ಕಾಪುರ ಇವರು ಭಕ್ತಿಯಿಂದ ಜರುಗಿಸಿದರು

ಸಿ ಆರ್ ಪಾಟೀಲ

ಈಜಿಪ್ಟ್‌ನಿಂದ ಬ್ರಿಟಿಷ್, ಫ್ರೆಂಚ್ ಮತ್ತು ಇಸ್ರೇಲಿ ಸೇನೆಗಳ ವಾಪಸಾತಿಯನ್ನು ಕೇಳುವಂಥ ಎರಡನೆಯ ಬಾಣಿಯಂಗ್ ಸಮ್ಮೇಳನಕ್ಕೆ ಕರೆ ಇತ್ತಿರ ವುದಾಗಿ ರಷ್ಯಾ ಪ್ರಕಟಿಸಿತು

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ವ್ಯಕ್ತಿತ್ವ

ಕರ್ನಾಟಕದ ಕೇಂದ್ರವಾಗಿ ಚಿತ್ರದುರ್ಗ ಜಿಲ್ಲೆಗೆ ಸೇರಿದ ಸಿದ್ದವ್ವನಹಳ್ಳಿ ಎಂಬ ಬಡಗ್ರಾಮದಲ್ಲಿ ಬೆಳೆದು ದೇಶದ ಕಷ್ಟ ಸುಖಗಳನ್ನರಿತು ನಿಜಸುಖದಾಯಕವಾದ ಸ್ವಾತಂತ್ರ್ಯದ ಕಡೆಗೆ ಮನಪೊಲಿಸಿದವರು ನಿಜಲಿಂಗಪ್ಪನವರು

ವಿಶ್ವಾಕಾರವಾಗಿ ವಿಶ್ವವನ್ನೇ ಗರ್ಭೀಕರಿಸಿ ಅಜಹರಿಗಳಿಗಸಾಧ್ಯವಾಗಿ ಲಿಂಗೂಸವದಲ್ಲಿ ಮೈದೋರಿದ ಆ ಮಹಾಲಿಂಗವೇ ಧರೆಗಿಳಿದು ಮಾನವರೂಪದಲ್ಲಿ ಕಾಣು ತ್ತಿರುವವರೇ ನಿಜಲಿಂಗಪ್ಪನವರು

ಸಶ್ಯದ ತಳಹದಿಯಾಗಿ ಧರ್ಮದ ಆಗರವಾಗಿ ತ್ರಿಭುವನದ ಪೂಜ್ಯಮೂರ್ತಿಯಾಗಿ ಭೂದೇವಿಯ ಕ್ರೀಡಾಂಗಣ ನುಂದಿವನಾಗಿ ವಿಶ್ವವ ವಿಂಡಾಡ್ಡಾಪವಾಗಿ ನವಭಕ್ತಿಯ ಸಂಗಮವಾಗಿ ಶಿವಶರಣರ ಬಿಂಬದಂತಿರುವವರು ನಿಜ ಲಿಂಗಪ್ಪನವರು

ಮಹಾತ್ಮಾ ಗಾಂಧಿ ವಲ್ಲಭಭಾಯಿ ಪಟೇಲ, ರಾಜಗೋಪಾಲಾಚಾರಿ ನೆಹರೂ ಮೊದಲಾದ ರಾಷ್ಟ್ರ ಮಹಾನಾಯಕರೊಡನೆ ಹೆಗಲುಕೊಟ್ಟ ನೇತಾ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಿ ವಂದೇಮಾತರಂ ಎಂಬ ಗೀತೆಯನ್ನು ಸಾಮಾನ್ಯ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ನಿಜಲಿಂಗಪ್ಪನವರು

ಅವಿಲ ಕರ್ನಾಟಕದ ಕಾಂಗ್ರೆಸ್ ಸಂಸ್ಥೆಯಲ್ಲಿ ಅಧ್ಯಕ್ಷರಾಗಿ ನಿಂತ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಕನ್ನಡ ಡೀನಯ ಸ್ತೋತ್ರವನ್ನು ಮಾಡುತ್ತ ತನ್ನಡ ಒಂಭಗಳನ್ನು ಒಂದೆಡೆ ಸೇರಿಸಿ ವಿಶಾಲವೈ ಸೂರುಸೀಮೆಗಳನ್ನು ನಿರ್ಮಿಸಿದವರು ನಿಜ ಲಿಂಗಪ್ಪನವರು

ಕಾಂಗ್ರೆಸ್ ಸಂಸ್ಥೆಯಲ್ಲಿ ಸ್ಥಿರ, ತತ್ವಪಾಲನೆಮಾಡಿ, ಸ್ವಾರ್ಥವನ್ನ ಬದಿಗೊತ್ತಿ, ಲೇಕಮಾತ್ರಪೂ ಅಧಿಕಾರ ದಾಸೆಯನ್ನು ಡದೆ, ನಿಳವಾದ ನಿರಪೆಕ್ಷಿಯನ್ನು ಸಾಬಿಸಿ ತನುಮನಧನನೇವೆಯನ್ನ ಸಲ್ಲಿಸಿ ಅಜರಾಮರಕೀರ್ತಿ ಭಾಗಿಗಳಾದವರು ನಿಜಲಿಂಗಪ್ಪನವರು

ಸುದ್ದಿ ಸಂಗ್ರಹ

'ನಾವು ಪೂರ್ಣವಾಗಿ ಪರಸ್ಪರ ಅರಿವು ಇರುವ ತಂಡ'—ಎಂದು ಮುಖ್ಯಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ತಮ್ಮ ಮಂತ್ರಿಮಂಡಲ ಕುರಿತು ಪ್ರಮಾಣ ವಚನ ಸ್ವೀಕಾರ ಸಮಾರಂಭಾನಂತರ ಭೇಟಿ ಮಾಡಿದ್ದ ಪತ್ರಕರ್ತಪ್ರತಿನಿಧಿಗಳಿಗೆ ತಿಳಿಸಿದರು

* * *

ಶ್ರೀ ವಿ ಕೆ. ಕೃಷ್ಣಮೆನನ್‌ರವರು ಮುಖ್ಯಪ್ರಾಶ್ನದ ಪ್ರಕೃತ ಪರಿಸ್ಥಿತಿಯನ್ನು 'ಉತ್ಕಟ' ಎಂದು ಕರೆದು ಈಜಿಪ್ಟ್ ಮೇಲಿನ ದಾಳಿಯನ್ನು ತೀವ್ರವಾಗಿ ಖಂಡಿಸಿದರು.

* * *

ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲ್‌ಗಳು 'ಸಂಚು ನಡೆಸಿ' ಯಾವ ಒಂದು ಕಾರಣವೂ ಇಲ್ಲದೆ ಈಜಿಪ್ಟಿನ ಮೇಲೆ ದಾಳಿನಡಿಸಿವೆಯೆಂದು ಅಧ್ಯಕ್ಷ ನಾಸೆರ್‌ರವರು ಕೈರೋ ರೇಡಿಯೋ ಮೂಲಕ ಈಜಿಪ್ಟಿನ ಜನತೆಗೆ ತಿಳಿಸಿದರು

'ನಾವು ಯುದ್ಧ ಮಾಡೋಣ ನಾವೆಂದಿಗೂ ಶರಣಾಗುವುದಿಲ್ಲ" ಎಂದು ನಾಸೆರ್ ಘೋಷಿಸಿದರು

* * *

ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ರಾಷ್ಟ್ರಾದ್ಯಂತ ಮಾರ್ಷಲ್ ಲಾ (ಮಿಲಿಟರಿ ಆಡಳಿತ) ಆಜ್ಞೆಯನ್ನು ಘೋಷಿಸಿದರು ಈಗ ಅವರು ಈಜಿಪ್ಟಿನ ಮಿಲಿಟರಿ ಗೌರ್ನರ್ ಜನರಲ್ ಆಗಿದ್ದಾರೆ

* * *

ಈಜಿಪ್ಟ್ ಸರಕಾರವು ಬ್ರಿಟನ್ ಮತ್ತು ಫ್ರಾನ್ಸ್ ರಾಷ್ಟ್ರಗಳ ನಡಪಣ ತನ್ನ ರಾಜತಾಂತ್ರಿಕ ಬಾಂಧವ್ಯವನ್ನು ಕಡಿದುಹಾಕಿದೆಯೆಂದು ಅಧಿಕೃತವಾಗಿ ಪ್ರಕಟಿಸಲಾಯಿತು

ಶಿವಾದ್ವೈತಮಂಜರಿ-ಶ್ರೀಕರಭಾಷ್ಯ ಗ್ರಂಥಗಳ ಮಹತ್ವದ ಬಗ್ಗೆ ವೀರಶೈವ ಸಭೆಯ ತೀರ್ಮಾನ ಹುನ್ನಿನಹಡಗಲು

ದಿನಾಂಕ ೩೬.೧೦.೫೬ ರಂದು ಸಾಯಂಕಾಲ ೫ ಘಂಟೆಗೆ ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ಮೆಲ್ಲನೆಕೇರಿ ಮೆರವಣಿಗೆ ಶ್ರೀ ಆರ್ ಪಿ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ವೀರಶೈವ ಸಭೆಯು ಸೇರಿ ತೀರ್ಮಾನಿಸಿದ ವಿವರ

ಮೈಸೂರಿನ ಆತ್ಮವಿಚಾರ ಪತ್ರಿಕಾ ಸಂಪಾದಕರಾದ ಶ್ರೀ ಯಂ ಯಲ್. ನಾಗಣ್ಣನವರು ವೀರಶೈವ ಸಿದ್ಧಾಂತ ಪರರಾದ 'ಶಿವಾದ್ವೈತಮಂಜರಿ' 'ಶ್ರೀಕರ ಭಾಷ್ಯ' ಮುಂತಾದ ಗ್ರಂಥಗಳು ಅದಿಶ್ಯತವಾದ ಗ್ರಂಥ ಗಳಲ್ಲವೆಂದೂ, ಇವುಗಳನ್ನು ಸಂಸ್ಕೃತ ಕಾಲೇಜಿನಲ್ಲಿ ಪಠ್ಯಪುಸ್ತಕಗಳನ್ನಾಗಿ ಇಟ್ಟಿರುವುದನ್ನು ತೆಗೆಯಬೇಕೆಂದೂ, ಅಭಿಪ್ರಾಯಸಟ್ಟುವು ಖಂಡನೀಯವಾದುದು

ಸದ್ರಿ ಉದ್ಗ್ರಂಥಗಳು ವೀರಶೈವ ಸಿದ್ಧಾಂತಪ್ರತಿಪಾದಿತವಾದ ಮೂಲಗ್ರಂಥಗಳಾಗಿವೆ ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯು ಘನಹೊಂದಿದ ಪ್ರೌಢ ಕ್ಲಿಷ್ಟರಿಂದರು ಇಂಥ ಸಿದ್ಧಾಂತದ ತಿರುಳನ್ನರಿಯದ ಸಮಾಜದ್ರೋಹಿಗಳ ಬರಹಗಳಿಗೆ ಬೆಲೆ ಕೊಡದೆ, ಅನಾದಿಕಾಲದಿಂದ ಪ್ರಚಲಿತವಾಗಿಯೂ, ಮತಸ್ಥಾಪನಾಚಾರ್ಯರಿಂದ ಅಂಗೀಕರಿಸಲ್ಪಟ್ಟಿವುಗಳಾಗಿಯೂ ಇದ್ದು ನಿಜವಾದ ಧರ್ಮದ ತಿರುಳನ್ನು ಬೀರುವಂಥವುಗಳಾಗಿರುವುದರಿಂದ ವೀರಶೈವ ಸಶ್ಯಸಿದ್ಧಾಂತವನ್ನು ಬೀರುವ ಮೇಲ್ಕಂಡ ಸದ್ರಿ ಗ್ರಂಥಗಳನ್ನೇ ಈಗಿದ್ದಂತೆ ಸಂಸ್ಕೃತ ಕಾಲೇಜುಗಳಲ್ಲಿ ಪಠ್ಯಪುಸ್ತಕಗಳನ್ನಾಗಿ ಗಿಟ್ಟುಳಿ, ವೀರಶೈವ ಪ್ರಾಚೀನತೆಯನ್ನು ಕಾಯ್ದುಕೊಂಡುಬರುವುದಾಗಿ ಈ ಸಭೆಯು ನಿರ್ಣಯಿಸಿಕೊಳ್ಳುತ್ತದೆ

ಈ ತೀರಾನಿನ ಒಂದು ಕಾಪಿಯನ್ನು ಆತ್ಮವಿಚಾರ ಪತ್ರಿಕಾ ಸಂಪಾದಕರಿಗೂ, ನೈಸೂರು ದೇಶದ ವಿದ್ಯಾ ಇಲಾಖೆಯ ಡೈರೆಕ್ಟರವರಿಗೂ ಕಳಸಲಾಗಿದೆ

ಆರ್ ಪಿ ಹಿರೇಮಠರು, ಅಧ್ಯಕ್ಷರು

(ಇದರಡಿಯಲ್ಲಿ ನೂರಾರು ಪ್ರಮುಖ ವ್ಯಕ್ತಿಗಳ ಸಹಿಗಳಿವೆ)

ಶ್ರೀಕ್ಷೇತ್ರಿಕಾಶೀ ಜಂಗಮವಾಡೀಮಹಿಮೆಯಲ್ಲಿ ಸರಸ್ವತೀಪೂಜಾಮಹೋತ್ಸವ

ಪ್ರತಿವರ್ಷದ ಪದ್ಧತಿಯಂತೆ ಕಾಶೀ ಜಂಗಮವಾಡೀ ಮಠದ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ವೀರಶೈವ ವಿದ್ಯಪ್ರಸಾರಿಣಿ ವತಿಯಿಂದ ಸರಸ್ವತೀಪೂಜಾ ಮಹೋತ್ಸವವನ್ನು ಕೆಳಗೆ ಕಾಣಿಸಿದ ಪ್ರಕಾರ ಆಚರಿಸಲಾಯಿತು ತಾ॥ ೧೦-೧೦-೫೬ ನೇ ಬುಧವಾರ ದಿವಸ ಸರಸ್ವತೀ ಪೂಜೆಯು ಪ್ರಾರಂಭವಾಗಿ ತಾ॥ ೧೪ ೧೦-೫೬ ನೇ ರವಿವಾರ ದಿನ ಮುಕ್ತಾಯವಾಯಿತು

ವಿಶೇಷ ಕಾರ್ಯಕ್ರಮವು

ತಾ॥ ೧೪-೧೦-೫೬ ನೇ ರವಿವಾರ ಪ್ರಾತಃಕಾಲ ೯ ಘಂಟೆಗೆ ವಿಜಯದಶಮಿಯ ನಿಮಿತ್ತವಾಗಿ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೪ ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿ ಪಾದಂಗಳವರು ಸಕಲ ಬಿರುದಾವಳಿಗಳೊಡನೆ ಆಸಂಖ್ಯ ಭಕ್ತಸಮೂಹ ದೊಂದಿಗೆ ಭವ್ಯವಾಗಿ ರಜತಪಲ್ಲಕ್ಕಿ ಶಮಿಮಂಟಪಕ್ಕೆ ದಯಮಾಡಿಸಿದರು ಶಾಸ್ತ್ರೋಕ್ತವಾಗಿ ಶಮೀಪೂಜೆಯು ನೆರವೇರಿದ ಮೇಲೆ ಜ್ಞಾನಸಿಂಹರಿಂದಲ್ಲಿ ಜಗದ್ಗುರು ಮಹಾಸ್ವಾಮಿಗಳವರು ಸಂಹಾಸನಾರೋಹಣಮಾಡಿದ ನಂತರ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು ನೊದಲು ಶ್ರೀ ರೇಣುಕಶರ್ಮರ ಮಂಗಲಗೀತೆಯಾದ ಮೇಲೆ ಸಂಘದ ಉಪಾಧ್ಯಕ್ಷರಾದ ಶ್ರೀ ವೇ॥ ಪಂ॥ ನೀಲಕಂಠಶರ್ಮರು ಪ್ರಾಸ್ತಾವಿಕವಾಗಿ ವಿದ್ವತ್‌ಪೂರ್ಣ ಭಾಷಣ ಮಾಡಿದರು ಶ್ರೀ ರೇಣುಕಶರ್ಮರು ಶಮೀ ಪೂಜೆಯ ಮಹತ್ವದ ಬಗ್ಗೆ ಮತ್ತು ಶ್ರೀ ವೇ॥ ಕಲ್ಲಯ್ಯ ಸ್ವಾಮಿ ಪಂಢರಪುರಕರ ಇವರು ಸರಸ್ವತೀಪೂಜಾ ವಿಷಯದಮೇಲೆ ಭಾಷಣ ಮಾಡಿದರು ಕೊನೆಗೆ ಶ್ರೀಜಗದ್ಗುರು ಮಹಾಸನ್ನಿಧಿಯವರು ವಿಜಯದಶಮಿಯ ಮಹಿಮೆಯನ್ನು ಕುರಿತು ಹಿತೋಪದೇಶ ಮಾಡಿದರು. ಇದೇ ಶುಭ ಸಂದರ್ಭದಲ್ಲಿ ರಾಮದುರ್ಗದ ಕೈ॥ ಶ್ರೀ ವೀರಪ್ಪ ಮರಬದ ಇವರ ಧರ್ಮಪತ್ನಿ ಯವರಾದ ಶ್ರೀಮತಿ ಗಂಗಮ್ಮಾ ಸಂಗಮ್ಮಾ ಇವರಿಗೆರ್ವರು ಶ್ರೀಜಗದ್ಗುರು ವಿಶ್ವಾರಾಧ್ಯಮಹಿಳಾ ಮಹಾವಿದ್ಯಾಲಯದ ಕಟ್ಟಡಕ್ಕಾಗಿ ಧನಸಹಾಯ ಮಾಡಿದರು

ಪೂರ್ವದಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಅಧ್ಯಯನ ಮಾಡಿ ಚಿತ್ರದುರ್ಗ ಮಠಕ್ಕೆ ಅಧಿಕಾರಿಗಳಾಗಿದ್ದ ಮುರುಘಾಮಠದ ಶ್ರೀ ಜಯದೇವಸ್ವಾಮಿಗಳವರು ತಾ॥ ೨-೧೦-೫೬ ನೇ ದಿನ ಶಿವೈಕ್ಯರಾದರೆಂಬ ವಾರ್ತೆಯನ್ನು ಕೇಳಿದ ಈ ವೀರಶೈವ ವಿದ್ವತ್ಸಭೆಯು ತನ್ನ ದುಃಖವನ್ನು ವ್ಯಕ್ತಪಡಿಸುತ್ತದೆ.

ಕಾರ್ಯದರ್ಶಿ ನಾಗನಾಥಕಮಾ

ಬೆಂಗಳೂರಿನಲ್ಲಿ ಕೆ ಹೆ. ಸಿ. ಸಿ. ಸಭೆ

ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸಭೆಯು ಬೆಂಗಳೂರಿನ ಕಾಂಗ್ರೆಸ ಭವನದಲ್ಲಿ ತಾ॥ ನೇ ತಾರೀಕು ಮಧ್ಯಾಹ್ನ ೪ ಘಂಟೆಗೆ ಶ್ರೀ ಸಿ ಜೆ ಅಂಬಲಿ ಇವರ ಅಧ್ಯಕ್ಷತೆಯಲ್ಲಿ ಸೇರಿ ತನ್ನ ಪಾರ್ಲಿಮೆಂಟರಿ ಬೋರ್ಡನ್ನು ನೇಮಿಸಿತು ಈ ಮಂಡಳದಲ್ಲಿ ಕೆಳಗೆ ಕಾಣಿಸಿದ ಒಂಭತ್ತು ಜನರು ಇರುವರು.

ಶ್ರೀಗಳಾದ —೧ ಸಿ ಜೆ ಅಂಬಲಿ, ೨ ಟಿ ಆರ್ ನೇಸ್ಟಿ, ೩ ಗುಜ್ಜೆಪ್ಪ ಹಳ್ಳಿಕೇರಿ, ೪ ಶಿವನಗೌಡ ಪಾಟೀಲ, ೫ ವೆಂಕಠಡ್ಡಿ ಹೂಲಿ, ೬ ಸಿ ಎಂ. ಪೂಣಚ್ಚ, ೭ ಸದಾನಂದ ಹೆಗ್ಗಡೆ, ೮ ಮೋಟೆನ್ನವರ ಹೆಗಡೆ, ೯ ಆರ್ ಜಿ ದುಬೆ

ಈ ಮಂಡಳವನ್ನು ನೇಮಿಸಲು ಸಭೆಯು ಅಧ್ಯಕ್ಷರಾದ ಶ್ರೀ ಅಂಬಲಿಯವರಿಗೆ ಸಂಪೂರ್ಣ ಅಧಿಕಾರ ಕೊಟ್ಟಿತು. ಅವರು ಇತರರೊಡನೆ ವಿಚಾರವಿನಿಮಯ ಮಾಡಿ ಈ ಸದಸ್ಯರ ಯಾದಿಯನ್ನು ಸಭೆಯ ಮುಂದಿಟ್ಟಾಗ ಸರ್ವಾನುಮತದಿಂದ ಸ್ವೀಕೃತವಾಯಿತು.

ಸಿದ್ಧಾಂತ ಶಿಖಾಮಣಿ (ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನೆರಿಯವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವತಾಗರಿಭಾಷೆಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೂರುನೂರು ಪುಟಗಳ ಮೇಲ್ಪಟ್ಟಿರುವ ಈ ಗ್ರಂಥದಲ್ಲಿ ಸಿದ್ಧಾಂತಶಿಖಾಮಣಿಯಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದು ಎಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರ ಗ್ರಂಥದ ಎರಡನೆಯ ಮುದ್ರಣವು ಪಂಡಿತರ ಸಹಕಾರದಿಂದ ವೇ॥ ಬ್ರಃ ಮಹಾದೇವಯ್ಯನವರಿಂದ ಮುದ್ರಿಸಲ್ಪಟ್ಟು ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

Edited Printed and Published by Brihanmathadhiyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ‖ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಜಂಘಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿತ್ಪುವೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಜೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩. ರೂ.] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏ ಪಿ ಖರ್ಚು ಸೇರಿ ೩. ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೧೨ ನೇ ನವೆಂಬರ್ ೧೯೫೬ [ಸಂಚಿಕೆ ೩೬

ಪಶ್ಚಾತ್ತಾಪಹಾರ

[ಬಾಕ್ಸೈಟ್‌ದಾರರು ಅಭಿವ್ಯಾಯ ಪಡುವ ಲೇಖನಗಳಿಗೆ ಶಾಕಶರು ಜವಾಬ್ದಾರರಲ್ಲ ಎಂಬ ವಿಷಯವನ್ನು ರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

॥ ಶ್ರೀ ಕೇದಾರನಾಥೋ ವಿಜಯತೇತರಾಮ್ ॥

ಶ್ರೀ ಶಿವತತ್ತ್ವೋಪದೇಶ

ಹಿಮಾಲಯ ಪರ್ವತದ ೧೫೦೦೦ ಫೂಟು ಎತ್ತರದ ಮೇಲಿರುವ ಶಿಖರದಲ್ಲಿ ವಿರಾಜಿಸುವ ಶ್ರೀ ಕೇದಾರೇಶ್ವರ ಜ್ಯೋತಿರ್ಲಿಂಗ ಮಹಾದೇವನ ಸನ್ನಿಧಿಯಲ್ಲಿ ೬೦ ವರ್ಷ ಗಳವರೆಗೂ ಶಿವಾರ್ಚನ ಮಹಾತಪವಂ ಗೈದು ಶ್ರೀ ಗುರು ಕೃಪಾಶೀರ್ವಾದ ಬಲದಿಂದ ಶಿವಯೋಗಸಿದ್ಧರಾದ ಜಗದ್ಗುರು ಶ್ರೀ ರೇಣುಕಾಚಾರ್ಯ ಭಗವತ್ಪಾದರು ಶ್ರೀ ಶಿವಸ್ಮರಣೆಯ ಮೇರೆಗೆ ದಕ್ಷಿಣ ಭಾರತಕ್ಕೆ ಬರಮನ ಮಾಡಿರುತ್ತಾರೆ. ಶ್ರೀ ರಂಭಾಪುರೀ ಮುಂತಾದ ಪಂಚಾಚಾರ್ಯರ ಅಪ್ಪಣೆಯ ಮೇರೆಗೆ ಮತ್ತು ರಿಟಾಯರ್ಡ್ ಹೈಕೋರ್ಟ್ ಚೀಫ್ ಜಸ್ಟೀಸ್ ಶ್ರೀಮಾನ್ ಪಿ ಮಹಾದೇವಯ್ಯನವರು ಬೆಂಗಳೂರ ಈ ಅವತ್ಸರ ಕಾಮನ ಹುಣ್ಣಿಮೆಯ ಶುಭದಿವಸ ಶಲಹೆಯ ಮೇರೆಗೆ, ಶ್ರೀ ಕೇದಾರ ಜಗದ್ಗುರು ಗಳಿಂದ ಪುಣ್ಯಾಹವಚನ ಸಂಪ್ರದಾಯವನ್ನು ಸಂರಕ್ಷಿಸಲು ಶ್ರೀ ಭಾರತದ ಕೋರ್ಟುಗಳಲ್ಲಿ ಹೋರಾಡಿ ನ್ಯೆಪತಾಲ ಸ್ಥಾಪಕ ಜಜ್ಜ ಕೋರ್ಟನಲ್ಲಿ ವೀರಶೈವಧರ್ಮ ಗುರುತ್ವದ ಜಯವನ್ನು ಸಂಪಾದಿಸಿರುತ್ತಾರೆ ಶ್ರೀ ಕೇದಾರ ಟ್ರಸ್ಟಿ ಗಳನ್ನು ಪಡೆದುಕೊಳ್ಳಲು ಅರ್ಹತಾ ಜಂಗಮ ಟ್ರಸ್ಟಿ ಗಳನ್ನು ಹುಮಾಲಯದಲ್ಲಿ ಸ್ಥಿರಪಡಿಸಲು ಅಲಹಾ ಬಾದ್ ಹೈಕೋರ್ಟನಲ್ಲಿ ಅಪೀಲು ನಡೆಸಿರುತ್ತಾರೆ ಸದ್ಯ ಪ್ರಯಾಗ್ಯನಗರದ ಶ್ರೀ ಜಿ ಪಿ ಎಸ್ ಮಹೇಶ್ವರ್ಯನವರು ಕೌನ್ಸಿಲ್ ಇವರ ಬ್ರಹ್ಮಸೂತ್ರಂದಿರದಲ್ಲಿ-(ಭದ್ರಾತೀರದಲ್ಲಿ) ಶ್ರೀ ಶಿವಾರ್ಚನೆಯನ್ನು ಮಾಡುತ್ತ ಶಿವಭಕ್ತರಿಗೆ ಜ್ಞಾನ ಶಿವೋಪಾಸನಾದಿ ವಿಧದ್ಯೋಪದೇಶವನ್ನು ಮಾಡುತ್ತ ಶಿವತತ್ತ್ವೋಪದೇಶವನ್ನು ವಿಸ್ತರಿಸುತ್ತಾರೆ ಈ ಮಹಾಗಳ ಸಂದರ್ಶನದಿಂದ ಸರ್ವರೂ ಶಿವಾತ್ಮರಾಗಲೇಕಾಗಿ ಇದನ್ನು ಪ್ರಕಟಿಸಿದೆನೆ

ಮಹಾಚಾರ್ಯ ತತ್ತ್ವ ಪ್ರಕಾಶಕ
ವೀ ರು. ಹೊಸ ಮಠ

ಶಿವಾನುಷ್ಠಾನ ಪ್ರಾರಂಭ

ನಂದವಾಡಗಿ

ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಸಹ ನಂದವಾಡಗಿಯ ಶ್ರೀ॥ ಪಜ್ಞ॥ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳವರು ತಮ್ಮ ಶಿವಯೋಗಾನುಷ್ಠಾನವನ್ನು ಸ್ವಗ್ರಾಮ ನಂದವಾಡಿಗಿ ಪುರದಲ್ಲಿ ಶಾಂತಾಶ್ರಮದಲ್ಲಿ ಶ್ರೀಪುರ ತಾ ೨೫ ರಿಂದ ಗುರುವಾರ ಬ್ರಾಹ್ಮೀ ಮುಹೂರ್ತ ದಲ್ಲಿ ಪ್ರಾರಂಭಿಸಿದರು. ಶ್ರೀಮಂತರೂ ಭಕ್ತಿವಂತರೂ ಆದ ಶ್ರೀಯುತ ಗುಂಡಪ್ಪ ಹರಿಗುರು ಸೇವಾಪರರೂ ಆದ ಶ್ರೀಯುತ ಗುಂಡಪ್ಪ ಶಾಂತಣ್ಣನವರ ಸೇನೆಯಿಂದ ಈ ಶಿವವ್ರತವು ನಡೆಯು ತ್ತಿದೆ ಶ್ರೀಯುತರು ಅನೇಕ ಸತ್ಕಾರ್ಯಗಳನ್ನು ಮಾಡಿ ಉದಾರಿಗಳಾಗಿ ಶಿವಭಕ್ತಿ ಸಂಪನ್ನರಾಗಿರುವರು ಮೇಲ್ಕಂಡಾಶ್ರಮವನ್ನು ಸ್ಥಂಡಿಲವಾಗಿ ರಚ್ಚಿಸಿ ಶಿವಯೋಗಾ ಸಾಧನೆಗೆಸಾನ್ನಾನುಕೂಲವಾಗಿರಿಸಿದ್ದಾರೆ ಶ್ರೀಶಿವಾಚಾರ್ಯರ ಶಿವಾನುಷ್ಠಾನವು ಏನಿರ್ಘ್ನವಾಗಿ ಕೊನೆಗೊಂಡು ಶ್ರೀ ಶಾಂತಣ್ಣನವರ ಸೇನೆಯು ಸಫಲವಾಗಲಿ! ವಿಶ್ವಶಾಂತಿಗೆ ಸಹಾಯಕವಾಗಲಿ! ಎಂದು ಶ್ರೀ ರೇಣುಕಾದಿ ಜಗದ್ಗುರು ಚಾರ್ಯರಿ ಪಾದಾರವಿಂದಗಳನ್ನು ಪ್ರಾರ್ಥಿಸುವೆ.

ಆಶ್ರಮ ಸೇವಕ

ಅಖಿಲಭಾರತ ವೀರಶೈವ ಮಹಾಸಭಾ ಸೊಲ್ಲಾಪುರ

ಅಖಿಲಭಾರತೀಯ ವೀರಶೈವ ಮಹಾಸಭೆಯ ೧೭ ನೆಯ ಅಧಿವೇಶನವು ೧೯೫೭ ನೆಯ ಇಸವಿ ಜನವರಿ ತಿಂಗಳಲ್ಲಿ ಸೊಲ್ಲಾಪುರದಲ್ಲಿ ಸೇರುವುದು ಇದರ ಕಚೇರಿಯು ಈಗಾಗಲೇ ಸೊಲ್ಲಾಪುರದಲ್ಲಿ ೧೯೫೬ ನೇ ಆಗಸ್ಟ್ ೧೫ ನೇ ತಾರೀಖಿನಿಂದ ಪ್ರಾರಂಭಿಸಲ್ಪಟ್ಟಿದೆ ಶ್ರೀ ವಿ ಎಂ ಕೋಣಾಪುರೆಯವರು ಸ್ವಾಗತಸಮಿತಿಯ ಧೈರ್ಯ್ಯದಾರಿ ಪಿಯಮಿತರಾಗಿದ್ದಾರೆ ಮತ್ತು ಶ್ರೀ ಎಸ್ ಪಿ ಅಲಂಡ್, ಬಿ ಎ ಎಲ್‌ಎಲ್ ಬಿ, ಪ್ಲೀಡರ್ ಇವರು ಜನರಲ್ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿದ್ದಾರೆ ಹಿಂದಿನ ಬಸವ ಕಲ್ಯಾಣದ ೧೬ ನೇ ಸಭೆಯಲ್ಲಿ ಆಫೀಸ್ ಕಾರ್ಯದರ್ಶಿಗಳಾಗಿದ್ದ ಶ್ರೀ ಕುಮಾರ್ ಕೊತ್ತಲಾಲರವರು ಈ ಅಧಿವೇಶನದ ಆಫೀಸ್ ಕಾರ್ಯದರ್ಶಿಗಳಾಗಿ ಪಿಯಮಿತರಾಗಿದ್ದಾರೆ ವೀರಶೈವ ಮಹಾಸಭೆಯ ಎಂದೋಮೆಂಟ್ ಫಂಡ್ ಆಸೋಸಿಯೇಷನ್ನಿನವರು ಈ ಅಧಿವೇಶನಕ್ಕಾಗಿ ೫೦೦೦, ರೂ ಗಳನ್ನು ಮುಂಜೂರು ಮಾಡಿರುತ್ತಾರೆ. ಸ್ವಾಗತ ಸಮಿತಿಯು ಇನ್ನೂ ೫೦೦೦, ರೂ ಗಳ ಮುಂಜೂರಾತಿಗಾಗಿ ಕೇಳಿಕೊಂಡಿದೆ

ಜೇರ್ಮನ್
ಸ್ವಾಗತ ಸಮಿತಿ

ಏಕಾದಶ ರುದ್ರಪೂಜಾಮಹೋತ್ಸವಾಹ್ವಾನ ಪತ್ರಿಕಾ

ಶ್ರೀ [ಹರಗುರು ಚರಿತ್ರಾವಪೂರ್ವಕವಾಗಿ ನವ ಮೈಸೂರು ಕನ್ನಡಿಗಾಧ್ಯದ ಶಿವಮೊಗ್ಗ ಜಿಲ್ಲಾ ತೀರ್ಥಾ ಪುರ ಟಿವರ್ ವಾಸಿಗಳಾದ ತೆಂಕಲಕೋಟೆ ಚಂದ್ರ ಶೇಖರಪ್ಪ ಬಿನ್ ಚನ್ನವೀರಪ್ಪನವರ ಮಾವಂದಿರಾದ ಶ್ರೀ ವೀರಬಸಪ್ಪನವರು ಸಕ್ತಿ ಇವರ ಸದ್ಧರ್ಮಪತ್ನಿ ಯವರಾದ ಶ್ರೀಮತಿ ಕಂ॥ ಸೌ॥ ಪುಟ್ಟಮ್ಮ ಸಕ್ತಿ ಇವರ ಪ್ರಾಪ್ತ ಕಂಟಕ ಪರಿಹಾರಕ್ಕೋಸ್ಕರವಾಗಿ ಶ್ರೀ ಜಗದ್ಗುರು ರೇಣುಕರು ಅಪ್ಪಣೆಕೊಡಿಸಿದಂತೆ ಶ್ರೀ ಏಕಾದಶ ರುದ್ರಪೂಜೆಯನ್ನು ಶ್ರೀ ತೆಂಕಲಕೋಟೆ ಚಂದ್ರ ಶೇಖರಪ್ಪ ಬಿನ್ ಚನ್ನವೀರಪ್ಪನವರ ಸ್ವಗೃಹದಲ್ಲಿ ನೆರೆ ವೇರಿಸಲು ೧ ಶ್ರೀ ಪಜ್ಞ॥ ಬ್ರ॥ ಚನ್ನವೀರೇಶಿಕೇಂದ್ರ ಪಟ್ಟದಸ್ವಾಮಿಗಳವರು ಸಂಚಿನಲ್ಲಿಗಿಮಠ ತೆಗಸಿರ, ೨. ಶ್ರೀ ಪಜ್ಞ॥ ಬ್ರ॥ ಮಹಂತದೇಶಿಕೇಂದ್ರ ಶಿವಾಚಾರ್ಯ ಪಟ್ಟದಸ್ವಾಮಿಗಳವರು ಮೀಸಲಿಮಠ ತೆಗಸಿರ, ೩. ಶ್ರೀ ಪಜ್ಞ॥ ಬ್ರ॥ ಶಿದ್ಧಲಿಂಗತಿವಾಚಾರ್ಯ ಪಟ್ಟದ ಸ್ವಾಮಿ ಗಳವರು ಕಟ್ಟಿಣ ಕಂಥೀಮಠ ರಟ್ಟೇಹಳ್ಳಿ, ೪ ಶ್ರೀ ಪಜ್ಞ॥ ಬ್ರ॥ ಪಡಾಕ್ಷರಾನಂದೆಶಾಚಾರ್ಯ ಪಟ್ಟದಸ್ವಾಮಿ ಗಳವರು ಪಟ್ಟದಸ್ವಾಮಿಮಠ ಮಹಿಸಿ, ೫ ಶ್ರೀ ಪಜ್ಞ॥ಬ್ರ॥ ಪಟ್ಟದಸ್ವಾಮಿಗಳವರು ಮರ ಗೇಡುಕೊಪ್ಪ, ೬. ಶ್ರೀ ವೇ॥ ಪಂ॥ ಶಿವಮೂರ್ತಿ ಸ್ವಾಮಿಗಳವರು ಸಾಲೂರು ಮಠ ಸಾಲೂರು, ೭ ಶ್ರೀ ವೇ॥ ಪಂ॥ ಆಚಾರ್ಯತತ್ತ್ವ ಪ್ರವೀಣ ಶಿದ್ಧ ಲಿಂಗಶಾಸ್ತ್ರಿಗಳು ಆರಳೆಲಿಮಠ ಬಂಕಾಪುರ, ೮ ಶ್ರೀ ವೇ॥ ಪಂ॥ ಚಂದ್ರಶೇಖರಶಾಸ್ತ್ರಿಗಳು ಕಟ್ಟಿಣ ಕಂಥೀಮಠ ರಟ್ಟೇಹಳ್ಳಿ, ೯- ಶ್ರೀ ವೇ॥ ಪಂ॥ ಹಾಲಾರಾಧ್ಯರು ಹಿರೇಮಠ ಮೊಗ್ಗೂರು, ೧೦ ಶ್ರೀ ವೇ॥ಪಂ॥ ಮಹಾದೇವಸಿದ್ಧಾಂತಿಗಳು ತೆವರಿಮಠ ಹುಲಗೂರು, ೧೧. ಶ್ರೀ ವೇ॥ ಪಂ॥ ಹಾಲಾರಾಧ್ಯರು ನಲ್ಲಾವಾಗಲು ಮಠ ನಲುವಾಗಲು, ಈ ಮೇಲ್ಕಂಡ ಗುರುಪುಂಗವರಿಗ ಸಲ್ಲಿಸಲ್ಪಡುವ ॥ ಏಕಾದಶ ರುದ್ರಪೂಜೆಯು ॥ ಶ್ರೀ ಶಕೆ ೧೮೮೮ ನೇ ದುರ್ಮುಖಿನಾಮ ಸಂವತ್ಸರದ ಕಾರ್ತೀಕ ಶುದ್ಧ ೧೫ ಗುರುವಾರ ತಾ॥ ೧೫-೧೧-೫೬ ನೇ ಪ್ರಾತಃ ಕಾಲ ೬ ಘಂಟೆಯಿಂದ ಸಕಾಯಿಕಾರ ಗುರುಸೇವಾಕಸ್ತ ರಾದ ವೇ॥ ಬ್ರ॥ ಶ್ರೀ ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿ ಗಳು ಬಸವನಾಳುಮಠ ಹುಡಗೋಡು ಪಾಕಶಾಲಾ ಪಂಚಾಂಗಕರ್ತರು ಇವರಿಂದ ನೆರವೇರಲಿರುವುದು. ಸಮಸ್ತ ಗುರುಪುಂಗವರೂ ಮತ್ತು ಅಶ್ವ ಬಂಧುಮಿತ್ರರೂ ಒಂದು ದಿವಸ ಮುಂಚಿತವಾಗಿಯೇ ಆಗಮಿಸಿ ಸತ್ಕಾರ್ಯ ದಲ್ಲಿ ಭಾಗವಹಿಸಿ ಸಾಂಗಗೊಳಿಸಬೇಕಾಗಿ ವ್ಯಾಧಿಸುವೆ,

ತಮ್ಮ ಆಗಮನಾಭಿಲಾಷಿಗಳು:
ತೆಂಕಲಕೋಟೆ ಬಸವಣ್ಣಪ್ಪ ಮತ್ತು ಬಂಧು-ಮಿತ್ರರು.
ತೀರ್ಥಾಪುರ

ದುಃಖವಾರ್ತೆ

ಧಾರವಾಡ ಜಲ್ಲಾ ಬೆಲವಂತರ ಗ್ರಾಮದ ಪ್ರಮುಖ ವ್ಯಕ್ತಿಗಳಾದ ಸ್ಥಾನಿಕವೃದ್ಧ ವಯೋವೃದ್ಧ ಶ್ರೀ ಸಂಗಪ್ಪ ಕಲ್ಲಪ್ಪ ಎಂಬವರು ತಮ್ಮ ೮೫ ನೇ ವಯಸ್ಸಿನಲ್ಲಿ ಅಂದರೆ ತಾರೀಖು ೩೦-೧೦-೫೬ ಮಂಗಳವಾರ ಪ್ರಾತಃ ಕಾಲ ಶಿವೈಕ್ಯರಾದರೆಂದು ತಿಳಿಸಲು ದುಃಖವಿಸುಕ್ತವಿದೆ. ಇವರು ಅಮಭವಿಕರಿದ್ದು ದೆಂದಂ ಊರಲ್ಲಿಯ ಸಾರ್ವ ಜನಿಕ ಕೆಲಸಗಳು ಇವರ ಅಭಿಪ್ರಾಯದಂತೆ ಜರುಗುತ್ತಿ ದ್ದುವು ಶ್ರೀ ಸಿದ್ಧರಾಮೇಶ್ವರಸ್ವಾಮಿಗೆ ಒಳ್ಳೆ ಭಕ್ತ ರಾಗಿದ್ದು ಇವರ ಅಗಲುವಿಕೆಯಿಂದ ಊರಿಲ್ಲಾ ಮತ್ತು ಸು ತ್ತಿದೆ ಮೃತರ ಆತ್ಮಕ್ಕ ಪರಿತಿಮಸಿ ಶಾಂತಿಯನ್ನೀಯಲಿ.

ಶಿರ್ವ ದುಃಖಭಾಗಿ

ಪಂಚಾಚಾರ್ಯಪ್ರಭಾ

೧೯೩೬ ನೇ ನವೆಂಬರ್ ತಾ|| ೧೨ನೆಯ ಸೋಮವಾರ

ವೀರಶೈವಮಹಾಸಭೆಗಳು ಗಮನಿಸಬೇಕಾದ ವಿಷಯ

ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಈ ಧರ್ಮಸಾಮ್ರಾಜ್ಯದ ಆಕಳಿಕೆಯನ್ನು ನಡಿಸಿಕೊಂಡು ಹೋಗಲು ರಂಭಾಪುರಿ, ಉಜ್ಜಯಿನಿ ಶ್ರೀಕ್ಷೇತ್ರಿ, ಕಾಶಿ, ಕೇದಾರ ಮೊದಲಾದ ಪಂಚಪೀಠಗಳನ್ನು ಸ್ಥಾಪಿಸಿ ಆ ಮೂಲಕ ಇಂದಿನವರೆಗೆ ಅಧಿಕಾರ ನಡೆಸುತ್ತ ಬಂದಿರುವುದು ಸರ್ವಶ್ರುತವಾಗಿರುವದಲ್ಲವೇ? ಅಂದಮೇಲೆ ಈ ಮತದ ಸರ್ವಾಧಿಕಾರವು ಜಗದೇ ಅದಂತಾಯಿತು ಹೀಗಿದ್ದರೂ ಈ ಮತಕ್ಕೆ ಸಂಬಂಧ ಪಟ್ಟು ಸಭೆಗಳನ್ನು ಕರೆಸಿ ಲಿಕ್ಕಿ ಅದರಲ್ಲಿ ಖಾಸಾದ ನಿಬಂಧನೆಗಳನ್ನ ಮಂಜೂರಾತಿಗಾಗಿ ಅವರಿಗೆ ಕಳಿಸಿ ಲಿಕ್ಕೂ ವರ್ಮಾಡಿಕೊಟ್ಟು ಸರ್ವಸಕ್ತ ತ್ವವಾಗಿ ನಡೆಯುವ ಈಗಿನ ವೀರಶೈವ ಮಹಾಸಭೆಗಳ ವಿಚಾರವಾಗಿ ಸಮಗ್ರವಿಮರ್ಶನವಾಗಿರಲು ಇದೊಂದು ಸಮಯವೇ ಸರಿ?

ಭೌತಿಕ ಜಡಪ್ರಪಂಚದ ಯುಗಧರ್ಮವು ಪ್ರಾಚೀನ ಸಂಸ್ಕೃತಿಯ ಮೂಲವನ್ನೇ ಕಿತ್ತೊಗೆಯಲು ಹೊಂಚು ಹಾಕಿರುವ ಈ ಕಾಲದಲ್ಲಿ ಸಹ ಸಾವಿರಾರು ವರ್ಷಗಳಿಂದ ಅವಿಚ್ಛಿನ್ನವಾಗಿ ಬಂದಿರುವ ಪವಿತ್ರ ಧರ್ಮಸಂಸ್ಥೆಗಳು ಇಂದಿಗೂ ಜೀವಂತವಾಗಿರುವುದಕ್ಕೆ ಅವುಗಳ ಅಂತರಂಗದಲ್ಲಿ ಅಡಗಿರುವ ಅಮೃತಶಕ್ತಿಯೇ ಕಾರಣವೆಂದು ಹೇಳಬೇಕಾಗಿಲ್ಲ. ಆ ಅಮೃತಶಕ್ತಿಯ ಪ್ರಭಾವದಿಂದಲೇ ಅವುಗಳು ಕಾಲಕಾಲಕ್ಕೆ ಯುಗಧರ್ಮಕ್ಕೆ ತಕ್ಕಂತೆ ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡು ಸಮಾಜಕ್ಕೆ ಅವಶ್ಯವಾದ ಸೇವೆಯನ್ನು ಸಲ್ಲಿಸುತ್ತ ಬಂದಿರುವುದು. ಈ ಸತ್ಯವನ್ನು ಮನಗಂಡು ಪೂರ್ವಕಾಲದ ಮಹಾಪುರುಷರು ಸಮಾಜದ ಸಂಘಟನೆಗಾಗಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸಮಾಜಸೇವೆಯನ್ನು ಕೈಗೊಂಡಿದ್ದರು. ಅಂತಹ ಸಂಸ್ಥೆಗಳಲ್ಲಿ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವ ಮಹಾಸಭೆಗಳು ಮುಖ್ಯವಾದವುಗಳು. ಈ ಸಭೆಗಳು ಸ್ಥಾಪಿತವಾಗಿ ಸುಮಾರು ಅರವತ್ತು ವರ್ಷಗಳಾಗಿರಬಹುದು. ಈ ಅವಧಿಯಲ್ಲಿ ಅವುಗಳು ಸಮಾಜಕ್ಕೆ ಸಲ್ಲಿಸಿರುವ ಸೇವೆಯು ಅಪಾರವಾಗಿದೆ. ಅವುಗಳ ಸೇವೆಯ ಫಲವಾಗಿಯೇ ಇಂದು ಸಮಾಜದಲ್ಲಿ ಅಲ್ಪಸ್ವಲ್ಪ ಜಾಗೃತಿಯು ಕಂಡುಬರುತ್ತಿದೆ. ಆದರೆ ಇಂದಿನ ಸಮಾಜದ ಸ್ಥಿತಿಗತಿಗಳನ್ನು ಗಮನಿಸಿದರೆ ಈ ಸಭೆಗಳು ಸಮಾಜಕ್ಕೆ ಸಲ್ಲಿಸಬೇಕಾದ ಸೇವೆಯು ಇನ್ನೂ ಬಹಳ ಬಾಕಿ ಉಳಿದಿದೆಯೆಂದು ಹೇಳಬೇಕಾಗುತ್ತದೆ. ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಈ ಸಭೆಗಳು ಇನ್ನೂ ಬಹಳ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಈ ಸಭೆಗಳ ಕಾರ್ಯಕ್ಷೇತ್ರವು ಬಹಳ ವಿಸ್ತಾರವಾಗಿದೆ. ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಈ ಸಭೆಗಳು ಕೈಗೊಳ್ಳಬೇಕಾದ ಕಾರ್ಯಗಳು ಅನೇಕವಿವೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಸಮಾಜದಲ್ಲಿ ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳು ಹೆಚ್ಚಾಗಿ ಸಮಾಜವು ಅಧೋಗತಿಗೆ ಇಳಿಯುತ್ತಿರುವುದಕ್ಕೆ ಮುಖ್ಯ ಕಾರಣವು ಸಮಾಜದಲ್ಲಿ ಸಾಕಷ್ಟು ವಿದ್ಯಾಭ್ಯಾಸವಿಲ್ಲದಿರುವುದೇ ಆಗಿದೆ. ಆದ್ದರಿಂದ ಸಮಾಜದಲ್ಲಿ ವಿದ್ಯಾಭ್ಯಾಸವನ್ನು ಹೆಚ್ಚಿಸಲು ಈ ಸಭೆಗಳು ಪ್ರಯತ್ನಿಸಬೇಕಾಗಿದೆ. ಸಮಾಜದಲ್ಲಿ ಅಲ್ಲಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಅವುಗಳಲ್ಲಿ ಸಮಾಜದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕಾಗಿದೆ. ಸಮಾಜದ ಬಡವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಮತ್ತು ಶುಲ್ಕಗಳನ್ನು ಕೊಡಿಸಬೇಕಾಗಿದೆ. ಸಮಾಜದಲ್ಲಿ ಅಲ್ಲಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿ ಅವುಗಳಲ್ಲಿ ಸಮಾಜದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕಾಗಿದೆ. ಸಮಾಜದಲ್ಲಿ ಅಲ್ಲಲ್ಲಿ ಕಾಲೇಜುಗಳನ್ನು ಸ್ಥಾಪಿಸಿ ಅವುಗಳಲ್ಲಿ ಸಮಾಜದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕಾಗಿದೆ. ಸಮಾಜದಲ್ಲಿ ಅಲ್ಲಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿ ಅವುಗಳಲ್ಲಿ ಸಮಾಜದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕಾಗಿದೆ. ಸಮಾಜದಲ್ಲಿ ಅಲ್ಲಲ್ಲಿ ಸಂಸ್ಕೃತ

ಆತ್ಮವಿಚಾರವೋ ಲಾಟ್ರಿಪ್ರಚಾರವೋ

ಮೈಸೂರು ನಗರದಲ್ಲಿ ಪ್ರಕಟವಾಗುತ್ತಿರುವ ಆತ್ಮವಿಚಾರ ಪತ್ರಿಕೆಯು ಹೆಸರಿಗೆ ತಕ್ಕಂತೆ ಮಾನವನಿಗೆ ಬೇಕಾದಲ್ಲ ಮುಮುಕ್ಷುಗಳಿಗೆ ಬೇಕಾದ ಆಧ್ಯಾತ್ಮವಿಚಾರದ ಜ್ಞಾನವನ್ನುಂಟುಮಾಡಬೇಕು. ಮಾನವನ ನೀತಿಬದ್ಧವಾದ ಜೀವನಕ್ಕಾಗಿ ಏರಿಸಿ ದೇವನನ್ನಾಗಿ ಮಾಡುವ ಸಾಧನಗಳನ್ನು ತಿಳಿಸಬೇಕು. ಮಾನವನ ಪಾಪವೃತ್ತಿಯನ್ನು ಹೋಗಲಾಡಿಸಿ ಅವನಲ್ಲಿ ದೈವೀಸಂಪತ್ತನ್ನು ತುಂಬುವ ವಿಶಾಲಸಾಧನಮಾಲೆಗಳಾಗಬೇಕು. ಜಗತ್ತಿನಿಗೆ ಅಂಧಕಾರವನ್ನು ಹೋಗಲಾಡಿಸಿ ಜ್ಞಾನವನ್ನಾಗಿ ಮಾಡುವ ಪರುಷಮಣಿಯಾಗಬೇಕು. ಜಡಸಂಸಾರಿಗಳಿಗೆ ಆಂತರಂಗವನ್ನು ಭೇದಿಸಿ ಆತ್ಮಾಮೃತವನ್ನು ಉಣ್ಣಿಸಿ ಮಾಡುವ ಅನ್ನತತ್ವಜ್ಞಾನಗಳಿರಬೇಕು. ಆತ್ಮಜ್ಞಾನಸಂಧಾನಕ್ಕೆ ಬೇಕಾದ ಸಾಹಿತ್ಯಮಾಲೆ ಇರಬೇಕು. ಎಲ್ಲದಕ್ಕೂ ಮಿಗಿಲಾಗಿ ಭಕ್ತಿಯನ್ನುದ್ಧರಿಸುವಂತಹ ನೀತಿವಂತ ಮಂಡಿಗಳಿರಬೇಕು. ಸಕ್ಕಂತಾಗಿ ಮಾಡಿಸಲು ಬೇಕಾದ ಉತ್ತಮ ಜೀವನ ಚರಿತ್ರೆಗಳಿರಬೇಕು. ಕ್ರೋಧವನ್ನು ಅಡಗಿಸಲು ಮನಃಸ್ಥೈರ್ಯವನ್ನು ಒಟುಮಾಡುವ ಮಂತ್ರಾಹಿಮರ ಹಿತೋಪದೇಶವಿರಬೇಕು ನೋಡುವನ್ನು ಮರ್ದಿಸಲು ಜಿತೇಂದ್ರಿಯತೆ ಗಳಿಸಲು ಬೇಕಾದ ಅಮರಪುರುಷರ ಪುಣ್ಯಾಧಿಕ್ಯಗಳಿರಬೇಕು ಲೋಭವನ್ನೋಡಿಸಲು ಬೇಕಾದ ಧರ್ಮಸಂಪಾದಿಸಲು ಬೇಕಾದ ಮಹಾಪುರುಷರ ಮಂತ್ರೋಪಕರಣವಿರಬೇಕು. ಮಹದಾಂಧಕಾರವನ್ನು ಹೋಗಲಾಡಿಸಲು ಜ್ಞಾನದೀಪಗಳಿರಬೇಕು ಮತ್ಸರ ಮೊದಲಾದ ಮಹಾದುಷ್ಟರನ್ನು ಸಂಹಾರಮಾಡಲು ತಕ್ಕಂತಹ ಖಡ್ಗವಿರಬೇಕು ಇಂತಿಷ್ಟು ಸಾಧನಗಳಾದರೂ ಇದ್ದಿದ್ದರೆ ಮಾತ್ರ ತಾನೆ ಆತ್ಮವಿಚಾರ ಪತ್ರಿಕೆಯಾಗುತ್ತದೆ?

ಆತ್ಮವಿಚಾರ ಪತ್ರಿಕೆಯು ತನ್ನ ವೈದ್ಯಾಸ್ಪದ ಸಂಪಾದಿಸಿಕೊಳ್ಳಲಿಯೂ ತನ್ನನ್ನು ನಂಬಿರುವ ಪಕಿಸುಕರ ಹಿತಕ್ಕಾಗಿಯೂ ಇಹ ತಕ್ಕಷ್ಟು ಸಂಪಾದಿಸಿಟ್ಟು ಈ ಸಂಪಾದನೆಯ ಮಾರ್ಗದಲ್ಲಿಯೇ ತಕ್ಕಷ್ಟು ಧರ್ಮ ಮತ್ತು ಆತ್ಮಜ್ಞಾನಿಗಳನ್ನು ಸಂಪಾದಿಸುವುದೇ ಮುಖ್ಯ ವೈಶಿಷ್ಟ್ಯವಾಗಿದೆ ಇದೇ ಪ್ರಕಾರ ಮುಖಪತ್ರದಲ್ಲಿ ಆತ್ಮವಿಚಾರ ಒಳಗಡೆ ಪತ್ರಿಬಿಹಾರ, ಧರ್ಮದ ಹೆಸರಿನಲ್ಲಿ ಅಪಸ್ಮಾರ ಪರುಷಾಹಿರಿಯರು, ಪಂಡಿತರ ನಿಂದಾಪಿಚಾರ ಇತ್ಯಾದಿ ವಿಚಾರಗಳಿಂದೊಡಗೂಡಿರುವ ಈ ಆತ್ಮವಿಚಾರ ಪತ್ರಿಕೆಯು ಮತ್ತೊಂದಂತನೆಯೆನಿಂದರೆ, ಮಾನವನನ್ನು ಆತ್ಮವಿಚಾರದತ್ತ ಹೊರಳಿಸುವ ಹೆಸರಿನಲ್ಲಿ ಅವನನ್ನು ಧರಕಷ್ಟ ಸೆಳೆಯೊಯ್ಯವ ಜೂಜಿನ ದ ವ್ಯಾಪಾರದಂತೆ ಜನತೆಯ ಮನವನ್ನು ಸೆಳೆದು ತನ್ನ ಧನ ಸಂಪಾದನೆಯ ಸೌಲಭ್ಯಕ್ಕಾಗಿ ಹೊರಡುತ್ತಿರುವ ಆತ್ಮವಿಚಾರ ಪತ್ರಿಕೆಯ ವೈಶಿಷ್ಟ್ಯವು ಆತ್ಮವಿಚಾರವೋ ಲಾಟ್ರಿಪ್ರಚಾರವೋ ಎಂಬುದನ್ನು ವಾಚಕರವ್ಯಂದನೇ ನಿರ್ಣಯಿಸಬೇಕಾದಿದೆ ಎಂಬುದನ್ನು ಆತ್ಮವಿಚಾರ ಪತ್ರಿಕೆಗಾಗಿ ಮತ್ತು ಪ್ರೇಮಿಗಾಗಿ ಮತ್ತು ಮಂದಿರಕ್ಕಾಗಿ ಸಂಚಿಂತಾಸಾಧಿಕರಾದ ಜಗದ್ಗುರುವರ್ಯರಿಂದಲೂ ಪಟ್ಟಿ ಪರ ವಿರಕ್ತಮೂರ್ತಗಳಿಂದಲೂ ಸಾಹುಕಾರರೂ ಕಿರಿಯೂ ಮುಂತಾದವರಿಂದಲೂ ಪೋಷಕರೂ ಚಿಂದಾದಾರರೂ ಮೊಲಾವಲಂಬಿಂದಲೂ ಎಷ್ಟೂಲು ಮಾಡಿರುವ ಲಕ್ಷ್ಯಾಂಕರ ರೂಪಾಯಿಗಳೂ ಮತ್ತು ಬಾಬೂರಿಯಿಂದ ಉತ್ಸುಕ್ಷ್ಯವಾಗಿರತಕ್ಕ ಲಕ್ಷ್ಯಾಂತರ ರೂಪಾಯಿಗಳ ಹೊತ್ತವೂ ಇದೆಲ್ಲಾ ಸಾರ್ವಜನಿಕ ಸೊತ್ತಾದ್ದರಿಂದ ಆತ್ಮವಿಚಾರ ಪತ್ರಿಕಾ ಸಂಪಾದಕರು ತಮ್ಮ ಧನತೆಯನ್ನು ಜಾಹಿರಾತುಗಳುವುದರ ಸಲುವಾಗಿ ಜನತೆಯು ಕೇಳುವ ಹಿದಕ್ಕೆ ಮೊದಲೆ ಮೇಲ್ಕಂಡ ಸಾರ್ವಜನಿಕ ಸ್ವತ್ತನ್ನು ಸರ್ವಾಜೆನೆಯಿಂದ ಸರಿಯಾದ ಲೆಕ್ಕಪತ್ರ ಸಮೇತ ಪ್ರತ್ಯಕ್ಷ ಕಮಿಟಿಗೆ ವಪ್ಪಿಸಿ ಕಮಿಟಿಯು ಸಲಹೆಯಪ್ರಕಾರ ಆತ್ಮವಿಚಾರಪತ್ರಿಕೆಯು ತನ್ನ ನಿಜವಾದ ವೈಶಿಷ್ಟ್ಯವನ್ನು ಹೊಂದಿ ಜಿದ್ದಕಾಲ ಬಾಳಲಿ.ವಾಗುವಂತೆ ಮಾಡಿ ಮಂದಿರದ ಅಭ್ಯುದ್ಧರಿಂದು ಹೇಳಿಕೊಳ್ಳುವ ಶ್ರೀ ನಾಗಣ್ಣನವರು ಸಾರ್ವಜನಿಕರ ವಿಶ್ವಾಸವನ್ನು ಗಳಿಸುವರೆಂದು ನಂಬಲಾಗಿದೆ

ವೈ ಸೋಮಶೇಖರಾರಾಧ್ಯ.

ರೌಡಕುಂದಿ ಶ್ರೀಗಳವರ ದಸಕಾಮಹೋತ್ಸವ ಶ್ರೀಕ್ಷೇತ್ರ ಸಿದ್ಧಗಿರಿ

ರಾಯಚೂರು ಜಿಲ್ಲಾ ಸಿಂಧನೂರು ತಾಲೂಕು ಶ್ರೀಕ್ಷೇತ್ರ ಸಿದ್ಧಗಿರಿ (ಅಂಬಾದೇವಿಕ್ಷೇತ್ರ) ಶಿವಾದ್ವೈತ ಶಾಸ್ತ್ರಮದಲ್ಲಿ ಪ್ರತಿನಿಧಿಸಿದ ಪದ್ಮತಿಯಾಂತೆ ಈ ವರ್ಷವೂ ಸಹ ಆಶ್ರಮಸಂರಕ್ಷಕ ಸಮಿತಿಯವರು ರೌಡಕುಂದಿ ಹಿರೇಮಠದ ಗುರುಪಟ್ಟಿಕ್ಷಿಕ್ಷಕ್ಷ ಸಾಹಿತ್ಯಾಚಾರ್ಯ, ವೇದಾಂತಶಾಸ್ತ್ರೀಗಿ, ಕಾವ್ಯತೀರ್ಥ, ಸಾಹಿತ್ಯ ವಿಮರ್ಶಾಸಾವಿಕಾರದ ಕವಿರಾಜೇತ್ಯಾದಿ ವಿದ್ವಲ್ಪಕ್ಷ ಸ್ಥಿಕರಾದ ಶ್ರೀ ಷ॥ ಬ್ರ॥ ಪಂಡಿತ ಶ್ರೀ ಸಿದ್ದರಾಮ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ದಸಂಮಹೋತ್ಸವವನ್ನು ಮಹಾವೈಭವದಿಂದ ಆಚರಿಸಿದರು ಮಹೋತ್ಸವದ ಅಂಗವಾಗಿ ಇದೇ ಆಶ್ವಿಜ ಶು॥ ಪ್ರತಿಪದದಿಂದ ಏಕಾದಶಿ ಸೋಮವಾರದ ವರೆಗೆ ಪ್ರತಿನಿತ್ಯ ಶ್ರೀಗಳವರ ಇಷ್ಟಲಿಂಗಕ್ಕೆ ಏಕಾದಶ ರುದ್ರಾಭಿಷೇಕ, ಬಿಲ್ವಾರ್ಚನ, ಗಣಾರಾಧನ ಸಾಯಂಕಾಲ ೬ ಗಂ॥ಯಿಂದ ೮ ಗಂಟೆಯ ಪರಿಯಂತರ "ಭಗವದ್ಗೀತೆಯಲ್ಲಿ ಶಿವಾನುಭವಧರ್ಮ" ಎಂಬ ವಿಷಯದ ಮೇಲೆ ಶಿವಾನುಭವಭಾವಿಗಳಾದ ರೌಡಕುಂದಿ ಹಿರೇಮಠದ ಜಿರಪ್ಪಾಧ್ಯಕ್ಷ ಶ್ರೀ॥ ಷ॥ ಬ್ರ॥ ಪಂ॥ ಶಿವಯೋಗಿ ಶಿವಾಚಾರ್ಯಸ್ವಾಮಿಗಳವರಿಂದ ಅಮೋಘ ಪ್ರವಚನವು ಜರುಗಿತು. ಈ ಗ್ರಂಥಾತಸ್ಥಶ್ರವಣಾರ್ಥಾಗಿ ಪ್ರತಿನಿತ್ಯ ಏದುನೂರರ ಮೇಲ್ಪಟ್ಟು ಜನಗಳು ಸಾರುತ್ತಿದ್ದರು ಸಾಲಗುಂದಿ, ರಾಂಪಾ ತೊಂಡಿಹಾಳು, ಕರ್ಜಗಗೊಂದಿ, ಚಾಣಕಲೂರು ಬೊಗೂರು ಸೋಮಲಾಪುರ ಮುಂತಾದ ಗ್ರಾಮಗಳ ಸದ್ಭಕ್ತಮಹಿಳೆಯರೂ ಕೂಡಿ ಇವನ್ನು ಸಾರ್ಥಾಗಿ ನೆರವೇರಿಸಿದರು ತಾ॥ ೨೫-೧೦-೩೬ ನೇ ಸೋಮವಾರ ದಿವಸ ಶ್ರೀಗಳವರ ಮಹಾಪುಣ್ಯಾರಾಧನೆ, ಕ್ಷೇತ್ರಾಧಿದೇವತೆಯಾದ ಶ್ರೀಜಗದಂಬಾದೇವಿಯ ಬೆಸ್ಸಿಮಹೋತ್ಸವ ನೊಡಲಾದವುಗಳು ನಡೆದು-ಬೇಕಾಗಿದ್ದ ಕಾರಣ ಅಂದು ೩ ಗಂಟೆಯಿಂದ ಮಧ್ಯಾಹ್ನ ೪ ಗಂಟೆಯ ವರೆಗೆ ವಿಶಾಲವಾದ ಸಭಾಮಂಟಪದಲ್ಲಿ ಸಾರ್ವಜನಿಕ ಸಭೆಯು ಜರುಗಿತು ಸಭೆಗೆ ಸಾವಿರಾರು ಜನರು ಸೇರಿದ್ದರು ಸಾಹಿತ್ಯಚಕ್ರವರ್ತಿ ಶ್ರೀಜಗದಂಬಾದೇವಿಯ ಬ

"ಪಿಠಿಗನ್ನಡಂ ಗೆಲ್ಗೆ"

ವಿಶಾಲ ಮೈಸೂರಿಗ ಮಂಗಲ ಹಾರೈಕೆ

ಶ್ರೀಮಹಾಶಿವಶಕ್ತಿಪ್ರಭೆಯಿಂ ।
ಶ್ರೀಮುಹೂರ್ತದಲುದಿಸಲ್‌ದಿನ ।
ಶ್ರೀಮಹಾಕರ್ನಾಟರಾಜ್ಯೋತ್ಸವಕೆ ಹರಸುವೆನು ॥
ಕಾಮಿತವು ಶ್ರೀಭರಿತಮಹಿಂದುವು
ಭೂಮಿಯೊಳಗಡಿ ವ್ಯಾಪ್ತಿಪೊಂದಿಕ ।
ಕೋಮಲವು ಕರ್ನಾಟ ರಾಜ್ಯವು ಭರತದೇಶದೊಳು ॥೧॥

ಸಾರಸ್ವತಿತ್ಯೈವನು ಪಡೆದಿಹ
ಭಾರತಾಂಬೆಯ ವೀರಪುತ್ರರು ।
ಸೀರಿಸದಯದಿ ರಾಜ್ಯಪದ್ಧಲಪಡೆಯಲೋಸುಗವು ॥
ತೋರಿಬರುವಾ ಕನ್ನಡಿಸಿ ।
ಮೇರುಗಿರಿಸನುಧೈರ್ಯದಿಂದಲಿ
ತೂರಿತೆಗದರು ನಾಡನ ಡಿವರರಾಜ್ಯಗಳಿಸಿದರು ॥೨॥

ಭಾರತವು ಭರಭರದಿ ಬೆಳೆಯಲು
ಚಾರುಭಾಷಾರಾಜ ಘಟಕವು
ತೋರಿತಂದುರೆ ಚಲುವಕನ್ನಡರಾಜ್ಯಮೂಡಿಹುದು ॥
ಭೇರಿನಾದವು ಮೊಳಗುತಿಹುದು
ಊರುಕೇರಿ ಸುವಗರನಗರೊಳು ।
ಸಾರಿಬ್ರಜೆಗಳು ಪರ್ವಕಾಲವನೆಸಗುತಿಹರಿಂದು ॥೩॥

ಉನ್ನತೋನ್ನತಭಾವತಳೆದು
ರನ್ನ ಭಾರತಪುತ್ರರೆಲ್ಲರು ।
ಘನ್ನ ಕೀರ್ತಿಯ ಪಡೆವಕಾಲವು ಬಂದಿತೆಂಬುದವೋ ।
ನಿನ್ನಯೊಳು ಕನ್ನಡದ ಪ್ರಜೆಗಳು ।
ಭಿನ್ನಭಾವವತೊರೆದು ಕವೈಳು
ಚನ್ನ ಕನ್ನಡರಾಜ್ಯಮುದಯಿಸ ಬೆಳಕು ಬೀರಲಿಕೆ ॥೪॥

ಶ್ರೀಮಹಾಕನ್ನಡಸುರಾಜ್ಯದ
ಭೂಮಿಯೆಲ್ಲವ ಹಂಚಿಕೊಂಡು ।
ಭೂವಿ ಪರು ತಾವ್ ಬಳ್ವರೆಂದು ತೋರಿಯಡೆಗುತಲಿ ।
ರಾಮಣೀಯಕ ರಾಜ್ಯಭಾಗದ
ರಾಮಠಂತಿಹ ಪುತ್ಥರಿಂ ಸಲೆ ।
ರಾಮರಾಜ್ಯವ ಪಡೆದೆವಿಂದು ವಿಜಯದುಂಕುರವು ॥೫॥

ಕೇಳ್ಮಮೈಸೂರ್ನಾಡೊಡೆಯರು ।
ಬಾಳಪ್ಪೈಮದಲಾಳುತಿರುತಿರೆ ।
ಶೀಲವಂತರು ಕೃಷ್ಣರಾಜರು ಮೆರೆದು ಬಾಳಿದರು ॥
ಕಾಲವಶರಾಗುತಿರೆ ಪಟ್ಟವು ।
ಲೀಲೆಯಿಂದಲಿ ಜೊರಕತವರದು
ವ್ಯಾಲಭೂಷಣದಯದಿ ಶ್ರೀಜಯಚಾಮರಾಜರಿಗೆ ॥೬॥

ಕನ್ನಡದ ಶ್ರೀರತ್ನ ವೀರದ
ಉನ್ನತಪತ್ಯಕೀರ್ತಿಬೆಳೆಸಿಹ ।
ಚೆನ್ನ ಶ್ರೀರಜಯಚಾಮರಾಜರಿ ಕನ್ನಡದ ಗೌರ್ನರರು ॥
ನನ್ನಿಯಿಂ ವರಮಂತ್ರಿತದವಿಯೊ ।
ಳನ್ನು ಮೆರೆವರು ಶಾಂತಿಸಾಗರ ।
ಘನ್ನ ನಿಜಲಿಂಗಾಖ್ಯವನ್ನಣೆ ಗಾಂಧಿಭಕ್ತರರು ॥೭॥

ನಾಡನುಡಿಸಿರಿಬೆಡಗಿಂ ಸವಿ ।
ನಾಡಬಿಳಿಸುತ ಭರತದರಿವು
ಬೇಡಿದವರಿಗೆ ಕೊಡುವಕಾಲವು ಪ್ರಾಪ್ತವಾಗಿಹುದೋ ॥
ನಾಡಗುಡಿಯಡಿ ವ್ಯಾಡನಕ್ಯವೆಯೊ ।
ರೂಡಿಗೊದೆಯನ ನೆನೆದುಮನದಿಂ ।
ಕೂಡಿಕನ್ನಡಭಾರತದ್ವಯಭುವನಪಾಲಿಸಲು ॥೮॥

ಅಜ್ಜಗನ್ನಡ ಸೊನ್ನ ಲಾಸುರ ।
ಸೆಜ್ಜೆಕೊಂಡಾ ಮಡಕಶಿರವದು ।
ಮೆಚ್ಚಿಗೆಯಹೆಬೆಜತ್ಯಕಾಸರಗೋಡು ಜಾರಿಹವು ॥
ಮುಚ್ಚುಮರೆಯಿಲ್ಲದಲೆ ಕನ್ನಡ
ಕೆಚ್ಚಕೃದಯರು ಬೆಚ್ಚಿ ಬೆದರದೆ
ಸ್ವಚ್ಛೆಮನವಿಂ ಸೇವೆಗೈಸರೆ ಕೀರ್ತಿ ಬೆಳಗುವದು ॥೯॥

ಅಣೆಕಟ್ಟಿನ ಕಾರ್ಯಕ್ರಮದ ದೃಶ್ಯ

ನದಿಗಳ ವಿಷಯ ದಲ್ಲಿ ಪೂರ್ವಭಾವನ್ನು ಬೆಳೆಸಿಕೊಂಡು ಬಂದಿದ್ದ ನಮ್ಮ ಪೂರ್ವಜರು ಆ ನೀರನ್ನು ತಡೆದು ನೀರಾವರಿ ಕೆಲಸಕ್ಕೂ ಯಂತ್ರಚಾಲನೆಗೂ ಉಪಯೋಗಿಸುವ ವಿಷಯವನ್ನು ಆಲೋಚಿಸಿಲ್ಲ ಈಗ ಆದರ ಉಪಯೋಗವು ಸ್ವಲ್ಪಾಯಕ್ಕೂ ವಿದ್ಯುತ್ಪಾದನೆಗೂ ಸಹಜವಾಗಿ ಅನುಕೂಲವಾಗಹತ್ತಿದೆ ಭಾರತವು ಸ್ವತಂತ್ರವಾಗಿ ಈ ಬಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಕೊಂಡು ನಡೆಸುತ್ತಿರುವ ಕಾರ್ಯಕ್ರಮದ ಜೊತೆಗೆ ಹೊಸದಾಗಿ ೧೨೫ ಉದ್ಯಮಗಳನ್ನು ಪ್ರಾರಂಭಿಸಲಾಗಿದೆ ಇವೆಲ್ಲ ಪೂರ್ಣವಾದಾಗ ಇತರ ಎಲ್ಲ ಸಣ್ಣ ಕಾರ್ಯಗಳಿಂದ ಆಗುವ ೨೦ ಲಕ್ಷ ಎಕರೆಗಳಲ್ಲದೆ ೧ ಕೋಟಿ ೨೦ ಲಕ್ಷ ಎಕರೆ ಭೂಮಿಯು ನೀರಾವರಿ ವ್ಯವಸಾಯಕ್ಕೊಳಪಡುವುದರಿಂದ ಆವಾಗ ಒಟ್ಟು ದೇಶದಲ್ಲಿ ೮ ಕೋಟಿ ೬೦ ಲಕ್ಷ ಎಕರೆ ಭೂಮಿಯು ನೀರಾವರಿ ವ್ಯವಸಾಯಕ್ಕೊಳಪಡುವದು ಮೇಲ್ಕಂಡ ದೃಶ್ಯವು ಈಗಿನ ಎಚ್ಚ ಆಣೆಕಟ್ಟುಗಳಲ್ಲಿ ನಡೆಯುತ್ತಿರುವ ಕಾಮಗಾರಿಯ ನೋಟವಾಗಿರುವದು.

(ಪಡೆಯಬ್ಬು ಭಾರತ ಸರಕಾರದ ಇನ್‌ಫರ್‌ಮೇಷನ್ ಬ್ಯೂರೋದವರ ಕೃಪೆಯಿಂದ)

ನಾಡು ಕನ್ನಡ ಭರತಭಾಗವು
ನಾಡು ಭಾರತ ಲಲಿತಪ್ರಜೆಗಳು ।
ನಾಡು ಪ್ರಕೃತಿನಾಡೆ ಭಾವವ ಮೆರೆತ ಕೂಡಿತರ ।
ನೋಡಿ! ಸಕ್ಕರೆ ಹೂಲು ಸವಿದರೆ
ಮೂಡಿತೆಂಗೋ ಪದಮೋಹವು
ನೋಡಿನಪಿದರೆ ಭರತದೇಶವು ವಿಶ್ವವ್ಯಾಪಕವು ॥೧॥

ಮಂಗಲಂ ಶ್ರೀ ಭಾರತಾಂಬೆಗೆ
ಮಂಗಲಂ ಶ್ರೀ ಗನ್ನಡಮ್ಮಗೆ
ಮಂಗಲ ಶ್ರೀ ನೆಹರುಬಾಬು ಮುಖ ಪ್ರ ಕರಿಗೆ ।
ಮಂಗಲಂ ಶ್ರೀ ಜಾವಾಹರಿಗೆ
ಮಂಗಲಂ ವಿಜಲಿಂಗವ ರ್ಯಾರಿಗೆ
ಮಂಗಲಂ ಶ್ರೀ ಭಾಗ್ಯನಗರಿಗೆ ಶಿವಕವಿಶ್ವರಗೆ ॥೧॥

ಸರ್ವೇಜನಾ ಸುಖಿನೋಭವಂತು

ತಾ॥ ೧೦-೧೧-೧೯೩೬ ವೇ ಶಿವಯ ಶಾಸ್ತ್ರಿ ಹರೀನರ
ಗುರು ವಾರ ಭಾಗ್ಯನಗರ ತಾ॥ ಕೊಪ್ಪಳ

ಭಕ್ತ ಮಹಾಶಯರಲ್ಲಿ ನಿಜ್ಞಾಪನ

ಈಗ ಮೈಸೂರು ನಗರವಾಸಿಗಳಾದ ಶ್ರೀ ಎಂ. ಎಲ್ ನಾಗಣ್ಣನವರು ಸಮಯಕ್ಕೆ ತಕ್ಕ ವೇಷಧರಿಸಿ ತನ್ನು ಅತ್ಯವಿಚಾರ ಪತ್ರಿಕೆಯಮೂಲಕ ತ್ಯಾಗಿಗಳೆಂದು ಬರೆದು ಕೊಳ್ಳುತ್ತ ಲಾಟರಿ ಆಟ ದಲಾಲರ ಮಾಂಟಿ ಗಳೊಂದಿಗೆ ಧನವನ್ನು ಸೆಳೆದು ಜನತೆಯನ್ನು ಮೋಹಗೊಳಿಸಿದ್ದಲ್ಲದೆ, ಮಾಯಾ ವೇದಾಂತ ಬೋಧನೆಯಿಂದ ಮತ ಗ್ರಂಥಗಳನ್ನು ಹಳಿದು ವೀರಶೈವ ಧರ್ಮದೇವತೆಯ ಮಂಗಲ ಸ್ವರೂಪವನ್ನು ಈ ತರದ ರಾವಣಸನ್ಯಾಸಿಯು ನೇಪದಿಂದ ಹದಗೆಡಿಸಲು ಪ್ರಯತ್ನಿಸುತ್ತಿರುವುದು ಈಗೀಗ ಜನತೆಗೆ ಗೊತ್ತಾಗ ಹತ್ತಿ ಆ ಮೂಲಕ ಅವರ ಮಾಯಾತಂತ್ರದಿಂದ ದೂರಸರಿಯ ಹತ್ತಿದ್ದಾರೆ. ನಾಗಣ್ಣನವರು ತಮ್ಮ ೭೨ ವರ್ಷ ವಯಸ್ಸಿನ ಅಯುಷ್ಯದಲ್ಲಿ ಇಂಥ ಎಷ್ಟೋ ವೇಷಗಳನ್ನು ಧರಿಸಿ ಲಕ್ಷ ಗಟ್ಟಿಲೆ ದುಡ್ಡಿನ ಸಂಗ್ರಹ ಮಾಡಿದ್ದರೂ "ಅಮ್ಮ ನೂತದ್ದು ಮೊಮ್ಮಗನ ಉಡದಾರಕ್ಕೆ" ಎಂಬ ಗಾದೆಯಂತೆ ಎಲ್ಲವೂ ಕುಟುಂಬ ನಿರ್ವಹಣೆಗಾಗಿ ಹಾಳಾಗಿ ಹೋಗಿ ಈಗ ಪುನಃ ಸಮಾಜದವತಿಯಿಂದ ಅತ್ಯವಿಚಾರ ಮಂದಿರವನ್ನು ನಿರ್ಮಿಸಿ, ಲಕ್ಷಾಂತರ ರೂಪಾಯಿಯ ನಿಧಿ ಸಂಗ್ರಹಿಸಿರುವರಾಗಿ ತಿಳಿದು ಬರಹತ್ತಿದೆ. ಇದು ಅವರ ಅಧಿಕಾರದಲ್ಲಿಯೇ ಉಳಿದರೆ ತುಸುದಿನಗಳಲ್ಲಿ ಮತ್ತೆ ಕುಟುಂಬ ನಿರ್ವಹಣೆಗೆಸೇರಿ ಪೋಲಾಗು ವಂತಿದೆ. ಆದುದರಿಂದ ಸಮಾಜ ಪ್ರಮುಖರೂ ಧರ್ಮದರ್ಶಿಗಳೂ ಕೂಡಲೆ ತಮ್ಮ ದಯಾದೃಷ್ಟಿಯನ್ನಿಟ್ಟು ಅತ್ಯ ವಿಚಾರ ಮಂದಿರಕ್ಕೆ ಸಂಬಂಧಪಟ್ಟ ಆಸ್ತಿಪಾಸ್ತಿಯನ್ನೆಲ್ಲ ಟ್ರಸ್ಟ್ಗೆ ಮಾಡಿಸಿ, ಆ ನಿಧಿಸಂಗ್ರಹವು ವೀರಶೈವರ ನೇದಾಂತದ ಅಧ್ಯಯನಕ್ಕಾಗಿ ಉಪಯೋಗವಾಗುವಂತೆ ವ್ಯವಸ್ಥೆ ಮಾಡುವದಲ್ಲದೆ ಇವರಿಂದ ಈಸೆರೆದ ಅನಾತ್ಮವಿಚಾರವು ನಡೆಯದಂತೆ ಶ್ರಮ ಕೈಕೊಳ್ಳುವರೆಂದು ಆಶಿಸುತ್ತೇನೆ.

ಎ. ಎಂ. ವಿಶ್ವಾರಾಧ್ಯ.

ರೈತರಿಂದ ಟೆನೆನ್ಸಿ ಆಕ್ಟಿನ ದುರುಪಯೋಗ

೧೯೫೬ ನೇ ಇಸವಿಯಿಂದ, ಮೈಸೂರು ಟೆನೆನ್ಸಿಆಕ್ಟ್ ಜಾರಿಗೆ ಬಂದಲಾಗಾಯಿತ., ಜಮೀನು ಮಾಲೀಕರಿಗೂ ಮತ್ತು ಸಾಗುವಳಿದಾರರಿಗೂ ಹೆಚ್ಚು ವೈಮನಸ್ಸು ಬೆಳೆದುಬರುತ್ತಿರುವುದು ಕಾಣಹತ್ತಿದೆ. ಈ ಬಗ್ಗೆ ಅನೇಕ ಜನ ಸಾಗುವಳಿದಾರರು (ರೈತರು) ಜಮೀನು ಮಾಲೀಕರಿಗೆ ಭತ್ತವನ್ನು ಕೊಡದೆ ದುಂಡಾವ್ಯತ್ತಿಯಿಂದ ವರ್ತಿಸಿ ತರಲೆ ತಕರಾರುಗಳನ್ನು ಮಾಡುತ್ತ ಗುತ್ತಿಗೇ ಬತ್ತವನ್ನು ಪಾವತೀಮಾಡದೆ ಕಾಲಹರಣ ಮಾಡುತ್ತಿರುವುದು ಅಧಿಕಾರಿಗಳಿಗೆ ನೇದ್ಯವಾಗಿರಬಹುದು

ಜಮೀನು ಮಾಲೀಕರು ಈ ವ್ಯವಹಾರಕ್ಯಾಗಿ ನಾನೂರು ಏನೂರು ರೂಪಾಯಿಗಳವರೆಗೂ ಖರ್ಚು ಮಾಡಿಕೊಂಡು ಕಛೇರಿಗೆ ಓಡಾಡುತ್ತ ಕೇಸುಗಳು ಇನ್ನೂ ಇತ್ಯರ್ಥವಾಗದೇ ಅಲೆದಾಡುತ್ತಿರುವುದನ್ನು ನೋಡಿದರೆ ಎಂತಹವರಿಗಾದರೂ ಕೆಡಕೆನಿಸದೆ ಇರಲಾರದು. ಹೀಗಾಗಿ ಹಲವರು ಜಮೀನಿನ ಮೇಲೆ ಸಾಲ ಮಾಡಿ ಕಂದಾಯ ಕಟ್ಟಿ ತಮ್ಮ ಜೀವನವನ್ನು ನಡೆಸಬೇಕಾಗಿರುತ್ತೆ. ಈ ಕಾರಣದಿಂದ ಕೆಲವು ಜಮೀನ್ದಾರರು ತಮ್ಮ ಜಮೀನನ್ನು "ಸಿಕ್ಕಿದಷ್ಟು ಬೆಲೆಗೆ" ಮಾರುತ್ತಿರುವುದು ಸಹಾ ಸರಕಾರದ ಗೋಚರಕ್ಕೆ ಬಂದಿರಬಹುದು. ಬಹಳ ಕಾಲದಿಂದಲೂ ಸಾಗುವಳಿದಾರನ ಉದ್ಧಾರಕ್ಯಾಗಿಯೇ ತಮ್ಮ ಸ್ವಂತ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಕೊಟ್ಟು, ಅವನು ಜಮೀನಿನಲ್ಲಿ ತನಗೆ ಲಾಭದಾಯಕವಾದ ಬೆಳೆಗಳನ್ನು ಬೆಳೆದು ಬತ್ತದ ಫಸಲಿನಲ್ಲಿ ಗುತ್ತಿಗೆಗೆ ಒಪ್ಪಿ ಅತನು ಸಂತೋಷದಿಂದ ಧರ್ಮವಾಗಿ ಕೊಡುವ ಬತ್ತವನ್ನು ಜಮೀನು ಮಾಲೀಕರು ತೆಗೆದುಕೊಂಡು ತಮ್ಮ ಸಂಸಾರಕ್ಕೆ ಸಂಬಂಧಪಟ್ಟ ಹೊಟ್ಟೇ ಬಟ್ಟೆಗಳನ್ನು ಕಳೆದು ಕೊಂಡು ಜೀವನ ಮಾಡುತ್ತಿದ್ದರು.

ಇಂಥಾದ್ದರಲ್ಲಿ ಸಾಗುವಳಿದಾರರು ಈ 'ಆಕ್ಟ್' ಬಂದಲಾಗಾಯಿತು ಜಮೀನನ್ನು ಸಹ ಮೊದಲಿನಂತೆ ಉತ್ತಮ ಸಾಗುವಳಿ ಮಾಡದೆ ಬಹಳ ಹೀನ ಸ್ಥಿತಿಗೆ ತಂದು ಬೆಳೆ ಮಾಡುವುದರಲ್ಲಿ ತುಂಬಾ ಉದಾಸೀನರಾಗಿರುತ್ತಾರೆ. ಇದನ್ನೆಲ್ಲಾ ಯೋಚಿಸಿದರೆ ಈ 'ಟೆನೆನ್ಸಿ ಆಕ್ಟ್' ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿರಬಹುದೆಂಬುದನ್ನು ತಿಳಿದವರು ಯೋಚಿಸಬಹುದು. "ತಾಯಿಯನ್ನು ಕಳೆದುಕೊಂಡ ಮಗನನ್ನು ಮಲತಾಯಿಯ ವಶಕ್ಕೆ ಸಾಕುವುದಕ್ಕೆ ಕೊಟ್ಟರೆ ಎಷ್ಟು ಆಸಕ್ತಿಯಿಂದ ಸಾಕುತ್ತಾಳೆಂಬುದು ಅನುಭವಿಸಿದವರಿಗೆ ಗೊತ್ತಾಗಿದೆ" ಆದ್ದರಿಂದ ಅಧಿಕಾರಿಗಳು ಧರ್ಮಕ್ಕೆ, ಸತ್ಯಕ್ಕೆ ಚ್ಯುತಿಬಾರದಂತೆಯೂ ಉಭಯಶ್ರರೂ ಲಾಯರುಗಳಿಗೂ ಇತರರಿಗೂ ದುಡ್ಡು ತೆತ್ತು ಕಷ್ಟ ಜೀವನಕ್ಕೆ ತುತ್ತಾಗಿ ಅಲೆದಾಡುವುದನ್ನು ತಪ್ಪಿಸಿ ನ್ಯಾಯವಾದ ಮಾರ್ಗದಲ್ಲಿ ಉಭಯತ್ರರೂ ಮಧುರ ಬಾಂಧವ್ಯದಲ್ಲಿರುವಂತೆ ಮಾಡಬೇಕಾಗಿದೆ.

ಬಡ ಜಮೀನು ಮಾಲೀಕರು ಜಮೀನಿನ ಉತ್ಪತ್ತಿಯಿಂದಲೇ ಜೀವನೋಪಾಯವನ್ನು ನಡೆಸಬೇಕಾಗಿರುವುದರಿಂದಲೂ ಬೇರೆ ಯಾವ ವಿಧವಾದ ಮಾರ್ಗದಿಂದಲೂ ಜೀವನೋಪಾಯವನ್ನು ನಡೆಸಲು ಸಾಧ್ಯವಿಲ್ಲದಿರುವುದರಿಂದಲೂ ಸರಕಾರವು ಇದನ್ನೆಲ್ಲಾ ತಾತ್ಕಾಲಿಕವಾಗಿ ಯೋಚಿಸಿ ಸರ್ವಪ್ರಜೆಗಳನ್ನು ತಮ್ಮ ನುಕ್ಕಳಂತೆ ಭಾವಿಸಿ 'ಆಕ್ಟ್'ನ್ನು ಈ ತೊಂದರೆ ತಪ್ಪುವಂತೆ ತಿದ್ದುಪಡಿ ಮಾಡಿ ಕಾಪಾಡಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ.

ಎಂ. ಸೋಮಯ್ಯ, ಜಮೀನ್ದಾರ್,
"ಸೋಮೇಶ್ವರ ನಿಲಯ"
ಬಿಲ್ಲೇನೊಹಲ್ಲಾ,, ಮೈಸೂರು.

ಪತ್ರದ ಸ್ವೀಕೃತಿ

೧೬ ನೇ ಮಹಾಸಭೆಯ ಸ್ವಾಗತ ಸಮಿತಿಯ ಸದಸ್ಯರಾದ ಶ್ರೀ ಆರ್ ಎಚ್. ಪಾಟೀಲ ವಿಜಾಪುರ ಇವರಿಂದ ತಾರೀಕು ೧-೧೨-೧೯೫೬ ನೆಯ ದಿವಸ ಒಂದು ಪತ್ರ ಬಂದಿದೆ, ಅದರಲ್ಲಿ ಸದರೀ ಮಹಾಸಭೆಯ ಕಾರ್ಯಕಲಾಪಗಳು ಸಮರ್ಪಕವಾಗಿ ನಡೆದಿರುವ ವೆಂದೂ ಅಧ್ಯಕ್ಷರಾದ ಶ್ರೀ ಬಂಥನಾಳ ಸ್ವಾಮಿಗಳವರು ೩೯೦ ರೂ. ಗಳ ತಮ್ಮ ಸ್ವಂತ ಖರ್ಚಿನಿಂದ ಅಧ್ಯಕ್ಷ ಭಾಷಣ ಪ್ರಿಂಟುಮಾಡಿಸಿರುವರೆಂದೂ ಬರೆದಿರುವರು. ಲಕ್ಷಾಂತರ ರೂಪಾಯಿ ಖರ್ಚಿನ ವಹಿವಾಟುಳ್ಳ ಮಹಾಸಭೆಯ ಅಧ್ಯಕ್ಷಭಾಷಣವನ್ನು ಪ್ರಿಂಟುಮಾಡಿಸುವ ಖರ್ಚು ಅಧ್ಯಕ್ಷರೆ ಕೈಯಿಂದಲೇ ಕೊಡಲ್ಪಟ್ಟರುವದು ಆಶ್ಚರ್ಯದ ಸಂಗತಿ. ಮತ್ತು ಸಭೆಯ ಕಾರ್ಯಕಲಾಪಗಳು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುತ್ತವೆಂದು ಬರೆದಿರುವರು. ಅವು ಯಾವ ವೀರಶೈವ ಧಾರ್ಮಿಕ ಪತ್ರಿಕೆಗಳಲ್ಲಿ ಪ್ರಿಂಟಾಗಿರಬಹುದೆಂಬುದು ನಮ್ಮ ಅವಗಾಹನೆಗೆ ಬಂದಿಲ್ಲ. ಆದ್ದರಿಂದ ಸದರೀ ಸಭೆಯ ಪೂರ್ಣ ವಿವರಗಳನ್ನು ಆಧಾರಸಹಿತವಾಗಿ ನಮಗೆ ತಿಳಿಸುವದು ವಿಹಿತ. ವೀರಶೈವ ಮಹಾಸಭೆಗಳು ಎಚ್ಚರಿಕೆಯಿಂದಲೂ ಕಳಕಳಿಯಿಂದಲೂ ಐಕ್ಯಭಾವದಿಂದಲೂ ಕಾರ್ಯ ನಡೆಸಲೆಂಬ ಸದುದ್ದೇಶದಿಂದ ತಾ॥ ೧೨-೧೧-೧೯೫೬ ನೇ ಸೋಮವಾರದ ನಮ್ಮ ಪತ್ರಿಕೆಯಲ್ಲಿ "ವೀರಶೈವ ಮಹಾಸಭೆಗಳು ಗಮನಿಸಬೇಕಾದ ವಿಷಯ" ಎಂಬ ಲೇಖನವನ್ನು ಪ್ರಕಟಿಸಲಾಯಿತು. ವೀರಶೈವ ಸಮಾಜದ ಮೇಲ್ಪೈಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿರುವ ನಮ್ಮ ಉದ್ದೇಶಗಳನ್ನು ಗಮನಕ್ಕೆ ತಂದುಕೊಂಡು ಒಳ್ಳೆದಕ್ಕಾಗಿ ಸ್ವೀಕರಿಸುತ್ತ ಸಮಾಜವನ್ನು ಮೇಲು ಪಂಕ್ತಿಯಲ್ಲಿ ವಯ್ಯುವದು ಸಮಾಜಾಭಿಮಾನಿಗಳ ಕರ್ತವ್ಯ. ಅದನ್ನು ಸಾಧಿಸುವದು ಸರ್ವರಿ ಧರ್ಮ. ಒಟ್ಟಿನಲ್ಲಿ ಎಲ್ಲರೂ ಸೇರಿ ಸಮಾಜವನ್ನು ಮುಂದುವರಿಸಬೇಕಲ್ಲದೆ ಸುಧಾರಣೆಯ ಶ್ರಮವನ್ನು ಕೈಕೊಳ್ಳಬೇಕೆಂಬುವದೇ ನಮ್ಮ ಹಿರಿಯಾಸೆ. —ಸಂ.

ವೀರಶೈವ ಧರ್ಮಸುಧಾರಣೆ

(ಹಿಂದಿನ ಸಂಚಿಕೆಯ ಮುಂದುವರಿದುದು)

ವೀರಶೈವರಿಂದ ಜನರು ಮೊದಲು ಸಹಕಾರ ಮನೋಭಾವವೆಳ್ಳ ಕರುಣಿಸಿಕು ಲಿಂ ಶಿಂಗಯಾದ ಭಕ್ತನು ತನ್ನಂಥ ಲಿಂಗಭಕ್ತನನ್ನು ಯಾವವಿಧದಿಂದಲೂ ನಿಂದಿಸಬಾರದು, ಹಿಂಸಿಸಬಾರದು ಎಂದುನೇಳೆ ಸಹಿಸಲಾಗುವುದಾದ ನಿಂದಿತನಾದ ಶಿವಭಕ್ತನಾದರೆ ಅಂದಂದನ್ನು ಸರ್ವತ್ರ ಉದಾಸೀನಭಾವದಿಂದ ನೋಡಿಕೊಳ್ಳಲು ವುದೇ ವೀರಶೈವ ಧರ್ಮವು ಆಹಂಸಾವ್ರತಪೂರಿತ ಲಿಂಗ ದೇಹಿಗಳಾದ ವೀರಶೈವರು ಪ್ರಮಸ್ಥಿಲಿಂಗಣಿವಯೋಗಿಗಳು ನಿಂದಿಸಿ ಸುಡಿಯಬಿರಾದನ ವನಸಗಿಬ ದಂತೆ ಪಡೆಯದಿರಿಹದಲ್ಲಿ ಎಂದು ಅರ್ಪಣಕೊಡಿರುವ ತೆ ಜಗತ್ತಿನ ಪ್ರತಿ ಮಾನವನ್ಯಾನೆಯ ನ್ನೂ ಯಾವ ವಿಧದಲ್ಲಿಯೂ ನಿಂದಿಸುವಾರದು ದುರಾಚಾರಿಯಾಗಿಯಾಗಲಿಂದು ತನ್ನ ಮತ ಶ್ರದ್ಧಾನಾಚಾರಿಯು ಸ್ವಾಪಿಸಲ್ಪಟ್ಟಿರ ವ ಧರ್ಮ ದಂತೆ ನಡೆಯುಬೇಕೇ ವಿನಃ ವನಬಂದಂತೆ ನಡಿಯಂ ಬಾರದು ತನ್ನ ಧರ್ಮಸ್ಥಾಪಕನು ವುದೇ ಮತ ಆಚಾರದ ವನುಬಂಧಕ್ಕೆ ನಡೆಯುವುದೇ ಜಾತಾಚಾರ ಆದುದರಿಂದ ವೀರಶೈವ ಧರ್ಮ ಶಾಸ್ತ್ರದಲ್ಲಿ ಹೇಳಲುವಂತೆ ಲಿಂಗಾಂಗಿಯಾದವನು ಮೊದಲು ಅಹಂಸಾವಂತನಾಗಬೇಕು ಸದಾ ಲಿಂಗಧಾರಿಯಾಗಿರಬೇಕು ಶ್ರೀಗುರು ರೇಣುಕಭಗವತ್ಪಾದರು ಆಸ್ತ್ರ ಸಂಹಾರ ಮಾಡಿದ ವಿರಕ್ತಸಧರ್ಮದ ಪ್ರಸಾರವಣ ಮಂಚಾಚಾರ ಪಟ್ಟಲ್ಲಾಲಾಚರಣೆಯಂತೆ ನಡಿದ ಪ್ರಕಾರಾಚಾರ್ಯ ಇಂಥಾ ಪವಿತ್ರಧರ್ಮಾಚರಣಾಸಕ್ತನಾದ ಶಿವಭಕ್ತನ ತನ್ನ ನಡತೆಯಿಂದು ತೀರಿದ ಕೊಳ ಬಾದೆ ಪಾರಿ ಹರಿಯೆರ ವಚನದಂತು ಪ ಲಿಸುವುದು ಪ ಹಸಿಯರ ಚಿಂತಿಸ್ಪನನ್ನು ಕೇಳುವಾಪ ಸ್ಪಾಯಾಗಲೂ ತನ್ನ ಗುರುಗಳಿಂದ ರಚಿತವಾಗಿರತ್ಕ್ಕ ಗುರುಮಹತ್ವ ವರ್ಣನೆ ಲಿಂಗಮಹತ್ವವರ್ಣನ ಜಂಗಮ ಮಹತ್ವ ವರ್ಣನ ಪರವಾದ ಸದ್ಗುಣ ಇಂಥದ ಗ್ರಾನವುಳ್ಳ ತಾಳಮೇಳದಿಂದಿರೆ ಪಾಡುವದೆ ೀ ತ ನ ಪ್ರೀಗರುವು ದೀಕ್ಷಾಕಾಲದಲ್ಲಿ ಬೋಧಿಸತ್ಕ್ಕ ವ ಮಾ ೀ ತ್ಯನ್ನು ಆಗ್ಗೆ ಪ್ಪುಪಿಸಿಕೊಳ್ಳುತ್ತ ಮನೆದಲ್ಲಿ ಗುರ್ಜಿರಿಸುವಿದೇ ಸ್ಥಿರ ಆಸ್ಪಾರಿ ತರ್ಜನ ವಂದನ ದಾಸ ಸಖ್ಯ ಆತ್ಮನಿವೇದನಗಳಂಬನವನವಿಧಭಕ್ತಿಯುಳ್ಳವನಾಗಿ ಜೀಕ ಇವುಗಳಲ್ಲಿ ವಾದೀವನಾದಿ ಆತ್ಮನಿವೇದನಾಂತವಾದ ಅರು ಭಕ್ತಿಗಳ, ಚಿರಪೂಜೆ ಎಂ (ಗರವಾದಪೂಜಾ ಸಮಯದಲ್ಲಿ) ಆಚರಣೆಯಲ್ಲಿರುವುದರಿಂದ ಇವುಗಳನ್ನು ಹಚ್ಚಿಗೆ ವಿವರಬೇಕಾದ ಆವಶ್ಯಕತೆ ಇರುವುದಿಲ್ಲ (ಅಂದರೆ ಪ್ರತಿ ವೀರಶೈವ ಭಕ್ತನೂ ಸಾಧಿಕೆ ಇರುತ್ತಾನೆ ಎಂದರ್ಥ) ಭಕ್ತನಿಗೆ ಲಿಂಗದೀಕ್ಷಾಕಾಲದಲ್ಲಿ ಗುರುಗಳಿಂದ ಬೋಧಿಸಲ್ಪಡುವ ನೇಹಾ ಮನು ಕ್ರಿಯಾ ಎಂಬ ತ್ರಿವಿಧ ದೀಕ್ಷೆಗಳನ್ನು ತನ್ನಲ್ಲಿ ಅಳವಡಿಸಿ ಕೊಂಡು ಅನುಭವಿಸುವುದಕ್ಕಾಗಿ ಗುರುಕುಲವಾಸಮಾಡುತ್ತ ಪೂಜೆಗೆ ಸಾಕಷ್ಟು ವಿಧಿಯನ್ನು ಸಕ್ರಮವಾಗಿ ಕಲಿತು ಗುರುವಿನಲ್ಲಿ ಅನುಸಂಧಾನಮಾಡಿ ಅದರಂತೆ ನಿತ್ಯಾಚರಣೆಯುಳ್ಳಾತನೆ ಭಕ್ತನೆನಿಸಿಕೊಳ್ಳುತ್ತಾನೆ ಇಂಥಾ ಭಕ್ತನು ಅಹಂಸಾಯುತ ತಪಸ್ಸುಳ್ಳವನೂ ಶಿವೇತರ ದೈವಪೂಜೆ ಇಲ್ಲದವನೂ ಶಿವೇತರದೇವತೆಗಳಿಗೆ ನಿವೇದಿಸಿದ ಪ್ರಸಾದವನ್ನು ಸ್ವೀಕರಿಸದವನೂ, ಆಗಿ ಶಿವಾನಂದೆ, ಶಿವಭಕ್ತಿ ನಿಂದೆ ಇರುವ ಸ್ಥಳವನ್ನು ತ್ಯಜಿಸಬೇಕು ಶಿವನ್ನತಾಗಿಕಾರಿಗಳಾಗಲೂ ತನ್ನ ಜಾತಿಯನೂ ವೀರಶೈವಾಚಾರ ಮಾರ್ಗದಲ್ಲಿ ನಿರತರೂ, ಜಂಗಮಪ್ರೇಮಿಗಳಾಗಿಯೂ ಆಗಿರುವವರ ಮನೆಯಲ್ಲಿ ಭೋಜನಾದಿ ಕಾರ್ಯಗಳನ್ನು ಮಾಡಬೇಕೇ ವಿನಃ ಇತರರ ಮನೆಯಲ್ಲಿ ಮಾಡಬಾರದು ಮತ್ತು ಜನಗಳಲ್ಲಿ ಶ್ರೇಷ್ಠವಾದ ಅನ್ನದಾನವನ್ನು ಶಿವಭಕ್ತರು ನಿತ್ಯದಲ್ಲೂ ತನ್ನ ಶಕ್ತ್ಯಾನುಸಾರವಾಗಿ ಮಾಡುತ್ತಿರಬೇಕು ಉಪ್ಪಕಾರ ಶ್ರೇಷ್ಠ ವ್ರತವುಳ್ಳ ಶಿವಭಕ್ತನು ಭಕ್ತಿಯಿಂದ ಗುರು-ಲಿಂಗ-ಜಂಗಮರನ್ನೂ ಕೂಡಾ ಯಾವಾಗಲೂ ಪೂಜಿಸುತ್ತಿರಬೇಕು

ಎಂ ರುದ್ರಯ್ಯಶಾಸ್ತ್ರೀ
ಶಿವಾಯನಮಃಮಠ, ಮೈಸೂರು

ವಂಚಾಚಾರ್ಯ ಪ್ರಭಾ ನಾಚಿಕರಲ್ಲಿ ವಿನಂತಿ

ಪ್ರಿಯ ಓದುಗರೇ ನಮ್ಮ ಸಂಘ ಶ್ರೀಕಾಶೀಸಿಂಹಾಸನಾಧೀಶ್ವರರಾದ ಜಗದ್ಗುರುಗಳವರು ವೀರಶೈವಸಮಾಜ ಸೇವೆಗಾಗಿ ಅನಂತ ಕಾರ್ಯ ಗಳನ್ನು ಮಾಡಿ ಸ್ಮರಣೀಯರಾಗಿರುವುದು ನಿಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅವರು ಸಂಸ್ಥಾಪಿಸಿರುವ ಶ್ರೀ ಜಗದ್ಗುರು ಸಂಸ್ಕೃತ ಪಾಠಶಾಲೆಯ ಪ್ರಗತಿಯನ್ನು ಕುರಿತು ಪ್ರತಿ ವರ್ಷವೂ ಸಾರ್ವಜನಿಕ ಸಭೆಯಲ್ಲಿ ಅವರು ಮಾಡುವ ಉಪನ್ಯಾಸವನ್ನು ಕೇಳಲು ಸಾವಿರಾರು ಜನರು ಸೇರುತ್ತಿದ್ದರು. ಈ ವರ್ಷ ಅವರು ಅನಾರೋಗ್ಯದಿಂದ ಬಳಲುತ್ತಿದ್ದುದರಿಂದ ಸಭೆಯಲ್ಲಿ ಉಪನ್ಯಾಸ ಮಾಡಲಾಗಲಿಲ್ಲ. ಆದರೆ ಅವರು ಸಂಸ್ಥೆಯ ಪ್ರಗತಿಯ ವಿಷಯವಾಗಿ ಬರೆದಿರುವ ಉಪನ್ಯಾಸವನ್ನು ಶ್ರೀಮಾನ್ ಎಂ. ರುದ್ರಯ್ಯ ಶಾಸ್ತ್ರಿಗಳವರು ಓದಿ ಸಭೆಯಲ್ಲಿ ಒಪ್ಪಿಸಿದರು. ಆ ಉಪನ್ಯಾಸವನ್ನು ಓದಿದವರೆಲ್ಲರೂ ಅದರಲ್ಲಿ ಅಡಗಿರುವ ಅಮೂಲ್ಯ ವಿಷಯಗಳನ್ನು ಕುರಿತು ಆಶ್ಚರ್ಯಪಟ್ಟಿದ್ದಾರೆ. ಅಂಥ ಉಪನ್ಯಾಸವನ್ನು ಸಾರ್ವತ್ರಿಕವಾಗಿ ಪ್ರಚಾರಪಡಿಸಿ ಸಮಾಜದ ಕಣ್ಣು ತೆರೆಸಬೇಕೆಂಬ ಉದ್ದೇಶದಿಂದ ಅದನ್ನು ಪ್ರಭಾ ಪತ್ರಿಕೆಯಲ್ಲಿ ಪ್ರಕಟಿಸಲು ಸಂಪಾದಕರು ಏರ್ಪಾಟು ಮಾಡಿದ್ದರು. ಆದರೆ ಅದು ಪ್ರಕಟವಾಗುವ ಮುಂಚೆಯೇ ಅದರ ಪ್ರತಿಗಳು ಮಾಯವಾಗಿ ಹೋಗಿವೆ. ಆದುದರಿಂದ ಆ ಉಪನ್ಯಾಸವನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಆದರೆ ಅದರಲ್ಲಿ ಅಡಗಿರುವ ಅಮೂಲ್ಯ ವಿಷಯಗಳನ್ನು ಸಮಾಜದ ಮುಂದಿಡಲು ಅಪೇಕ್ಷಿಸಿ ಅದರ ಸಾರಾಂಶವನ್ನು ಪ್ರಕಟಿಸಲು ಸಂಪಾದಕರು ಏರ್ಪಾಟು ಮಾಡಿದ್ದಾರೆ. ಆದರೆ ಅದನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಆದರೆ ಅದರ ಸಾರಾಂಶವ

ಶ್ರೀಕ್ಷೇತ್ರ ಕಪಿಲಧಾರಾ ಯಾತ್ರಾಮಹೋತ್ಸವ

ಈ ಮಳಗಾಗಿ ಪ್ರಸಿದ್ಧವಹಿಸಿರುವ ಬೀಡುಜಿಲ್ಲೆಯಲ್ಲಿರುವ ಶ್ರೀಕಪಿಲಧಾರಾಕ್ಷೇತ್ರದ ಯಾತ್ರಾಮಹೋತ್ಸವವು ಬಹಳ ವೈಭವದಿಂದ ನಡೆಯುತ್ತಿದ್ದು ಭಕ್ತರ ಅಮಂತ್ರಣದ ಮೇರೆಗೆ ತಾರೀಖು ೧೯-೧೧-೫೬ ನೇ ನೋಮವಾರ ದಿವಸ ಮಧ್ಯಾಹ್ನ ೨ ಘಂಟೆಗೆ ಶ್ರೀ ಕಾಶೀ ಜಗದ್ಗುರು ವಿಶ್ವೇಶ್ವರತೀರ್ಥಾಚಾರ್ಯ ಮಹಾಸ್ವಾಮಿಗಳವರು ಸೊಲ್ಲಾಪುರದಿಂದ ಪ್ಲೇತ್ರಕ್ಕೆ ಆಗಮಿಸಿದ ಕೂಡಲೆ ಸುವರ್ಣಕಿರೀಟ ಧಾರಿಗಳಾದ ಮಹಾಸ್ವಾಮಿಗಳವರು ಅಲಂಕೃತವಾದ ಆಡಳ್ಳಪ್ಪಕ್ಕಿಯಲ್ಲಿ ಮುಹೂರ್ತ ಮಾಡಿದರು ಶ್ರೀ ಜಗದ್ಗುರು ಪಂಚಾಚಾರ್ಯ ಧರ್ಮಸ್ಥಾಪನಾಚಾರ್ಯ ಶ್ರೀ ವಿಶ್ವೇಶ್ವರ ಶಿವಾಚಾರ್ಯರ ಜೈ ಜೈ ಕಾರವು ಗಭೋಮಂಡಲವನ್ನು ವ್ಯಾಪಿಸಿತು ಅನೇಕ ವಾದ್ಯವೈಭವದೊಡನೆಯೂ ಭಜನಾಮೇಳದೊಡನೆಯೂ ಬೀಡಿಯಲ್ಲಿ ಉತ್ಸವವು ಪ್ರಾರಂಭವಾಗಿ ಉದ್ದಕ್ಕೂ ಭಕ್ತಾದಿಗಳು ಪಲ್ಲಕ್ಕಿಯನ್ನು ಸುತ್ತುತ್ತಿರುವ ಸೂಜೆಕಾಣಿಕೆಯಿಂದ ಸ್ವೀಕರಿಸುತ್ತಾ ಸಾಯಂಕಾಲ ೬ ಘಂಟೆಗೆ ಶ್ರೀಮನ್ಮಹಾ ಸ್ವಾಮಿ ಮಂದಿರದ ದಿವ್ಯಸಭಾ ಮಂಟಪಕ್ಕೆ ತಲ್ಪಿತು ಮಹಾಸ್ವಾಮಿಗಳವರು ಪೀಠಾರೋಹಣ ಮಾಡಿದ ನಂತರ ಮಂದಿರದ ಸಮಿತಿಯವರು ವಿನ್ಯವಸ್ತಳೆಯನ್ನರ್ಪಿಸಿದರು ಮಹಾಸ್ವಾಮಿಗಳವರಿಂದ ಭೋಗ್ಯ ದೇಹವಾಗಿ ಸಭಾವಿಸರ್ಜನೆಯಾಯಿತು

ಶ್ರೀಜಗದ್ಗುರುಗಳವರ ಸನ್ನಿಧಿಯಲ್ಲಿ ನಡೆಯಬೇಕಾದ ಕಾರ್ಯಕ್ರಮದ ಪ್ರಕಾರ ವೀರಶೈವಧರ್ಮ ಪರಿಷತ್ತಿನ ಹತ್ತನೇ ಅಧಿವೇಶನವು ನಡೆಯಿತು ತಾ|| ೨೦-೧೧-೫೬ ನೇ ದಿವಸ ಮಹಾಸನ್ನಿಧಾನದವರ ನೇತೃತ್ವದಲ್ಲಿ ಅನೇಕ ವೈದಿಕ ಪಾರ್ಷದ್ಯರ ಮೂಲಕ ಶ್ರೀಮಲ್ಲಿಕಾರ್ಜುನೇಶ್ವರ ಲಿಂಗಕ್ಕೆ ಶ್ರೀ ರುದ್ರಾಭಿಷೇಕವು ನಡೆಯಿತು ಮಧ್ಯಾಹ್ನ ಪ್ರಸಾದ ವಿನಿಯೋಗವಾಯಿತು ಈ ಮಹೇಶ್ವರಕ್ಷೇತ್ರ ಪರಳಿ, ಪಂಡರಪುರ, ಲಾತೂರು, ಬಾಶಿ- ಬೀಡ ಮೊದಲಾದ ನೆಗರಗಳ ಗಣ್ಯವ್ಯಕ್ತಿಗಳು ಆಗಮಿಸಿದ್ದರಿಂದ ಉತ್ಸವಕ್ಕೆ ಹೆಚ್ಚಿನಳಕೆಯಾಗಿದ್ದಿತು ಶ್ರೀಜಗದ್ಗುರು ಪಂಚಪೀಠಾಧಿಶ್ವರರ ಉತ್ಸವಗಳೂ ಧರ್ಮೋಪ ದೇಶಗಳೂ ಕರ್ನಾಟಕ ಮಹಾರಾಷ್ಟ್ರ ಆಂಧ್ರ ಪ್ರದೇಶಗಳಲ್ಲಿ ಹೀಗೆ ಪಡೆಯುತ್ತಿರುವುದು ವೀರಶೈವರ ಸುದ್ದಿನವೇ ಸರಿ

ಉತ್ಸವಭಾಗಿ ಕಪಿಲಧಾರಾ

ಸರಕಾರಿ ಅಧಿಕಾರಿ ವರ್ಗದವರಲ್ಲಿ ವಿಜ್ಞಾಪನೆ

ಪ್ರತಿ ಕುಟುಂಬ ಪಾಲನೆಗೆ ಒಬ್ಬ ಯಜಮಾನನು ಇರುವಂತೆಯೇ, ಒಂದು ಗ್ರಾಮ, ಹೋಬಲಿ, ತಾಲೂಕು ಡಿಸ್ಟ್ರಿಕ್ಟು, ಪ್ರಾಂತಗಳಿಗೂ ಒಬ್ಬೊಬ್ಬ ಸರಕಾರಿ ಅಧಿಕಾರಿಗಳು ಇದ್ದಾರೆ ಆದರೆ ಕುಟುಂಬದ ಯಜಮಾನನು ನೀತಿವಂತನಿದ್ದರೆ ಕುಟುಂಬವು ಸರಿಯಾಗಿ ನಡೆಯುತ್ತಿ ಇದರಂತೆಯೇ ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯದಲ್ಲಿ ನಿರತರಾಗಿ ಪ್ರಜಾಜನರ ಸಂರಕ್ಷಣೆಯೇ ಈಕಸೇವೆ ಯೆಂದು ಸ್ಮಾರ್ಥಾಮುಖರಾಗಿ ವರ್ತಿಸುವುದರಿಂದ ಪ್ರಜಾಳುಟುಂಬಗಳು ಸುಖಮಯವಾಗಿ ಬಾಳುವವು ಪ್ರಜಾಪ್ರಭುತ್ವದಲ್ಲಿ ಬಹುಮತದಿಂದ ಆರಿಸಿಬಂದು ಅಧಿಕಾರಸೂತ್ರವ ಧರಿಸಿದ್ದು ತಮ್ಮ ಅಧಿಕಾರವಧಿಯಲ್ಲಿ ಪ್ರಗತಿಕಾರ ಮಾಡಿ ತಾವು ನಿವೃತ್ತರಾದರೂ ತಮ್ಮ ಕೀರ್ತಿಯು ಜಗತ್ತಿನಲ್ಲಿ ಉಳಿಯಬೇಕು ಕೆಲವು ಮಹನೀಯರು ಅಧಿಕಾರವನ್ನು ದುರುಪಯೋಗಪಡಿಸಿ ಸರ್ಕಾರವನ್ನೇ ಏಂದಿಗೆ ಗುರಿಮಾಡಿರುವರು ಇದು ಸರ್ಕಾರ ಅಥವಾ ಒಂದು ಸಂಸ್ಥೆಯ ತಪ್ಪಲ್ಲ ಆದರಲ್ಲಿ ಕೆಲಸಮಾಡುವ ಒಂದು ವ್ಯಕ್ತಿಯ ತಪ್ಪು ಅಂಧಾ ವ್ಯಕ್ತಿಯನ್ನು ಪದವ್ಯವಿದರ ಇಂಸುವುದೇ ನೀಲು ಅಧಿಕಾರಿಗಳು ತಮಗಿದ್ದ ಅಧಿಕಾರವನ್ನು ಸದುಪ ಯೋಗಕ್ಕೆ ಬಾಸಲಾಗಿಡಬೇಕು ಮಹುಷ್ಯ ಶರೀರವು ಸ್ಥಿರವಿಖಿದ್ದರೂ ಅದರ ಸತ್ಕೃತಿಗಳು ಸ್ಥಿರವಾಗಿ ಉಳಿದರೆ ಅಧಿಕಾರ ಹೊಂದಿದ್ದಕ್ಕೆ ಸಾರ್ಥಕ ಕೀರ್ತಿಶೇಷರಾದ ಜಗಜ್ಯೋತಿ ಬಸವೇಶ್ವರ, ಧರ್ಮಜ್ಯೋತಿ ಶ್ರೀಕಾಶೀ ನಾಥರೇ ಮೊದಲಾದವರ ಕೀರ್ತಿ ಇಂದಿನವರೆಗೂ ಉಳಿದಿದೆ ಮಹಾತ್ಮಾ ಗಾಂಧೀಜಿಯವರು ಸ್ವಾರ್ಥ ವನ್ನು ಅಳಿದು ಪ್ರಜಾಸೇವೆಯೇ ಪರಮೇಶ್ವರನ ಸೇವೆ ಯೆಂದರಿದು ನುಡಿದಂತೆ ಪಡೆದು ಕಳ್ಳರೆಯಾದರು. ಅವರ ಕೀರ್ತಿ ಶಾಶ್ವತವಾಗಿ ಉಳಿಯುತು ಈಗ ಕನ್ನಡಿಗರ ಸುದೈವದಿಂದ ಆಯಿಂಡವಾದ ವಿಶಾಲ ಮೈಸೂರು ಆದ ಸುದಿನವನ್ನು ಆಂಡೆವು ಶ್ರೀಮಾನ್ ಮುಖ್ಯ ಮಂತ್ರಿ ಫಿಜಲಿಂಗಪ್ಪನರು ಈ ಬಗ್ಗೆ ಆತಿ ಶ್ರಮವಹಿಸಿ ಪ್ರಾಗಿವೆ ಈ ಶ್ರಮಕ್ಕೆ ತಕ್ಕ ವಿಶಾಲ ಮೈಸೂರು ಮುಖ್ಯಮಂತ್ರಿ ಪದವೂ ದೊರೆತಿದೆ ಪದವಿಯು ಮಾತ್ರ ಯಾರಿಗೂ ವಿಶೇಷವಲ್ಲ ಈ ಪದವಿಯ ಅವಧಿಯಲ್ಲಿ ಲಿಂಗ ಅಂದರೆ ಪರಮೇಶ್ವರ ಸಿಜ ಅಂದರೆ ಸತ್ಯ (ಸ್ಥಿರ) ನಿಜಲಿಂಗ ಅಂದರೆ ಪರಮೇಶ್ವರನು ಸತ್ಯ (ಸ್ಥಿರ) ಎಂಬಂತೆ ಆ ಪರಮೇಶ್ವರನು ತನ್ನ ನಾಮಧಾರಿಯಾದ ವಿಶಾಲ ಮೈಸೂರು ಮುಖ್ಯಮಂತ್ರಿ ನಿಜಲಿಂಗಪ್ಪನವರ ವಿಶಾಲ ಹೃದಯದಲ್ಲಿಯೂ ಮತ್ತು ಮಂತ್ರಿವರ್ಗದ ಅಧಿಕಾರಿಗಳಲ್ಲಿಯೂ ನೆಲಸಿ ಅವರಿಂದ ಪ್ರಜೆಗಳಿಗೆ ಮಹದುಪಕಾರವಾಗಿ ಅವರ ಕೀರ್ತಿಯು ಅಮರವಾಗಿ ಲೆಂದು ಹಾರೈಸುವ,

ಹಿತಚಿಂತಕ ಪ್ರಜೆಯಲ್ಲೋರ್ವ
ಸಿ ಸಿ ಚಿನ್ನಪ್ಪನೂರುಮಠ

ಒಳನಾಡಿನ ಜಲಮೂರ್ಗ ಸೌಕರ್ಯಕ್ಕೆ ವ್ಯವಸ್ಥೆ

ದೇಶದಲ್ಲಿ ಒಳನಾಡಿನ ಜಲಸೌಕರ್ಯ ಅಭಿವೃದ್ಧಿ ಗೊಳಿಸಲು ಸ್ಪಾವಿಣ ಯೋಜನೆಯೊಂದನ್ನು ಕೇಂದ್ರ ಜಲ ಮತ್ತು ವಿದ್ಯುಚ್ಛಕ್ತಿ ಕಮಿಷನ್ ಸಿದ್ಧಗೊಳಿಸಿದೆ ಯೆಂದು ರೈಲ್ವೆ ಉಪಸಚಿವ ಶ್ರೀ ಖಾನವಾಜ್‌ಬ್ಬಾ ಇಂದು ರಾಜ್ಯಸಭೆಯಲ್ಲಿ ತಿಳಿಸಿದರು

ಈ ಯೋಜನೆಯ ಮುಖ್ಯಾಂಶಗಳು ೧ ಪಕ್ಷಿನು ತೀರದಿಂದ ಪೂರ್ವತೀರಕ್ಕೆ ನಿರಂತರ ನೀರಿನ ಮಾರ್ಗ ಒದಗಿಸಲು ಗಂಗಾನದಿಯನ್ನು ನರ್ಮದಾ ನದಿಗೆನೇರ ಲಂತೆ ಸಂಪರ್ಕ ಕಲ್ಪಿಸುವುದು ೨ ನರ್ಮದಾ, ಗೋದಾವರಿ ನದಿಗಳಿಗೆ ಸಂಪರ್ಕ ಕಲ್ಪಿಸುವುದು ೩ ವರ್ಷಾ ಮೂಲಕ ತಪತಿ ನದಿ ದಾ ನದಿಗಳನ್ನು ಸೇರಿ ಸವುದು ೪ ಸೋನೆ ಮೂಲಕ ಗಂಗಾ ಮಹಾನದಿ ಸಂಪರ್ಕವೇಷ ಡಿಸುವುದು, ಮತ್ತು ೫ ಕೆ-ಸ್ಪಾಣಾರೀ ರೀನ್ ಮೂಲಕ ಕಲ್ಪತ್ತಾ ಕೊಜ್ಜ ಗಳಿಗೆ ಸಂಬಂಧ ಕಲ್ಪಿಸಿ ನಿರಂತರವಾದಂಧ ತೀರಸ್ಪರ್ಶದ ಜಲಮಾರ್ಗ ಒದಗಿಸುವುದು

ಈ ಯೋಜನೆ ಸರಿತೀಲನೆಗೆ ಸರ್ಕಾರ ಸಮಿತಿ ಯೊಂದನ್ನು ನೇಮಿಸಲಿದೆಯೆಂದು ಸಚಿವರು ನುಡಿದರು

ವೇಶ್ಯಾವೃತ್ತಿಯ ನಿರೋಧಕ್ಕೆ ಶಾಸನ

ವೇಶ್ಯಾವೃತ್ತಿಯ ಉಚ್ಚಾಟಕಗಳಿಗಾಗಿ ಮಹಿಳೆಯರು ಮತ್ತು ಹುಡುಗಿಯರ ಕ್ರಯವಿಕ್ರಯದ ವಹಿವಾಟನ್ನು ನಿಗ್ರಹಿಸಲು ಮಹಾಪೌರದನ್ನು ಲೋಕಸಭೆಯು ಲ್ಲಿಂದು ಅಂಕಿರಿಕೆ ವ್ಯವಹಾರಿಗಳ ಸಚಿವ ಶ್ರೀ ಬಿ ಎನ್ ದಾತಾರರು ಮಂಡಿಸಿದರು ಈ ಮಸೂದೆ ಸೆಲೆಕ್ಟ್ ಸಮಿತಿಮುಂದೆ ಬಂದಿದೆ,

ವೇಶ್ಯಾ ಗೃಹಗಳನ್ನು ಪಡೆಸುವುದು, ವೃಭಚಾರಕ್ಕೆ ಅಪ್ಯಾಸಿಸುವುದು, ವೇಶ್ಯಾವೃತ್ತಿಗಾಗಿ ಹೆಂಗಸರು— ಹುಡುಗಿಯರನ್ನು ಕೂಡಿಸುವುದು ಮತ್ತು ಕರಸಿಕೊಳ್ಳು ವುದು ಅಪರಾಧವಾಗುವುದೆಂದು ಈಮಸೂದೆ ಸಾರುತ್ತದೆ

ಹೆಂಡತಿ ಗಂಡನನ್ನು ಸಾಕಬೇಕೇ ?

ಪುರುಷನು ತಕ್ಕ ಪತ್ನಿಯಿಂದ ಸಾಕಲ್ಪಡಲು ಅವ ಕಾಶವಿರಬೇಕೇ ? ಈ ವಿಷಯವಾಗಿ ರಾಜ್ಯಸಭೆಯಲ್ಲಿಂದು ಪುರುಷ ಸದಸ್ಯರು ಭಿನ್ನ ಭಿಪ್ರಾಯ ವ್ಯಕ್ತಪಡಿಸಿದರು ಹಿಂದೂ ದತ್ತು ಸ್ವೀಕಾರ ಮತ್ತು ಪೋಷಣೆ ಮಸೂ ದೆಯ ಮೇಲೆ ಮಾತನಾಡುತ್ತಾ ಡಾ|| ಬಾರ್ಗವೇ ಅವರು, ಸ್ತ್ರೀ-ಪುರುಷ ಸಮಾನತೆ ಇರಬೇಕೆಂದೂ, ತಕ್ಕ ಹೆಂಡತಿಯಿಂದ ಜೀವನ ನಿರ್ವಹಣ ನೆರವು ಪಡೆ ಯಲು ಗಂಡಸಿಗೂ ಹಕ್ಕಿರಬೇಕೆಂದೂ ಹೇಳಿದರು

ಕೂಡಲೇ ಶ್ರೀ ಬಿ ಕೆ ಎಸ್ ಸಿಷ್ಣಾರವರು ಮೇಲೆದ್ದು " ತಕ್ಕ ಹೆಂಡತಿ ನಿನ್ನನ್ನು ಸಾಕುವುದಕ್ಕೆ ಹಾಸು ಒಪ್ಪುವುದಿಲ್ಲ ", ಎಂದರು

ಸಂಚಾರಿಯ ಸರಸವಾಣಿ

ಯುದ್ಧವೂ ರಕ್ತಪಾತವೂ ನಡೆಯದೆ ಸುಖರೂಪ ವಾಗಿ ಸಲ್ಲುಗೊಂಡ ಸ್ವತಂತ್ರ ಭಾರತದಲ್ಲಿ ಪ್ರಾಣಾಪಾ-ಮಾನಪಾಪ-ಧನಪಾಪಗಳು ನಗುನುತ್ತ ಪಡೆಯಬೇಕಾ ದುದು ದೈವಿಸಂಕಲ್ಪವಾಗಿರಬಹುದಲ್ಲವೆ ?

* * *

ಸ್ವಂತಭಾರತದಲ್ಲಿರುವ ವರ್ತಮಾನಪತ್ರಿಕೆಗಳ ಸ್ವಾತಂತ್ರ್ಯದಕಕ್ಕು ಸರಕಾರದಿಂದಾಗಲಿ ಜನತೆಯಿಂದಾ ಗಲಿ ದುಡ್ಡು ಸೆಳೆಯುವದಕ್ಕಾಗಿದೆ ನ್ಯಾಯ ನೀತಿ ಗಳನ್ನು ಜಗತ್ತಿಗೆ ಬೋಧಿಸಿ ಸತ್ಪಥ ತಳಪಡಿಯುಮೇಲೆ ಧರ್ಮರಾಜ್ಯ ಕಟ್ಟಲಿಕ್ಕಿರುವುದೆಂಬುದನ್ನು ಎಲ್ಲ ಪತ್ರಿಕಾ ಕರ್ತರು ಅರಿತ ಆಚರಣೆಗೆ ತರಬಹುದಲ್ಲವೆ ?

* * *

ನೇತುವೆ ಕುಸಿದು ನದಿಯಪಾಲಾದ ರೈಲ್ವೆ ಬೋಗಿ ಗಳಲ್ಲಿ ನೂರಾರು ಗಟ್ಟಿಜನ ಸತ್ತುಹೋದುದಕ್ಕೆ ದಕ್ಷಿಣ ಭಾರತದಲ್ಲಿ ಎರಡು ಪ್ರಸಂಗಗಳನ್ನು ನೋಡಿ ದುಃಖ ಕ್ಕೀಡಾದ ರೈಲ್ವೆಮಂತ್ರಿ ಲಾಲ್‌ಬಹದ್ದೂರಶಾಸ್ತ್ರಿಯವರು ರಾಜೀನಾಮೆ ಕೊಟ್ಟರೆಂತೆ ? ಶೈಲು—ನೋಬಾರು— ಏನಾನಪಾತಿಗಳಿಗೆಲ್ಲಾ ಮಂತ್ರಿಗಳಾಗಿದ್ದ ಇವರು ತಮ್ಮ ಅಧಿಕಾರದಲ್ಲಿ ಮಂತ್ರಿಗಳು ಸಂಚರಿಸುತ್ತಿರುವ ವಿಮಾನ ಗಳನ್ನು ಎಚ್ಚರಿಕೆಯಿಂದ ನೋಡಿಕೊಂಡದ್ದಕ್ಕೆ ಉಳಿದ ಮಂತ್ರಿಗಳ ಪದವಾಗಿ ಇವರಿಗೆ ಪೂಮಾಲೆಗಳನ್ನು ಏಕಿಸಿ ಕಳಸಬಹುದಲ್ಲವೆ ?

ಈ ಸಮಯದಲ್ಲಿ ಉಪರೈಲ್ವೆಸಚಿವ ಶ್ರೀ ಅಲಗೇಶನ್ ರವರೂಸಹ ರಾಜೀನಾಮೆ ಕೊಡದೇಇರಲಿಕ್ಕಿಲ್ಲಾ ಎಂದು ನಾಚಕರು ಶಂಕಿಸಬಹುದು ಆದರೆ ಶ್ರೀ ಶಾಸ್ತ್ರಿಯವರ ಜಾಗೆಯನ್ನು ಬಹಳದಿನಸ ಖಾಲೀ ಬೇಗೊಡದೆ ಇವರು ಆ ಸ್ಥಾನವನ್ನು ಆಕ್ರಮಿಸಿ ಕೊಳ್ಳುವಹಾಗಿರ ಬೇಕು ಹೆಚ್ಚಿನ ಅಧಿಕಾರದ ಸ್ಥಾನಗಳನ್ನು ಎದುರು ನೋಡುತ್ತಿರುವುದೇ ಕಾಂಗ್ರೆಸ್ಸಿನ ನಿಜವಾದ ಧ್ಯೇಯ ವಲ್ಲವೆ ?

* * *

ವೇದಾಗಮೋಪನಿಷತ್ತುಗಳಲ್ಲಿ ಪ್ರಸಿದ್ಧವಾದ ವೀರ ಶೈವ ಮತದಬಗ್ಗೆ ಪೂರ್ವಾಪರ ಆಧಾರಗಳೇ ಇಲ್ಲವೆಂದು ಹೇಳುವ ಚರ್ಚಾಸಮಿತಿಯವರು ಹೋಗಪದ ಹಂತಿ ಪದಗಳನ್ನೂ ಕುಟ್ಟುಬೀಸುವ ಪದಗಳನ್ನೂ ಆಧಾರ ವಾಗಿಟ್ಟುಕೊಂಡು ಅಧಿಕೃತಗ್ರಂಥ ನಿರ್ಮಿಸಿದ್ದಾರೆ ಶ್ರೀ ನಾಗಣ್ಣವರಂಥ ಅಪಾಧ್ಯೇತಿಗಳು ವಕ್ಕಲುಬಹುದೆಂಬುತು ಸಿದ್ಧಾಂತಿಗಳ ವಾದವಾಗಿರಬಹುದಲ್ಲವೆ ?

* * *

ಆಟ್ಟಿದಮನೆಯೇ ಸುಳ್ಳೆಂದು ಹೇಳಿ ಆ ಮನೆಯಲ್ಲಿ ನೊರಾರುಜನರುಳ್ಳ ತುಂಬಿದ ಸಂಸಾರವಿದೆ ಎಂದುಹೇಳು ವುದೂ ನೆಟ್ಟಿನೆಲ್ಲನೇ ಇಲ್ಲೆಂದುಹೇಳಿ ಆ ನೆಲದಲ್ಲಿ ಸಾವಿರಗಟ್ಟಿ ಮಧುರಫಲಗಳು ಸಿಗುತ್ತವೆಂದು ಹೇಳು ವದೂ ಎಷ್ಟು ಅಸಮಂಜಸವೊ ಹಾಗೆ ವೀರಶೈವ ಮತದ ಮೂಲವೇ ತಿಳಿಯಾರದೆಂದು ಹೇಳುವ ಅತಿರಥ ಮಹಾರಥರಂಥ ಮೇಧಾವಿಗಳ ಹೇಳಿಕೆ ಅಷ್ಟು ಅಧಾ ಸಂಬಂಧವನ್ನು ಜಗತ್ತೇ ಅರಿತಿದ್ದರೂ ಚಿಕ್ಕುಬಿಕ್ಕು ತುಡುಗು ತನವನ್ನು ಯಾರೂ ನೋಡಬಾರದೆಂದು ತಾನೇ ಕಣ್ಣು ಮುಚ್ಚಿಕೊಂಡು ಹಾಲುಕುಡಿಯು ವಂತಾಗಿರಬಹುದಲ್ಲವೆ ?

* * *

ಭಾರತದ ಎಲ್ಲ ಪೊಸಪ್ರಾಂತಗಳಲ್ಲಿರುವ ಸರಕಾರೀ ಸನ್ನ ನೌಕರರ ಸಂಬಳಗಳು ಹೆಚ್ಚಿ ವಂದು ಮಟ್ಟಿದಲ್ಲಿರು ವುದಕ್ಕೆ ಹೊಸಬ್ಯಕ್ಕಸಿಂದ ಅವರ ಹಣೆಬರಹವಡಿದ್ದು ಪಡೆಯಾಗಿದ್ದರೂ ಹೇಳೇಮೈಸೂರಿನ ನೌಕರವಾರರಿಗೆ ಹಳೇಬ್ಲಡ್ಡನ ಕಾಟ್ ತಪ್ಪದಿರುವುದಕ್ಕೆ ಮೈಸೂರು ಮೈಸೂರಾಗಿಯೆ ಇರಲೆಂದು ವಾದಮಾಡಿದವರು ಮಂತ್ರಿ ಗಳಾದರಪ್ರತಿಫಲನಿರಬಹುದೆಂದು ಗೋಳಾಡುತ್ತಿರುವ ರಿಂತೆ.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಿಭಾಷೆಯಲ್ಲಿದ್ದಿತು. ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶ್ರೀ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೂರುಸೂರು ಪುಟಗಳ ಮೇಲ್ಪಟ್ಟು ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಯೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರು ಸಹೋದರರಾದ ವೇ॥ ಬ್ಳ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಿರೀಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಬಾಲ್ಯದ ಲೀಲೆಗಳಿಂದ ಕೂಡಿದ ಫೋಟೋ . ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾನುಷ್ಠಾನದ ಫೋಟೋ(ನಾನಾವಿಧವಣ್ಣಗಳಿಂದ ಮುದ್ರಿತವಾದುದು)ಸೈಜು ೧೪ X ೧೦ ಬೆಲೆ ೦—೪—೦

ಶ್ರೀರೇಣುಕಾಚಾರ್ಯರ ಲಿಂಗಾನುಷ್ಠಾನದ ಫೋಟೋ (ಚಿಕ್ಕಸೈಜು) ೦—೦—೪

ಶ್ರೀ ಜಗದ್ಗುರು ಪಂಚಾಚಾರ್ಯರು ಸಂಚಿಮಹಾರ್ಣಗಳಿಗೆ ಶಿವಮಂತ್ರೋಪದೇಶ ಉಪದೇಶಿಸುವ ಫೋಟೋ ೦—೩—೦

ಶ್ರೀರೇಣುಕಾಚಾರ್ಯರು ಲಿಂಗಸ್ಥಾಪನೆಗೆ ಶಿವಮಂತ್ರೋಪದೇಶವನ್ನು ಉಪದೇಶಿಸುವ ಫೋಟೋ ೦—೦—೪

ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗಾಚಾರದ ಫೋಟೋ ಸೈಜು ೧೪ X ೧೦ ದೊಡ್ಡ ಬೆಲೆ ೦—೩—೦

" " " ಚಿಕ್ಕ ಸೈಜು ಬೆಲೆ ೦—೧—೪

ಶ್ರೀ ಜಗದ್ಗುರು ಸಂಪ್ರದಾಯಪ್ರವರ್ತಕ ಶ್ರೀಜಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧—೪

ಶ್ರೀ ರೇಣುಕಾಚಾರ್ಯರು ರುದ್ರ ಮಹರ್ಷಿಗಳ ಶಿಷ್ಯಾಂಶಂಗೆ ಪಟ್ಟ ಭಿಷೇಕ ಮಾಡುವ ಫೋಟೋ ೦—೧—೪

ಶ್ರೀರೇಣುಕಾಚಾರ್ಯರು ಶ್ರೀಪಂಡಿತಾರಾಧ್ಯಾಚಾರ್ಯರಿಗೆ ಜಂಗಮಾರ್ಚಾಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೪

ಶ್ರೀರೇಣುಕಾಚಾರ್ಯರು ವಿಧಿವತ್ತಾಗಿ ಪ್ರಾಣಪ್ರತಿಷ್ಠೆಯಿಂದ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೪

ಶ್ರೀ ೧೮ ಜಂಗಮರುದ್ರ ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧವಣ್ಣದ್ದು) ೦—೪—೦

ಶ್ರೀರೇಣುಕಾಚಾರ್ಯರ ಶಿಷ್ಯರಾಳುರು ಜಗದ್ಗುರುಗಳಾಗಿ ಕರೀಪಟ್ಟವನ್ನು ಧರಿಸಿರುವ ಫೋಟೋ ೦—೧—೪

ಶ್ರೀ ಜಗದ್ಗುರುಗಳು ಶ್ರೀಮದ್ಗುರುಪೀಠದಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಾಚಾರ್ಯರ ಫೋಟೋ ೦—೧—೪

ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀಮದ್ಗುರುಪೀಠದಲ್ಲಿ ಶ್ರೀ ಜಗದ್ಗುರು ಶಿವಸಂಪನ್ನಾಚಾರ್ಯರ ಮಹಾಸ್ವಾಮಿಗಳವರ ಫೋಟೋ ೦—೧—೪

ಶ್ರೀಮದ್ಗುರುಪೀಠದಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಾಚಾರ್ಯರ ಮಹಾಸ್ವಾಮಿಗಳವರ ಫೋಟೋ ೦—೧—೪

ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀಮದ್ಗುರುಪೀಠದಲ್ಲಿ ಶ್ರೀ ಜಗದ್ಗುರು ಶಿವಸಂಪನ್ನಾಚಾರ್ಯರ ಮಹಾಸ್ವಾಮಿಗಳವರ ಫೋಟೋ ೦—೧—೪

ಶ್ರೀಮದ್ಗುರುಪೀಠದಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗ

REGISTERED No. M 2166 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2166

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿತ್ಪುದೀಲೋಕಮಂ ॥

ಸಂಸ್ಥಾಪಕರು—ಪಾಗಸೂರು ಬೃಹನ್ಮಹಾಧ್ಯಕ್ಷರಾದ ವೇದ ಪಂಡಿ ಶ್ರೀ ಶಾಂತೇಶಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಪಾಗಸೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯಶಾಸ್ತ್ರಿಗಳವರು [ಏಕ ಪ್ರತಿಗೆ ೩½ರೂ. ೧೦-ಅ.

ಸಂಪುಟ ೩೦] ಸೋಮವಾರ ತಾ॥ ೧೦ ನೇ ಡಿಸೆಂಬರ್ ೧೯೩೬ [ಸಂಚಿಕೆ ೩೦

ಪಶ್ವುನ್ಮಹಾರ

[ಬಾಕ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರೀ ಶಾಂತೇಶಾಥರ ಗದ್ದಿಗೆಯಲ್ಲಿ ದೀಪೋತ್ಸವದ ಸಮಾಪ್ತಿ

ಮೈಸೂರುರಾಜ್ಯಪಾಲರವರ ಮಧುವನದ ಬಳಿಯಲ್ಲಿರುವ ಶೈ॥ ಪಂ॥ ಶ್ರೀ ಶಾಂತೇಶಾಥಶಾಸ್ತ್ರಿಗಳವರ ಶೈವಲ್ಯಾವೈತ್ಯ ಗದ್ದಿಗೆಯಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಆರಂಭವಾದ ದೀಪೋತ್ಸವವು ಮಾಸಾಶ್ಯವವರೆಗೆ ಪಡೆದು ಇದೇ ಮಾರ್ಗಶೀರ್ಷ ಕೃ॥ ೧(ತಾ॥ ೩ ೧೨ ೩೬) ಸೋಮವಾರದಿವಸ ಮುಖ್ಯಾಯೊಳಸಲ್ಪಟ್ಟಿತು ಆ ಪ್ರಯುಕ್ತ ಅಂದು ಮನೆಯಲ್ಲಿ ಪಂಡಿತ ಶ್ರೀ ಕೈಲಾಸಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರಿಂ ಇಷ್ಟಲಿಂಗ ಪೂಜೆ ಪಾದಪೂಜಾದಿಕ್ರಿಯೆಗಳು ಸಾಂಗವಾಗಿ ನೆರವೇರಿದ್ದಲ್ಲದೆ ಪಂಡಿತರ ಗದ್ದಿಗೆಯಲ್ಲಿರುವ ಲಿಂಗಕ್ಕೂ ರುದ್ರಾಭಿಷೇಕ ಪೂಜೆಯು ಪಡೆಸಲ್ಪಟ್ಟು ಗಣವ್ಯಂದಕ್ಕೆ ಅನ್ನ ಸಂತರ್ಪಣೆಯಾಯಿತು ಸಾಯಂಕಾಲ ೬ ಘಂಟೆಗೆ ವೇ॥ ಶ್ರೀ ಮಹಾದೇವಯ್ಯನವರು ಶ್ರೀ ಶೈಲಾಸಲಿಂಗ ಶಿವಾಚಾರ್ಯಸ್ವಾಮಿಗಳು ವಿಶೇಷ ಜವಸಂದಣಿಯೊಡನೆ ಶ್ರೀ ಶಾಂತೇಶಾಥರ ಗದ್ದಿಗೆಗೆ ಆಗಮಿಸಿದರು ಯಥಾಪ್ರಕಾರ ಅಲ್ಲಿ ವೇದಘೋಷದೊಡನೆ ಅಲಂಕಾರ ಪೂಜೆಯು ಪಡೆಯಿತು ಮಂಟಪಕ್ಕೆ ಪಾದಾವಿಧಪೂಜೆ ಮಾಲೆಗಳನ್ನು ಅರ್ಪಿಸಲಾಯಿತು ಕೊಪ್ಪಳಿ ತಾ॥ ಧಾರ್ಮ ವನದ ವೇ॥ ಶಿವಯ್ಯನವರು ಹಿರೇಮಠ ಇವರ ಸೇವೆ ನಾಗಿ ೧೧೮ ದೀಪಗಳನ್ನು ಹೊತ್ತಿಸಿದ್ದಲ್ಲದೆ ಗದ್ದಿಗೆಯ ಸುತ್ತಲೂ ಕೆಳಗೂ ಅಷ್ಟಕ ದೀಪಗಳನ್ನು ಇಡಲಾಯಿತು ಈ ಪ್ರಕಾರ ನಯನಮನೋಹರವಾಗಿಯೂ ಭಕ್ತಿಯುಕ್ತ ವಾಗಿಯೂ ಜನಸಂದಣಿಯುಕ್ತವಾಗಿಯೂ ಅಲಂಕಾರ ವಾಗುತ್ತ ದೀಪೋತ್ಸವವು ಸಾರ್ಥಕತೆಯಿಂದನ್ನು ಪ್ರತಿ ಬಿಂಬಿಸುವಂತಾಗಿ ಅಕಾಶವೆಲ್ಲಾ ಬೆಳುಪಾಗಿತ್ತು ಈ ಅತುಲವೈಭವದಲ್ಲಿಯೇ ಭಜನೆ ಮಂಗಲಗಳು ನಡೆದವು ಜಂಗಮರಿಗೆ ಬಡವರಿಗೆ ದಕ್ಷಿಣೆ ಕೊಡಲ್ಪಟ್ಟಿತು ದರ್ಶನ ಭಾಗಿಗಳೆಲ್ಲರಿಗೂ ಪ್ರಸಾದವಿಯೋಗವಾಯಿತು ಶ್ರೀ ಮಹಾದೇವಯ್ಯನವರು ಗದ್ದಿಗೆಗೆ ಧೂಮಸ್ಯಾರವಮಾಡಿ ಏಮ ದೀಪಗಳನ್ನು ಕೆಳಗಳಿಸಿದೊಡನೆ ಶ್ರೀ ಜಗದ್ಗುರು ಪಂಚಾಚಾರ್ಯ ಹಾಗು ಶ್ರೀ ಶಾಂತೇಶಾಥಶಾಸ್ತ್ರಿಗಳವರ ಶೈ ಜೈ ಕಾರದೊಡನೆ ಕಾರ್ಯವನ್ನು ಮುಕ್ತಾಯ ಗೊಳಿಸಲಾಯಿತು ನಂತರ ಪಂಡಿತರಪ್ರಕಾಶದಲ್ಲಿ ಎಲ್ಲರೂ ಮುಂಡಿಯಿಟ್ಟುಂಡಿ ಶ್ರೀ ಕೈಲಾಸಲಿಂಗಶಿವಾಚಾರ್ಯ ಸ್ವಾಮಿಗಳವರು ಅಪ್ಪಣೆ ಕೊಟ್ಟಿದ್ದನ್ನು ಸರ್ವರೂ ಮನ್ನಿಸಿ ಕರಾಡದವರ ಮೂಲಕ ತಮ್ಮ ಸಂತೋಷವನ್ನು ವ್ಯಕ್ತ ಗೊಳಿಸಿದರು.

ದರ್ಶನಭಾಗಿ: ಜಿ ಶೀವಣಾರಾಧ್ಯ.

ಕಾರ್ತಿಕ ಮಹೋತ್ಸವ, ಕೊಪ್ಪೂರು

ಅಗಾಧಮಹಿಮಾತಿಶಾಲಿಗಳಾದ ಶ್ರೀ ಕೊಪ್ಪೂರೇಶ್ವರನ ಕಾರ್ತಿಕಮಹೋತ್ಸವವು ಮಾರ್ಗಶಿರ ಕೃ॥ ೧೫ ಸೋಮವಾರ ದಿವಸ ತಾ॥ ೧೭-೧೨-೩೬ ರಲ್ಲಿ, ಪಡ್ಡಶಿಪ್ರಕಾರ ಬಹು ವಿಜೃಂಭಣೆಯಿಂದ ನಡೆಯುತ್ತಿದೆ. ಸಕಾಲಕ್ಕೆ ಶ್ರೀಕ್ಷೇತ್ರದ ಅಗಮಿಸಿ ದರ್ಶನವನ್ನು ಪಡೆಯುವರೆಂದು ಅವೇಕ್ಷಿಸುವ.

ಶ್ರೀ ಪ್ರಭುವಡೆಯರಮೆಲಿದ ಮರಳ ಶಿಪ್ಪಯ್ಯವರು
ಕೊಪ್ಪೂರು

ಕಾರ್ತೀಕಮಾಸದ ದೀಪೋತ್ಸವ
ಯಡಗೋಡ

ಪ್ರತಿ ವರುಷದ ಪದ್ಧತಿಯಂತೆ ಈ ವರ್ಷವೂ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಯಡಗೋಡ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ಶ್ರೀ ವಿಶ್ವನಾಥ ಲಿಂಗೋದ್ಭವಮೂರ್ತಿಗಳ ಮಂದಿರದಿಂದ ಇದೇ ಕಾರ್ತಿಕ ಬಹುಳ ೧೪ ಶನಿವಾರ ತಾ॥ ೧೯-೧೨-೩೬ ನೇ ಇಸ್ವಿ ದಿವಸ ಸಂಜೆ ೮ ಘಂಟೆಯ ನಂತರ ಹೊರಟ ಕಾರ್ತಿಕ ದೀಪೋತ್ಸವಸಂಭ್ರಮವು ಆರಂಭಿಸಿದ ಜನಸ್ತೋಮ ದಿಂದಲೂ ಅನೇಕ ವಾದ್ಯಗಳಿಂದಲೂ ಭಜನಾಸಂಘಗಳಿಂದಲೂ ಪಾಠಶಾಲಾವಿದ್ಯಾರ್ಥಿಗಳ ವೇದಘೋಷದಿಂದಲೂ ಪುರಪ್ರಮುಖರಿಂದಲೂ, ಸುಮಂಗಲಿಯರ ಹಾಡುಗಳಿಂದಲೂ ಕೂಡಿ ಹಳೇಯಡಗೋಡದಲ್ಲಿ ಶ್ರೀಜಸವೇ ಶ್ವರಗುಡಿಗೂ ಉತ್ಸವ ದೇವಸ್ಥಾನಕ್ಕೂ ಶ್ರೀ ಮಾರುತಿ ದೇವಸ್ಥಾನಕ್ಕೂ ಮತ್ತು ಶ್ರೀಗದ್ದಿಗೆಸ್ವಾಮಿಗುಡಿಗೂ ಹೋಗಿ ಕಾರ್ತಿಕ ದೀಪಾರಾಧನೆಯನ್ನು ಮನಪೂರ್ತಿಯೆ ಮಾಡಿ ಪುನಃ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ವಿರುವ ಯಡಗೋಡ ಪ್ಲಾಟಿಗೆ ಬಂದು ಒಳ್ಳೆ ವೈಭವದ ಮಹಾ ಮಂಗಳಾರತಿಯೊಡನೆ ಮುಕ್ತಾಯ ಮಾಡಲ್ಪಟ್ಟಿತು.

ಆ ಮೇಲೆ ಈ ಗ್ರಾಮದ ಪಾಠಶಾಲಾ ಪಂಚಾಂಗ ಕರ್ತರಾದ ವೇ॥ ಬ್ರ॥ ಶ್ರೀ ಸಿದ್ಧಾಂತಿ ಜ್ಯೋತಿಷಾಚಾರ್ಯ ರುದ್ರಾರಾಧ್ಯಶಾಸ್ತ್ರಿಗಳವರು ಕಾರ್ತೀಕಮಾಸ ಅಂದರೇನು ? ದೀಪೋತ್ಸವ ಏಕೆಮಾಡಬೇಕು. ಎಂಬ ಅನೇಕ ವಿಷಯಗಳ ಬಗ್ಗೆ, ಕೂಡಿದ್ದ ಬಹುಜನ ಸಮುದಾಯಕ್ಕೆ ತಿಳಿಸಿದಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆಯೂ ಶ್ರೀ ಶೈ॥ ಪಂ॥ ಧರ್ಮರಕ್ಷಕ ಶಾಂತೇಶಾಥಶಾಸ್ತ್ರಿಗಳವರ ಜೈ ಜೈ ಕಾರದೊಡನೆಯೂ ಪೂಜಾಕಾರ್ಯವು ಮುಕ್ತಾಯ ಗೊಂಡು ಪ್ರಸಾದ ಸ್ವೀಕಾರಗಳ ವಿಧಿಯೋಗವು ಪಡೆಯುವಂಥಾದ್ದಾಯಿತು

ಪಾಠಶಾಲಾ ಸೆಕ್ರೆಟರಿ, ಯಡಗೋಡ

ಯಡಗೋಡ ಪಾಠಶಾಲೆಯ ಬಗ್ಗೆ ಸೂಚನೆ

ಧಾರವಾಡ ಜಿಲ್ಲಾ ಹಿರೇಕೆರೂರ ತಾಲ್ಲೂಕು ಯಡಗೋಡದಲ್ಲಿ ಸ್ಥಾಪಿತವಾಗಿದ್ದ ಪಂಡಿತ ವಿಶ್ವನಾಥ ಜ್ಯೋತಿಷ್ಯ ಪಾಠಶಾಲೆಯಲ್ಲಿ ಮುಂಡಿಪವರ್ಷದ ವಿದ್ಯಾಭ್ಯಾಸದ ಹೊಸಕ್ರಮವು ೧೯೩೭ ನೇ ಮಾರ್ಚಿ ಯಿಂದ ಪ್ರಾರಂಭವಾಗುವಕಾರಣ ಅಲ್ಲಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಫೆಬ್ರುವರಿಂಗಳ ಅಂತ್ಯದೊಳಗಾಗಿ ಸೆಕ್ರೆಟರಿಗಳಿಗೆ ಅರ್ಜಿಗಳನ್ನು ಕಳಿಸಿಕೊಡುವದು ಇಲ್ಲಿ ಊಟ, ವಸತಿ, ವಾಕಗಳುಮಾತ್ರ ಉಚಿತವಾಗಿ ದೊರೆಯುತ್ತವೆ.

ವಿಳಾಸ—ಸೆಕ್ರೆಟರಿ. ಜ್ಯೋತಿಷ್ಯಪಾಠಶಾಲಾ.
ಯಡಗೋಡ
ಪೋ॥ ರಟ್ಟಿಹಳ್ಳಿ, ತಾ॥ ಧಾರವಾಡ.

ವೀರಶೈವ ಧಾರ್ಮಿಕ ಸಭೆ
ಗದ್ದಿ ಹೋದಿಹಳ್ಳಿ

ದಿನಾಂಕ ೩೫-೧೧-೩೬ ರಂದು ಲಕ್ಕುರಿ ಜಿಲ್ಲಾ, ಹೂವಿನ ಹಡಗಲಿ ತಾಲೂಕು ಗ ಕೋಡಿಹಳ್ಳಿ ಗ್ರಾಮದಲ್ಲಿ ಶ್ರೀ ಎಸ್ ಎಂ ವೃಷಭಯ್ಯನವರ ಇವರ ಅಧ್ಯಕ್ಷತೆಯಲ್ಲಿ ವೀರಶೈವಸಭೆ ಸೇರಿದಾಗ್ಗೆ ಶ್ರೀ ಬಿ. ಚಂದ್ರಶೇಖರಗೌಡ ರಿಂದ ಸೂಚಿಸಲ್ಪಟ್ಟ ಈ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ತೀರ್ಮಾನ ವಾದವು ಗೊತ್ತುವಳಿ

ವಿಶಾಲ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳ ಸ್ಥಾನಕ್ಕೆ ಕನ್ನಡಿಗರಿಂ ವಿದ್ಯಾವಂತ ಕಾರ್ಯಕರ್ತರಾದ ಶ್ರೀ ಎಸ್. ನಿಜಲಿಂಗಪ್ಪನವರು ಅವಿರೋಧವಾಗಿ ಚುನಾಯಿತರಾದದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸುವದು.

ಮೈಸೂರಿನ ಅಕ್ಷಪಿಚಾರ ಪತ್ರಿಕಾಸಂಪಾದಕರಾದ ಶ್ರೀ ಎಂ ಎಲ್. ಶ್ರೀಕಂಠಶಾಸ್ತ್ರಿಯವರಿಗೆ ವೀರಶೈವಸಿದ್ಧಾಂತ ಪರವಾದ ತಿವಾದ್ವೈತಮಂಜರಿ ಶ್ರೀಕರಭಾಷ್ಯಮುಂತಾದ ಗ್ರಂಥಗಳು ಅಧಿಕೃತ ಗ್ರಂಥಗಳಲ್ಲವೆಂದೂ, ಇವುಗಳನ್ನು ಸಂಸ್ಕೃತ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನಾಗಿ ಇಟ್ಟಿರುವದನ್ನು ತೆಗೆಯಬೇಕೆಂದೂ ಸೂಚಿಸಿರುವದಕ್ಕೂ ಈ ಸಭೆಯು ಪ್ರಬಲವಾಗಿವಿರೋಧಿಸಿ ಖಂಡಿಸುತ್ತಿದೆ.

ಈ ಮಹಾಗ್ರಂಥಗಳು ವೀರಶೈವಸಿದ್ಧಾಂತ ಪ್ರತಿಪಾದಕವಾಗಿದ್ದು ಮೂಲಭಾಗೂ ಪವಿತ್ರ ಗ್ರಂಥಗಳಾಗಿವೆ. ಅವುಗಳ ಕರ್ತೃ ಶಾಗಣ್ಣವರ ಸೂಚನೆಯಮೆಯೆ ಅವುಗಳನ್ನು ಸಂಸ್ಕೃತ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನಾಗಿ ಮುಂದು ವರಿಸಿ ಕೊಂಡು, ವೀರಶೈವ ಧರ್ಮದ ಪ್ರಾಚೀನತೆಯನ್ನೂ ಉಜ್ವಲ ಪರಂಪರೆಯನ್ನೂ ಉಳಿಸುಕೊಂಡು ಬರುವ ದಾಗಿ ಸರ್ಕಾರಕ್ಕೆ ಈ ಸಭೆ ಪ್ರಾರ್ಥಿಸುತ್ತದೆ

ಈ ಕರಾರಿನ ಒಂದು ಪ್ರತಿಯನ್ನು ಶ್ರೀ ಶಾಗಣ್ಣವರಿಗೂ ಇನ್ನೊಂದನ್ನು ವಿದ್ಯಾಶಾಲೆಯ ಧೈರೆಕ್ಟರ್ ರವರಿಗೂ ಕಳಿಸಲಾಗಿದೆ.

ಚಂದ್ರಶೇಖರಗೌಡ

॥ ಶ್ರೀಜಗದ್ಗುರು ರೇಣುಕಾಚಾರ್ಯಾಃ ಪ್ರಸೀದಂತು ।

ಶ್ರೀರಂಭಾಪುರೀ ಪೀಠದಲ್ಲಿ ಅಭಿನವರೇಣುಕ ಚೆಂಪ್ಯೋದಯ

ನಮ್ಮ ಕನ್ನಡನಾಡು ಬಹು ಪುರಾತನಕಾಲದಿಂದಲೂ ಭಾರತಿಮಾತೆಯ ಮುದ್ದುಮಗುವಾಗಿ ಮೆರೆಯುತ್ತ ಬಂದಿರುತ್ತದೆ ನುಸ್ರು ಅನೇಕ ನ ತಾಚಾರ್ಯರ ವಾಸಸ್ಥಾನವಾಗಿ ಪ್ರಬಲವಾದ ಧರ್ಮಸಂಸ್ಥೆಯಿಂದ ಜಜರಾಗುರ ತೀರ್ಥ ಗಳಿವೆ ಈ ನಾಡಿನಲ್ಲಿ ಮುಕ್ಕಾಲುಭಾಗ ವೀರಶೈವರೇ ವಾಸವಾಗಿದ್ದಾರೆ ಅಂತೆಯೇ ವೀರಶೈವ ಅರಸರೂ ಆಳಿದ್ದಾರೆ ಚಿತ್ರವರ್ಣಾ ಶ್ರಮದ ವ್ಯವಸ್ಥೆಯೂ ಆಗಿದೆ ಇಂಥ ವಿಶಾಲವೂ ಜನಪ್ರಿಯವೂ ಆದ ಈ ಮತವನ್ನು ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರು ಸ್ಥಾಪಿಸಿ ರಂಭಾಪುರಿ, ಉಜ್ಜಯಿನಿ ಶ್ರೀಶೈಲ ಕೇದಾರ, ಕಾಶೀಪೀಠಗಳಲ್ಲಿ ತಮ್ಮ ಸಾರ್ವಭೌಮಸ್ವರನ್ನು ಸ್ಥಿರಗೊಳಿಸಿ ಶ್ರುತಿ ಯುಗದಲ್ಲಿಯೂ ನಾಮಭೇದದಿಂದ ನೆ ರೆದು ಜಗದ್ಗುರುವಿಯಂದಲೂ ಈ ತತ್ತ್ವ ಗಳನ್ನು ಕಾಪಾಡಿಕೊಂಡು ಬ ದರು ತದನುಸಾರವಾಗಿ ಪರ ಪರಾಗತವಾದ ರಂಭಾಪುರೀ ವೀರಪೀಠಕ್ಕೆ ಗುರ ಪಗಂದ ಸದ್ಭಂತೀಯ ಜಂಗಮರೂ, ವೇದ ಶಾಸ್ತ್ರಪಾರಂಗತರೂ, ಕಾಶೀ ಜಗದ್ಗುರು ಮಹಾಸನ್ನಿಧಿಯ ಸಂಮ್ಮಾನ್ನು ಮಾಡಿ ಅವರ ಕೃಪಾಶೀರ್ವಾದಕ್ಕೆ ಪಾತ್ರರಾದವರೂ, ಶಿವಾಗಮೋಕ್ತ ಆಚಾರಶೀಲರೂ, ಧರ್ಮಪ್ರೇಮಿಗಳೂ, ಸತ್ಯಸಂಧರೂ ದಯಾಸ್ಪಾತರೂ ರತಿ ವಿಶಿಷ್ಟಾದ್ವೈತಸಿದ್ಧಾಂತ ಪಾಲಕರೂ ಚತ ವಿಧ ಪುರುಷಾರ್ಥಸಾಧಕರೂ ರಾಜಲಕ್ಷಣಸಂಪನ್ನರೂ ಸ್ಪಪರ ಮತೀಯರ ಭಕ್ತಿಪ್ರೇಮಕ್ಕೆ ಪಾತ್ರರೂ ಆದ ಶ್ರೀಜಗದ್ಗುರು ಶಿವಾನಂದ ದಂಗೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಅಭಿನವರೇಣುಕ ಎಂಬ ಮಿಕ್ಕ ಪದವಿ ನಾಮ ವನ್ನು ಧರಿಸಿ ೧೯೨೫ನೆ ಇಸ್ವಿಯಲ್ಲಿ ವೀರಶೈವ ಮಠದ ಸಂವ ತ್ಸರೋತ್ಸವನ್ನು ವಹಿಸಿದರು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀಜಗದ್ಗುರು ಶಿವಾನಂದದಂಗೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು

ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರೆ ಜಗದ್ಗುರು ಶ್ರೀ ಶಿವಯೋಗಿ ಸಿದ್ಧಲಿಂಗಶಿವಾಚಾರ್ಯರ ಅನುಗ್ರಹದಿಂದ ಯಾವನು ರಂಭಾಪುರೀ ವೀರಸಿಂಹಾಸ ನಾಧಿಕಾರವನ್ನು ವಹಿಸಿದನೊ, ಘೋರಕಾನನದಲ್ಲಿ ಕ್ರೂರಮೃಗಗಳಂದಾವೃತವಾಗಿ ಶಿಥಿಲವಾಗಿದ್ದ ಬಾಳೆಹೊನ್ನೂರು ಸಂಸ್ಥಾನ ಮಠವು ಯಾವ ಮಹಾತ್ಮನಿಂದ ಪುನರುದ್ಧಾರವಾಗಿ ಪ್ರಕಾಶಿತವಾಯಿತೊ, ಯಾವ ವಾಚಸ್ಪತಿಯು ವಾಣಿಯ ನ್ನು ಕೇಳಿದ ರಾಜಾಧಿರಾಜರು-ಅಧಿಕಾರಿಗಳು-ಜನಸಾಮಾನ್ಯರು ಭಕ್ತಿಪರವಶರಾಗಿ ಸೇವೆ ಯಲ್ಲಿ ಭಾಗಿಗಳಾದರೊ, ಯಾವ ಧೀರನ ಧರ್ಮೋಪದೇಶಕ್ಕೆ ಚತುರ್ವರ್ಣ ಶ್ರಮಿ ಗಳು ತಿರುಗಿದರೊ, ಯಾವ ಶಿವಪೂಜಾಲೋಲರಿಗೆ ಸರ್ವರೂ ಶಿವಭಕ್ತಿಯನ್ನು ಸಲ್ಲಿಸಿದರೊ, ಯಾವ ಗುರುಮೂರ್ತಿಯ ಸುವರ್ಣ ರಜತಾಂದೋಲಿಕಾಸಹೋ ತ್ಸವಗಳು ಸಕಲ ಬಿರುದಾವಳಿ ಸಮೇತ ವ್ಯಾಪಕವಾಗಿ ನಡೆಯಲ್ಪಟ್ಟವೊ ಯಾವ ಪುಣ್ಯಮೂರ್ತಿಯ ದರ್ಶನದಿಂದ ಸಕಲ ವೀರಶೈವರು ಧನ್ಯರಾದರೊ, ಯಾವ ತೇಜೋಮೂರ್ತಿಯ ತೇಜಸ್ಸಿನಿಂದ ಉಜ್ಜಯಿನಿ-ಕಾಶಿ ಪೀಠಗಳು ಪ್ರಕಾಶಿಸಿದವೊ

ಶ್ರೀಜಗದ್ಗುರು ನಿವ ಸಂದರ್ಶಕಾಚಾರ್ಯರು
ಶ್ರೀಕಾಶೀಜಗದ್ಗುರು ವೀರಪೀಠಾಚಾರ್ಯರಿಗೆ
ಅಲೀಪಿದಾರಣಾದಿಗಳನ್ನು ಸಮಾಪ್ತಿಗೊಳಿಸುವರು.

ಚಲಿಸದ ನೀಡಿದ್ದ ಪ ಜಾಚಾರ್ಯಾ ದ್ಯಜವು ಯಾವ ಧರ್ಮಪೀಠದಿಂದ ಆಸೀತು ಹಿಮಾಚಲಪರ್ಯಂತ ಜ ರಡಹಬ್ಬಿತೊ ಗುರುವರ್ಯಾಗ್ರೇಸರ ಕಾಶೀಜಗದ್ಗುರುಪೀಠದ ಸಾಹಸವಿ ದ ಯಾವನ ಪೀಠಾಧಿಕಾರವು ವೀರಶೈವ ವರ್ಣಾಶ್ರಮಗಳನ್ನು ಸ್ಥಾಧೀಪಡಿ ಟ್ಟುಕೊಂಡಿದ್ದಿತೊ ಯಾವನ ಪುಣ ಭಾಗದಿಂದ ರಂಭಾಪುರೀ ಮರವು ರತ್ನ ಖಚಿತ ಸುವರ್ಣ ರಜತ ಪೂಜಾಪರಿಕರಣಗಳಿಂದ ವಿರಾಜಿಸಿತೊ, ಯಾವನು ನೆದರತ್ನ ವ ಯು ಸವರ್ಣ ಕಿರೀಟವಿಂದ ಪರಿಶೋಭಿಸಿದ್ದನೊ, ಅಂಥ ಪಾವನಮೂರ್ತಿ ಶ್ರೀಜಗದ್ಗುರು ಶಿವಾನಂದ ರಾಜಯೋಗಿ ಗುರುಪುಂಗವರು ೧೯೪೬ನೇ ಇಸ್ವಿಯಲ್ಲಿ ಲಿಂಗೈಕ್ಯರಾದರು ಆದರೆ ಜಗತ್ತಿಗೆ ಭಕ್ತಿಪ್ರಧಾನವಾದ ಅವರ ಭೌತಿಕ ಶರೀರದ ದರ್ಶನವು ಎಲ್ಲಾರಿಗಾಗಿದಂದಲೂ ಶಿಸ್ಯಕೋಟಿಗೆ ಅವಶ್ಯವಾಗಿ ಬೇಕಾ ಗಿತ್ತ ಆದ್ದರಿಂದ ಸೋಗತವನ್ನು ಈಡೇರಿಸಲು ಶ್ರೀ ಗುರುವರ್ಯರೇ ತಮ್ಮ ಸ್ಪಹಸನದಿಂದ ಶ್ರೀ ಎಂ ಸಿ ಸಜಪ್ಪನವರಿಗೆ ಪ್ರೇರೇಪಿಸಿದ ಪ್ರಕಾರ ಅವರು ಗುರುವೇಮ್ಮನ್ನ ಶಿ ವಮಂತ ವಿಶ್ವಸ್ಥರಾಯತ್ತಿಂದ ಅವರ ಭೌತಿಕಶರೀರರೂಪ ವನ್ನು ಎನ್ನತಶಿಲೆಯಲ್ಲಿ ಸಿದ್ಧಗೊಳಿಸಿದರು ರಿಟೈರ್ಡ ಸಿವಿಲ್ ಸರ್ಜನ್ನರಾಗಿದ್ದ ಇವರ ಕನ್ನಡ ಸಸ್ಕೃತಗಳಾದ ಪಾಂಡಿತ್ಯಗಳಿಂದ ಈ ಮೂರ್ತಿಯನ್ನು ಸಾಗಿಸಲು ಕೆಲವ್ಯಕ್ತಿಗಳು ಉದಯೋಗಿಸಿಕೊಂಡು ಈ ವರ್ಷದ ದಸರಾಮಹೋತ್ಸವದ ಸಮಯಕ್ಕೆ ಅರಿಯಾಗಿ ಬಂಳಿಸೊನ್ನೊರಿನ ವರಕ್ಕೆ ತಂದು ಈಗಿನ ಮಹಾಸನ್ನಿ ಧಾನಗಳಿಗೆ ಸಮರ್ಪಿಸಿದರು ತದನು ಸೂತನ ಮಠದಲ್ಲಿ ಶ್ರೀ ಶಿವಾನಂದ ಗುರು ಲಿಂಗವರ ಕಳೆಪೆ ಪೂಜಾ ರ ಸರ್ಕೆ ಸಿದ್ಧ ಸ್ಥಳದಲ್ಲಿಯೇ ಆ ಶಿಲಾಮಯಮೂರ್ತಿ ರನ್ನು ಪಿಟ್ಟು ದಕವಿಯ ದಿವಸ ನಮುದಾಯ ದಲ್ಲಿ ವೇದಶಾಕರ ಘೋಷಣೆ ಯೊಂದಿಗೆ ಶಾಸ್ತ್ರಸಿದ್ಧಿಗನ ಸುರವಾಗಿ ಸ್ಥಾಪಿಸಿ ಪ್ರಾಣಪ್ರತಿಷ್ಠೆ ಮಾಡಿದರು.

ಶ್ರೀರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟ
ಶ್ರೀಜಗದ್ಗುರು ಶಿವಾನಂದಮಹಾಸ್ವಾಮಿಗಳವರ ಶಿಲಾಮೂರ್ತಿ

ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ

ಕುನ್ನೂರು

ರಂಭಾಪುರೀ ಜಗದ್ಗುರು ಪ್ರಸನ್ನ ರೇಣುಕ ಶ್ರೀ ವೀರಗಂಗಾಧರರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಶಾ॥ ೧೭ ೧೨-೫೬ ನೇ ದಿವಸ ತುಮಕೂರು ಜಿಲ್ಲಾ ಕುನ್ನೂರಲ್ಲಿ ವೈಭವದಿಂದ ನಡೆಯುವದಲ್ಲದೆ ಸಹಸ್ರ ಕುಂಭಾಭಿಷೇಕ ಲಕ್ಷ ಬಿಲ್ವಾರ್ಚನೆ, ವೃಷಭೋತ್ಸವಪೂರ್ವಕ ಮಹಾಶಿವ ಲಿಂಗಪೂಜೋತ್ಸವವು ನಡೆಯುವದಾಗಿ ತಿಳಿಬಂದಿರುತ್ತದೆ

(ವೀರಶೈವಗರ್ಜನಾ)

೧೦ ನೇ ವೀರಶೈವಧರ್ಮಪರಿಷತ್ತಿನಲ್ಲಿ ಪಾಸಾದ ಠರಾವುಗಳು

ಮಹಾರಾಷ್ಟ್ರದೇಶಕ್ಕೆ ಸೇರಿದ ಬೀಡಜಿಲ್ಲೆಯ ಕಪಿಲಧಾರಾಕ್ಷೇತ್ರದಲ್ಲಿ ಶಾ॥ ೨೦ ೧೧ ೫೬ ನೇ ದಿನದ ಪಂಚಪೀಠಗಳಲ್ಲಿ ಒಂದಾದ ರಂಭಾಪುರಿಯ ಶ್ರೀವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೀರಶೈವಧರ್ಮಪರಿಷತ್ತಿನ ೧೦ ನೇ ಅಧಿವೇಶನವು ನಡೆಯಲ್ಪಟ್ಟು ಕೆಳಕಂಡ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು

೧. ಹೋಳಿಗಿ ಶ್ರೀ ಚೆನ್ನವೀರತಿವಾಚಾರ್ಯರೆ, ಸೊಲ್ಲಾಪುರದ ಶ್ರೀ ಸಂ॥ ತಾಲ್ಲೂರ ಜಗದೀಶಶಾಸ್ತ್ರಿ ಗಳವರ, ಹಂಡರಬುದದ ಶ್ರೀ ಬಸವಲಿಂಗಜಗನ್ನಾಥರ ಎಯೋಗದ ಬಗ್ಗೆ ಸಂತಾಪಸೂಚನೆ

೨ ಬಹುಜನಪ್ರೇಮದಿಂದ ವಿಶಾಲ ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೆ ಮತ್ತು ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರಿಗೆ ಸಂತೋಷಪೂರ್ವಕ ಶುಭಾಶಯಗಳನ್ನು ಸಲ್ಲಿಸುವದು ಇತ್ಯಾದಿ

೩. ವೀರಶೈವಗರ್ಜನಾ ಪತ್ರಿಕೆಗೆ ಸರ್ವರೂ ಧನ ಸಹಾಯ ಮಾಡುವದು, ಚಂದಾದಾರರಾಗುವದು

೪ ಸಕಲವೀರಶೈವರು ಗುರುಸ್ಥಲದ ಪಟ್ಟಚಿರಾಧಿಕಾರಿಗಳಿಂದ ತಮ್ಮ ತಮ್ಮ ಗೋತ್ರಸೂತ್ರಾನುಸಾರವಾಗಿ ಶಾಸ್ತ್ರಪದ್ಧತಿಯಂತೆ ಶಿವದೀಕ್ಷಾಸಂಸ್ಕಾರವನ್ನು ಹೊಂದುವದು

೫ ವೀರಶೈವಶಾಸ್ತ್ರಪ್ರಮಾಣಾನುಸಾರವಾಗಿ ವೈದಿಕ ಪದ್ಧತಿಪ್ರಕಾರ ಸೋದರಸಂಸ್ಕಾರವಿಧಿಗೆ ಲೋಪಬರದಂತೆ ಪಟ್ಟಚಿರಾಧಿಕಾರಿಗಳು ಪ್ರಚಾರಕ್ಕಾಗಿ ಸರ್ವತ್ರ ಪ್ರಯತ್ನಿಸುವದು

೬ ಶ್ರೀಮನ್ಮಹಾಸ್ವಾಮಿ ಮಹಾತಿಯೋಗಿಶ್ವರ ವೀರಶೈವ ವಾಙ್ಮಯವನ್ನು ಪ್ರಚಾರದಲ್ಲಿ ತಂದು ಶಿವ ಭಕ್ತ್ಯನ್ನು ವೃದ್ಧಿಗೊಳಿಸುವದು

೭. ವೀರಶೈವ ಗುರುಕುಲಗಳನ್ನೂ ವೀರಶೈವ ವಸತಿನ್ಯಹಗಳನ್ನೂ ತಿಂಗಳಾಪುರಸ್ಥೇತ್ರದಲ್ಲಿಯೂ ಇತರೆ ಕಡೆಗಳಲ್ಲಿಯೂ ತೆರೆಯುವದು

೮ ಸನಾತನ ವೈದಿಕ ವೀರಶೈವಮತ ಶಾಸ್ತ್ರಾಸಾರ ಧರ್ಮಾಚರಣಿ ಪ್ರಸಂಗಗಳಲ್ಲಿ ಸರ್ವತ್ರ ವೀರೇತಿಹ್ಯ ಪಂಚಕಲಕ್ಷಣಪಠಣ ಕಾರ್ಯಗಳು ಪದೆಯುವಂತೆ ಶ್ರೀಜಗದ್ಗುರು ಪಂಚಾಚಾರ್ಯ ಮಹಾಸಭಾ ಪರ್ಯಾಯವನ್ನು ಈ ಪರಿಷತ್ತು ಅನುಮೋದಿಸುತ್ತದೆ

೯. ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಈ ಮತಕ್ಕೆ ಆಧಾರಭೂತವಾದ ಸಿದ್ಧಾಂತ ಗ್ರಂಥಗಳನ್ನು ಪೂರ್ವಾಪರ ನಿರೀಕ್ಷಿಸಿ ಈ ನೆಲದಲ್ಲೇ ಸಿದ್ಧಪಡಿಸಿರುವುದು ಜಗತ್ಪ್ರಸಿದ್ಧವಾಗಿದ್ದರೂ ಕೆಲವು ವೀರಶೈವರು ನವೀನಕಾಲಕ್ಕೆ ಅಧಿಕೃತ ಗ್ರಂಥಬೇಕೆಂದು ಸಾಕಷ್ಟಪಡುತ್ತಿರುವುದನ್ನು ಈ ಸಭೆಯು ನಿಷೇಧಿಸುತ್ತದೆ

೧೦ ಭಾರತ ಸರಕಾರದವರು ಸೂತನ ಹಿಂದೂ ಕೋಡಿನ್ನು ಪಾಸುಮಾಡಿ ಸನಾತನ ವೈದಿಕಧರ್ಮದ ಮೇಲೆ ಆಘಾತವನ್ನುಂಟುಮಾಡಿದ್ದಕ್ಕೆ ಈ ಪರಿಷತ್ತು ಖೇದವನ್ನು ವ್ಯಕ್ತಗೊಳಿಸುತ್ತದೆ ಆದರೆ ಸನಾತನ ಧರ್ಮಾನುಯಾಯಿಗಳು ತಮ್ಮ ಮತಪರಂಪರೆಯಂತೆ ಆಚರಿಸಿಕೊಳ್ಳಬಹುದೆಂದು ಈ ಪರಿಷತ್ತು ಅಭಿಪ್ರಾಯಪಡಿಸುತ್ತದೆ

೧೧ ವೀರಶೈವಧರ್ಮದ ಜಗದ್ಗುರು ಕಾಶೀವಿಶ್ವಾರಾಧ್ಯಪೀಠದ ಧರ್ಮಪಂಪರೆಯ ಕಾರ್ಯಕ್ಕೆ ಉಪಯುಕ್ತವಾದ ಸಮಾಧಿಗಳು ಮತ್ತು ದೇವಸ್ಥಾನಗಳು ಇರುವ ಪವಿತ್ರಸ್ಥಳಗಳನ್ನು ಸುರಾಧೀಶರ ಅನುಮತಿಯಲ್ಲದೆ ಉತ್ತರ ಭಾರತದ ಸಂಯುಕ್ತಪ್ರಾಂತ ಸರಕಾರದವರು ಸ್ವಾಧೀನಪಡಿಸಿಕೊಳ್ಳಲುದ್ಯುಕ್ತರಾಗಿರುವುದು ಅನುಚಿತ ಎದರಿಂದ ಸಕಲ ವೀರಶೈವರಿಗೆ ಧರ್ಮ ವೈಷ್ಣಿಯಿಂದ ನೋವಾಗಿದೆ ಸರಕಾರವು ಈತರದ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಈ ಪರಿಷತ್ತು ವಿನಂತಿಸಿಕೊಳ್ಳುತ್ತದೆ

೧೨ ಶ್ರೀ ಕಪಿಲಧಾರಾಕ್ಷೇತ್ರದಲ್ಲಿ ಶ್ರೀ ಮನ್ಮಹಾಸ್ವಾಮಿ ದೇವಸ್ಥಾನದ ಸಮಿತಿಯವರು ದೇವಸ್ಥಾನದ ಜೀರ್ಣೋದ್ಧಾರಾದಿ ಕಾರ್ಯಮಾಡುವದು ಅತ್ಯಂತ ಶ್ಲಾಘನೀಯವಾಗಿರುವುದರಿಂದ ಸರ್ವರೂ ಸಹಾಯಕರಾಗಬೇಕೆಂದು ಈ ಪರಿಷತ್ತು ಆಶಿಸುತ್ತದೆ

೧೩ ಈ ಪರಿಷತ್ತಿನ ಕಾರ್ಯಕಾರಿ ಮಂಡಳಿಯು ಕೆಳಕಂಡಂತೆ ನೇಮಕವಾಗಿದೆ—

ಅಧ್ಯಕ್ಷರು :

ಶ್ರೀ॥ ಷ॥ ಬ್ರ॥ ಪ್ರಭುಪಂಡಿತಾರಾಧ್ಯಶಿವಾಚಾರ್ಯರು, ಚಂದ್ರಶೇಖರಮಠ ಮಾಜಲಗಾಂವ

ಉಪಾಧ್ಯಕ್ಷರು

ಶ್ರೀ॥ ಷಟಿ ಬ್ರ॥ ರಾಜಲಿಂಗಶಿವಾಚಾರ್ಯರು, ಪರಾಂಡಳರ ವಾಸಿ

ಕಾರ್ಯನಿರ್ವಾಹಕರು

ಶ್ರೀ ಕಂಕರರಾವ ಬಾಬುರಾವ ಕಟೂಪ, ಪಂಢರಪುರ

ಸಹಕಾರ್ಯವಾಹಕರು -

ಶ್ರೀ॥ ಷ॥ ಬ್ರ॥ ಹಡಪದ ಶಿವಾಚಾರ್ಯರು, ನಂದಿಮಠ ಸೊಲ್ಲಾಪುರ

ಕಾರ್ಯಕಾರಿಣಿ ಸಮಿತಿ ಸದಸ್ಯರು

ಡಾ॥ ಶಿವಲಿಂಗಶಿವಾಚಾರ್ಯರು ಅಹಮ್ಮದಪುರ
ಶ್ರೀ ವಿರೂಪಾಕ್ಷಸ್ವಾಮಿ ದೇಶಿಕೇಂದ್ರರು ಲಾತೂರ.
ಶ್ರೀ ರೇವಣಸಿದ್ಧ ಭೋಜಪ್ಪ ಪಾಟೀಲ ಹೊಟಗಿ
ಶ್ರೀ ಮಲ್ಲಿಕಾರ್ಜುನಪ್ಪ ಕಲ್ಲಯ್ಯ ಸೊಲ್ಲಾಪುರ
ವೇ॥ ಶ್ರೀ॥ ಕಲ್ಲಯ್ಯ ಮಹಲಿಂಗಯ್ಯಸ್ವಾಮಿ ಕಾಶೀಗಾಂವಕರ ಪಂಢರಪುರ
ಶ್ರೀ ಸದಾಶಿವ ಸೋಮನಾಥ ಗಾರಳಿ
ಶ್ರೀ ಬಾಪೂರಾವ ರಾಮಭಾವುಶೇಟ ಸಾತಾರಾ

ಸಾದರಸ್ವೀಕಾರ

ಯಡಗೋಡ ಪಾರಶಾಲಾಧ್ಯಾಪಕರಾದ ಸಿದ್ಧಾಂತಿ ಶ್ರೀ ರುದ್ರಾರಾಧ್ಯಶಾಸ್ತ್ರಿಗಳವರು ಅನೇಕ ಪಂಡಿತರಿಂದ ರಚಿತವಾಗಿದ್ದ ಗುರುಭಕ್ತಿಯುಕ್ತ ಮನೋಹರವಾದ ಪದ್ಯಗಳನ್ನೂ ಮಂಗಲಗಳನ್ನೂ ಆಯ್ದುಕೊಂಡು "ಗುರು ಕರುಣ ಮಂಗಲಸ್ತೋತ್ರಾವಳಿ" ಎಂಬ ಹೆಸರಿನಿಂದ ಪುಟ್ಟಪುಸ್ತಕವನ್ನು ಅಚ್ಚುಮಾಡಿಸಿದ್ದಾರೆ ಇದು ಅನೇಕ ಉಪಯುಕ್ತವಿಷಯಗಳಿಂದ ಕೂಡಿ ಸಂಗ್ರಾಹ್ಯವಾಗಿದೆ ಗುರುಭಕ್ತಿ ಪರಾಯಣರು ಓದಿ ಧನ್ಯರಾಗಲೆಂದು ಹಮ್ಮ ಆಶೆ

ವೀರಶೈವ ಮತದ ಸಾರ್ವಭೌಮರಾಗಿರುವ ಕಾಶೀ ಜಗದ್ಗುರುಗಳ ಸನ್ನಿಧಿಯಲ್ಲಿ ವೀರಶೈವ ಧರ್ಮಾಭಿಮತ್ತು ನಡೆದು ಅದರಲ್ಲಿ ಅಧಿಕೃತ ಗ್ರಂಥರಚನೆಯಾಯ್ತು ಸರ್ವಾನುಮತದಿಂದ ತಿರಸ್ಕರಿಸಲಾಯಿತಂತೆ ಇನ್ನಾ ದರೂ ಶ್ರೀ ಒಂಭೆತ್ತಾಸ್ವಾಮಿಗಳು ತಮ್ಮ ವಿಚಾರವನ್ನು ಬದಲಿಸಬಹುದೇನು ?

* * *

ಮೊದಲಿನ ರಾಜರೂ ಧರ್ಮಗುರುಗಳೂ ಜರತಾರಿ ಬಟ್ಟೆಗಳನ್ನು ಧರಿಸಿ ಅಫೆಯ ಮೇಲೆ ಮೆರೆಯುತ್ತಿರುವುದು ಅವಶ್ಯಾಯವೆಂದು ಹೇಳುತ್ತಿದ್ದ ರಾಷ್ಟ್ರಪತಿಯವರು ಕ.ದ್ದಿ ಪಾವಿನಪ್ರಧಾರಿಗಳಾಗಿ ಅನೆಯ ಮೇಲೆ ಮೆರೆಯು ಲಾರಂಭಿಸಿರುವುದು ಹೊಸ ರಾಜರ ಆಗಮನ್ನು ಎಂಟು ಮಾಡುವ ಕುಚಿಹ್ನೆ ಯಾಗಿರಬಹುದೆಲವೆ

ಸರ್ಕಾರವು ಗ್ರಾಮಾಧಿಕಾರಿಯನ್ನು ನಿಲ್ಲಿಸಿದೆ

ಯಾವದಾದರೊಂದುಕಟ್ಟಿನವ್ವ ಭದ್ರವಾಗಿರಬೇಕಾದರೆ ಅದರ ಅಡಿಗಲ್ಲು ಭದ್ರವಾಗಿರುವದು ಅವಶ್ಯಕ ನೇರದ ಆಡಳಿತಕ್ಷೇತ್ರದಲ್ಲಿ ಅನುಭವಿಕ ಗ್ರಾಮಾಧಿಕಾರಿಯೇ ಸರ್ಕಾರದ ಬೆನ್ನೆಲುಬು, ಆಡಳಿತದ ಆಧಾರಸ್ತಂಭ ಎಂದು ವೇದಿಕೆಯಮೇಲೆ ರಾಷ್ಟ್ರನಾಯಕರು ಬಹುಬಾರಿವಾಗಿ ಘೋಷಿಸಿತ್ತಿದ್ದಾರೆ ಆ ಪ್ರಕಾರ ರಾಷ್ಟ್ರದ ಆಡಳಿತ ಸುಗಮವಾಗಿ ಸುಸೂತ್ರವಾಗಿ ಜರುಗಬೇಕಾದರೆ ಯೋಗ್ಯಗ್ರಾಮಾಧಿಕಾರಿಗಳು ಅತ್ಯಗತ್ಯ ಸರ್ಕಾರದ ಪ್ರತಿ ಪ್ರತಿನಿಧಿಯಾಗಿ ಪ್ರತಿಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತ ಸರ್ಕಾರದ ಧ್ಯೇಯೋದ್ದೇಶಗಳನ್ನು ಕಾಯಿದೆ ಕಾನೂನುಗಳನ್ನು ತನ್ನ ಗ್ರಾಮದ ಜನತೆಗೆ ತಿಳಿಸಿ ಯೋಜನೆಗಳನ್ನು ಯಶಸ್ವಿಮಾಡುವವರು ಗ್ರಾಮಾಧಿಕಾರಿಗಳೇ ಮತ್ತು ಗ್ರಾಮದ ಸರ್ವ ಜನತೆಯೂ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆತಂದು, ಜನತೆಯ ಪ್ರತಿನಿಧಿಯಾಗಿ ತನ್ನ ಗ್ರಾಮದ ಸರ್ವತೋಮುಖ ಅಭಿವೃದ್ಧಿಹಾಗೂ ಏಳಿಗೆಗಾಗಿ ಸರ್ಕಾರದೊಡನೆ ಹೋರಾಡಿ ಸಾಧಿಸುವವರೂ ಗ್ರಾಮಾಧಿಕಾರಿಗಳೇ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಗ್ರಾಮದಲ್ಲಿ ಸರ್ಕಾರದ ಪ್ರತಿನಿಧಿಯಾಗಿಯೂ, ಸರ್ಕಾರದಲ್ಲಿ ಗ್ರಾಮದ ಜನತೆಯ ಪ್ರತಿನಿಧಿಯಾಗಿಯೂ, ಆಡಳಿತಕ್ಷೇತ್ರದಲ್ಲಿ ಈ ಗ್ರಾಮಾಧಿಕಾರಿಗಳು ವಿಶಿಷ್ಟಹಾಗೂ ಮೂಲಭೂತವಾದ ಸಾಕ್ಷ್ಯ ವಹಿಸಿರುವದರಿಂದ ಪ್ರಜಾರಾಜ್ಯದಲ್ಲಿ ಇವರಿಗೆ ಯೋಗ್ಯ ಸ್ಥಾನವಿರಲೇಬೇಕು ಗ್ರಾಮಾಧಿಕಾರಿಗಳು ನವಂಬರ್ಷ ನಿರ್ಮಾಣಕಾರ್ಯದಲ್ಲಿ ಅವಿಶ್ರಾಂತವಾಗಿ ಶ್ರಮಿಸಲು ಮತ್ತು ಯಶಸ್ವಿಗಳಿಸಲು ಸಮರ್ಥರಾಗಬೇಕು ಇವರು ಪ್ರತಿ ಗ್ರಾಮಗಳ ಅಭಿವೃದ್ಧಿಗಾಗಿ ಶ್ರಮಿಸುವದು ಹಾಗೂ ನಿರ್ಮಾಣಕಾರ್ಯದ ದುಡಿದೆ ಕೆಲಸಕ್ಕೇವರ್ಷಗಳಲ್ಲಿ ಭಾರತವು ಮಾದರೀ ರಾಷ್ಟ್ರವಾಗಲು ಸಾಧ್ಯವಿದೆ ಇಂಹ ಬಲಾಢ್ಯ ಶಕ್ತಿಯನ್ನು ಸರ್ಕಾರ ಗ್ರಾಮಾಧಿಕಾರಿಗಳಿಗೆ ನೀಡಿನಿಂತಿರುವಿದು ಯೋಗ್ಯಸ್ಥಾನ ಸಂಬಳ ಸವಾಲತ್ತನ್ನು ಕಲ್ಪಿಸಿಕೊಟ್ಟು ಇವರನ್ನು ತೃಪ್ತಿಪಡಿಸಿ ದುಡಿಯಿಸಿಕೊಳ್ಳಲು ಸರ್ಕಾರ ನಿಶ್ಚಯಿಸಬೇಕು ಅಲ್ಲದೆ ಶಿಕ್ಷಣಕೇಂದ್ರಗಳನ್ನು ತೆರೆದು ಹಳ್ಳಿಗಳ ಅಭಿವೃದ್ಧಿಯ ಬಗ್ಗೆ ದುಡಿಯಲು ಗ್ರಾಮಾಧಿಕಾರಿಗಳಿಗೆ ಯೋಗ್ಯ ತರಬೇತಿತ್ತು ಕೊಡಲಿ. ಅನಾವಶ್ಯಕವಾದ ಹೊಸಹೊಸ ಖಾತೆಗಳನ್ನು ನಿರ್ಮಿಸಿ ಹೊಸಹೊಸದಾಗಿ ಹಣಖರ್ಚು ಮಾಡುವ ಬದಲು ಸರ್ಕಾರವು ಅದೇ ಹಣವನ್ನು ಗ್ರಾಮಾಧಿಕಾರಿಗಳಿಗೆ ಕೊಟ್ಟು ಇವರಿಂದಲೇ ಎಷ್ಟೂ ಲಾಭದಾಯಕ ಕೆಲಸಗಳನ್ನು ಮಾಡಿಸಿಕೊಳ್ಳಬಹುದು

ತಾತ್ಕಾಲಿಕ ಪರಿಹಾರವಾಗಿ "ಮಂಜುನಾಥಮಾಡಿಸಿ ಸರ್ಕಾರ ನಿರ್ಣಾತರಿಸಲ್ಲಾ ತೃಪ್ತಿಪಡಿಸಿದ ಮೈಸೂರು ಸರಕಾರವು ಗ್ರಾಮಾಧಿಕಾರಿಗಳನ್ನು ನಿರ್ಲಕ್ಷಿಸಿದ್ದು ತುಂಬಾ ಶೋಚನೀಯ ಸೂಚನಾರ್ಹದ ಮಹಾಸಂಘ್ಯದ ಸಂತಸದ ಅಮೃತಸಮುದ್ದಲ್ಲಿ ಸರ್ಕಾರಿ ನೌಕರರೆಲ್ಲ ಸಂತೋಷದಿಂದ ವಲಿಯುತ್ತಿರುವಾಗ್ಗೆ ಆಡಳಿತದಬುಡವೆಂದು ಯೆಂದು ಕರೆಯಿಸಿಕೊಳ್ಳುವ ಗ್ರಾಮಾಧಿಕಾರಿಗಳು ಈ ಲಾಭದಿಂದವಂಚಿತರಾಗಿದ್ದಾರೆ "ರಾಮನಿಗೆ ರಾಜ್ಯಬಂದೂ ರಾಗಿಬೀಸುವದು ತಪ್ಪಲಾದು" ಎಂಬ ಗಾದೆಯ ಮಾತು ಗ್ರಾಮಾಧಿಕಾರಿಗಳ ಪಾಲಿಗೆ ಸತ್ಯವಾಗಿ ಪರಿಣಮಿಸಿದೆ ನಾಡಿನಯಾವ ರಾಜಕೀಯ ಮುಖಂಡನೂ ಈ ಬಗ್ಗೆ ಚಕಾರವೂಚಾ ಮಾತನಾಡಿಲ್ಲವೆಂದು ತಿಳಿಸಲು ಬಹು ವಿಷಾದವಾಗುತ್ತದೆ. ಸರ್ಕಾರ ಗ್ರಾಮಾಧಿಕಾರಿಗಳನ್ನು ನಿರ್ಲಕ್ಷಿಸಿದರೆ ಆಡಳಿತ ಸಡಿಲಾಗುವದುಖಂಡಿತ ವೆಂದು ನಾನು ಈ ಮೂಲಕ ವಿನಂತಿಸುತ್ತಿದ್ದೇನೆ. ಜನ ಪ್ರಿಯ ಮುಮ್ಮುಮಂತ್ರಿಗಳಾದ ಮಾನ್ಯ ಶ್ರೀ ಎಸ್ ನಿಜಲಿಂಗಪ್ಪನವರು ದೀರ್ಘ ಆಲೋಚನೆಮಾಡಿ ಗ್ರಾಮಾಧಿಕಾರಿಗಳಿಗೂ ತಾತ್ಕಾಲಿಕ ಪರಿಹಾರದಲ್ಲಿ ಮಂಜೂರುಮಾಡಿ, ಗ್ರಾಮಾಧಿಕಾರಿಗಳ ಏಳಿಗೆಯನ್ನು ಸಾಧಿಸಿ, ಗೌರವಸಬೇಕಾಗಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಓರ್ವಗ್ರಾಮಾಧಿಕಾರಿ

ವರ್ತಮಾನಸಂಗ್ರಹ

ಎಂಟುವರ್ಷಗಳ ಪ್ರಾಥಮಿಕ ಅಭ್ಯಾಸಕ್ರಮ

ವಿಶಾಲಮೈಸೂರಿನ ಪ್ರಾಥಮಿಕ ಶಿಕ್ಷಣವನ್ನು ಎಂಟು ವರ್ಷದ ಅವಧಿಗೆ ನ್ಯಸ್ತಗೊಳಿಸುವ ನೀತಿಗನುಗುಣ ವಾಗಿ ಇಮ್ಮರಿಗೆ ನಾಲ್ಕು ವರ್ಷ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿ ೫ನೇ ತರಗತಿಯವರೆಗೆ ಆರಂಭಿಸಲು ಈಗಾಗಲೇ ಸರಕಾರ ೬೦೦ ಮಂದಿ ಉಪಾಧ್ಯಾಯರ ನೇಮಕ ವನ್ನು ಮಂಜೂರು ಮಾಡಿದೆ

ವಿದ್ಯಾಸಿರಿಗಳ ಸಂಖ್ಯೆ ಹೆಚ್ಚಿಸಿದರ ಕಾರಣದಿಂದ ಆಗತ್ಯ ಕಂಡು ಬಂದಿರುವ ಪ್ರಾಥಮಿಕ ಶಾಲಾ ಮಾಧ್ಯಮಿಕ ಶಾಲೆಗಳಲ್ಲಿ ತರಗತಿಗಳಿಗಾಗಿ ೨೦೦ ಮಂದಿಯ ನೇಮಕ ವನ್ನು ಮಂಜೂರು ಮಾಡಲಾಗಿದೆ ಎಂದು ಎಸ್. ಎಲ್ ಇ ಆಯುಕ್ತರಿಯವರನ್ನು ಈ ಎಂಟು ನೂರು ಸ್ಥಾನಗಳಿಗೆ ನೇಮಿಸಬೇಕಾಗಿರುವದು

ಪ್ರಾಥಮಿಕ ಶಾಲೆಗಳಲ್ಲಿ ಇದನೇ ತರಗತಿ ಮತ್ತು ಆಮೇಲೆ ಉನ್ನತ ತರಗತಿಗಳಲ್ಲಿ ನೇಮಿಸಲ್ಪಡುವ ಉಪಾಧ್ಯಾಯರು ಪ್ರಾಥಮಿಕ ಶಾಲೆ ಉಪಾಧ್ಯಾಯರ ವರ್ಗಕ್ಕೆ ಸೇರಿದವರಾಗಿ ನೇಮಿಸಲ್ಪಡುವರು

ಪ್ರತಿ ಉಪಾಧ್ಯಾಯರ ನೇಮಕವೂ ಪ್ರತಿಕ್ರಿಯೆಗಳಿಗೆ ಬಾರದಂತೆ ಮಂಜೂರು ಮಾಡಲಾಗುವುದು ಇದಾಗಿ ಎಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಬಾರದೇ ಇರುವಂತೆ ಎಲ್ಲಿ ಹೆಚ್ಚಿನ ಉಪಾಧ್ಯಾಯರ ಅವಶ್ಯಕತೆಯಿರುವದೋ ಅಲ್ಲಿ ಅಂತಹ ಹೆಚ್ಚಿನ ಉಪಾಧ್ಯಾಯರನ್ನು ಒದಗಿಸಲಾಗುವುದು ಕ್ರಿಯೆ ಅಂದರೆ ಮೂರು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯ ಗುಣಾವಾ ಉರ್ದುಶಾಲೆಗಳಲ್ಲಿ ಇಂತಹ ಶಾಲೆಗಳಿಗೆ ನೇಮಕ ಮಾಡಲಾಗುವುದು ಇದಾಗಿ ಇದರಲ್ಲಿ ಒಳ್ಳೆಯ ಸಾಮರ್ಥ್ಯವುಳ್ಳ ಶಿಕ್ಷಕರನ್ನು ನೇಮಿಸಲಾಗುವುದು

ವೈಸರಾಯರು, ಗೌರ್ನರ ಜನರಲ್ ಗಳ ಪ್ರತಿನಿಧಿಗಳ ವ್ಯವಸ್ಥೆ

ವೆಕಿಲಿಯರ್ಡ ಸಮಾಜ್ಞಿಕ್ಷೆ ಸೆಕ್ರೆಟರಿಯವರಿಗೆ, ಗೌರ್ನರ್ ಜನರಲ್ಲರ ಪ್ರತಿನಿಧಿಗಳ ವ್ಯಾಪ್ತಿಯ ವಿಷಯ ಸಲ್ಲಾಪಾಲಿಸಲ್ಲಿ ಅವ ನಿಷ್ಪಾಪಾಕ್ಷಿಯ ಲಾಗುವುದೆಂದು ಗೌರವಪೂರ್ವಕವಾಗಿ ಸಮಜಾಯಿಷಿ ಶ್ರೀ ಬಿ ಎಸ್ ದಾತಾರರು ಇಂದು ಸ್ಪಷ್ಟಿಕರಿಯಲ್ಲಿ ಹೇಳಿದರು

ಇದೇ ರೀತಿಯ ಸ್ಪಷ್ಟೀಕರಣವನ್ನು ಕೆಲವೊಳ್ಳರು ಸಂಸ್ಥಾನ ಸರ್ಕಾರದಲ್ಲಿ ಸೂಚಿಸಲಾಗಿದ್ದು ಅದಕ್ಕೆ ಶ್ರೀ ದಾತಾರರು ಹೇಳಿದರು

ಭಾರತದ ಸರ್ಕಾರದ ಸ್ಥಾಪಕರ್ ಕೆಲವು ಪ್ರತಿನಿಧಿಗಳನ್ನು ತಗೆದುಹಾಕಲೆಂದು ಸಮಿತಿಯ ಕೆಲವರು ಸದಸ್ಯರು, ಪತ್ರಿಕೆಗಳಲ್ಲಿ ಒಕ್ಕಲ ಅಲ್ಲ ಸಂಸ್ಥಾಪಕರು ಕಳಿಸಿದ್ದರು ಪಕ್ಷಪಾತವುದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು ಸಭೆಯರು. ಈ ಪ್ರತಿನಿಧಿಗಳಿಗೆ ಒಟ್ಟು ಭಾರತೀಯ ವೀರರ ಪ್ರತಿನಿಧಿಗಳನ್ನಾಗಿ ಇದೆ ಎಂಬ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಶಿಕ್ಷಣಾಸುತ್ತು ಆಡಳಿತ ರಂಗಗಳಲ್ಲಿ ಕೊಡಲಿ ಕನ್ನಡ ಬಳಕೆಗೆ ಬರಲಿ

"ಶಿಕ್ಷಣಾಲಯಗಳಲ್ಲಿ ಆಡಳಿತ ರಂಗದಲ್ಲಿ ಮತ್ತು ನಮ್ಮನ್ಯೋಸ್ಥಾನ ಎಲ್ಲ ಕ್ಷೇತ್ರಗಳಲ್ಲಿಯೂ ಈ ಕೂಡಲೇ ಕನ್ನಡ ಭಾಷೆಯನ್ನು ಬಳಸಬೇಕು." ಎಂಬುದಾಗಿ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ೭ನೇ ಘಟಿಕೋತ್ಸವ ಭಾಷಣ ಮಾಡುತ್ತ ಅಧ್ಯಕ್ಷ ಪದಿಂದ ಸಾಹಿತಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಕರೆಯಿತ್ತರು.

ವಿಶ್ವವಿದ್ಯಾನಿಲಯದ ಚಾನ್ಸೆಲರ್ ಆದ ಮೈಸೂರಿನ ಗೌರ್ನರ್ ಶ್ರೀ ಜಯಚಾಮರಾಜ ಒಡೆಯರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಮುಖ್ಯ ಅತಿಥಿ ಗಳಾದ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್, ಬೆಜಾಪುರದ ಶ್ರೀ ಬಿ ಜಿ ಹಳಕಟ್ಟಿ, ಮುಂಬೈ ಮುಖ್ಯಮಂತ್ರಿ ಶ್ರೀ ಬಿ. ಜಿ ಖೇರ್, ಮುಂಬೈನ ಮಾಜಿ ಶಿಕ್ಷಣ ಸಚಿವ ಶ್ರೀ ದಿನಕರ್‌ರಾವ್ ದೇಸಾಯ್ ಇವರು ವಿಶ್ವವಿದ್ಯಾಲಯದ ಗೌರವ ಪ್ರಶಸ್ತಿಯನ್ನು ಸ್ವೀಕರಿಸಿದರು ಸಮಾರಂಭಕ್ಕೆ ಬರಲಾಗದಿದ್ದ ಶ್ರೀಗಳಾದ ಮೊರಾರ್ಜಿ ದೇಸಾಯ್ ಮತ್ತು ಎನ್ ಎಸ್. ಲೋಕೂರ್‌ರವರು ವಿಶ್ವವಿದ್ಯಾಲಯ ಕನಾಡಿತ್ತಿರುವ ಗೌರವ ಪ್ರಶಸ್ತಿಯನ್ನು ಸ್ವಲ್ಪ ಕಾಲಾನಂತರ ಸ್ವೀಕರಿಸುವರು

ಹಿಂದಿ ರಾಷ್ಟ್ರಭಾಷೆಯಲ್ಲ

ಖ್ಯಾತನಾದ ಕನ್ನಡ ಸಾಹಿತಿ ಶ್ರೀ ನೆಂಕಟೇಶ ಐಯ್ಯಂಗಾರ್‌ರವರು ತಮ್ಮ ಭಾಷಣದಲ್ಲಿ ರಾಷ್ಟ್ರದ ಹನ್ನೆರಡು ಭಾಷೆಗಳಲ್ಲೊಂದಾದ ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯೆಂದು ಪರಿಗಣಿಸಬಾರದೆಂದೂ, ಕೇಂದ್ರವು ಸರಕಾರಿ ಕಛೇರಿಗಳಲ್ಲಿ ಮತ್ತು ಆಡಳಿತದ ಸಂಖ್ಯಾತ ಗಳ ಪತ್ರವ್ಯವಹಾರದಲ್ಲಿ ಹಿಂದಿಯನ್ನು ಬಳಸಬಾರದು ದೆಂದೂ ಹೇಳಿ ಕೇಂದ್ರ ಸರಕಾರದ ಸಾರ್ವಜನಿಕ ಪ್ರಕಟಣೆಗಳು ರಾಷ್ಟ್ರದ ಎಲ್ಲ ಭಾಷೆಗಳಲ್ಲಿಯೂ ಇರಬೇಕೆಂದು ಒತ್ತಿ ಹೇಳಿದರು ಮುಂದುವರಿದು ಶ್ರೀ ಮಾಸ್ತಿಯವರು ಕೇಂದ್ರದ ಹುದ್ದೆಗಳಿಗೆ ಸೇರುವವರು ಆಡಳಿತ ಕಾರ್ಯಗಳಿಗೆ ಅವಶ್ಯಕವಾದಷ್ಟು ಹಿಂದಿ ಕಲಿತರೆ ಸಾಕೆಂದೂ, ಶಾಲೆ ಮತ್ತು ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆಯ ಶಿಕ್ಷಣವಿರಬೇಕೆಂದೂ ಹೇಳಿದರು ಆಕ್ಸಫರ್ಡ್ ಮತ್ತು ಮೈಸೂರು ವಿಶ್ವವಿದ್ಯಾಲಯಗಳಿರುವಂತೆ ಇರಬೇಕೆಂದೂ ತಮ್ಮ ಪ್ರದೇಶದಲ್ಲಿ ಸರ್ಕಾರಿ ಕಾರ್ಯಾಚರಣೆಗಳನ್ನು ನಡೆಸುವ ಅಧಿಕಾರ ಅವಕ್ಕಿರಬೇಕೆಂದೂ ಅವರು ನುಡಿದರು

ನಡೆಯುವ ಎಲ್ಲ ಕೆಲಸ, ಆಡುವ ಎಲ್ಲ ಮಾತು, ಮಾಡುವ ಎಲ್ಲ ಉದ್ದೇಶ ಪ್ರಾಂತಭಾಷೆಯಲ್ಲಿ ನಡೆದಾಗ ಮಾತ್ರ ಜನತೆಯ ಮನಸ್ಸು ಪ್ರಾಂತದ ಜೀವನವಲ್ಲಿ ಸರಿಯಾದ ಪ್ರಭಾವ ಬೀಳುವುದು ಸಾಧ್ಯವಾಗುತ್ತ ದೆಂದು ಅವರು ಪ್ರತಿಪಾದಿಸಿದರು. "ಮೈಸೂರು ಪ್ರಾಂತ ಎನ್ನ ಕೋರ್ಟು, ಕಚೇರಿ, ಶಾಲೆ, ಕಾಲೇಜು, ಸಭೆ ಸಮ್ಮೇಳನ ಎಲ್ಲೆಡೆಯಲ್ಲೂ ಕನ್ನಡವೇ ಮಾತಾಡಲ್ಪಡುವ ನನ್ನ ಒಂದು ವರ್ಷ ನಡೆದಿರಿ ವ್ಯವಹಾರವನ್ನು ಇಂಗ್ಲಿಷಿನಲ್ಲಿ ನಡೆಸುತ್ತಾ ಪ್ರಜಾರವನ್ನು ಮಾತ್ರ ಕನ್ನಡದಲ್ಲಿ ನಡೆಸುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಹತ್ತು ವರ್ಷದಲ್ಲಿ ಕೈಗೂಡಿದ ಅಭಿವೃದ್ಧಿ ಆ ಒಂದು ವರ್ಷದಲ್ಲಿ ಸಿದ್ಧಿಸುತ್ತದೆ" ಎಂದರು

ಸಂಚಾರಿಯ ಸರಸವಾಣಿ

ಹಳೇ ಮೈಸೂರಿನ ಸ್ಕೂಲು ಮೇಷ್ಟರುಗಳ ಸಂಬಳದ ಹೆಚ್ಚುವಿಕೆಯಲ್ಲಿ ವಿಶಾಲ ಮೈಸೂರು ಸರ್ಕಾರದವರು ಸಂಕುಚಿತವಾಗಿರುವದನ್ನು ನೋಡಿದರೆ ಅವರಿಗೆ ಹೆಚ್ಚಿನ ದುಡ್ಡು ಎಲೆಕ್ಷನ್‌ಮಾಡಲಿಕ್ಕೆ ಇದೆ ಇರಬಹುದೆಂದು ಹೊರ ಪ್ರಾಂತದ ನೌಕ್ಕರೊಬ್ಬರು ಅಡಿಕೊಂಡರಂತೆ

* * *

ಕೇಂದ್ರ ಸರಕಾರದಿಂದ ಲಂಚವನ್ನರೋಧ ಅಧ್ಯೆಗಳು ತುತ್ತಾಗುತ್ತಾನಿ ಹೊರಡುತ್ತಿದ್ದರೂ ಸರಕಾರೀ ಅಭೀಪ್ಸುಗಳಲ್ಲಿರುವ ಮಾಮೂಲು ಮಾಮೂಲಾಗಿಯೇ ಉಳಿದಿರುವುದನ್ನು ನೋಡಿದರೆ ಅದೊಂದು ಅಧಿಕಾರಿಗಳಿಗೆ ಸಲ್ಲಿಸುವ ವಿಶೇಷ ರೂಪದ ಫೀಜ್ ಎಂದು ಹೇಳಬಹುದಲ್ಲವೆ?

* * *

ಹೆಚ್ಚಾಗಿ ಹಾಲು ಕರೆಯುವ ಹಸು-ಎಮ್ಮೆಗಳನ್ನು ಸಾಕುವವರಿಗೆ ಭಾರತ ಸರ್ಕಾರದವರು "ಗೋಪಾಲ ರತ್ನ" ಎಂಬ ಬಿರುದನ್ನು ಕೊಡಲು ನಿರ್ಧರಿಸಿದ್ದಾರಂತೆ. ಹಳ್ಳಿಗಳಲ್ಲಿ ಇಂಥ ನೂರಾರು ದನಗಳನ್ನು ಸಾಕಿಕೊಂಡಿರುವ ರೈತರಿಗೆ ಈ ಸದವಿ ದೊರೆಯಬಹುದೇನು? ಪಾಪ! ಆ ಪದವಿ ಬರಲಿಕ್ಕೆ ಇವರಿಗೆ ಇರದಂಚಿನ ವೇಟೂ ಎಲ್ಲಿಂದ ಬರಬೇಕು.

Edited, Printed and Published by Brahmanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2166 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಖ್ಯಾನಸಪಂಚಜಾತಜನಿತಶ್ ಪಂಚಾಸ್ಯಪೀಠಾಧಿಪಶ್ । ಪಂಚಶ್ಲೋಕವಿನಾಶಕಶ್ ಸರತರಶ್ರೀಪಂಚಲಿಂಗೋದ್ಭವಶ್ ॥
ಪಂಚಾಚಾರನಿಯಾಮಕಶ್ ಪರಿಲಸತ್ಪಂಚಾಕ್ಷರೀಬೋಧಕಶ್ । ಪಂಚಾಚಾರ್ಯಜಗದ್ಗುರೂತ್ತಮವರಶ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀಪ್ರಾಣಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ. ಖರ್ಚು ಸೇರಿ ೩॥ರೂ ೧೦-೪.

ಸಂಪುಟ ೩೦] ಸೋಮವಾರ ತಾ॥ ೧೭ ನೇ ಡಿಸೆಂಬರ್ ೧೯೫೬ [ಸಂಚಿಕೆ ೩೧

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಅಖಿಲಭಾರತ ವೀರಶೈವ ಮಹಾಸಭಾ ಸಂಚಾಲಕರಿಗೆ ಸೂಚನೆ

ಸೊಲ್ಲಾಪುರ ಪಟ್ಟಣದಲ್ಲಿ ಮುಂಬರುವ ೧೯೫೭ ನೇ ಇಸ್ವಿ ಜನವರಿ ತಿಂಗಳಲ್ಲಿ (೧೭) ನೇ ಅಖಿಲ ಭಾರತ ವೀರಶೈವ ಮಹಾಸಭೆಯು ಜರುಗುವದೆಂಬುದು ವಾರ್ತಾ ಪತ್ರಿಕೆ ಹತ್ತಪತ್ರಿಕೆಗಳಿಂದ ಸರ್ವರಿಗೂ ತಿಳಿದುಬಂದಿದೆ ಆದರೆ ಹಿಂದಿನ (೧೬) ನೇ ವೀರಶೈವ ಮಹಾಸಭೆಯು ಬಸವಕಲ್ಯಾಣದಲ್ಲಿ ೧೯೫೫ ನೇ ಇಸ್ವಿ ಜನವರಿ ತಿಂಗಳಲ್ಲಿ ಜರುಗಿಸಿದ್ದು ಸಮಸ್ತಜಜನರಿಗೆ ತೃಪ್ತಿಕರವಾಗಿಲ್ಲವೆಂದು ತಿಳಿದುಬರುತ್ತದೆ. ಏಕೆಂದರೆ—ವೀರಶೈವ ಮತತ್ರಯಪಕರಾದ ಶ್ರೀಜಗದ್ಗುರು ರೇಣುಕಾದಿ ಪಂಚ ಮಹಾಪೀಠಾಧಿಪತಿಗಳವರಿಗೆ ವಿಶ್ವಾಸವಿಲ್ಲದೆ, ಅವರ ಅಭಿಪ್ರಾಯ ಪಡೆಯದೆ, ವಿದ್ವಾಂಸರಾದ ಶ್ರೀ ಪಟ್ಟಣ ಚೆನ್ನಮಾರ್ಗಿಗಳನ್ನೂ ಹಾಗೂ ಪಂಡಿತ ಮಂಡಲಿಯವರನ್ನೂ ಆಹ್ವಾನಿಸದೆ, ವಿಶಾಕ್ಷಿಯವಾಗಿ ಸಭೆಮಾಡಿ, ಪಡೆಯಿಸಿ ಕರಾಧ್ಯಗಳನ್ನು ಪಾಸುಮಾಡಿಕೊಂಡಿರುವ ದಲ್ಲಿ ಸರ್ವಸಮ್ಮತಿಯಿಲ್ಲವಾಗಿದೆ.

ಈಗ ಪಡೆಯಲಿರುವ (೧೭) ನೇ ಅಖಿಲ ಭಾರತ ವೀರಶೈವ ಮಹಾಸಭೆ ಸಂಚಾಲಕರು ಶ್ರೀ ಜಗದ್ಗುರು ಪಂಚಾಚಾರ್ಯಪೀಠಾಧಿಪತಿಗಳಿಗೆ ವಿಶ್ವಾಸವಿಟ್ಟು ಜರುಗಿಸುವಂತೆ ತಿಳಿಯಬರುತ್ತಿದೆ ಆ॥ ಭಾ॥ ವೀ॥ ಮಹಾಸಭೆ ಎಂದರೆ ಶಾಶ್ವತಿಕ ಕೆಲವೇ ಜನರು ಸೇರಿಕೊಂಡು ಪಡೆಯುತಕ್ಕದ್ದಲ್ಲಾ. ಈಗಿನ್ ಪೂರ್ವಾಪರ ಆಲೋಚನೆ ಮಾಡಿ ಅಂತರಂಗ ಬಹಿರಂಗ ಶುದ್ಧಿಯಿಂದ ಅಖಿಲ ಭಾರತ ವೀರಶೈವ ಸಮಾಜವು ಒಪ್ಪುವಂತೆ ಸಭೆ ಪಡೆಸುವದು ತಮ್ಮಂಥ ಅಭಿಮಾನಿಗಳಿಗೆ ಯೋಗ್ಯ ವಾಗಿರುವದು ಮತ್ತು ಆಗತ್ಯವಾದ ಕಾರಣಗಳನ್ನು ತೋರಿಸಿದೆ ವರ್ಷಕ್ಕೊಂದು ಮಹಾಸಭೆಯನ್ನು ಜರುಗಿ ಸುವದರಿಂದೇನು ಪ್ರಯೋಜನ ಇದರಿಂದ ಸಮಾಜದ ಧನವ್ಯಯ ಮಾತ್ರವಾಗುವದು. ಸಮಾಜಹಿತೈಷಿಗಳಾದ ತಾವು ಇದನ್ನು ಪರಾಮರ್ಶಿಸಬೇಕು. ಸನಾತನವೀರ ಶೈವ ಸಿದ್ಧಾಂತಬೋಧಕವಾದ ಮೈಸೂರು ಪಂಚಾಚಾರ್ಯ ಪ್ರಭಾ (ತಾ॥ ೧೨-೧೧-೧೯೫೬) ಪತ್ರಿಕೆಯಲ್ಲಿ ಈ ಬಗ್ಗೆ ಯುಕ್ತವಾದ ಸೂಚನೆಯನ್ನು ಕೊಟ್ಟಿದ್ದಾರೆ. ತಾವು ನೋಡಿರಬಹುದು.

ಇದಲ್ಲದೆ ವೀರಶೈವ ಮಹಾಸಭೆ ವಿಜಾಪುರ ಇವರು ವೀರಶೈವಮತಕ್ಕೆ ಅಧಿಕೃತ ಗ್ರಂಥಒಂದನ್ನು ಸರ್ವಸಮ್ಮತಿಯಿಂದ ರಚಿಸಬೇಕಾಗಿದೆ. ವಿಜಾಪುರಕ್ಕೆ ಬರಬೇಕೆಂದು ಸಂಬರು ಗಣೇ ಹತ್ತಪತ್ರಿಕೆಯಲ್ಲಿ ಪ್ರಕಟಪಡಿಸಿರುತ್ತಾರೆ. ಈ ಸಿದ್ಧಾಂತಗ್ರಂಥದ ವಿಷಯಕ್ಕೆ ಮೈಸೂರು ಪಂಚಾಚಾರ್ಯಪ್ರಭಾ (ತಾ॥ ೧೯-೧೧-೫೬) ಪತ್ರಿಕೆಯಲ್ಲಿ "ಚೀರಮುತ್ಪೈದೆಗೆ ಪುನರ್ವಿವಾಹವೇ" ಎಂಬ ಲೇಖ ವಿರುತ್ತದೆ ಆದರಲ್ಲಿ ಬಹು ಪ್ರಾಚೀನಕಾಲದಿಂದಲೂ ಪ್ರಪ್ರಾಮಾಣಿಗೊಂಡಿರುವ ವೀರಶೈವ ಮತಸಿದ್ಧಾಂತ ಗ್ರಂಥ ಗಳನ್ನೆಲ್ಲಾ ಉದಾಹರಿಸಿ ಎಳ್ಳಷ್ಟಿರಿಕೆ ಕೊಟ್ಟಿದ್ದಾರೆ ಇದರಿಂದ ಅರಿತುಕೊಳ್ಳಬೇಕಾಗಿತ್ತು. ಮೇಲ್ಕಂಡ ಪತ್ರಿಕೆಯಲ್ಲಿ ಈಗಿರುವ ಗ್ರಂಥಗಳಿಂದ ಜಜ್ಜುಸುಗಲೆಗೆ ಸಮಾಧಾನವಾಗುವುದಿಲ್ಲ. ಇತ್ತಾದಿ ಬರೆದಿರುತ್ತಾರೆ ಆ ಜಜ್ಜುಸುಗಳಾದವರು ಪ್ರಭಾಪತ್ರಿಕೆಯಲ್ಲಿ ವಿವರಿಸಿರುವ ಪ್ರಾಚೀನ ಕಾಲದ ಸಂಸ್ಕೃತಗ್ರಂಥಗಳನ್ನ ವೇಕೆನೆ ಮಾಡಿಲಿ ಮತ್ತು ವೀರಶೈವರತ್ನಮಾಲೆ ಎಂಬ ಗ್ರಂಥ ವನ್ನೂ ಓದಲಿ. ಸಿದ್ಧಾಂತಶಿಖಾಮಣಿಯನ್ನು ಅನು ಸಂಧಾನಮಾಡಲಿ ಅಂದರೆ ಎಲ್ಲವೂ ವೇದ್ಯವಾಗುವದು ಸರ್ವರಿಗೂ ಸಮ್ಮತವಾಗುವಂಥ ಗ್ರಂಥವನ್ನು ರಚಿಸಾ ಮಾಡುವದಕ್ಕೆ ಪ್ರಯತ್ನಿಸುವದು ಯಾರಿಂದಲೂ ಸಾಧ್ಯವಾಗದು. ಯಾಕೆಂದರೆ ವಿಶಕ್ತವಾಗಿದ್ದ ಒಂದು ದೊಡ್ಡ ಋತುಂಬದಲ್ಲಿ ಎಲ್ಲರೂ ಒಂದೇತರದ ಅನ್ನವನ್ನು ಉಟಮಾಡುವದಿಲ್ಲ. ಒಬ್ಬರಿಗೆ ಒಂದು ಬೇಕಾದರೆ ಇನ್ನೊಬ್ಬರಿಗೆ ಮತ್ತೊಂದು ಬೇಕು. ಅದಕ್ಕಾಗಿ ಅವರವರಿಗೆ ತಕ್ಕಂತೆ ಬೇರೆ ಬೇರೆ ಊಟದ ಸಾಮಗ್ರಿಗಳನ್ನು ಅವಶ್ಯವಾಗಿ ಸಿದ್ಧಪಡಿಸಬೇಕಾಗುವದು ಅದರಿಂದಲೇ ಎಲ್ಲರೂ ತೃಪ್ತಿಗೊಳ್ಳುತ್ತಾರೆ. ಸಂಸಾರವೂ ಹೀಗಾಗಿ ಪಡೆಯುತ್ತದೆ. ಇದಕ್ಕಿರತೇ ವೀರಶೈವ ಋಷಿಂಬದಲ್ಲಿ ವಿಶಕ್ತ ತತ್ವಬೋಧಕವಾದ ಸಿದ್ಧಾಂತ ಗ್ರಂಥಗಳು ಅನೇಕ ರೂಪದಲ್ಲಿ ಪಿರ್ಮಾಸಲ್ಪಟ್ಟು ಎಲ್ಲರಿಗೂ ತೃಪ್ತಿಯನ್ನು ಉಂಟುಮಾಡುತ್ತಲಿವೆ. ಹೀಗಿದ್ದರೂ ಎಲ್ಲಾರಿಗೆ ಒಂದೇ ಗ್ರಂಥ ಮಾಡುತ್ತೇವೆಂದು ಹೊರಟರುವವರ ಸಾಹಸವು ವ್ಯರ್ಥವೇಸರಿ!

ಈಗ ಸಮಾಜದಲ್ಲಿ ಲಿಂಗಧರಿಸದೆ ಇರುವದೂ ಅನಾಚಾರ, ದುರಾಚಾರ, ವ್ಯಭಿಚಾರಾದಿ ಅನೇಕ ಕುಂದು ಕೊರತೆಗಳೂ ಬೆಳೆಯುತ್ತಿವೆ ಇವುಗಳನ್ನು ಸುಧಾರಿಸಲಿಕ್ಕೆ ಸರ್ವರೂ ಪ್ರಯತ್ನಮಾಡುವದು ವ್ರಧಮ ಕರ್ತವ್ಯವಾಗಿದ್ದರೂ ಇವುಗಳ ಸುಧಾರಣೆಯ ಕಡೆಗೆ ಲಕ್ಷ್ಯಕೊಡದೆ ಹಿಂದೆ ಮಹಾಮಹಿಮರಿಂದ ರಚಿತವಾಗಿ ದೇವವಾಣಿಯಂತಿರುವ ಗ್ರಂಥರಾಶಿಯನ್ನು ಹಿಂದುಳಿಸಿ ಹೊಸ ಗ್ರಂಥ ರಚಿಸುವ ಮಾತು ಸಮಾಜದ ಮಟ್ಟಿಗೆ ಯನ್ನು ಪಡೆಯುವಾದರು ಆದುದರಿಂದ ೧೬ ನೇಯ ಆ॥ ಭಾ॥ ವೀ॥ ಮಹಾಸಭೆಯ ಅಧ್ಯಕ್ಷರು ಇದರ ಹವ್ಯಾಸವನ್ನು ಬಿಡುವದು ಒಳ್ಳೆದು ಮತ್ತು ೧೭ ನೇ ಆ॥ ಭಾ॥ ವೀ॥ ಮಹಾಸಭೆಯ ಸಂಚಾಲಕರು ವೀರ ಶೈವ ಮತದ ಸಾರ್ವಭೌಮರಾಗಿರುವ ಶ್ರೀಜಗದ್ಗುರು ಪಂಚಪೀಠಾಧಿಪತ್ಯರ ಆಪ್ತಸಲಹೆಯನ್ನು ಪಡೆದು ಅಖಿಲ ಭಾರತ ವೀರಶೈವ ಸಮಾಜದ ಪ್ರೇಮದಿಂದ ಧಡಿಸುವ ರೆಂದು ಪತ್ರ ಸವಿನಯಸೂಚನೆ.

ಪಿ. ಎಂ ವಿರೂಪಾಕ್ಷಶಾಸ್ತ್ರಿ ಹಿರೇಹಡಗಲಿ.

ಶಿವಗಂಗಾ ನೋಂದಣಿ ಗವಿಮಂಠದ ಉತ್ತರಾಧಿಕಾರ

ಕರ್ನಾಟಕದೇಶದಲ್ಲಿ ಸುಪ್ರಸಿದ್ಧ ಕ್ಷೇತ್ರವೆನಿಸಿದ ಬೆಂಗಳೂರು ಜಿಲ್ಲಾ ನೆಲಮಂಗಲ ತಾಲ್ಲೂಕು ಶ್ರೀ ಶಿವಗಂಗಾ ಮಠಾ ಪರ್ವತದ ಪೂರ್ವದಿಗ್ಭಾಗದಲ್ಲಿ ವಿರಾಜಿಸುವ ಪೂಡಿವಿಡಿ ಶ್ರೀ ಮೇಲಣಗವಿ ವೀರ ಸಿಂಹಾಸನ ಶಾಖಾ ಮಠದಲ್ಲಿ ತ್ರಿವ್ಯಕ್ಯರಾದ ಶ್ರೀ ಶ್ರೀ ಅನ್ನ ವೀರ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿ ಗಳವರು ಮೊದಲೇ ನಿಶ್ಚಯಿಸಿದ ಪ್ರಕಾರ ಶ್ರೀಮಠದ ಉತ್ತರಾಧಿಕಾರಿಗಳನ್ನಾಗಿ ವಿಯಮಿಸಿದ್ದ ಶ್ರೀ ಶ್ರೀ ವಿಶ್ವಾರಾಧ್ಯ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿ ಗಳವರ ಮಂಜೂರಾತಿ ಬಗ್ಗೆ ಮೈಸೂರು ಗೌರ್ನ ಮೆಂಟಿಗೆ ಬರೆಸಿರಲಾಗಿ ಘನ ಸರ್ಕಾರದವರು Ord. No R S. 3581-84, Mz. 529-55-2, 21-6-45 ನೇ ಮಲ್ಲುಂ ಮಂಗಳವಾರದ ಹುಕ್ಕುಂ. ಶ್ರೀ ಮೇಲಣಗವಿ ವೀರಸಿಂಹಾಸನ ಶಾಖಾ ಮಠಕ್ಕೆ ಮೇಲ್ಕಂಡ ಶ್ರೀ ವಿಶ್ವಾರಾಧ್ಯ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳವರನ್ನೇ ಮುಂಜೂರು ಮಾಡಿರುತ್ತಾರಾಗಿ ಈ ಮೂಲಕ ಸಮಸ್ತ ಮಜಾಜನರಿಗೂ ತಿಳಿಯ ಪಡಿಸಿರುತ್ತೆ.

ಭಕ್ತಮಂಡಲಿ, ಶಿವಗಂಗಾ

ಸಹಸ್ರದೀಪಾರಾಧನೆಮಹೋತ್ಸವ, ಗದಗ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಜಗದ್ಗುರು ಪ್ರಪಸ್ಥ ರೇಣು ಕ ಶ್ರೀವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟ ಸಹಸ್ರ ದೀಪಾರಾಧನೆಮಹೋತ್ಸವವು ಪ್ರತಿವರ್ಷದ ಪದ್ಧತಿಪ್ರಕಾರ ಈ ವರ್ಷವೂ ಕಾರ್ತಿಕ ಆ॥ ೧೧-೧೨-೧೯೫೬ ನೇ ಮಂಗಳವಾರ ರಾತ್ರಿ ೧೦ ಘಂಟೆಗೆ ಗದಗ ವಕ್ಕಲಗೇರಿ ಶ್ರೀರಾಮೋಟೆ ವೀರ ಭದ್ರದೇವಸ್ಥಾನದಲ್ಲಿ ಶ್ರೀ ವೀರಭದ್ರಮೂರ್ತಿಗೆ ರುದ್ರಾ ಭಿಷೇಕ ಪೂಜೆ ಆದನಂತರ ಬಹು ವೈಭವದೊಡನೆ ನೆರವೇರಿತು ಈ ಮಹೋತ್ಸವಕ್ಕೆ ಯಾವತ್ತು ಜನ ಸ್ತೋಮವು ಅತಿ ಭಕ್ತಿಪೂರ್ವಕ ಆಗಮಿಸಿ ಫಲಪುಷ್ಪ ಕಾಯಿ ಕರ್ಪೂರ ಎಣ್ಣೆ ಬೆಣ್ಣೆ ಬತ್ತಿ ಇತ್ಯಾದಿ ಸಾಮಗ್ರಿ ಗಳನ್ನು ಶ್ರೀವೀರೇಶನಿಗೆ ಅರ್ಪಿಸಿ ಮಹಾಮಂಗಳಾರತಿ ಮಾಡಿಸಿ ಪ್ರಸಾದ ಸ್ವೀಕರಿಸಿ ಜಗದ್ಗುರು ಪಂಚಾಚಾರ್ಯರ ಜಯಜಯಕಾರವನ್ನು ಘೋಷಿಸಿ ಸಹಸ್ರ ದೀಪಾರಾಧನೆ ಮಹೋತ್ಸವದೊಡನೆ ಪೂರ್ತಿಗೊಳಿಸಿದ ರೆಂದು ತಿಳಿಸುವ,

ಸೆಕ್ರೆಟರಿ
ಜ॥ ಪಂ॥ ಸೇವಾಸಂಘ, ಗದಗ. ಪೆಟೆಗೇರಿ.

ಸಿದ್ಧಾಂತ ಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈನಲ್ಲ ತಲ್ಪಕರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಪ್ರಸಿದ್ಧ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಭಾಷೆಯಲ್ಲಿದ್ದಿತು. ಆದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಗೃಹಜ್ಞಾತೆಗೆ ಪಾತ್ರರಾಗಿದ್ದಾರೆ. ಮೂರುನೂರು ಪುಟಗಳ ವೆಲ್ವೆಟ್ಟಿನ ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಭೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಹಂಡಿತರ ಸಹೋದರರಾದ ವೇ|| ಬ್ಲಿ|| ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿಸಲಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಬಂದಿನ್ನು ಆನ್ನು ತರಿಲಿಲಿಗಳೆಂದ ಕೂಡಿದ ಫೋಟೋ . . ೦—೩—೮

ಶ್ರೀರೇಣುಕಾ ಕಾನ್ಯರ ಲಿಂಗಾಕಾರದ ಫೋಟೋ(ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ ೦—೪—೦

ಶ್ರೀರೇಣುಕಾ ಕಾರ್ಯರ ಲಿಂಗಾಕಾರದ ಫೋಟೊ (ಚಿಕ್ಕಸೈಜು) . ೦—೧—೪

ಶ್ರೀಜಗನ್ಮಾತೆ ಪಂಚಾಚಾರ್ಯರು ಪಂಚಮಂತ್ರಗಳಿಗೆ ಶಿವನಿಷ್ಠಾಂತವನ್ನು ಉಪದೇಶಿಸುವ ಫೋಟೋ ೦—೪—೦

ಶ್ರೀರೇಣುಕಾಚಾರ್ಯರು ಅಗಸ್ತ್ಯಮುನಿಗಳಿಗೆ ಶಿವನಿಷ್ಠಾಂತವನ್ನು ಉಪದೇಶಿಸುವ ಫೋಟೋ ... ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ೪ ಳು ೧೪ × ೧೦ ಬೆಲೆ ೧೯ ೦—೩—೦
" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ವಾಚಾರ್ಯರು ಭೂಗರ್ಭದಿಂದ ಉದ್ಭವಿಸುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ಮಹಿಮಾಶ್ವರ ಪಾಚಾರ್ಯರಿಗೆ ಬ್ರಹ್ಮಜ್ಞಾನೋಪದೇಶ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಪಂಡಿತಾರಾಧ್ಯರಿಗೆ ಚಿಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಸಭೀಷಣನ ಸ್ವಾರ್ತಯಿಂತೆ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯರಮ್ಮಾಜ್ಞೆಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦

ಶ್ರೀಜಗದ್ಗುರು ರೇಣುಕಾಚಾರ್ಯರ ಸಿಂಹಾಸನಾರೋಹಣದ ಫೋಟೋ . ೦—೧—೬

ಶ್ರೀಮದ್ಜಗದ್ಗುರು ಪಂಚಾಚಾರ್ಯರ ಸಿಂಹಾಸನಾರೋಹಣದ ಫೋಟೋ ೦—೧—೬

ಶ್ರೀಸ್ವಾಮಿಗಳವರು ವೀರಶೈವ ಧರ್ಮಪ್ರಚಾರಾರ್ಥವಾಗಿ ಮಾಡಿಸಿದ ಮಾಸಿಕ ಪತ್ರಿಕೆಯ ಫೋಟೋ ೦—೧—೬

ಶ್ರೀಮದ್ಜಗದ್ಗುರು ಸಪ್ತರ್ಷಿಗಳಿಗೆ ಸಪ್ತವಿಧ ಲಿಂಗಸ್ಥಾಪನೆಯನ್ನು ಉಪದೇಶಿಸಿದ ಫೋಟೋ ೦—೧—೬

ಶ್ರೀರುದ್ರಮುನಿಗಳಿಗೆ ಶ್ರೀ ಜಗದ್ಗುರುಗಳು ಕಾಲಜ್ಞಾನವನ್ನು ಉಪದೇಶಿಸುವ ಫೋಟೋ ೦—೧—೬

ಶ್ರೀಜಗದ್ಗುರುಭಂಗಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು . ೦—೨—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಉಪಯುಕ್ತ ಸ್ವಮತಗ್ರಂಥಗಳು

ಸೋಕ್ತಸೂತ್ರಪಠ (೬ನೆಯ ಆವೃತ್ತಿ)	—	೧ ಆಣೆ
ಸಚ್ಛಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	—	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	—	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆ	—	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತ್ರೋತ್ರಾವಳಿ (೧೧ನೆಯ ಆವೃತ್ತಿ)	—	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	—	೨ ಆಣೆ
ಶ್ರೀರುದ್ರಮುಖಿವಿನಾಚಾರ್ಯಶತಕ	—	೨ ಆಣೆ
ಶಿವಶಕ್ತಿವಿಲಾಸ	—	೨ ಆಣೆ
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ	—	೨ ಆಣೆ
ಜಿಲ್ಲಾಮಹಾತ್ಮ್ಯ (೩ನೆಯ ಆವೃತ್ತಿ)	—	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೧ನೆಯ ಆವೃತ್ತಿ)	—	೩ ಆಣೆ
ಜಸವಾದಿನಿಜಶಕ್ತ್ಯದರ್ಪಣ (೫ನೆಯ ಆವೃತ್ತಿ)	—	೩ ಆಣೆ
ಪಂಚಾಚಾರ್ಯಪ್ರಕಾಶ	—	೩ ಆಣೆ
ಪಂಚಾಚಾರ ಪ್ರಕಾಶಿಕಾ	—	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	—	೩ ಆಣೆ
ಶ್ರೀಶಶಿಪಂಚಿತಾರಾಧ್ಯರ ಕಾಲನಿರ್ಣಯ	—	೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	—	೪ ಆಣೆ
ಲಿಂಗಧಾರಣವಿಧಿ	—	೪ ಆಣೆ
ಗರ್ಭಾಧಾನವಿಧಿ	—	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	—	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	—	೪ ಆಣೆ
ವೀರಶೈವ ಅಂತ್ಯೇಷ್ಟಿಕ್ರಿಯಾದ್ಧವಿಧಿ	—	೪ ಆಣೆ
ವೈದಿಕವಾಜ್ಯಯರಹಸ್ಯ	—	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಜನಮನವಳಿ (೩ನೆಯ ಆವೃತ್ತಿ)	—	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ	—	೪ ಆಣೆ
ಶೈವೋಪಸಿಪತ್ಯಂಗ್ರಹ (ಸಂಸ್ಕೃತ) (೩ನೆಯ ಆವೃತ್ತಿ)	—	೬ ಆಣೆ
ಸಚ್ಛಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	—	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ) ಚಿಕ್ಕಸೈಜು)	—	೮ ಆಣೆ
ಶಿವಾದ್ವೈತಭಾಸ್ಕರ (ಸಂಸ್ಕೃತ)	—	೮ ಆಣೆ
ವೀರಶೈವಮಹಾತ್ಮರು	—	೮ ಆಣೆ
ಜಸವಧ್ಯಾಂತದಿವಾಳರ (೩ನೆಯ ಆವೃತ್ತಿ)	—	೮ ಆಣೆ

ಅಗಮಪರಿಜ್ಞಾನ	—	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರಿ ಭಾಷಣಮು (ತೆಲುಗು)		೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	—	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ನಕ್ಷತ್ರಮಾಲಿಕಾ		೮ ಆಣೆ
ಕನ್ನಡ ನ್ಯಾಯಶತಕಮ್	—	೮ ಆಣೆ
ಮಹಿಮಾಗಮ		೮ ಆಣೆ
ಕಾರ್ತಿಗಮ		೧೨ ಆಣೆ
ಸೂಕ್ಷ್ಮಾಗಮ	—	೧೨ ಆಣೆ
ಚಂದ್ರಜ್ಞಾನ ಗಮ		೧ ರೂ.
ಸಿದ್ಧಾಂತಸಾರವಳಿ (ಶ್ರೀಲೋಚನಶಿವಾಚಾರ್ಯಕೃತ)		೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ		೧೨ ಆಣೆ
ಶ್ರೀಜಗದ್ಗುರು ಸಂಜಾಚಾರ್ಯರ ಪ್ರಾಚೀನತ್ವ	—	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)		೧ ರೂ.
ಸಚಿತ್ರ ರೇಣು ಕವಿಜಯ (೩ನೆಯ ಆವೃತ್ತಿ)	—	೧ ರೂ.
ಶ್ರೀಜಗದ್ಗುರು ಸಂಜಾಚಾರ್ಯ ಸ್ತೋತ್ರರತ್ನಾಕರ	—	೧ ರೂ.
ವಿರಮಾಹೇಶ್ವರಚಂದ್ರಿಕೆ	—	೧ ರೂ.
ಸೈದಿಕಶಿವಪೂಜಾವಿಧಿ (ಸೈದಿಕಸ್ತ್ರೀಯಮ್ಯಾಸಹಮು. ೩ನೆಯ ಆವೃತ್ತಿ)		೧॥ ರೂ.
ಶ್ರೀಕರಧ್ಯಾನ (೩ನೆಯ ಆವೃತ್ತಿ)	—	೧॥ ರೂ.
ಶಿಷ್ಯರ ಸಹಿಗೆಗಳ ರಿಜಿಸ್ಟರ್ ಬುಕ್	—	೧॥ ರೂ.
ರೇಣುಕಲಿಲಯ ಮಹಾಪುರಾಣ (ಕನ್ನಡ ಭಾಷಾಂತರವಷ್ಟು)	—	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುವು		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	—	೩॥ ರೂ.
A brief life-sketch of Pandit Sri Kashinatha Shastriji(*English*)		4 As.
The Philosophical Aspect of Virasaivism (*English*)	...	8 As.
Speeches by Pandit Shri Kashinatha Shastriji (*English*)		12 As
ವೀರಶೈವರತ್ನ (ಮರಾಠಿ)		ರೂ. ೨—೮—೦
ನಂದಿಕೇಶ್ವರಕಾರಿಕಾ (ಸಂಸ್ಕೃತ)	—	೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2266 « ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು » REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

